
ಕರ್ನಾಟಕ ನಾಟಕ ಅಕಾಡೆಮಿ

# ಕೊಪ್ಪಳ

## ಜಿಲ್ಲಾ ರಂಗಮಾಹಿತಿ

ವಿಠ್ಠಪ್ಪ ಗೋರಂಟ್ಲಿ



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಕೊಪ್ಪಳ
# ಜಿಲ್ಲಾ ರಂಗ ಮಾಹಿತಿ

ವಿಠ್ಠಪ್ಪ ಗೋರಂಟ್ಲಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦ – ೨೨೨೩ ೭೪೮೪

**Koppala Jilla Ranga Mahiti**
Collection of Theatre information in Kannada by
**Sri Vittappa Gorantli**
Published by **B. Manjunatha Aradhya,** Registrar,
Karnataka Nataka Academy, Kannada Bhavana,
J.C. Road, Bengaluru-560002 Phone : 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೧೦೦೦ |
| ಪುಟಗಳು | : | xii + 132 |
| ಬೆಲೆ | : | ರೂ. ೬೦/- |

**ಪ್ರಕಾಶಕರು**
**ಬಿ. ಮಂಜುನಾಥ ಆರಾಧ್ಯ,** ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ : ೦೮೦ - ೨೨೨೩೭೪೮೪

ಮುಖಪುಟ ವಿನ್ಯಾಸ :
**ಕೃಷ್ಣ ರಾಯಚೂರು**

ಮುದ್ರಣ :
**ಸುಹಾಸ್ ಗ್ರಾಫಿಕ್ಸ್**
ಬೆಂಗಳೂರು
ಮೊ. : ೯೮೪೫೩ ೫೫೫೦೯

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಬನಹಟ್ಟಿಯಲ್ಲಿ ಮಹಿಳಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ.

ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು. ಧಾರವಾಡದಲ್ಲಿ ಫೆಬ್ರವರಿ 19 ರಿಂದ 23ರವರೆಗೆ ಹವ್ಯಾಸಿ ರಂಗಭೂಮಿ ಸಮ್ಮೇಳನ ಏರ್ಪಡಿಸಲಾಗಿತ್ತು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಸುಹಾಸ್ ಗ್ರಾಫಿಕ್ಸ್, ಮುರಳೀಧರವರಿಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

– ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಇದು ಆರಂಭ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

**ಸಮಚಿತ್ತದ ನಿರೂಪಣೆ**

ಕೊಪ್ಪಳ ಜಿಲ್ಲೆರಂಗ ಚಟುವಟಿಕೆಯ ತವರು. ಇಲ್ಲಿನ ಜಾನಪದ, ವೃತ್ತಿ, ಗ್ರಾಮೀಣ ಹವ್ಯಾಸಿ ರಂಗಭೂಮಿ ತುಂಬಾ ಶ್ರೀಮಂತವಾದುದು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಿಂದ ಆರಂಭಿಸಿ ಬೀದಿ ನಾಟಕಗಳವರೆಗೆ ಎಲ್ಲ ತೆರನಾದ ರಂಗಚಟುವಟಿಕೆ ಇಲ್ಲಿ ಜೀವಂತವಾಗಿವೆ. ಬಹು ಪ್ರಕಾರಗಳ ಮಾಹಿತಿಯನ್ನು ಸಮಚಿತ್ತದಿಂದ ವಿಠ್ಠಪ್ಪನವರು ಇಲ್ಲಿ ಕಲೆಹಾಕಿ ನಿರೂಪಿಸಿದ್ದಾರೆ, ವಿಶ್ಲೇಷಿಸಿದ್ದಾರೆ.

ಹಿರಿಯ ಪತ್ರಕರ್ತ, ಕತೆಗಾರ ವಿಠ್ಠಪ್ಪ ಗೋರಂಟ್ಲಿ ಅವರು ನಟ, ನಿರ್ದೇಶಕರೂ ಹೌದು. ವೃತ್ತಿ, ಗ್ರಾಮೀಣ, ಹವ್ಯಾಸಿ ರಂಗಭೂಮಿ ಒಟ್ಟಾರೆ ಬೆಳವಣಿಗೆಯನ್ನು ಆಳವಾಗಿ ಬಲ್ಲವರು. ಎಲ್ಲ ಪ್ರಕಾರಗಳ ಬಗ್ಗೆ ಸಮಾನ ಪ್ರೀತಿಇಟ್ಟುಕೊಂಡ ಸಹೃದಯಿ. ಕೊಪ್ಪಳ ಜಿಲ್ಲೆಯ ರಂಗಚರಿತ್ರೆಯನ್ನು ಅತ್ಯಂತ ಪರಿಶ್ರಮದಿಂದ ಕಟ್ಟಿಕೊಟ್ಟಿದ್ದಾರೆ. ಸಮಗ್ರ ಇತಿಹಾಸ ರಚನೆಗೆ ದಾರಿ ದೀಪವಾಗಿದೆ.

**– ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

ಪ್ರಕಟಣಾ ಸಮಿತಿ ಸದಸ್ಯರು

**ಎಂ.ಎಸ್. ಗುಣಶೀಲನ್**

**ಎಸ್.ಕೆ. ಕೊನೆಸಾಗರ**

**ಮುದ್ದಣ್ಣ ರಟ್ಟೇಹಳ್ಳಿ**

## ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಶ್ರೀ ಎಲ್.ಬಿ. ಶೇಖ (ಮಾಸ್ತರ)**

ಅಧ್ಯಕ್ಷರು,

ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ. ತಿಪ್ಪೇಸ್ವಾಮಿ, ಚಳ್ಳಕೆರೆ

ಶ್ರೀ ರಾಜಪ್ಪ ಕಿರಗಸೂರು, ಮೈಸೂರು

ಶ್ರೀ ಎಸ್.ಕೆ. ಕೊನೆಸಾಗರ, ಹುನಗುಂದ

ಶ್ರೀ ಎಂ.ಎಸ್. ಗುಣಶೀಲನ್, ಬೆಂಗಳೂರು

ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು

ಶ್ರೀ ಮುದ್ದಣ್ಣ ರಟ್ಟಿಹಳ್ಳಿ, ಹಾವೇರಿ

ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ

ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪನಹಳ್ಳಿ

ಶ್ರೀ ಕೆ. ಜಗುಚಂದ್ರ, ಧಾರವಾಡ

ಶ್ರೀ ಉಮೇಶ ಸಾಲಿಯಾನ, ಕಾಸರಗೋಡು

ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ

ಶ್ರೀ ವಿ.ಎನ್. ಅಕ್ಕಿ, ರಾಯಚೂರು

ಶ್ರೀ ಬಿ.ಎಂ. ರಾಮಚಂದ್ರ, ಮೈಸೂರು

ಶ್ರೀ ಎನ್.ಕೆ. ರಾಮಕೃಷ್ಣ, ಬೆಂಗಳೂರು

ಶ್ರೀಮತಿ ಎ. ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು

**ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು**

**ಡಾ. ಶ್ರೀಪಾದ ಭಟ್, ಶಿರಸಿ**

**ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ**

ರಿಜಿಸ್ಟ್ರಾರ್

**ಬಿ. ಮಂಜುನಾಥ ಆರಾಧ್ಯ**

ಯೋಜನಾ ಸಹಾಯಕರು

**ಕೆ. ರೇವಣ್ಣ**

ಕಚೇರಿ ಸಿಬ್ಬಂದಿ

**ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ**

# ನೆನಕೆಗಳು

ರಂಗಭೂಮಿಯ ನನ್ನ ಆಸಕ್ತಿಯನ್ನು ಗಮನಿಸಿ ಕೊಪ್ಪಳ ಜಿಲ್ಲಾ ರಂಗಮಾಹಿತಿ ಕೈಪಿಡಿ ಬರೆದುಕೊಡಲು ಅವಕಾಶ ಮಾಡಿದ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶೇಖ ಮಾಸ್ತರರಿಗೂ ಮತ್ತು ಎಲ್ಲ ಸದಸ್ಯರಿಗೂ, ಸಿಬ್ಬಂದಿ ವರ್ಗಕ್ಕೂ, ವಿಶೇಷವಾಗಿ ಸಂಪಾದಕರಾದ ಆತ್ಮೀಯ ಗುಡಿಹಳ್ಳಿ ನಾಗರಾಜರವರು ಮೊಟ್ಟಮೊದಲಿಗೆ ನನ್ನನ್ನು ಸಂಪರ್ಕಿಸಿ ಇದರ ರೂಪುರೇಷೆ ತಿಳಿಸಿ ಆದಷ್ಟು ಬೇಗನೆ ಬರೆದುಕೊಡಲು ತಿಳಿಸಿದರಾದರೂ ಪರಿಚಯ ನೀಡುವವರ ವಿಳಂಬ ಮತ್ತು ನನ್ನ ತಿರುಗಾಟದಿಂದ ತಡವಾದರೂ ಸಾಧ್ಯವಾದ ಮಟ್ಟಿಗೆ ಸಮಗ್ರ ಮಾಹಿತಿ ಬರೆಯಲು ಅವಕಾಶ ಮಾಡಿದ್ದಕ್ಕಾಗಿ.

ಯಾವತ್ತೂ ನನ್ನೊಂದಿಗೆ ಸಹಕರಿಸುತ್ತಲಿರುವ ಮತ್ತು ಮಾಹಿತಿ ಸಂಗ್ರಹಿಸುವಲ್ಲಿ ತಾವು ಈಗಾಗಲೇ ಪ್ರಕಟಿಸಿರುವ ಪುಸ್ತಕ ಮತ್ತು ಉಳಿದ ಮಾಹಿತಿ ನೀಡಿದ ಕುಷ್ಟಗಿಯ ರವೀಂದ್ರ ಬಾಕಳೆ, ಶ್ರೀನಿವಾಸ ಜಹಗೀದಾರ, ಶರಣಪ್ಪ ವಡಗೇರಿ, ನಟರಾಜ ಸೋನಾರ, ಹನಿಮೇಶ ಗುಮಗೇರಿ,

ಅದೇ ರೀತಿ ಗಂಗಾವತಿಯ ಖ್ಯಾತ ನಾಟಕಕಾರ ಮತ್ತು ಮಾಜಿ ನಾಟಕ ಅಕಾಡೆಮಿ ಸದಸ್ಯ ಎಸ್.ವಿ. ಪಾಟೀಲ ಗುಂಡೂರು ತಮ್ಮಲ್ಲಿದ್ದ ಅಪ್ರಕಟಿಕ ಗಂಗಾವತಿ ತಾಲೂಕಿನ 'ಕಲಾ ಸೌರಭ' ಕಲಾವಿದರ ಪರಿಚಯ ಪುಸ್ತಕ ನೀಡಿ ನನ್ನ ಕೆಲಸವನ್ನು ಹಗುರವಾಗಿಸಿದರು.

ಪ್ರಸ್ತುತ ನಾಟಕ ಅಕಾಡೆಮಿ ಸದಸ್ಯ ಹಾಲ್ಕುರಿಕೆ ಶಿವಶಂಕರ ಮತ್ತು ಕಲಾವಿದರಾದ ಕೊಟ್ರಯ್ಯಸ್ವಾಮಿ, ಪ್ರಾಣೇಶ ಪೂಜಾರ, ಕನಕಗಿರಿಯ ಮಲ್ಲೇಶ ಕೋಟೆ, ಯಲಬುರ್ಗಿಯ ಮುನಿಯಪ್ಪ ಹುಬ್ಬಳ್ಳಿ, ಶರಣಪ್ಪ ಸಿ. ಪಾಟೀಲ, ಅಲ್ಲಾವುದ್ದಿನಯಮ್ಮಿ, ಸಾಕಷ್ಟು ಸಹಕರಿಸಿದ್ದಾರೆ.

ಬರವಣಿಗೆಯಲ್ಲಿ ಸಹಕರಿಸಿದ ಕಲಾವಿದೆಯರಾದ ವಿಜಯಲಕ್ಷ್ಮೀ ಕೊಟಗಿ, ಅನಸೂಯ ಜಹಗೀರದಾರ ಇವರಿಗೆಲ್ಲ ಮತ್ತು ಪ್ರತ್ಯಕ್ಷ, ಅಪ್ರತ್ಯಕ್ಷ ಸಹಕಾರ ನೀಡಿದ ಸ್ನೇಹಿತ ವರ್ಗಕ್ಕೆ ಅನಂತ ಕೃತಜ್ಞತೆಗಳು.

– ವಿಠ್ಠಪ್ಪ ಗೋರಂಟ್ಲಿ

# ಪರಿವಿಡಿ


| | | |
|---|---|---|
| 1. | ಪೀಠಿಕೆ | 1 |
| 2. | ಜಿಲ್ಲೆಯ ವೃತ್ತಿರಂಗಭೂಮಿಯ ಸಂಕ್ಷಿಪ್ತ ಇತಿಹಾಸ | 3 |
| 3. | ಹವ್ಯಾಸಿ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ | 18 |
| 4. | ಪ್ರಸಿದ್ಧ ನಾಟಕಕಾರ, ನಿರ್ದೇಶಕ, ನಟರ ಕುರಿತು ಅವಲೋಕನ | 26 |
| 5. | ಯಲಬುರ್ಗಿ ತಾಲೂಕಿನ ಉಳಿದ ಕಲಾವಿದರು | 77 |
| 6. | ಗಂಗಾವತಿ ತಾಲೂಕಿನ ಕಲಾವಿದರು | 98 |
| 7. | ಜಿಲ್ಲೆಯ ರಂಗಮಂದಿರಗಳು | 116 |
| 8. | ಗ್ರಂಥಋಣ | 117 |
| 9. | ಚಿತ್ರ ಸಂಪುಟ | 118 |

# ಪೀಠಿಕೆ

ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಗೆ ಪ್ರಾಚೀನವಾದ ಐತಿಹಾಸಿಕ ಹಿನ್ನಲೆಯಿದೆ. ಇದು ತಿರುಳ್ಗನ್ನಡ ನಾಡಿನ ಭಾಗವೆಂದು ನೃಪತುಂಗನಿಂದ ವರ್ಣಿತವಾಗಿರುವುದರಿಂದ ಇಲ್ಲಿಯ ಪ್ರತಿಯೊಂದಕ್ಕೂ ಒಂದು ವಿಶೇಷತೆಯಿದೆ. ಆದದ್ದರಿಂದ ಜಿಲ್ಲೆಯ ರಂಗ ಚಟುವಟಿಕೆಗೆ ಸಾಕಷ್ಟು ಪರಂಪರೆ ಇರುವದನ್ನು ಗಮನಿಸಬೇಕಾಗಿದೆ. ಪ್ರತಿಯೊಂದು ಹಳ್ಳಿ ಪಟ್ಟಣಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮದೆ ಆಗಿರುವ ವೃತ್ತಿ ಮತ್ತು ಹವ್ಯಾಸಿರಂಗ ಸಾಧನೆಯ ಮೂಲಕ ಗುರುತಿಸಿಕೊಂಡಿವೆ. ಸಾಕಷ್ಟು ನಾಟಕ ಕಂಪನಿಗಳು ಇಲ್ಲಿಂದ ಹುಟ್ಟಿಕೊಂಡು ರಾಜ್ಯದಲ್ಲಿ ಹೆಸರು ಮಾಡಿವೆ. ಅದೇರೀತಿ ಸುಪ್ರಸಿದ್ಧ ರಂಗಕಲಾವಿದರು ರಾಜ್ಯದ ರಂಗಭೂಮಿಗೆ ತಮ್ಮದೆ ಆಗಿರುವ ಕೊಡುಗೆ ನೀಡಿದ್ದಾರೆ. ಅದೆಲ್ಲವನ್ನು ಸವಿಸ್ತಾರವಾಗಿ ಬರೆಯಬೇಕಾದರೆ ಒಂದು ಬೃಹತ್ ಹೊತ್ತಿಗೆಯನ್ನು ಹೊರತರಬೇಕಾಗುತ್ತದೆ. ಆದದ್ದರಿಂದ ಪುಟ ಮಿತಿಯನ್ನು ಮತ್ತು ವಿಷಯ ಪ್ರಾಧಾನ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಪ್ರಸ್ತಾಪಿಸಲು ಪ್ರಯತ್ನಿಸಲಾಗಿದೆ.

ಜಿಲ್ಲೆಯ ಕೊಪ್ಪಳ, ಯಲಬುರ್ಗಿ, ಕುಷ್ಟಗಿ ಮತ್ತು ಗಂಗಾವತಿ ತಾಲೂಕುಗಳಲ್ಲಿ ರಂಗ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅದರಲ್ಲಿಯೂ ನಾಟಕ ಬರೆಯುವವರ ಸಂಖ್ಯೆ ಯಲಬುರ್ಗಿ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಸಾಹಿತ್ಯಾಸಕ್ತರಿಗೆ ರಂಗಕಲೆ ಎನ್ನುವುದು ಒಂದು ಪ್ರವೇಶದ್ವಾರವಿದ್ದಂತೆ. ಇದಕ್ಕೆ ಯಾವುದೇ ಸರ್ಟಿಫಿಕೇಟ್ ಬೇಕಿಲ್ಲ. ಪ್ರೇಕ್ಷಕರು ಕೊಡುವ ಶಹಬಾಸ್ಗಿರಿ ಅಥವಾ ನಿರ್ಲಕ್ಷ್ಯತೆಗಳೆ ಅವರ ಪರೀಕ್ಷಾ ಮೌಲ್ಯಮಾಪನ. ಆದದ್ದರಿಂದ ಪದವೀಧರರು, ವಿದ್ಯಾವಂತರು ಮತ್ತು ಅದ್ಯಾವದೂ ಇಲ್ಲದ ಅವಿದ್ಯಾವಂತರೂ ಸಹಿತ ರಂಗಕಲೆಯಲ್ಲಿ ಹೆಚ್ಚಿನ ಪರಿಣಿತಿ ಸಾಧಿಸಿ ಖ್ಯಾತಿಯನ್ನು ಪಡೆಯಬಹುದಾದ ಸಾಧ್ಯತೆ ಇಲ್ಲಿದೆ.

ಇದೊಂದು ಬಯಲು ವಿಶ್ವವಿದ್ಯಾನಿಲಯವಿದ್ದಂತೆ. ಇದರಲ್ಲಿ ಬೇಕಾದಷ್ಟು ಕಲಿತು ಉನ್ನತಿ ಸಾಧಿಸಬಹುದಾದ ಸಾಧ್ಯತೆಯಿದೆ. ಇದಕ್ಕೆ ನನ್ನದೇ ಅನುಭವ ಉದಾಹರಣೆಯಾಗಿದೆ. ನನಗೆ ನನ್ನ ಹದಿನೆಂಟನೆಯ ವಯಸ್ಸಿನಲ್ಲಿ ಈ ನಾಟಕದ ಹುಚ್ಚು ಆವರಿಸಿತು. ಆಗ ಪ್ರಾಥಮಿಕ ಶಾಲೆಯನ್ನು ಬಿಟ್ಟು ನೇಕಾರಿಕಾ ವೃತ್ತಿಗೆ ತೊಡಗಿಕೊಂಡು ಬದುಕಿನ ಕಷ್ಟವನ್ನು ಮರೆಯಲು ನಾಟಕದ ಹವ್ಯಾಸಕ್ಕೆ ಮೊರೆಹೋಗಿ ಸ್ನೇಹಿತರನ್ನು ಕಟ್ಟಿಕೊಂಡು ಕೆಲವು ಮುದ್ರಿತನಾಟಕಗಳನ್ನು ತೆಗೆದುಕೊಂಡು ಒಂದೊಂದು ನಾಟಕ

ತಿಂಗಳೆರಡುತಿಂಗಳು ಕಲಿತು ಅದನ್ನು ಪ್ರಯೋಗಿಸಲಿಕ್ಕಾಗದೆ ಕೈಬಿಟ್ಟು ಕೊನೆಗೆ ಪಿ.ಬಿ.ಧುತ್ತರಗಿಯವರ "ತಾಯಿಯಕರುಳು" ನಾಟಕವನ್ನು ವರ್ಷಗಟ್ಟಲೆ ಕಲಿತು ಅದರಲ್ಲಿ ಅನಿವಾರ್ಯವಾಗಿ ನಾನು ಸ್ತ್ರೀ ಪಾತ್ರ ಮಾಡುವ ಮೂಲಕ ಯಶಸ್ವಿಯಾಗಿ ನಂತರ ಅನೇಕ ನಾಟಕ ಆಡಿದ್ದಲ್ಲದೆ. ನನಗೇ ನಾಟಕ ಬರೆಯುವ ಹುಮ್ಮಸ್ಸು ಬಂದು "ದೇವರ ಹೂವು", "ಲಕ್ಷ್ಮಣ ರೇಖೆ", "ಬಾಳೊಂದು ಚದುರಂಗ" ಮತ್ತು ಏಕಾಂಕ ನಾಟಕಗಳಾದ "ಗದ್ಲೋ ಗದ್ಲ", "ಕಾಮ ದಹನ" ನಾಟಕಗಳನ್ನು ಬರೆದು ಪ್ರಯೋಗಿಸಿ ನಂತರ ಸಾಹಿತ್ಯದ ಅಭಿರುಚಿಯಿಂದ ಕಥೆ, ಕವನ, ಲೇಖನ ಬರೆಯತೊಡಗಿದ್ದರಿಂದ ಅವು ಪತ್ರಿಕೆಗಳಲ್ಲಿ ಪ್ರಕಟಗೊಳ್ಳತೊಡಗಿ ಪ್ರೋತ್ಸಾಹಿತನಾಗಿ ಪುಸ್ತಕ ಪ್ರಕಟಿಸಿ ೧೯೮೯ ರಲ್ಲಿ ಲಂಕೇಶ್ ರಿಂದ ಗುರುತಿಸಲ್ಪಟ್ಟು ಅವರ ಪತ್ರಿಕೆಯ ವರದಿಗಾರನಾಗಿ ೧೦ ವರ್ಷ ಕೆಲಸಮಾಡಿ ನಂತರ ಹಾಯ್ ಬೆಂಗಳೂರು ಹಾಗು ಸುದ್ದಿ ಮೂಲ ಪತ್ರಿಕೆಯ ಪ್ರಾರಂಭದಿಂದ ಬರೆಯುತ್ತ ಬಂದಿದ್ದನ್ನು ಹಾಗೂ ಹತ್ತಾರು ಪುಸ್ತಕ ಪ್ರಕಟಿಸಲು ಸಾಧ್ಯವಾಗಿದ್ದನ್ನು ನೆನೆದರೆ ಅದೆಲ್ಲದರ ಹಿಂದೆ ರಂಗಾಸಕ್ತಿಯ ಬುನಾದಿ ಇರುವ ಕಾರಣಕ್ಕಾಗಿ ನನಗೆ ಅದರ ಬಗ್ಗೆ ವಿಶೇಷ ಗೌರವ ನಿರಂತರವಾಗಿದೆ.

ಇದು ನನ್ನ ವಯಕ್ತಿಕ ವಿಷಯವಾದರೂ ಈ ಗ್ರಂಥಕ್ಕೆ ಪೂರಕವಾಗಿರುವದಿರಿಂದ ಪ್ರಸ್ತಾಪಿಸಿದ್ದು ತಪ್ಪಾಗಲಾರದೆಂದು ಭಾವಿಸಿದ್ದೇನೆ.

ಸಿನಿಮಾ ಜನಪ್ರಿಯವಾಗುವದಕ್ಕೆ ಮೊದಲು ರಂಗಕಲೆ ಅಗ್ರಮಾನ್ಯವಾಗಿತ್ತು ಆ ಕಾಲದಲ್ಲಿ ವೃತ್ತಿ ನಾಟಕ ಕಂಪನಿಗಳು ಸಾಕಷ್ಟು ಸಂಖ್ಯೆಯಲ್ಲಿ ಹುಟ್ಟಿಕೊಂಡು ಹಳ್ಳಿಯಿಂದ ಹಿಡಿದು ಪಟ್ಟಣ, ನಗರಗಳಲ್ಲೆಲ್ಲ ವರ್ಷಗಟ್ಟಲೆ ಸಂಚರಿಸುತ್ತ ಮನೋರಂಜನೆಯ ಜತೆಗೆ ನೀತಿಭೋದಕ ಮತ್ತು ಜ್ಞಾನವನ್ನು ನೀಡುವ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಅದಕ್ಕಾಗಿ ಆಗಿನ ಕಾಲದಲ್ಲಿ ನಾಟಕಕ್ಕೆ ಪೌರಾಣಿಕ ಹಾಗು ಐತಿಹಾಸಿಕ ವಸ್ತುವನ್ನೆ ಆಯ್ದುಕೊಳ್ಳುತ್ತಿದ್ದನ್ನು ಕಾಣುತ್ತೇವೆ. ಸಾಮಾಜಿಕ ನಾಟಕಗಳೇ ವಿರಳವಾಗಿರುತ್ತಿದ್ದವು. ನಂತರ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೋರಾಟಕ್ಕೆ ಸ್ಪೂರ್ತಿ ತುಂಬುವ ಕಥಾವಸ್ತುವನ್ನು ಆಯ್ದುಕೊಂಡಿದ್ದಾರೆ. ಆದರೆ ನೇರವಾಗಿ ಬ್ರಿಟೀಷರ ವಿರುದ್ಧದ ನಾಟಕಗಳನ್ನು ಆಡಲು ಅವಕಾಶ ದೊರೆಯಲಾರದೆನ್ನುವ ಕಾರಣಕ್ಕಾಗಿ ದೇಶಭಕ್ತಿಯ ಹಾಗು ಅದಕ್ಕಾಗಿ ಹೋರಾಡಬೇಕಾದ ಅನಿವಾರ್ಯತೆಯ ವಸ್ತುವನ್ನು ಒಳಗೊಂಡು ನಾಟಕ ರಚಿಸಿ ಪ್ರಯೋಗಿಸುವ ಮೂಲಕ ಅಪ್ರತ್ಯಕ್ಷವಾಗಿ ಹೋರಾಟಕ್ಕೆ ಬೆಂಬಲಿಸಿದ ಬೇಕಾದಷ್ಟು ಉದಾಹರಣೆಗಳಿವೆ. ಅದಕ್ಕೆ ಕೊಪ್ಪಳ ಜಿಲ್ಲೆ ಮುಂಚೂಣಿಯಲ್ಲಿತ್ತು ಎನ್ನಲಿಕ್ಕೆ ಇಲ್ಲಿಯ ನಾಟಕಕಾರರು ಮತ್ತು ಕಂಪನಿಗಳು ಉದಾಹರಣೆಯಾಗಿವೆ. ಅದನ್ನು ತಾಲೂಕಾವಾರು ವಿವರ ನೀಡುವಾಗ ನೋಡೋಣ.

# ಜಿಲ್ಲೆಯ ವೃತ್ತಿ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ

ಕೊಪ್ಪಳ ಜಿಲ್ಲೆ ನಿಜಾಮರ ಆಡಳಿತವಿದ್ದಾಗ ಯಲಬುರ್ಗಿ ತಾಲೂಕನ್ನು ಮಾತ್ರ ಒಳಗೊಂಡ ಚಿಕ್ಕ ಜಿಲ್ಲೆಯಾಗಿತ್ತು; ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ಹೈದ್ರಾಬಾದ್ ನಿಜಾಮ ಭಾರತದಲ್ಲಿ ರಾಜ್ಯವನ್ನು ವಿಲೀನಗೊಳಿಸಲು ಸಿದ್ಧನಾಗದ ಕಾರಣಕ್ಕಾಗಿ ಹೈದ್ರಾಬಾದ್‌ಕರ್ನಾಟಕದ ಜನ ಅದರ ವಿಮೋಚನೆಗಾಗಿ ಮತ್ತೊಂದು ಹೋರಾಟ ಮಾಡಬೇಕಾಯಿತು. ಅದೆಲ್ಲ ಆಗಿ ಒಂದು ವರ್ಷದ ನಂತರ ಸೆಪ್ಟೆಂಬರ್. ೧೭. ೧೯೪೮ ರಂದು ವಿಮೋಚನೆಯಾದಾಗ ಕೊಪ್ಪಳ ಜಿಲ್ಲೆ ತನ್ನ ಜಿಲ್ಲಾ ಸ್ಥಾನವನ್ನು ಕಳೆದುಕೊಂಡು ೨೫೦.ಕಿ.ಮೀ. ದೂ ರದ ರಾಯಚೂರಿನಲ್ಲಿ ಸೇರ್ಪಡೆಗೊಂಡಿತು. ಇದಕ್ಕಾಗಿ ಮತ್ತೊಂದು ದೊಡ್ಡ ಹೋರಾಟವೇ ನಡೆದು ೧೯೯೭ರಲ್ಲಿ ಕೊಪ್ಪಳ ಮತ್ತೆ ಹೊಸ ಜಿಲ್ಲೆಯಾಗಿ ಘೋಷಿತವಾಗಿ ಕುಷ್ಟಗಿ, ಯಲಬುರ್ಗಿ, ಗಂಗಾವತಿ ತಾಲೂಕುಗಳನ್ನು ಒಳಗೊಂಡಿತು.

ಹೈದ್ರಾಬಾದ್‌ಕರ್ನಾಟಕ ಎಲ್ಲ ರೀತಿಯಿಂದ ಹಿಂದುಳಿದಿರುವದನ್ನು ನಂಜುಂಡಪ್ಪನವರ ವರದಿಯೆ ದೃಢೀಕರಿಸುತ್ತದೆ. ಅದರಲ್ಲಿ ಕೊಪ್ಪಳ ಜಿಲ್ಲೆ ಇನ್ನಷ್ಟು ಹಿಂದುಳಿದಿರುವದಕ್ಕೆ ಇಲ್ಲಿಯ ಅಂಕಿಸಂಖ್ಯೆಗಳೇ ಸಾಕ್ಷಿಯಾಗಿವೆ. ಅದೆಲ್ಲ ಇಲ್ಲಿ ಅಪ್ರಸ್ತುತವಾದರೂ ಜಿಲ್ಲೆಯ ಸಂಕ್ಷಿಪ್ತ ಪರಿಚಯದ ಅಗತ್ಯತೆಗಾಗಿ ಪ್ರಸ್ತಾಪಿಸಲಾಯಿತಾದರೂ ಜಿಲ್ಲೆಗೆ ಹಿಂದೆ ಹೇಳಿದಂತೆ ಸಾಹಿತ್ತಿಕ ಮತ್ತು ಸಾಂಸ್ಕೃತಿಕ ಪರಂಪರೆಗೆ ಭವ್ಯ ಇತಿಹಾಸವಿರುವಂತೆ, ಇಲ್ಲಿಯ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗೆ ದೊಡ್ಡ ಇತಿಹಾಸವಿದೆ. ಅದೆಲ್ಲವನ್ನು ವಿವರವಾಗಿ ಬರೆದು ಬೃಹತ್ ರೂಪದಲ್ಲಿ ದಾಖಲಿಸಬೇಕಾದ ಅಗತ್ಯವಿದೆಯಾದರೂ ಅದೆಲ್ಲದರ ಸಂಕ್ಷಿಪ್ತ ರೂಪವನ್ನು ಮಾತ್ರ ಇಲ್ಲಿ ನೀಡಲು ಪ್ರಯತ್ನಿಸಬೇಕಾಗಿದೆ. ಹಾಗಾಗಿ ಅದರಲ್ಲಿ ಏನಾದರೂ ಬಿಟ್ಟು ಹೋಗಬಹುದಾದ ಸಾಧ್ಯತೆಯಿದೆಯಾದರೂ ಅದನ್ನು ಎಚ್ಚರಿಕೆಯಿಂದ ದಾಖಲಿಸುವಲ್ಲಿ ಮುತುವರ್ಜಿವಹಿಸಲಾಗಿದೆ.

ಈ ಜಿಲ್ಲೆ ನಿಜಾಮರ ಆಡಳಿತಕ್ಕೆ ಬಹುಕಾಲ ಒಳಪಟ್ಟಿದ್ದರಿಂದ ಇಲ್ಲಿ ಉರ್ದುಭಾಷೆಯ ಪ್ರಭಾವ ಅಧಿಕವಾಗಿತ್ತು, ಜತೆಗೆ ಆಂಧ್ರದ ಹೈದ್ರಾಬಾದೇ ರಾಜಧಾನಿಯಾಗಿದ್ದರಿಂದ ಹಾಗು ಅಲ್ಲಿಯ ಜನ ಇಲ್ಲಿಗೆ ವಲಸೆ ಬಂದು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಕ್ಕಾಗಿ ತೆಲುಗು ಭಾಷೆ ಮತ್ತು ಪಕ್ಕದ ಮಹಾರಾಷ್ಟ್ರದ ಪ್ರಭಾವದಿಂದ ಮರಾಠಿ ಭಾಷೆಗಳ

ತುಳಿತಕ್ಕೊಳಗಾಗಿ ತಿರುಳ್ಗನ್ನಡ ನಾಡೆನ್ನಿಸಿಕೊಂಡದ್ದು ಆಡಳಿತದ ಬಲವಿಲ್ಲದೆ ಕನ್ನಡ ಭಾಷೆ ನಿರ್ಲಕ್ಷ್ಯಕ್ಕೊಳಗಾಗಿದ್ದನ್ನು ಕಾಣುತ್ತೇವೆ.. ಆದರೂ ಇಲ್ಲಿಯ ಜನ ಭಾಷಾ ಸಾಮರಸ್ಯದಲ್ಲಿಯೇ ಕನ್ನಡದಲ್ಲಿ ಅನೇಕ ಮಹತ್ವದ ದಾಖಲೆಗಳನ್ನು ಸೃಷ್ಟಿಸಿದ್ದಾರೆ.

ನಮಗೆ ಜಿಲ್ಲೆಯ ರಂಗಭೂಮಿಯ ಇತಿಹಾಸ ಗೋಚರಿಸುವದು ಶಿರಹಟ್ಟಿ ವೆಂಕೋಬರಾಯರ ಶ್ರೀ ಮಹಾಲಕ್ಷ್ಮೀ ಪ್ರಸಾದಿತ ನಾಟಕ ಮಂಡಳಿಯಿಂದ ಅದೇ ಜಿಲ್ಲೆಯ ಮೊದಲ ನಾಟಕ ಕಂಪನಿ ಆದರೆ ವೆಂಕೋಬರಾಯರ ಹೆಸರಿನ ಮುಂದೆ ಶಿರಹಟ್ಟಿಯಿದೆಯಾದರೂ ಇವರು ಹುಟ್ಟಿದ್ದು ೧೮೮೫ರಲ್ಲಿ ಕೊಪ್ಪಳದಲ್ಲಿಯೆ ಎನ್ನುವದು ಇಲ್ಲಿ ಮುಖ್ಯವಾಗಿದೆ. ವೆಂಕೋಬರಾಯರ ತಾಯಿ ಶ್ರೀಮತಿ ಕೃಷ್ಣವೇಣಿ ಶಿರಹಟ್ಟಿಯ ಬಾಳಾಜಿನಾಯಕರ ನರಗುಂದೆ ಇವರ ಮಗಳು. ಕೊಪ್ಪಳದ ಹೂಲಗೇರಿ ಹನುಮಂತರಾವ್ ವಕೀಲರ ಮನೆತನದ ಈಕೆಯ ಗಂಡ ವೆಂಕೋಬರಾಯ ಈತ ತನ್ನ ಮಗ ೮ ವರ್ಷದವನಿದ್ದಾಗಲೇ ತೀರಿಕೊಂಡಿದ್ದರಿಂದ ಮಗನನ್ನು ಕರೆದುಕೊಂಡು ಶಿರಹಟ್ಟಿಯ ತವರುಮನೆ ಸೇರಿದ್ದರಿಂದ ಅಲ್ಲಿ ಬೆಳೆದು ದೊಡ್ಡವನಾಗಿ ಶಿರಹಟ್ಟಿ ವೆಂಕೋಬರಾಯನೆಂದು ಪ್ರಸಿದ್ಧಿ ಪಡೆರೂ ಕೊಪ್ಪಳದ ನಂಟು ತಪ್ಪಲಿಕ್ಕೆ ಸಾಧ್ಯವಿಲ್ಲ. ಅವರ ಹೂಲಗೇರಿ ಮನೆತನ ಕೊಪ್ಪಳದಲ್ಲಿ ಈಗಲೂ ಇದೆ. ಅಲ್ಲದೆ ಇವರ ಮಹಾಲಕ್ಷ್ಮೀ ಪ್ರಸಾದಿತ ಸಂಗೀತ ನಾಟಕ ಮಂಡಳಿಯಲ್ಲಿ ಇವರ ಸಂಬಂಧಿಕರಾದ ಅಂಬಾದಾಸ ಹೂಲಗೇರಿ. ತಮ್ಮಯ್ಯ ಹೂಲಗೇರಿ ಮುಂತಾದ ಪ್ರಸಿದ್ಧ ಕಲಾವಿದರಿದ್ದದ್ದರಿಂದ ಇದನ್ನು ಕೊಪ್ಪಳದ ಮೊದಲ ನಾಟಕ ಕಂಪನಿ ಎಂದು ಪರಿಗಣಿಸುವುದರಲ್ಲಿ ತಪ್ಪಿಲ್ಲ. ಇವರ ಜತೆಗೆ ಇದರಲ್ಲಿ ನೀಲಕಂಠ ಶಾಸ್ತ್ರಿಯಂಥ ಹಿರಿಯ ಕಲಾವಿದರೂ ಇದ್ದದ್ದು ವಿಶೇಷವಾಗಿದೆ.

೧೯೦೩ರಲ್ಲಿ ಆರಂಭಗೊಂಡ ಈ ನಾಟಕ ಕಂಪನಿಯಲ್ಲಿ ಆಗಿನ ಕಾಲದಲ್ಲಿ ಪುರುಷರೆ ಸ್ತ್ರೀ ಪಾತ್ರ ನಿರ್ವಹಿಸುತ್ತಿದ್ದ ಕಾರಣ ಅದರಲ್ಲಿ ಅಂಬಾದಾಸ ಹೂಲಗೇರಿ ತುಂಬಾ ಪ್ರಸಿದ್ಧರಾಗಿದ್ದರಿಂದ ಅವರ ಸ್ತ್ರೀ ಪಾತ್ರದ ಭಾವಚಿತ್ರವೊಂದು ಈಗಲೂ ಹೈದ್ರಾಬಾದಿನ ಗ್ಯಾಲರಿಯಲ್ಲಿರುವುದನ್ನು ಕಂಡಿರುವ ಗಂಗಾವತಿಯ ಶಿಕ್ಷಕ ವೆಂಕಟೇಶ ಹೇಳುತ್ತಿರುವುದನ್ನು ಗಮನಿಸಿದರೆ. ಅವರ ಕಲಾವಂತಿಕೆಯ ಪ್ರೌಢಿಮೆ ಎಷ್ಟಿತ್ತೆಂಬುದನ್ನು ತಿಳಿಯಬಹುದು. ವೆಂಕೋಬರಾಯರು ಸಹಿತ ನಟಸಾರ್ವಭೌಮರೆಂದು ಪ್ರಸಿದ್ಧರಾದರೂ ಅವರ ಹೆಸರಿನ ಮುಂದೆ ಕೊಪ್ಪಳ ಸೇರುವ ಬದಲು ಶಿರಹಟ್ಟಿಸೇರಿದ್ದು ವಿಪರ್ಯಾಸ.

ಇವರ ನಾಟಕ ಕಂಪನಿ ೧೯೦೩ರಲ್ಲಿ ಆರಂಭಗೊಂಡಿತೆಂದಿದೆಯಾದರೂ ಕಂಪನಿಯ ದಾಖಲೆಗಳಲ್ಲಿ ೧೮೯೮ರಲ್ಲಿಯೆ ಅಸ್ತಿತ್ವ ಪಡೆದಿರುವದಾಗಿ ತಿಳಿದುಬರುತ್ತಿದೆ. ಅಂದರೆ ಆಗ ವೆಂಕೋಬರಾಯರಿಗೆ ಕೇವಲ ೧೩ ವರ್ಷ ವಯಸ್ಸಾಗಿತ್ತೆನ್ನುವುದು ತುಂಬಾ ಅಚ್ಚರಿಯ ಸಂಗತಿ. ಅಥವಾ ೧೯೦೩ರನ್ನು ಅಂಗೀಕರಿಸಿದರೂ ಅಲ್ಲಿಗೆ ಅವರಿಗೆ ೧೮ ವರ್ಷ ಮಾತ್ರ ವಯಸ್ಸಾಗುತ್ತದೆ. ಅಂದಾಗ ಇವರ ಕಂಪನಿ ಕೊಣ್ಣೂರು

ಕಂಪನಿಗಿಂತ ಒಂದು ವರ್ಷ ಮುಂಚಿತವಾಗಿಯೆ ಆರಂಭಗೊಂಡಿರುವದರಿಂದ ಇದು ಉತ್ತರ ಕರ್ನಾಟಕದ ಮೂರನೆಯ ಕಂಪನಿ ಎಂದು ಹೇಳಲಾಗುತ್ತಿದೆ.

ವೆಂಕೋಬರಾಯರ ಸಹೋದರ ಹೂಲಗೇರಿ ತಮ್ಮಯ್ಯ ೨೦ನೆಯ ಶತಮಾನದ ಆರಂಭ ಕಾಲದಲ್ಲಿಯೆ ಅನೇಕ ಪ್ರಸಿದ್ಧ ನಾಟಕಗಳನ್ನು ಬರೆದು ಕೊಟ್ಟಿದ್ದರೆಂದು ಹೇಳಲಾಗುತ್ತಿದೆ. ಆ ಕುರಿತು, ಸಂಶೋಧಿಸಿ ಅವರ ಕೃತಿಗಳ ಮೇಲೆ ಬೆಳಕು ಚೆಲ್ಲಬೇಕಾದ ಅಗತ್ಯವಿದೆ. 'ವೀರ ಅಭಿಮನ್ಯು', 'ಭದ್ರಾಚಲ ರಾಮದಾಸ' ಮತ್ತು 'ಧರ್ಮಾತ್ಮ' ಮುಂತಾದ ನಾಟಕಗಳನ್ನು ತಮ್ಮಯ್ಯ ಹೂಲಗೇರಿ ಬರೆದಿರುವುದಾಗಿ ತಿಳಿದು ಬರುತ್ತದೆ. ಆದ್ದರಿಂದ ಇವರೇ ಜಿಲ್ಲೆಯ ಮೊದಲ ನಾಟಕಕಾರರೆಂದು ಹೇಳುವದರಲ್ಲಿ ತಪ್ಪೇನಿಲ್ಲ.

ವೆಂಕೋಬರಾಯರ ನಾಟಕ ಕಂಪನಿಯಲ್ಲಿ ಅನೇಕ ಸುಪ್ರಸಿದ್ಧ ಕಲಾವಿದರಿದ್ದರೆಂಬುದು ಗಮನಾರ್ಹ ಅದಕ್ಕೆ ಉದಾಹರಣೆಯೆಂದರೆ ಸುಪ್ರಸಿದ್ಧ ಸಿನಿಮಾ ನಟರಾದ ಆರ್. ನಾಗೇಂದ್ರರಾಯರು ಇವರ ಕಂಪನಿಯಲ್ಲಿಯೇ ತರಬೇತಿಗೊಂಡು ಸಿನಿಮಾ ಪ್ರವೇಶಿಸಿದರೆನ್ನುವುದು ಉಲ್ಲೇಖನಾರ್ಹ.

ಇದರ ನಂತರ ದೇಸಾಯಿ ರಾಮರಾಯರ "ಸಂಗೀತ ನಾಟಕ ಮಂಡಳಿ ಕೊಪ್ಪಳ" ಬೆಳಕಿಗೆ ಬಂದಿದ್ದನ್ನು ನೋಡುತ್ತೇವೆ. "ಗರುಡ ಸದಾಶಿವರಾಯರ ನಾಟಕ ಸಾಹಿತ್ಯ ಹಾಗು ವೃತ್ತಿರಂಗ ಭೂಮಿ ಅಧ್ಯಯನ"ದಲ್ಲಿ ಪ್ರಸ್ತಾಪಿತವಾದಂತೆ ೧೯೧೫ರಲ್ಲಿ ಈ ಕಂಪನಿ ಕೊಪ್ಪಳ ರಾಮರಾಯರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಗ್ಗೆ ಉಲ್ಲೇಖಿಸಲಾಗಿದೆ... ಈ ಕಂಪನಿ 'ಸೌಭದ್ರ', 'ಗೋಪಿಚಂದ್', 'ರಾಮರಾಜ್ಯವಿಯೋಗ' ಮುಂತಾದ ಪ್ರಸಿದ್ಧ ನಾಟಕಗಳನ್ನು ಆಡುತ್ತಿದ್ದರು. ಇದರಲ್ಲಿ ಉತ್ತಮ ನಟ, ನಾಟಕಕಾರ ಮತ್ತು ಮಾಸ್ತರರೆಂದು ಹೆಸರು ಪಡೆದಿದ್ದ ಶಿವಲಿಂಗಸ್ವಾಮಿ ಚಿಕ್ಕೋಡಿಯವರು ನಾಟಕ ಕಲಿಸುತ್ತಿದ್ದರು. ಅನೇಕ ಪ್ರಖ್ಯಾತ ಕಲಾವಿದರು ಇದರಲ್ಲಿದ್ದರೂ ಕಂಪನಿಯಲ್ಲಿ ಶಿಸ್ತಿನ ಆಡಳಿತವಿರಲಿಲ್ಲ ಎಂದು ಹೇಳಲಾಗುತ್ತಿದೆ. ರಾಮರಾಯರ ಅಣ್ಣಂದಿರಾದ ನರಹರಿರಾಯರೊಂದಿಗಿನ ತಿಕ್ಕಾಟದಲ್ಲಿ ಎರಡೇ ವರ್ಷದ ಅವಧಿಯಲ್ಲಿ ಈ ಕಂಪನಿ ದಿವಾಳಿಯ ಹಂತ ತಲುಪಿದ್ದರಿಂದ ಶಿವಲಿಂಗಸ್ವಾಮಿಗಳು ಇದನ್ನು ಬಿಟ್ಟುಹೋದ ಬಳಿಕ ನಾಟ್ಯಾಚಾರ್ಯರಾದ ಗರುಡ ಸದಾಶಿವರಾಯರ ಮಂಡಳಿಯನ್ನು ಸೇರಿ ಐದು ತಿಂಗಳು ಸೇವೆ ಸಲ್ಲಿಸುವಷ್ಟರಲ್ಲಿ ಇವರೊಂದಿಗೆಯೂ ರಾಮರಾಯರ ಸಂಬಂಧ ಕೆಟ್ಟುಹೋಗಿದ್ದರಿಂದ ಶ್ರೀ ಶಂಕರಲಿಂಗೇಶ್ವರ ಸಂಗೀತ ನಾಟಕ ಮಂಡಳಿ ಹೊಂಬಳ ಇದರ ಮಾಲಿಕ ಶಂಕರಗೌಡರ ಕರೆಯ ಮೇರೆಗೆ ಈ ಕಂಪನಿ ಸೇರುತ್ತಾರೆ.

ಆದರೂ ರಾಯರ ಕಂಪನಿ ಆಕಾಲದಲ್ಲಿಯೆ ಕೊಪ್ಪಳದಿಂದ ಬೆಳಗಾವಿ ಜಿಲ್ಲೆಯ ಬೆಟಗೇರಿ ಮಮದಾಪುರ ಮುಂತಾದ ಗ್ರಾಮಗಳಿಗೆ ಹೋಗಿ ನಾಟಕಗಳನ್ನಾಡಿದ್ದು ಇತಿಹಾಸ.

ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಗರುಡ ಸದಾಶಿವರಾಯರದು ಮರೆಯಲಾರದ ಹೆಸರು.. ಇವರು ರಂಗಭೂಮಿಯನ್ನು ಒಂದು ಪವಿತ್ರವಾದ ಮಂದಿರದಂತೆ ರೂಪಿಸಿದವರು. ಹಾಗೆಯೆ ವಿಶ್ವವಿದ್ಯಾಲಯದ ಶಿಸ್ತು ನಿಯಮಗಳನ್ನು ಅಳವಡಿಸಿದವರು. ಇವರ ನಾಟಕ ಕಂಪನಿಯ ಹೆಸರು ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ ಗದಗ: ಎಂದಿದ್ದರೂ, ಇವರು ಕೊಪ್ಪಳ ತಾಲೂಕಿನ ಕವಲೂರು ಗ್ರಾಮದಲ್ಲಿ ವೈದ್ಯಮನೆತನದವರಾದ ಗುರುನಾಥ ಶಾಸ್ತ್ರಿ ಮತ್ತು ಸುಭದ್ರಾಬಾಯಿಯವರ ಮಗನಾಗಿ (೧೮೮೧-೧೯೫೩) ಜನಿಸಿದರು... ಕವಲೂರು ಹಾಗು ಇದೇ ತಾಲೂಕಿನ ಗಿಣಗೇರಿಯಲ್ಲಿ ಕನ್ನಡವನ್ನು ಕಲಿತು, ಮುಂದಿನ ಶಿಕ್ಷಣವನ್ನು ರಾಯಚೂರು ಹಾಗು ಕಲಬುರಗಿಯಲ್ಲಿ ಪೂರೈಸಿದರು.

ಆಗ ಇಲ್ಲೆಲ್ಲ ನವಾಬರ ಆಡಳಿತವಿದ್ದ ಕಾರಣ ಎಲ್ಲವೂ ಉರ್ದು ಮಯವಾಗಿತ್ತು. ಜತೆಗೆ ಮರಾಠಿಯ ಪ್ರಭಾವವೂ ಸಾಕಷ್ಟಿತ್ತು ಆದರೆ ಸದಾಶಿವರಾಯರಿಗೆ ಕನ್ನಡ ಮಾತೃಭಾಷೆಯಾಗಿದ್ದರಿಂದ ಮೂರೂ ಭಾಷೆಗಳಲ್ಲಿ ಅವರು ಪ್ರೌಢಿಮೆ ಸಾಧಿಸಿದ್ದರು. ಗರಿಡರಿಗೆ ಗಾಣಗಾಪುರದ ದತ್ತಾತ್ರೇಯ ಆರಾಧ್ಯದೈವವಾಗಿದ್ದ. ಹಾಗಾಗಿ ಕಲಬುರ್ಗಿಯಲ್ಲಿ ಕಲಿಯುತ್ತಲೇನೆ ಮಹಾರಾಷ್ಟ್ರದ ಗಡಿಭಾಗಕ್ಕೆ ಹೋಗಿ ಬರುತ್ತಿದ್ದರಿಂದ ಅಲ್ಲಿಯ ಮರಾಠಿ ನಾಟಕಗಳನ್ನು ನೋಡುತ್ತ ಅವುಗಳ ಪ್ರಭಾವಕ್ಕೆ ಒಳಗಾಗಿ. ಅವುಗಳನ್ನು ಕನ್ನಡಕ್ಕೆ ಅನುವಾದಿಸಿ ಕಲಬುರ್ಗಿಯಲ್ಲಿದ್ದ ಕಂಪನಿಗಳಿಗೆ ಕೊಟ್ಟು ಅದರಲ್ಲಿ ತಾವೂ ಅಭಿನಯಿಸುತ್ತ ರಂಗಭೂಮಿಗೆ ಪಾದಾರ್ಪಣೆ ಮಾಡಿದವರು ಉಸಿರಿರುವವರೆಗೆ ಅದರಿಂದ ಹಿಂತಿರುಗಲಿಲ್ಲ. ಕವಲೂರು ಕೊಪ್ಪಳಗಳೆಲ್ಲ ನಿಜಾಮರ ಆಡಳಿತಕ್ಕೊಳಪಟ್ಟಿದ್ದರಿಂದ ಅದು ತಮ್ಮ ಕನ್ನಡ ರಂಗಭೂಮಿಗೆ ಒಪ್ಪಲಾರದ್ದಕ್ಕಾಗಿ ತಮ್ಮ ಕಂಪನಿಯ ಜತೆಗೆ ಕೊಪ್ಪಳ ಅಥವಾ ಕವಲೂರು ಸೇರಿಸುವದಕ್ಕೆ ಬದಲಾಗಿ ಅದನ್ನು ಗದಗಿಗೆ ಸೇರಿಸಿರಬಹುದೆನ್ನಿಸುತ್ತದೆ.

೧೯೨೧ರಿಂದ ೧೯೩೬ರ ವರೆಗೆ ಅಂದರೆ ೧೫ ವರ್ಷಗಳವರೆಗೆ ಗರುಡ ಸದಾಶಿವರಾಯರು ತಮ್ಮ ಬಹುಮುಖಿ ಪ್ರತಿಭೆಯಿಂದ ಶ್ರೇಷ್ಠ ನಟರಾಗಿಯಷ್ಟೇಯಲ್ಲ, ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ, ಭಕ್ತಿ ಪ್ರಧಾನವಾದ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ತಾವೇ ರಚಿಸಿ ಪ್ರಖ್ಯಾತ ನಾಟಕಕಾರರೆನ್ನುವ ಹೆಸರು ಪಡೆದರು. ಕೇವಲ ತಮ್ಮ ಕಂಪನಿಗಲ್ಲದೆ, ಕೊಪ್ಪಳ ಸಂಗೀತ ನಾಟಕ ಮಂಡಳಿ, ಕೊಣ್ಣೂರ ಕಂಪನಿ, ಹೊಂಬಳ ಶಂಕರಗೌಡ ಕಂಪನಿಗಳಲ್ಲೆಲ್ಲ ನಾಟಕ ನಿರ್ದೇಶಕರಾಗಿ ಕೆಲಸ ಮಾಡಿ ಉತ್ತಮ ರಂಗನಿರ್ದೇಶಕರೆನ್ನಿಸಿಕೊಂಡರು.

ಗರುಡ ಸದಾಶಿವರಾಯರ ಶ್ರೀ ದತ್ತಾತ್ರೇಯ ಸಂಗಿತ ನಾಟಕ ಮಂಡಳಿಯಲ್ಲಿ ಖ್ಯಾತ ಕಲಾವಿದರಾದ ಇಟಗಿ ರಾಮಣ್ಣ, ಮಧ್ವರಾಜ ಉಮರ್ಜಿ, ವಿಠ್ಠಲಸಾಕಬಾಡಿ, ವ್ಯಾಸಾಚಾರ್ಯ ಕಲಿಕೇರಿ, ಆರ್. ಡಿ. ಕಾಮತ್, ಗುನ್ನಳ್ಳಿ ನಿಂಗಪ್ಪ, ಹಲಗೇರಿ ಭೀಮರಾವ, ಕೊಪ್ಪಳ ಕೃಷ್ಣಾಚಾರಿ, ಲಿಂಗಪ್ಪ, ಖಾನಸಾಹೇಬ, ಗರುಡ ಮನೆತನದ ದತ್ತಾತ್ರೇಯ ಮತ್ತು ಶ್ರೀ ಪಾದರಾಯ, ಸ್ವತಃ ಸದಾಶಿವರಾಯರು, ಗಂಗಾವತಿ ಬಸಪ್ಪ,

ಗಾಡಗೋಳಿ ನೀಲಕಂಠಬುವಾ, ನಾರಾಯಣ ಗುಡಿ, ಗೋವಿಂದ ರಾವ್ ಕುಲಕರ್ಣಿ ಅಳವಂಡಿ. ಡಿ. ದುರ್ಗಾದಾಸ, ಬೆಟ್ಟದೂರ ಚನ್ನಯ್ಯ ಮತ್ತು ಶಂಕ್ರಯ್ಯ, ಕರ್ನಾಟಕದ ಗಂಧರ್ವನೆಂದು ಹೆಸರಾದ ಮುರುಗೋಡ ಗಂಗಾಧರಪ್ಪ, ಹಮ್ಮಿಗಿ ನೀಲಕಂಠಪ್ಪ, ಹಳ್ಳಿಗುಡಿ ಸದಾಶಿವಪ್ಪ, ಸ್ತ್ರೀ ಪಾತ್ರಗಳಲ್ಲಿ ಕೊಪ್ಪಳದಮನ್ನಾಸಾನಿ. ಗರುಡ ಮನೆತನದ ಯಶೋಧರಾ, ಶಕುಂತಲಾ ಮತ್ತು ಅನುಸೂಯಾ ದೀಕ್ಷಿತ್, ಬ್ಯಾಡಗಿ ಸಾವಿತ್ರಮ್ಮ, ಡಿ. ಸಂಜೀವಮ್ಮ ಹಾಗೂ ಹನುಮಂತೆವ್ವ ಮುಂತಾದವರ ಬಗ್ಗೆ ಗರುಡರನ್ನು ಕುರಿತು ಪಿಎಚ್‌ಡಿ ಪ್ರಭಂಧ ಮಂಡಿಸಿರುವ ಡಾ ಬಸವರಾಜ ಜಗಜಂಪಿ ಉಲ್ಲೇಖಿಸಿದ್ದಾರೆ. ಇವರ ಕಂಪನಿಯಲ್ಲಿ ಹೆಚ್ಚಾಗಿ ಕೊಪ್ಪಳ ಜಿಲ್ಲೆಯ ಕಲಾವಿದರೆ ಇದ್ದರೆನ್ನುವುದು. ಇದು ಕೊಪ್ಪಳ ಜಿಲ್ಲೆಯದೆ ಕಂಪನಿ ಆಗಿತ್ತೆನ್ನುವುದಕ್ಕೆ ಸಾಕ್ಷಿಯಾಗಿದೆ. ಇವರ ಕಂಪನಿ ಕುಂದಾಪುರದಲ್ಲಿದ್ದಾಗ ಸಿನಿಮಾ ನಟ, ನಿರ್ದೇಶಕ ಮತ್ತು ಸಂಭಾಷಣಕಾರರಾದ ಹುಣಸೂರ ಕೃಷ್ಣಮೂರ್ತಿಯವರು ಸೇರಿಕೊಂಡು ತಾವು ವೃದ್ಧಾಪ್ಯದಲ್ಲಿದ್ದರೂ ಕಂಪನಿ ಪುಣೆ, ಮುಂಬೈ, ಬೆಂಗಳೂರು ಸಂಚಾರ ಮಾಡಿದಾಗಲೂ ಅದರಲ್ಲಿ ಪಾತ್ರವಹಿಸುತ್ತ ತಿರುಗಾಡಿದರೆನ್ನುವುದು ಗಮನಾರ್ಹ.

ಗರುಡಸದಾಶಿವರಾಯರ ಪತ್ನಿ ಭೀಮಾಬಾಯಿ ಕಂಪನಿಯ ಎಲ್ಲರ ಊಟೋಪಚಾರದ ಮೇಲ್ವಿಚಾರಣೆ ಮಾಡುತ್ತಿದ್ದರೆನ್ನುವುದು ಸ್ಮರಣೀಯ, ಆಗ ದೆಹಲಿಯಲ್ಲಿ ನಡೆಎದ ರಾಷ್ಟ್ರೀಯ ನಾಟಕೋತ್ಸವಕ್ಕೆ ಗರುಡ ಸದಾಶಿವರಾಯರು ತಮ್ಮ "ಉಗ್ರ ಕಲ್ಯಾಣ" ನಾಟಕ ತೆಗೆದುಕೊಂಡು ಹೋಗಿ ಪ್ರದರ್ಶಿಸಬೇಕೆನ್ನುವ ಬಯಕೆ ಈಡೇರಲಿಲ್ಲ. ಇವರ ಕಂಪನಿಯಲ್ಲಿ ಕಿನ್ನಾಳ ಶಿವರುದ್ರಪ್ಪನವರು ಹತ್ತೊಂಬತ್ತು ವರ್ಷಗಳ ಕಾಲ ಸಂಗೀತ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು ಕಲಾವಿದರ ಮತ್ತು ಕಂಪನಿಯ ನಿಷ್ಠೆಗೆ ಉದಾಹರಣೆಯಾಗಿದೆ.

ಗರುಡರ ಕಂಪನಿಯ ನಂತರ ನಮಗೆ ಮತ್ತೊಂದು ಗನಮಸೆಳೆಯುವ ಕಂಪನಿ ಎಂದರೆ ಆಳವಂಡಿಯ ಸೋಮನಗೌಡ ಮಾಲಿಪಾಟೀಲರು ಪ್ರಾರಂಭಿಸಿದ ಶ್ರೀ ರಂಜನ್ ಸೇವಾ ನಾಟ್ಯ ಸಂಘ. ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದಲ್ಲಿ ಮೊದಲು ಹವ್ಯಾಸಕ್ಕಾಗಿ ಹುಟ್ಟಿಕೊಂಡ ಇದು ನಂತರ ವೃತ್ತಿನಾಟಕ ಕಂಪನಿಯಾಗಿದ್ದರ ಹಿಂದೆ ಒಂದು ರೋಚಕ ಇತಿಹಾಸವಿದೆ. ೧೯೩೭ರಲ್ಲಿ ಗದಗ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿಯ ಬಸನಗೌಡರು ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿಯನ್ನು ತಮ್ಮೂರಲ್ಲಿ ಪ್ರಾರಂಭಿಸಿ ನಾಟಕ ಆಡುತ್ತಿದ್ದವರು ೧೯೩೪ರಲ್ಲಿ ಗದಗಿನ ಖ್ಯಾತ ಕಲಾವಿದೆ ರತ್ನಾ ಎನ್ನುವವರನ್ನು ಹಾಕಿಕೊಂಡು ದೊಡ್ಡಮಟ್ಟದಲ್ಲಿ ಕಿತ್ತೂರ ಚೆನ್ನಮ್ಮ ನಾಟಕ ಪ್ರದರ್ಶಿಸಲು ಸಿದ್ಧತೆ ನಡೆಸಿದರು ಆದರೆ ಇದಕ್ಕೆ ಧಾರವಾಡದ ಕಲೆಕ್ಟರ್ ಅನುಮತಿ ನೀಡದ್ದರಿಂದ ದಿಲ್ಲಿಯವರೆಗೆ ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ. ಯಾಕಂದರೆ ಆಗಿನ್ನೂ ಬ್ರಿಟೀಷರ ಆಡಳಿತವೇ ಇದ್ದದ್ದರಿಂದ ತಮ್ಮ ವಿರುದ್ಧ ಹೋರಾಡಿದ ಮಹಿಳೆಯ ಕುರಿತ ನಾಟಕಕ್ಕೆ ಪರವಾನಗಿ ಕೊಡಲು ಹೇಗೆ ಸಾಧ್ಯ? ಹೀಗಾಗಿ ಕಂಪನಿ ಬಂದ್ ಆಯಿತಾದರೂ ಅಳವಂಡಿಯ ಸೋಮನಗೌಡರಿಗೆ ಅಬ್ಬಿಗೇರಿ ಬಸಮಗೌಡರಿಗೆ ರಂಗ ಪರಿಕರಗಳನ್ನೆಲ್ಲ ಅತ್ಯಂತ

ಕಡಿಮೆ ಬೆಲೆಯಲ್ಲಿ ಮಾರಾಟಕ್ಕೆ ಕೊಟ್ಟರಲ್ಲದೆ ಅವರ ಕಂಪನಿಯ ಕಲಾವಿದರೆಲ್ಲ ಇವರ ಕಂಪನಿಗೆ ಸೇರಿದ್ದರಿಂದ ೧೯೩೩ರಿಂದ ಸೋಮನಗೌಡಮಾಲಿಪಾಟೀಲರ ಶ್ರೀರಂಜನ್ ಸೇವಾ ನಾಟ್ಯ ಸಂಘ ಅಳವಂಡಿಯಿಂದ ಕೊಪ್ಪಳ ಜಿಲ್ಲೆಯಲ್ಲಷ್ಟೇಯಲ್ಲ. ಅದಕ್ಕೆ ಹೊಂದಿಕೊಂಡಿರುವ ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ನಾಟಕ ಪ್ರದರ್ಶಿಸುತ್ತ, ಆಂಧ್ರದ ಆದವಾನಿ, ಆಲೂರು, ದೊಡ್ಡಹರಿವಾಣ ಮುಂತಾದೆಡೆ ತಿರುಗಿ ಧಾರವಾಡ ಜಿಲ್ಲೆಯ ಬಾದಾಮಿ ಬನಶಂಕರಿ ಜಾತ್ರೆ, ಇಲಕಲ್, ಕಲಾದಗಿಗಳಲ್ಲಿ ನಾಟಕ ಪ್ರಯೋಗ ಮಾಡಿತಾದರೂ ಕಂಪನಿಗೆ ಲಾಭವಾಯಿತು ಅಥವಾ ಹಾನಿಯಾಯಿತು ಆಗಲಿಲ್ಲ. ಕಲಾವಿದರ ಬದುಕು ಸಾಗಿಸುತ್ತ ಕಂಪನಿ ನಡೆಸಿದರೆ ಸಾಕೆನ್ನುವಂತಿತ್ತು. ಇಷ್ಟರಲ್ಲಿ ಮಾಲಿಕರಾದ ಸೋಮನಗೌಡರು ನಿಧನರಾದರು. ಆದರೂ ಮತ್ತೆರಡು ವರ್ಷ ಕಂಪನಿ ನಡೆಯಿತು. ೧೯೩೯ರ ವೇಳೆಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಹರಪನಹಳ್ಳಿ, ನಾರಾಯಣ ದೇವರಕೆರೆ ಕ್ಯಾಂಪ್ ಮುಗಿಸಿಕೊಂಡು ಕುರುವತ್ತಿ ಜಾತ್ರೆಗೆ ಬಂದಾಗ ಚನ್ನಾಗಿ ಹಣ ಸಂಪಾದನೆಯಾಯಿತು. ನಂತರ ಹಂಪಿ ಜಾತ್ರೆಗೆ ಬಂದು ನಾಟಕ ಪ್ರಾರಂಭಿಸಿದಾಗ ಅಕಾಲಿಕವಾಗಿ ಸುರಿದ ದೊಡ್ಡಮಳೆಯಿಂದಾಗಿ ರಂಗಸಜ್ಜಿಕೆಯಲ್ಲಾ ಹಾಳಾಗಿ ವೇಷಭೂಷಣ ರಂಗ ಪರಿಕರ ಕೆಟ್ಟು ಹೋಗಿದ್ದರಿಂದ ಹೊಸಪೇಟೆಗೆ ಬಂದು ಅಲ್ಲಿಯ ಶ್ರೀಮಂತ ಪತ್ತಿಕೊಂಡಿಯವರಲ್ಲಿ ಉಳಿದದ್ದನ್ನೆಲ್ಲ ಒತ್ತೆಯಿಟ್ಟು ಕಲಾವಿದರಿಗೆ ಹಣಕೊಟ್ಟು ಮನೆಗೆ ಕಳಿಸಿ ಮ್ಯಾನೇಜರ್ ಮನೆಗೆ ಬಂದಿದ್ದರಿಂದ ಎಂಟು ವರ್ಷ ನಡೆದ ಕಂಪನಿ ಇಲ್ಲಿಗೆ ಕೊನೆಗೊಂಡಿತು.

ಈ ಕಂಪನಿಯಲ್ಲಿ ನಟಿಸುತ್ತಿದ್ದ ರತ್ನಮ್ಮಳನ್ನು ದೊಟ್ಟಮೇಟಿ ಅಂದಾನಪ್ಪನವರು ಮದುವೆಯಾದದ್ದು ವಿಶೇಷ. ನಂತರ ಈಕೆಯ ಸ್ಥಾನವನ್ನು ಹೊಸಪೇಟೆಯ ಭೀಮಾಸಾನಿ ತುಂಬಿದರು. ಕಲ್ಲೂರ ರಾಜಾಸಾಬ ಈ ಕಂಪನಿಯ ಹಾರ್ಮೋನಿಯಂ ಮಾಸ್ತರರಾಗಿದ್ದರೆ ಸದಾಶಿವಪ್ಪಹಳ್ಳಿಗುಡಿ, ರುದ್ರಪ್ಪನಾಯಕ, ಬಾಗಲಕೋಟೆ ಕೃಷ್ಣಪ್ಪ ಮುರಗೋಡ ಗಂಗಾಧರಪ್ಪ, ಕ್ರಿಶ್ಚಿಯನ್ನರಾಗಿದ್ದ ಹುಬ್ಬಳ್ಳಿ ಕೃಷ್ಣಪ್ಪ ಇದರಲ್ಲಿ ಸ್ತ್ರೀ ಪಾತ್ರ ಮಾಡುತ್ತಿದ್ದರು. ಅನೇಕ ಪ್ರಖ್ಯಾತ ಕಲಾವಿದರಿಂದ ಈ ಕಂಪನಿ ದೊಡ್ಡ ಹೆಸರನ್ನು ಪಡೆದಿತ್ತು. ೧೯೩೭ರಲ್ಲಿ "ಭರತಕಲಾ ನಾಟ್ಯ ಸಂಘ ಕುಕನೂರ" ಎಂಬ ಹೆಸರಿನಲ್ಲಿಕಂಪನಿ ಕಟ್ಟಿದ ಅಭಿಜಾತ ರಂಗಕಲಾವಿದ ಸಂಗನಬಸಪ್ಪ ಮಟ್ಟಿ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲೂಕಿನ ಕುಕನೂರಿನ ಸಂಗಪ್ಪ ಮತ್ತು ಈರಮ್ಮ ಎಂಬ ದಂಪತಿಗಳ ಕೊನೆಯ ಮಗ. ಈತ ನಾಲ್ಕನೆಯ ತರಗತಿ ಓದುತ್ತಿರುವಾಗಲೇ ರಂಗಭೂಮಿಯತ್ತ ಆಕರ್ಷಿತನಾಗಿ ಹಲವಾರು ಕಂಪನಿಗಳಲ್ಲಿ ಪಾತ್ರಮಾಡುತ್ತ ಹೆಸರು ಸಂಪಾದಿಸಿ ಕೊನೆಗೆ ತಾವೇ ತಮ್ಮ ಬದುಕಿನ ನೋವನ್ನು ಮರೆಯಲು ಕುಕನೂರಿನ ರಂಗಾಸಕ್ತರನ್ನೆಲ್ಲ ಒಟ್ಟುಗೂಡಿಸಿಕೊಂಡು 'ಭಕ್ತ ಪ್ರಹ್ಲಾದ' ನಾಟಕ ಪ್ರಯೋಗಿಸುವ ಮೂಲಕ ಪ್ರಾರಂಭವಾದ ಭರತಕಲಾ ನಾಟ್ಯ ಸಂಘ, ಇದರ ಮೂಲಕವಾಗಿಯೆ ರಂಗಪ್ರವೇಶಿಸಿದ ರಂಗಭೂಮಿಯ ಧ್ರುವತಾರೆಯಂತೆ ಮೆರೆದ ಕುಕನೂರಿನ ರೇಹಮಾನವ್ವ ಕಲ್ಮನಿ ಸೇರಿದಂತೆ ಸೂಡಿ ಪಕ್ಕವ್ವ, ಮಹಬೂಬಜಾನ್, ಇಮ್ಮವ್ವಗದ್ವಾಲ, ಬಾಬಾಸಾಹೇಬಕಲ್ಲೂರ ಮುಂತಾದ ಪ್ರಬುದ್ಧ ನಟರನ್ನು ಒಳಗೊಂಡು, ಲಂಕಾದಹನ, ಸಂಪೂರ್ಣರಾಮಾಯಣ, ದ್ರೌಪತಿ

ಸ್ವಯಂವರ ಮುಂತಾದ ನಾಟಕಗಳನ್ನು ಪ್ರಯೋಗಿಸುತ್ತ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಉಚ್ಛ್ರಾಯಸ್ಥಿತಿಗೇರಿತಾದರೂ ನಂತರದ ದಿನಗಳಲ್ಲಿ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಾ ೧೯೪೦ಕ್ಕೆ ಪುನಃ ಕುಕನೂರಿಗೆ ಬಂದು ಲಂಕಾದಹನ ನಾಟಕ ಪ್ರಯೋಗಿಸಿ ಕಂಪನಿಯ ಕೊನೆಯ ಅಂಕದ ಪರದೆಯನ್ನು ಎಳೆಯಲಾಯಿತು.

ಆಗಿನ ಸಾಕಷ್ಟು ನಾಟಕ ಕಂಪನಿಗಳು ಹಳ್ಳಿಯಲ್ಲಿಯೇ ಹುಟ್ಟಿಕೊಂಡು ಪಟ್ಟಣದಲ್ಲಿ ಪ್ರಸಿದ್ಧಿಪಡೆದು ತಮ್ಮ ಅಸ್ತಿತ್ವ ಕಾಪಾಡಿಕೊಂಡು ಬರುತ್ತಿದ್ದವೆನ್ನುವುದು ಗಮನಾರ್ಹ. ಹಾಗೆ ಹೆಸರಿಸಲು ಬಹಳಷ್ಟು ಕಂಪನಿಗಳಿವೆ. ಅದರಲ್ಲಿ ೧೯೫೦ರಲ್ಲಿ ಕೊಪ್ಪಳ ತಾಲೂಕಿನ ಬಿಸರಳ್ಳಿಯಲ್ಲಿ ಶಿವಪ್ಪತಿಮ್ಮರೆಡ್ಡಿ ಮಾಲಿಕತ್ವದಲ್ಲಿ ಅದೇಗ್ರಾಮದ ಮೌಲಾಸಾಬ, ಭರಮಗೌಡ, ಕುಂಟಕರಿಸಿದ್ಧಪ್ಪ ಕೊನೆಸಾಗರ ಮುಂತಾದ ನಟರೊಂದಿಗೆ ವಿರೂಪಾಕ್ಷಪ್ಪ ಬಳಿಗಾರ ಹಾರ್ಮೋನಿಯಂ ಮಾಸ್ತರರಾಗಿ ಮತ್ತು ಪಾತ್ರದವರ ತಬಲಾ ಕಲಾವಿದರಿಂದ ನಲವಡಿ ಶ್ರೀಕಂಠಶಾಸ್ತ್ರಿಗಳ 'ರಾಜಾಭರ್ತೃಹರಿ ಅರ್ಥಾತ್ ಪ್ರಪಂಚ ಪರೀಕ್ಷೆ' ಎನ್ನುವ ನಾಟಕವನ್ನು ಪ್ರಯೋಗಿಸಿ ನಂತರ ಕಂಪನಿಯನ್ನು ಪಕ್ಕದ ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಮತ್ತು ಕೊಪ್ಪಳ ಜಿಲ್ಲೆಯ ಪ್ರಮುಖ ಊರುಗಳೆಲ್ಲಲ್ಲ ಯಶಸ್ವಿ ಪ್ರಯೋಗಗಳ ಮೂಲಕ ಹೆಸರು ಪಡೆಯುವಂತೆ ಮಾಡಿದರು.

ಈ ಕಂಪನಿಯಲ್ಲಿ ಗದಗಿನ ಯಲ್ಲೂಬಾಯಿ ಮತ್ತು ಕುಕನೂರಿನ ರೆಹಿಮಾನ್ ಜಾನ್ ಕಲ್ಮನಿ ಮುಂತಾದ ಖ್ಯಾತ ಕಲಾವಿದರು ನಟಿಸುತ್ತಿದ್ದರೆನ್ನುವುದೇ ವಿಶೇಷ.

೧೯೪೨ರಲ್ಲಿ ಖ್ಯಾತ ಕಲಾವಿದೆ ರೆಹಮಾನವ್ವ ಕಲ್ಮನಿ ಹುಟ್ಟುಹಾಕಿದ ಮಹಾಮ್ಮಾಯಾ ನಾಟ್ಯ ಸಂಘ ಕುಕನೂರು. ಅದು ಮುಂದೆ ಅವರ ಮಗಳು ಲಲಿತಾರ ಹೆಸರಿಗಾಗಿ "ಲಲಿತಾ ಕಲಾ ನಾಟ್ಯ ಸಂಘ. ಕುಕನೂರು" ಎಂದಾಯಿತು. ಈ ಕಂಪನಿಯ ಹಿಂದಿನ ಇತಿಹಾಸ ಪವಾಡಸದೃಶ ಎನ್ನುವಂತಿದೆ. ಕುಕನೂರಿನ ಪಾತ್ರದವರ ಮನೆತನದ ಹಸನವ್ವನ ಮಗಳಾದ ಹುಸೇನಮ್ಮ ಆಗಿನ ಗಾಂವಟಿ ಶಾಲೆಯ ಶಿಕ್ಷಕಿಯಾಗಿದ್ದಾಕೆ. ಆಕೆಯ ಹೊಟ್ಟೆಯಲ್ಲಿ ೧೯೧೭ರಲ್ಲಿ ಹುಟ್ಟಿದ ರೆಹಮಾನಬಿ, ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತ ತಳಕಲ್ಲಿನ ವೆಂಕರೆಡ್ಡಿಯವರಲ್ಲಿಗೆ ಬಂದು ಎಮ್ಮೆ ಕಾಯುತ್ತ ಅವರ ಕಂಪನಿಯ ಕಿತ್ತೂರ ಚನ್ನಮ್ಮ ನಾಟಕ ನೋಡುತ್ತ ಅದರ ಮಾತುಗಳನ್ನೆಲ್ಲ ಕಂಠಪಾಠ ಮಾಡಿಕೊಂಡು ದನಾ ಮೇಯಿಸಲು ಹೋದಾಗ ಅವುಗಳನ್ನು ಹೇಳುತ್ತಿದ್ದಳು. ಒಮ್ಮೆ ಈ ಕಂಪನಿಯ ನಟಿ ಚನ್ನಮ್ಮನ ಪಾತ್ರ ನಿರ್ವಹಿಸುತ್ತಿದ್ದಾಕೆ ಕೈಕೊಟ್ಟು ಹೋದಾಗ ರೆಹಮಾನವ್ವಳಿಂದ ಆ ಪಾತ್ರ ಅದ್ಭುತವಾಗಿ ಅಭಿನಯಿಸಲ್ಪಟ್ಟಿತು. ಹಾಗೆ ನಟಿಯಾದ ಆಸುಂದರಿ ಅದೇ ಕಂಪನಿಯಲ್ಲಿ ನಾಯಕನಟನಾಗಿ ಪಾತ್ರ ನಿರ್ವಹಿಸುತ್ತಿದ್ದ ನಂದಕುಮಾರ ಎನ್ನುವವರನ್ನು ಕೈಹಿಡಿದಳು. ಇಬ್ಬರ ಜೋಡಿ ತುಂಬಾ ಹೆಸರು ಮಾಡಿತು. ಇವರಿಗೆ ಬಾಬು, ಲಲಿತ ಎನ್ನುವ ಮಕ್ಕಳಾಗಿ ಇವರೆಲ್ಲ ಸೇರಿ ತಾವೇ ಸ್ವಂತ ಲಲಿತ ಕಲಾ ನಾಟ್ಯ ಸಂಘವನ್ನು ಕಟ್ಟಿದರು.. ಇದರಲ್ಲಿ ಅನೇಕ ನಟ ನಟಿಯರನ್ನು ನಾಟಕಕಾರರನ್ನು ಬೆಳೆಸಿದರು. ಹೈದ್ರಾಬಾದ್ ಕರ್ನಾಟಕ ವಿಮೋಚನೆಗಾಗಿ ಹೋರಾಟ ಮಾಡುತ್ತಿದ್ದವರಿಗೆ

ಈ ಕಂಪನಿಯಲ್ಲಿ ಆಶ್ರಯ ನೀಡಲಾಗಿತ್ತೆನ್ನುವುದೆ ವಿಶೇಷವಾಗಿದೆ. ಆದರೆ ಈ ಕಂಪನಿ ಸಾಕಷ್ಟು ನಷ್ಟ ಅನುಭವಿಸುತ್ತಲೆ ೨೬ ವರ್ಷಗಳವರೆಗೆ ನಡೆದು ೧೯೭೮ರಲ್ಲಿ ಕಣ್ಣು ಮುಚ್ಚಿದ್ದು ಹಾಗು  ಹೆಣ್ಣುಮಗಳೊಬ್ಬಳು ಅತ್ಯಂತ ಕೆಳಹಂತದಿಂದ ಬೆಳೆದು ಉನ್ನತ ಮಟ್ಟದ ಸಾಧನೆ ಮಾಡಿದ್ದು ದಾಖಲಾರ್ಹ ಸಂಗತಿ.

ಸರಿಸುಮಾರು ಇದೇ ಸಂದರ್ಭದಲ್ಲಿ ಮತ್ತೊಬ್ಬ ಮಹಿಳೆ ಕೊಪ್ಪಳದ ಭೀಮವ್ವ ಕಟ್ಟಿಮನಿ ತಮ್ಮ ಸಹೋದರಿಯರಾದ ಪಾರ್ವತೆವ್ವ ಯಂಕಮ್ಮ ಮತ್ತು ಸುಲೋಚನಾ ಎನ್ನುವವರನ್ನು ಕಟ್ಟಿಕೊಂಡು ೧೯೪೮ರಲ್ಲಿ "ಶ್ರೀ ನಟರಾಜ ನಾಟ್ಯಕಲಾ ಸಂಘ"ವನ್ನು ಕೊಪ್ಪಳದಲ್ಲಿ ಪ್ರಾರಂಭಿಸಿದರು ಇವರೆಲ್ಲ ಅನೇಕ ಸುಪ್ರಸಿದ್ಧ ಕಂಪನಿಗಳಲ್ಲಿ ನಟಿಸಿ ಪರಿಣತಿ ಸಾಧಿಸಿ ಶ್ರೇಷ್ಠ ನಟಿಯರೆಂದು ಹೆಸರು ಪಡೆದ ಬಳಿಕ ತಮ್ಮ ಸೋದರ ಮಾವ ದೇವೇಂದ್ರಪ್ಪ ಕನಕಗಿರಿ ಎನ್ನುವವರನ್ನು ವ್ಯವಸ್ಥಾಪಕನನ್ನಾಗಿಸಿಕೊಂಡು ಉತ್ತರ ಕರ್ನಾಟಕದ ಅನೇಕ ಸುಪ್ರಸಿದ್ಧ ನಾಟಕ ಕಂಪನಿಗಳೊಂದಿಗೆ ಸ್ಪರ್ಧಾತ್ಮಕವಾಗಿ ಕಂಪನಿ ನಡೆಸಿದ ಹೆಗ್ಗಳಿಕೆ ಈ ಮಹಿಳೆಯರ ಕಂಪನಿಗೆ ಸಲ್ಲುತ್ತದೆ. ಇದು ೧೯೫೬ರ ವರೆಗೆ ಅಂದರೆ ಎಂಟು ವರ್ಷಗಳ ಕಾಲ ನಡೆದು ದಾಖಲೆ ನಿರ್ಮಿಸಿದೆ. ಕೆ. ನಾಗರತ್ನಮ್ಮ ೧೯೭೨ರಲ್ಲಿ ಸ್ತ್ರೀ ನಾಟಕ ಮಂಡಳಿ ಮಾಡಿದರೆ ಕೊಪ್ಪಳ ಜಿಲ್ಲೆಯ ರೆಹಮಾನವ್ವ ಮತ್ತು ಭೀಮವ್ವ ಕಟ್ಟಿಮನಿ ೧೯೪೮ರಲ್ಲಿ ಮಾಡಿದ್ದರೆನ್ನುವುದು ರಂಗಭೂಮಿಯ ಇತಿಹಾಸದಲ್ಲಿಯೆ ಉಲ್ಲೇಖನೀಯ ಎನ್ನಬೇಕಾಗುತ್ತದೆ.

೧೯೭೮ರಲ್ಲಿ ನಿಂತು ಹೋಗಿದ್ದ ಲಲಿತಕಲಾ ನಾಟ್ಯ ಸಂಘ ಕಂಪನಿಯನ್ನು ರೆಹಮಾನವ್ವನವರ ಮಗ ಅಭಿಜಾತ ಕಲಾವಿದ ಬಾಬಣ್ಣ ಕುಕನೂರು ತನ್ನ ಕುಟುಂಬದ ಸದಸ್ಯರನ್ನೆಲ್ಲ ಕಟ್ಟಿಕೊಂಡು ಮರುಹುಟ್ಟಿನೊಂದಿಗೆ ಮತ್ತೆ ಮುಂದುವರಿಸಿದ್ದು ೧೯೮೬ರಲ್ಲಿ ಆದರೆ ಇದಕ್ಕೂ ಮೊದಲು ಬಾಬಣ್ಣ ೧೯೭೨ರಲ್ಲಿ 'ವಿಜಯಲಕ್ಷ್ಮೀ ನಾಟ್ಯ ಸಂಘ' ಎನ್ನುವ ಸ್ವಂತ ಕಂಪನಿಯನ್ನು ಮಾಡಿದ್ದರು.

ಲಲಿತ ಕಲಾ ನಾಟ್ಯ ಸಂಘ ಕುಕನೂರು ಕಂಪನಿಯಲ್ಲಿ ರೆಹಿಮಾನವ್ವ ಕಲ್ಮನಿಯ ಕುಟುಂಬದ ಎಲ್ಲ ಸದಸ್ಯರೂ ಪಾತ್ರಮಾಡುತ್ತಿದ್ದರೆನ್ನುವುದು ವಿಶೇಷ. ಇದರಲ್ಲಿ ತಾಯಿ ರೆಹಿಮಾನವ್ವ ಮಕ್ಕಳಾದ ಬಾಬಣ್ಣ. ಮಹಮ್ಮದ ರಫೀಕ್, (ಈತನನ್ನು ಮುನ್ನಾ ಕಲ್ಮನಿ ಎಂದೂ ಕರೆಯಲಾಗುತ್ತಿತ್ತು) ಮತ್ತೊಬ್ಬ ಮಗ ಉಮೇಶಕಲ್ಮನಿ. ಹೆಣ್ಣು ಮಕ್ಕಳಾದ ಲಲಿತಾ, ಮಂಜುಳಾ ಹಾಗು ಆಗಿನ ಸಂದರ್ಭದಲ್ಲಿ ಕೈಹಿಡಿದ ನಟಿ ಅಂಬುಜಾ ಮುಂತಾದವರನ್ನೆಲ್ಲಾ ಕಟ್ಟಿಕೊಂಡು ೧೯೮೦ರ ವರೆಗೆ ಕಂಪನಿ ನಡೆಸಿದರು. ನಂತರ ಅದನ್ನು ಟ್ರಸ್ಟನ್ನಾಗಿ ಪರಿವರ್ತಿಸಿ ಇಂದಿನವರೆಗೆ ರಿನಿವಲ್ ಮಾಡಿಸುತ್ತ ಬಂದಿದ್ದಾರೆ.

ಬಾಬಣ್ಣ ತಮ್ಮ ಕಂಪನಿಯಲ್ಲಿ ಹೊಸನಾಟಕಗಳಿಗೆ ಅವಕಾಶ ನೀಡಿದರು. ಹಳ್ಳಿಯಿಂದ ದಿಲ್ಲಿಯವರೆಗೆ, ಮನೆಮಗಳು, ಕೆಟ್ಟಮೇಲೆ ಬುದ್ಧಿಬಂತು, ಶಿಶುನಾಳ ಶರೀಫ ನಾಟಕಗಳಲ್ಲದೆ ಅಕ್ಕಮಹಾದೇವಿ. ಗುಣಸಾಗರಿ, ಸತ್ಯಹರಿಶ್ಚಂದ್ರ, ಪ್ರಪಂಚ ಪರೀಕ್ಷೆ ಮುಂತಾದ ಪ್ರಸಿದ್ಧ ನಾಟಕಗಳಿಂದ ಕರ್ನಾಟಕದಾದ್ಯಂತ ಸಂಚರಿಸಿ ಜನಮನಸೂರೆಗೊಂಡರು. ೮೦ರ ವಯಸ್ಸಿನ ಬಾಬಣ್ಣ ಇಡೀ ತಮ್ಮ ಬದುಕನ್ನು

ರಂಗ ಭೂಮಿಯಲ್ಲಿಯೆ ಕಳೆದಿದ್ದಾರೆ. ಇನ್ನೂ ಚಟುವಟಿಕೆಯಿಂದ ತಮ್ಮ ಆರೋಗ್ಯ ಕಾಯ್ದುಕೊಂಡಿದ್ದು ಈಗಲೂ ಬಣ್ಣ ಹಚ್ಚಿಕೊಳ್ಳಲು ಸಿದ್ಧರಿದ್ದಾರೆ. ಇವರ ಮಕ್ಕಳಾದ ಅಪ್ಪಾಸಾಬ, ರಾಜೇಸಾಬ, ಶಾಹಿರಾ ಹಾಗು ದಾನವ್ವ ಅದನ್ನು ಮುಂದುವರಿಸಿದ್ದಾರೆ.

೧೯೭೪ ರಲ್ಲಿ ತಮ್ಮದೇ ಹೆಸರಿನ ಶಿವಲಿಂಗೇಶ್ವರ ನಾಟ್ಯ ಸಂಘ ಸಂಕನೂರು ಕಂಪನಿಕಟ್ಟಿದ ಶಿವಲಿಂಗಶಾಸ್ತ್ರಿಗಳು ಆಕಂಪನಿ ಕಟ್ಟುವ ಆಕಸ್ಮಿಕ ಸಂಗತಿ ಕೇಳಿದಾಗ ಸಾಂದರ್ಭಿಕವಾಗಿ ಹುಟ್ಟಿದ ಕಂಪನಿ ಅದು ಹೆಚ್ಚುಕಾಲ ಬಾಳಬಹುದೆನ್ನುವದನ್ನು ಸಾಬೀತು ಪಡಿಸುತ್ತದೆ.

ಮೂಲತಃ ಜಿಲ್ಲೆಯ ಯಲಬುರ್ಗಿ ತಾಲೂಕಿನ ಮಂಗಳೂರಿನರಾದ ಶಿವಲಿಂಗ ಶಾಸ್ತ್ರಿಗಳು ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ನಾಟಕ ಮಾಡುತ್ತ ಮನೆಯ ಬಡತನದಿಂದ ಆಗಲೇನೇ ಕಂಪನಿ ಸೇರಿ ಪಾತ್ರ ಮಾಡತೊಡಗಿದರು. ತಮ್ಮ ೧೭ನೆಯ ವಯಸ್ಸಿನಲ್ಲಿಯೆ ಕೊಪ್ಪಳ ಗವಿಸಿದ್ದೇಶ್ವರ ಮಠದ ಆಗಿನ ಸ್ವಾಮಿಗಳಾದ ಶ್ರೀಮರಿಶಾಂತವೀರಸ್ವಾಮಿಗಳ ಆಶೀರ್ವಾಧ ಪಡೆದು ಹೂವಿನ ಹಡಗಲಿ ತಾಲೂಕಿನ ಹಂಪಸಾಗರದಲ್ಲಿ ಶ್ರೀಗವಿಸಿದ್ಧೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿದರು. ಅದು ೧೯೫೭ರಲ್ಲಿ ಅದರ ಉದ್ಘಾಟನೆಗೆ ಸ್ವಾಮಿಗಳು ತಮ್ಮ ಶಿಷ್ಯರಾದ ಶಿವಶಾಂತವೀರ ಸ್ವಾಮಿಗಳನ್ನು ಕಳಿಸಿದ್ದರು ಆದರೆ ಅದರ ಉದ್ಘಾಟನೆಯ ಜತೆಗೆ ಮುಕ್ತಾಯವೂ ಅಂದೇ ಆಯಿತಂತೆ. ನಂತರ ಅವರು ಹಲವಾರು ಕಂಪನಿಗಳಲ್ಲಿ ಪಾತ್ರ ವಹಿಸುತ್ತ ಈಗಿನ ಬಾಗಲಕೋಟೆ ಜಿಲ್ಲೆಯ ಬನಹಟ್ಟಿಗೆ ಬಂದಾಗ ಅಲ್ಲಿಯ ಶ್ರೀಮಂತ ಸಿದ್ಧಲಿಂಗಯ್ಯ ಹೊಂಬಿಹುಟ್ಟ ಎನ್ನುವವರು ಆರ್ಥಿಕ ಸಹಕಾರ ನೀಡಿ ಪ್ರೋತ್ಸಾಹಿಸಿದ್ದರಿಂದ ರಾಂಪುರದಲ್ಲಿ ಶಿವಲಿಂಗೇಶ್ವರ ನಾಟ್ಯ ಸಂಘ ಪ್ರಾರಂಭಿಸುತ್ತಾರೆ. ಅದು ೧೫ ವರ್ಷಗಳ ಕಾಲ ತುಂಬಾ ಯಶಸ್ವಿಯಾಗಿ ಕರ್ನಾಟಕ ರಾಜ್ಯಾದ್ಯಂತ ಸುತ್ತಿದೆ. ಬೆಂಗಳೂರು, ಮೈಸೂರು, ತುಮಕೂರು, ದಾವಣಗೆರೆ, ಭದ್ರಾವತಿ, ಶಿವಮೊಗ್ಗ, ಉತ್ತರ ಕನ್ನಡ, ಹುಬ್ಬಳ್ಳಿ, ಗದಗ, ಉತ್ತರ ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿ ಸಂಚಲನವನ್ನುಂಟು ಮಾಡಿದೆ. ಹುಬ್ಬಳ್ಳಿ ಗದಗಗಳಲ್ಲಿ ಇವರ ಒಂದೊಂದು ನಾಟಕಗಳು ನೂರಾರು ಪ್ರಯೋಗ ಕಂಡಿವೆ.

ಇವರ ಕಂಪನಿಯಲ್ಲಿ ಹೆಸರಾಂತ ಕಲಾವಿದರಾದ ಪ್ರಭಾಕರ, ಜಾನಕಿಬಾಯಿ, ಮೈನಾವತಿ, ಅಮಿತಾ, ಸುಶೀಲಾ ಬಾಯಿ ಕುಂದಾಪುರ, ಲಿಂಗರಾಜಯತ್ನಟ್ಟಿ, ಪ್ರಹ್ಲಾದ ಬೆಟಗೇರಿ ಭಾಗ್ಯನಗರ ಮುಂತಾದ ಅನೇಕ ಕಲಾವಿದರು ದುಡಿದಿದ್ದಾರೆ. ಮುಂದೆ ಕಂಪನಿ ನಡೆಯದಾದಾಗ ಶಾಸ್ತ್ರಿಗಳು ೧೯೭೨ರಲ್ಲಿ ಗೋಕಾಕ ಕಂಪನಿ ಸೇರುವದರೊಂದಿಗೆ ತಮ್ಮ ಕಂಪನಿಯನ್ನು ಸ್ಥಗಿತಗೊಳಿಸುತ್ತಾರೆ.

೧೯೫೦ರ ದಶಕದಲ್ಲಿ ಶ್ರೀಲಕ್ಷ್ಮೀನಾರಾಯಣ ಕಂಪನಿ ಸ್ಥಾಪಿಸಿ ಆಗಿನ ಕಾಲದಲ್ಲಿ ಪ್ರಸಿದ್ಧಿ ಪಡೆದ ನಾಟಕಗಳಾದ ಅಕ್ಷಯಾಂಬರ, ಕುರುಕ್ಷೇತ್ರ, ಬಡತನಭೂತ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ ನಟಕಲಾಕೇಸರಿ ಎಂದೇ ಹೆಸರು ಪಡೆದ

ಕುಷ್ಟಗಿ ತಾಲೂಕಿನ ಹನುಮಸಾಗರದ ನಾರಾಯಣಸಾ ದೇವಳೆ, ಇವರಿಗೆ ಬಾರಿಗಿಡದ ಎಂದೂ ಹೇಳಲಾಗುತ್ತದೆ.

ಜಿಲ್ಲೆಯಲ್ಲಿ ಕಂಪನಿ ನಡೆಸಿದವರು ಕೊಪ್ಪಳ, ಯಲಬುರ್ಗಿ ನಂತರ ಕುಷ್ಟಗಿ ತಾಲುಕು ಬರುತ್ತದೆ ಅದರಲ್ಲಿಯೂ ಹನುಮಸಾಗರದವರು ಬಿಟ್ಟರೆ ಬೇರಾರೂ ಕಂಪನಿ ಮಾಡಿದಂತಿಲ್ಲ. ಈಗಾಗಲೇ ೮೫ರ ವಯಸ್ಸಿನಲ್ಲಿರುವ ನಾರಾಯಣಸಾ ಸಹಿತ ತನ್ನದೇ ಹೆಸರನ್ನು ಕಂಪನಿಗೆ ಕೊಟ್ಟುಕೊಂಡಿದ್ದರು. ಇವರು ಎಸ್‌ಎಸ್‌ಕೆ. ಅಂದರೆ ಸಹಸ್ರಾರ್ಜುನ ಸೋಮವಂಶಕ್ಷತ್ರಿಯ ಜನಾಂಗಕ್ಕೆ ಸೇರಿದವರಾಗಿದ್ದು ಮನೆಯಲ್ಲಿ ತಮ್ಮದೆ ಮರಾಠಿ ಮಿಶ್ರಿತ ಭಾಷೆ ಮಾತನಾಡುವವರಾಗಿದ್ದು ನೇಕಾರಿಕಾ ಕುಲವೃತ್ತಿಯವರಾಗಿದ್ದಾರೆ.

ಇವರ ಕಂಪನಿಯಲ್ಲಿ ಅಣ್ಣ ಯಂಕೂಸಾ ಮತ್ತು ಸ್ವತಃ ನಾರಾಯಣಸಾ ಸೇರಿ ಸಹನಟರೊಂದಿಗೆ ಕಂಪನಿ ನಡೆಸಿದ್ದಾರೆ. ಇವರ ನಾಟಕಗಳಿಗೆ ರಾಮಣ್ಣ ಮಾಸ್ತರ ಎನ್ನುವವರೆ ಹಾರ್ಮೋನಿಯಂ ವಾದಕರಾಗಿ ಸಂಗೀತ ನಿರ್ದೇಶನ ಮಾಡುತ್ತಿದ್ದರು. ಕುಷ್ಟಗಿಯ ಅಕ್ಕಪಕ್ಕದ ಜಿಲ್ಲೆಗಳಲ್ಲಿ ಜಾತ್ರೆಗಳಲ್ಲಿ ಸಂಚರಿಸುತ್ತ ೨೦ ವರ್ಷಗಳ ಕಾಲ ಕಂಪನಿ ನಡೆಸಿರುವದಾಗಿ ನಾರಾಯಣಸಾ ಹೇಳುತ್ತಾರೆ.

೧೯೩೪ರಲ್ಲಿ ಶ್ರೀ ತ್ರಿಪುರಸುಂದರಿ ನಾಟ್ಯ ಸಂಘ. ಸೂಳೇಬಾವಿ ಎಂಬ ನಾಟಕ ಕಂಪನಿ ಸ್ಥಾಪಿಸಿದ ಪ್ರಖ್ಯಾತ ನಾಟಕಕಾರ ಪಿ.ಬಿ. ಧುತ್ತರಗಿಯವರನ್ನು ಯಾವ ಜಿಲ್ಲೆಯವರೆಂದು ಕರೆಯುವದು? ಯಾಕಂದರೆ ಅವರು ಬಾಲ್ಯದಲ್ಲಿಯೆ ನಾಟಕದ ಗೀಳಿನಿಂದ ನಾಟಕ ಬರೆಯುತ್ತ ಪಾತ್ರ ಮಾಡುತ್ತ ಕಂಪನಿಯಿಂದ ಕಂಪನಿಗೆ ತಿರುಗಿ ತಾವೇ ಬೇರೆ ಬೇರೆ ಹೆಸರಿನ ಎರಡು ಮೂರು ಕಂಪನಿಗಳನ್ನು ನಡೆಸಿ ಪತ್ನಿ ಸರೋಜಮ್ಮನವರಿಗೂ ಕಂಪನಿ ಒಡೆತನ ಬಿಟ್ಟುಕೊಟ್ಟು, ಕೊನೆಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರಕ್ಕೆ ಬಂದು ನೆಲೆಸುವಷ್ಟರಲ್ಲಿ ೧೯೮೫ರಲ್ಲಿ ಕೊಪ್ಪಳ ಜಿಲ್ಲೆಯ ಯಲಬುರ್ಗಿಯಲ್ಲಿ ಕಂಪನಿಯನ್ನು ಕೊನೆಗೊಳಿಸಿದರು.

ಕಲಾವಿದರಿಗೆ ಯಾವುದೆ ಸ್ವಂತ ಊರು ಜಾತಿ ಕುಲ ಶೀಲ ಎನ್ನುವದಿರುವುದಿಲ್ಲ. ಯಾಕಂದರೆ ಅವರು ಒಂದು ಊರಿನಲ್ಲಿರದೆ ನಿರಂತರ ಊರಿಂದೂರಿಗೆ ಸಂಚರಿಸುತ್ತಿರುತ್ತಾರೆ. ಕಂಪನಿಯಲ್ಲಿ ಎಲ್ಲ ಜಾತಿಯವರು ಸೇರಿ ಒಂದೇ ಕುಟುಂಬದಂತೆ ಬದುಕುತ್ತಿರುವದರಿಂದ ನಿಜವಾದ ಜಾತ್ಯಾತೀತ ಮನೋಭಾವ ಅವರಲ್ಲಿರುತ್ತದೆ. ಹಾಗಾಗಿ ಅವರು ಹುಟ್ಟಿ ಬೆಳೆದ ಊರು ನಂತರ ಅವರು ಹೆಚ್ಚುಕಾಲ ನೆಲಸಿದ ಊರುಗಳನ್ನೆ ಅವರ ಊರುಗಳನ್ನಾಗಿ ಪರಿಗಣಿಸಲಾಗುತ್ತದೆ. ಈ ಕಾರಣದಿಂದಾಗಿ ಪಿ.ಬಿ. ಧುತ್ತರಗಿಯವರು ಈಗಿನ ಬಾಗಲಕೋಟೆ ಜಿಲ್ಲೆಗೆ ಸೇರಿದ ಸೂಳೇಬಾವಿಯಲ್ಲಿ ಜನಿಸಿ ಬೆಳೆದರೆ ನಂತರ ಅವರು ಕಂಪನಿ ಕಟ್ಟಿ ರಾಜ್ಯಾದ್ಯಂತ ಸುತ್ತಾಡಿ, ೧೯೮೫ರಿಂದ ಹನುಮಸಾಗರದಲ್ಲಿ ನೆಲೆಸಿ ಸಾಯುವ ಮುನ್ನ ಮತ್ತೆ ಸೂಳೆಬಾವಿಗೆ ಹೋದರು. ಆದ್ದರಿಂದ ಎರಡೂ ಜಿಲ್ಲೆಯ ಜನ ಅವರನ್ನು ನಮ್ಮವರೆಂದೇ ಗುರುತಿಸಿ ಗೌರವಿಸುತ್ತಾರೆ. ಇದು ಇವರೊಬ್ಬರಿಗೇ ಅನ್ವಯಿಸುವ ಮಾತಲ್ಲ ಬಹುತೇಕ ಕಲಾವಿದರೂ ಹೀಗೆಯೆ ಗುರುತಿಸಲ್ಪಡುವದನ್ನು ಕಾಣುತ್ತೇವೆ.

ಧಾರವಾಡದ ಬಸವರಾಜಪ್ಪ ಜವಳಿ ಮಠದ ಜತೆಗೂಡಿ ಪ್ರಾರಂಭಿಸಿದ "ಶ್ರೀ ತ್ರಿಪುರ ಸುಂದರಿ ನಾಟ್ಯ ಸಂಘ ಸೂಳೇಬಾವಿ". ಕಂಪನಿ ಸಂಪತ್ತಿಗೆ ಸವಾಲ್ ನಾಟಕ ಸಿದ್ಧನಕೊಳ್ಳದ ಅಜ್ಜನವರಿಂದ ಉದ್ಘಾಟನೆಗೊಂಡಿತಾದರೂ ಅದು ಹೆಚ್ಚು ದಿನ ನಡೆಯದೆ ಸ್ಥಗಿತಗೊಂಡ ಬಳಿಕ ಧುತ್ತರಗಿಯವರು. ಇಲ್ಲಕಲ್ಲಿನ ಮೆದಕೇರಿ ಯಮುನಪ್ಪನವರ ಜತೆಗೂಡಿ ಮತ್ತೆ ಅದೇ ೧೯೬೯ರಲ್ಲಿಯೆ "ಶ್ರೀ ವಿಜಯ ಕಲಾ ನಾಟ್ಯ ಸಂಘ ಇಲಕಲ್ಲ" ಎನ್ನುವ ಕಂಪನಿ ಸ್ಥಾಪಿಸುತ್ತಾರೆ. ಈ ಕಂಪನಿ ಅತ್ಯಂತ ಯಶಸ್ವಿಯಾಗಿ ನಡೆಯತೊಡಗುತ್ತದೆ. ಇದೇ ಇಲಕಲ್ಲಿನಲ್ಲಿ "ಸಂಪತ್ತಿಗೆ ಸವಾಲು" ನಾಟಕ ೫೦ ಪ್ರದರ್ಶನ ಕಂಡಾಗ ಸುವರ್ಣ ಮಹೋತ್ಸವ ನಡೆಸಿದ ಸಂದರ್ಭದಲ್ಲಿ ದುತ್ತರಗಿಯವರ ಆರಾಧ್ಯಗುರು ಸಿದ್ಧನಕೊಳ್ಳದ ಅಜ್ಜನವರು ಬಂಗಾರದ ಪದಕ ನೀಡಿ ಪ್ರಕಾಶಮಾನನಾಗಿ ಬೆಳಗು ಎಂದು ಆಶೀರ್ವದಿಸುತ್ತಾರೆ.

ಈ ಕಂಪನಿ ಆರು ವರ್ಷ ನಡೆದ ಬಳಿಕ ಯಾದಗಿರಿ ಕ್ಯಾಂಪಿನಲ್ಲಿದ್ದಾಗ ಸಹಪಾಲುದಾರ ಯಮುನೂರಪ್ಪ ಮೆದಕೇರಿಯವರೊಂದಿಗೆ ವಿವಾದವಾಗಿ ಮನಸ್ತಾಪದಿಂದ ಕಂಪನಿ ಒಡೆಯುತ್ತದೆ. ೧೯೭೫ ರಲ್ಲಿ ಒಡೆದ ಈ ಕಂಪನಿಯ ಬೆನ್ನಹಿಂದೆಯೆ "ಸಿದ್ಧಲಿಂಗೇಶ್ವರ ವಿಜಯ ನಾಟ್ಯ ಸಂಘ ಸೂಳೇಬಾವಿ" ಎನ್ನುವ ಹೆಸರಿನಲ್ಲಿ ಪತ್ನಿ ಸರೋಜಮ್ಮನವರೊಂದಿಗೆ ದುತ್ತರಗಿಯವರು ಹೊಸ ಕಂಪನಿ ಹುಟ್ಟುಹಾಕುತ್ತಾರೆ. ಆದರೆ ಪಿ.ಬಿ. ದುತ್ತರಗಿಯವರಿಗೆ ಅನಾರೋಗ್ಯದಿಂದ ಅದನ್ನು ನಡೆಸಲಾಗದಿದ್ದರಿಂದ ಅದರ ಮಾಲಿಕತ್ವವನ್ನು ಸರೋಜಮ್ಮನವರಿಗೆ ಬಿಟ್ಟುಕೊಡುತ್ತಾರೆ. ಆಗಿನ ಕಾಲದಲ್ಲಿ ಕೊಪ್ಪಳ ಜಿಲ್ಲೆಯಲ್ಲಿಯೆ ಭೀಮವ್ವಕಟ್ಟಿಮನಿ, ರೆಹಮಾನವ್ವ ಕುಕನೂರ ನಂತರ ಮಹಿಳೆಯೊಬ್ಬಳು ಸಮರ್ಥವಾಗಿ ನಾಟಕ ಕಂಪನಿ ನಿಭಾಯಿಸಿದವರೆಂದರೆ ಸರೋಜಮ್ಮನವರೇಆಗಿದ್ದಾರೆ.

ಈ ಸಿದ್ಧಲಿಂಗೇಶ್ವರ ವಿಜಯ ನಾಟ್ಯ ಸಂಘ ೧೯೭೭ರಲ್ಲಿ ನಷ್ಟ ಅನುಭವಿಸಿ ಮುಚ್ಚುವ ದೆಸೆಗೆ ಬಂದಾಗ ಗದಗಿನಲ್ಲಿ ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಗಳು "ವಿಜಯ ಮಹಾಂತೇಶ್ವರ ಮಹಾತ್ಮೆ" ನಾಟಕ ಆಡಲು ಸೂಚಿಸಿದ್ದರಿಂದ ಅದರ ಪ್ರಯೋಗದೊಂದಿಗೆ ಮತ್ತೆ ಚೇತರಿಸಿಕೊಂಡ ಕಂಪನಿ. ಹತ್ತು ವರ್ಷಗಳ ಕಾಲ ಏಳುಬೀಳುಗಳೊಂದಿಗೆ ನಡೆಯುತ್ತ ೧೯೮೫ರಲ್ಲಿ ಜಿಲ್ಲೆಯ ಯಲಬುರ್ಗಿಗೆ ಬಂದು ಸ್ಥಗಿತಗೊಳ್ಳುತ್ತದೆ.. ಅಲ್ಲಿಂದ ಧುತ್ತರಗಿ ಕುಟುಂಬ ಹನುಮಸಾಗರದಲ್ಲಿ ನೆಲೆಯೂರಿ ಅಮ್ಯೆಚೂರ ನಾಟಕಗಳಲ್ಲಿ ನಟಿಸುತ್ತ ಬರುತ್ತದೆ.

ಇನ್ನು ಜಿಲ್ಲೆಯ ಗಂಗಾವತಿ ತಾಲೂಕನ್ನು ಗಮನಿಸುವದಾದರೆ. ೧೯೨೭ರಲ್ಲಿ ತಾಲುಕಿನ ಬೂದಗುಂಪಿಯಲ್ಲಿ ಜನಿಸಿದ ಈಶ್ವರಪ್ಪ ರೌಡಕುಂದಿ ಎನ್ನುವವರು ಬಾಲ್ಯದಲ್ಲಿಯೆ ನಾಟಕದ ಹವ್ಯಾಸ ಬೆಳಸಿಕೊಂಡು ಸ್ತ್ರೀ-ಪುರುಷ ಪಾತ್ರಗಳಲ್ಲಿ ಅಭಿನಯಿಸುತ್ತ ಸ್ವಗ್ರಾಮದಲ್ಲಿಯ ಸ್ನೇಹಿತರನ್ನು ಕಟ್ಟಿಕೊಂಡು ಶ್ರೀ ಕಾಶಿ ವಿಶ್ವನಾಥ ನಾಟ್ಯ ಸಂಘವನ್ನು ಸ್ಥಾಪಿಸಿದರು. ಇದರಲ್ಲಿ ಸಹೋದರ ರಾಚಪ್ಪ ಕಟಾಂಬ್ಲಿ.. ಪಂಪಾಪತೆಪ್ಪಕೋಲ್ಕಾರ, ಸಿದ್ಧಪ್ಪ ಮಾನಪ್ಪವರೊಂದಿಗೆ ಚಿತ್ರಾಂಗದಾ, ರಕ್ತರಾತ್ರಿ

ಮುಂತಾದ ನಾಟಕಗಳನ್ನು ಪ್ರಯೋಗಿಸುತ್ತಿದ್ದರು. ಆದರೆ ಆ ಕಂಪನಿಯನ್ನು ಮುಂದೆ ೧೯೬೮ರಲ್ಲಿ ಶ್ರೀ ಕರಿಸಿದ್ಧೇಶ್ವರ ನಾಟಕ ಕಂಪನಿ ಎನ್ನುವ ಹೆಸರಿಗೆ ಬದಲಾಯಿಸಿ. ವಿಸ್ತರಿಸಿಕೊಂಡು ಅಂಬಾಜಾತ್ರೆ ಮತ್ತು ಸುತ್ತಮುತ್ತಲಿನ ಹಳ್ಳಿ ಪಟ್ಟಣಗಳಲ್ಲೆಲ್ಲ ಯಶಸ್ವಿಯಾಗಿ ನಡೆದು ೧೯೭೦ರಲ್ಲಿ ಆರ್ಥಿಕ ಸಂಕಷ್ಟದಿಂದ ಕಣ್ಣುಮುಚ್ಚಿತು.

ಕಾರಟಗಿಯ ಈಶ್ವರಪ್ಪನವರು ಕಂಪನಿಯಿಂದ ಕಂಪನಿಗೆ ತಿರುಗುತ್ತ ನಟಿಸುತ್ತ ಮತ್ತೆ ಧಾರವಾಡ ಸಮೀಪದ ರಾಯರ ಹೆಬ್ಬಳ್ಳಿಯಲ್ಲಿ ಇವರು ಶ್ರೀಮಡಿವಾಳೇಶ್ವರ ನಾಟ್ಯ ಸಂಘದಲ್ಲಿದ್ದಾಗ ಆ ಕಂಪನಿಯ ವಾತಾವರಣ ಸರಿಬರದೆ ತಾವೇ ಶ್ರೀಚನ್ನಬಸವೇಶ್ವರ ನಾಟ್ಯ ಸಂಘವನ್ನು ಪ್ರತ್ಯೇಕವಾಗಿ ಪ್ರಾರಂಭಿಸುತ್ತಾರೆ. ಮುಂದೆ ಹಾವೇರಿಯ ಶ್ರೀಬಸವಲಿಂಗಶಾಸ್ತ್ರಿಗಳು ಈ ಕಂಪನಿಯ ಪಾಲುದಾರರಾಗಲು ಬಯಸಿಬಂದದ್ದರಿಂದ ೧೯೭೫ರಲ್ಲಿ ಇದನ್ನು "ಶ್ರೀ ಪ್ರಸನ್ನ ರೇಣುಕ ನಾಟ್ಯ ಸಂಘ". ಮುಕ್ತಿ ಮಂದಿರ ಎನ್ನುವ ಹೆಸರಿಗೆ ಬದಲಾಯಿಸುತ್ತಾರೆ. ಆದರೆ ಹೆಚ್ಚು ದಿನ ಈ ಕಂಪನಿ ನಡೆಯದೆ ಮುಚ್ಚಿದ್ದರಿಂದ ಗೋಕಾಕ್ ಕಂಪನಿ ಸೇರಿಕೊಂಡ ಈಶ್ವರಪ್ಪನವರು ಛಲಬಿಡದೆ ಅಲ್ಲಿಂದ ಹೊರಬಂದು ಕೊಪ್ಪಳ ಜಿಲ್ಲೆಯ ಪ್ರಮುಖ ವ್ಯಾಪಾರಿಕೇಂದ್ರವಾದ ಕಾರಟಗಿಯಲ್ಲಿ ೧೯೮೦ರಲ್ಲಿ ಶ್ರೀಬಸವೇಶ್ವರ ನಾಟ್ಯ ಸಂಘವನ್ನು ಪ್ರಾರಂಭಿಸುತ್ತಾರೆ. ಇದರಲ್ಲಿ ಖ್ಯಾತ ನಟರಾದ ಎಲಿವಾಳಸಿದ್ಧಯ್ಯ, ಭಾರತೀಶ, ಶೃಂಗೇರಿ ರಾಮಣ್ಣ ಈಶ್ವರಪ್ಪನವರ ಪತ್ನಿ ಲಲಿತಮ್ಮ ಮುಂತಾದವರು ಅಭಿನಯಿಸುತ್ತಿದ್ದದ್ದು ವಿಶೇಷವಾಗಿದೆ. ಆದರೂ ಈ ಕಂಪನಿಯು ಹೆಚ್ಚು ದಿನ ನಡೆಯದೆ ತುರುವಿಹಾಳಿನಲ್ಲಿ ಪ್ರಾರಂಭವಾಗಿ ಸುತ್ತಲೂ ತಿರುಗಾಡಿ ಕನಕಗಿರಿಯಲ್ಲಿ ಕಣ್ಮುಚ್ಚುತ್ತದೆ.

ನಟರೊಬ್ಬರು ನಾಲ್ಕು ಕಂಪನಿಗಳನ್ನು ಕಟ್ಟಿಬೆಳೆಸಿ ಇಡೀ ಬದುಕನ್ನು ಅದರಲ್ಲಿ ಕಳೆದದ್ದು ಇಲ್ಲಿ ಗಮನಾರ್ಹ. ಇವರ ಕಂಪನಿಗಳಲ್ಲಿ ಈಗಾಗಲೇ ಪ್ರಸ್ತಾಪಿಸಿದವರಲ್ಲದೆ. ಪ್ರೇಮಾಗುಳೇದಗುಡ್ಡ. ಕಲ್ಗುಡಿಲಿಂಗರಾಜ, ಜಿ.ಎನ್. ಅಂಜಲಿದೇವಿ, ಕವಲಿ ಚನ್ನಬಸಪ್ಪ ಮುಂತಾದ ದಿಗ್ಗಜರು ನಟಿಸಿದ್ದಾರೆ.

ಕುಷ್ಟಗಿ ತಾಲೂಕಿನ ಮೇಣೆದಾಳ ಕನಕಗಿರಿಗೆ ಸಮೀಪದಲ್ಲಿದೆ ಇಲ್ಲಿಯ ದೇಸಾಯಿ ಪ್ರಹ್ಲಾದರಾಯರು ೧೯೨೮ರಲ್ಲಿಯೇ ಮೇಣೆದಾಳ ಕಂಪನಿಯನ್ನು ಸ್ಥಾಪಿಸಿದ್ದರೆಂದು ತಿಳಿದು ಬರುತ್ತದೆ. ಇದನ್ನು ಎಚ್.ಎಸ್. ಪಾಟೀಲರು, ಹಿರಿಯ ಕಲಾವಿದ ದಿ. ಗುನ್ನಳ್ಳಿ ಲಿಂಗಪ್ಪನವರೊಂದಿಗೆ ಸಂದರ್ಶಿಸಿ ಉಲ್ಲೇಖಿಸಿದ್ದಾರೆ. ಈ ಕಂಪನಿಯಲ್ಲಿ ವಿಠ್ಠಲಸಾಕಬಾಡಿ ಎನ್ನುವವರು ಹಾರ್ಮೋನಿಯಂ ವಾದಕರಾಗಿದ್ದು, ಗದಿಗೆಯ್ಯಾ ಮಂಟೂರ ಎನ್ನುವರು ತಬಲಾವಾದಕರಾಗಿದ್ದರು. ವಾಸುದೇವಭಟ್ ಬರೆದ 'ವೀರ ಅಶ್ವತ್ಥಾಮ' ನಾಟಕವನ್ನು ಗಂಗಾವತಿಯಲ್ಲಿ ಪ್ರಯೋಗಿಸಿ ಪ್ರಸಿದ್ಧಿಪಡೆದು. ಆಗಿನ ಕಾಲದಲ್ಲಿಯೆ ಮುಂಬೈಗೆ ಹೋಗಿ ಅತ್ಯಾಕರ್ಷಕ ಸೀನರಿ ಡ್ರೆಸ್‌ಗಳನ್ನು ತಂದು ಕೊಪ್ಪಳದಲ್ಲಿ ಪ್ರಯೋಗಿಸಿ ಹೊಸರೀತಿಯಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವ ಮೂಲಕ ಹೆಸರು ಮಾಡಿದವರಾಗಿದ್ದಾರೆ.

ಮೇಣದಾಳ ಕಂಪನಿಯಲ್ಲಿ ಹಮ್ಮಿಗಿ ನೀಲಕಂಠಪ್ಪ, ಭಾಗೀರಥಿ, ಧಾರವಾಡ ಗುರುರಾವ್ ದೇಶಪಾಂಡೆ, (ಇವರ ನಂತರ ಆಕಾಶವಾಣಿ ಕಲಾವಿದರಾಗಿದ್ದರು) ಸೋದರ ಚಿದಂಬರರಾವ್ ಹಳ್ಳಿಗುಡಿ ಸದಾಶಿವಪ್ಪ, ಮುರಗೋಡಗಂಗಾಧರಪ್ಪ ಇಂಥವರೆಲ್ಲ ಪ್ರಖ್ಯಾತ ನಟರು ಅಭಿನಯಿಸುತ್ತಿದ್ದರೆಂದರೆ ಇದು ಯಾವ ಮಟ್ಟದಲ್ಲಿತ್ತೆನ್ನುವುದನ್ನು ಗಮನಿಸಬಹುದು.

ಅಳವಂಡಿ ಕಂಪನಿ ಇರಕಲ್ ಗಡಾ ಕಂಪನಿಗಳೆಲ್ಲ ಇದೇ ಸರಿಸುಮಾರಿನಲ್ಲಿದ್ದದ್ದರಿಂದ ಇವೆಲ್ಲ ಜಿಲ್ಲೆಯ ನಾಟಕ ಕಂಪನಿಯ ಆರಂಭಿಕ ಕಾಲದ ಕಂಪನಿಗಳೆಂದೇ ಪರಿಗಣಿಸಬಹುದು.

ಇತ್ತೀಚಿಗೆ ಅಂದರೆ ೧೯೯೦ರಲ್ಲಿ ಎಸ್.ವಿ. ಪಾಟೀಲ ಗುಂಡೂರು ಎಂದೇ ಹೆಸರಾಗಿರುವ, ೩೦೦ಕ್ಕೂ ಹೆಚ್ಚು ನಾಟಕಗಳ ಕರ್ತೃ "ಸಜ್ಜಲ ಶ್ರೀ ಕಲಾಬಳಗ ಗುಂಡೂರ" ಎನ್ನುವ ಕಂಪನಿಕಟ್ಟಿ ತಮ್ಮದೇ ನಾಟಕಗಳನ್ನು ಹೆಚ್ಚಾಗಿ ಪ್ರಯೋಗಿಸುತ್ತ ಗಂಗಾವತಿ ಸಿಂಧನೂರು ಇಲಕಲ್ಲ ಮುಂತಾದೆಡೆ ಸಂಚರಿಸಿದ್ದಾಗಿ ತಿಳಿಸಿದ್ದಾರೆ. ಎಸ್.ವಿ. ಪಾಟೀಲ ನಾಟಕ ಅಕಾಡೆಮಿ ಸದಸ್ಯರಾಗಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿ ಜಿಲ್ಲೆಯ ಪ್ರಮುಖ ನಾಟಕಕಾರರಾಗಿದ್ದಾರೆ.

ಅಲ್ಲದೆ ಗಂಗಾವತಿಯಲ್ಲಿ ಕೊಪ್ಪಳದ ಶಿವರುದ್ರಪ್ಪ ನಿಟ್ಟಾಲಿ ಕವಿಗಳು ೧೯೮೦ರಲ್ಲಿಯೇ "ಮದ್ದಾನೇಶ್ವರ ನಾಟ್ಯ ಸಂಘ ಗಂಗಾವತಿ" ಎನ್ನುವದನ್ನು ಕಟ್ಟಿ ತಾವೇ ರಚಿಸಿದ ಜೀವನಯಾತ್ರ, ಶ್ರೀಗವಿಸಿದ್ಧೇಶ್ವರ ಮಹಾತ್ಮೆ ಮುಂತಾದ ನಾಟಕಗಳನ್ನು ಪ್ರಯೋಗಿಸಿದ್ದಾಗಿಯೂ ಮತ್ತು ೧೯೮೫-೮೬ರ ಅವಧಿಯಲ್ಲಿ ಗಂಗಾವತಿಯ ಜನರ ಸಹಕಾರದೊಂದಿಗೆ ಹೆಸರಾಂತ ನಾಟಕಕಾರ ಬಿ.ವಿ, ಈಶ "ಚನ್ನಬಸವೇಶ್ವರ ನಾಟ್ಯ ಸಂಘ" ಎನ್ನುವ ಕಂಪನಿ ಕಟ್ಟ ಕೆಲವು ದಿವಸ ನಡೆಸಿದ್ದಾಗಿಯೂ ಹೇಳುತ್ತಾರೆ.

ಇದೇರೀತಿ ಯಲಬುರ್ಗಿ ತಾಲೂಕಿನ ಸೋಂಪುರದ ಹೊಸೂರನಲ್ಲಿರುವ ಮುತ್ತಪ್ಪ ಪೂಜಾರ (ಇವರ ನಿಜನಾಮ ಮುದುಪ್ಪ) ಹಲವಾರು ಕಂಪನಿಗಳಲ್ಲಿ ನಟಿಸಿ ೧೯೯೨ರಲ್ಲಿ ತಮ್ಮದೇ "ಮಾರುತೇಶ ನಾಟ್ಯ ಸಂಘ ಸೋಂಪುರ ಹೊಸೂರ" ಎನ್ನುವ ಸ್ವಂತ ಕಂಪನಿಯನ್ನು ಕಟ್ಟಿಕೊಂಡು ತಮ್ಮ ಮನೆಯವರೆ ಸೇರಿಕೊಂಡು ಆಗಾಗ ನಡೆಸಿಕೊಂಡು ಬಂದಿದ್ದಾರೆ.

ಇದರಂತೆಯೆ ಇದೇ ಯಲಬುರ್ಗಿ ತಾಲೂಕಿನ ತಳಕಲ್ ಗ್ರಾಮದ ಹೇಮಂತ ಟೂರಿಂಗ್ ಟಾಕೀಜಿನಲ್ಲಿ ಮಹಾಸತಿ ಅನಸೂಯ ಚಿತ್ರದ ಪ್ರಭಾವದಿಂದ ನಾಟಕಗಳಲ್ಲಿ ಪಾತ್ರ ಮಾಡುತ್ತ ೧೯೮೪ರಲ್ಲಿ ಅಥಣಿ ಕಂಪನಿಗೆ ಗೇಟ್‌ಕೀಪರನಾಗಿ ಸೇರಿ ನಂತರ ನಟನಾಗಿ; ಅನೇಕ ಕಂಪನಿ ತಿರುಗಿ ತಮ್ಮ ಗ್ರಾಮದ ವೆಂಕರೆಡ್ಡಿಯವರಂತೆ ತಾನೂ ಕಂಪನಿ ಮಾಡುವ ಕನಸುಕಂಡು "ಶ್ರೀ ಗವಿಸಿದ್ಧೇಶ್ವರ ನಾಟ್ಯ ಸಂಘ ತಳಕಲ್ಲ" ಎನ್ನುವದನ್ನು ಕಟ್ಟಿದರಾದರೂ ಇದು ಹೆಚ್ಚುದಿನ ನಡೆಯದೆ ಹಾನಿಯಲ್ಲಿ ನೇಪಥ್ಯಕ್ಕೆ ಸರಿದಿದೆ.

ಇನ್ನೇನು ನಾಟಕ ಕಂಪನಿಗಳ ಕಾಲ ಮುಗಿದು ಹೋಯಿತು, ಈ ಸಿನಿಮಾ, ಟಿ.ವಿ ಮಾಧ್ಯಮಗಳ ಮುಂದೆ ನಾಟಕ ನೋಡಲು ಜನರೆಲ್ಲಿ ಸಿಗುತ್ತಾರೆ ಎನ್ನುವ ಈ ಕಾಲದಲ್ಲಿಯೂ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲೂಕಿನ ಮಂಡಲಗಿರಿಯಲ್ಲಿ ದಿ: ೧೪.೧೧.೧೯೯೩ರಂದು ಹುಟ್ಟಿಕೊಂಡ ಶ್ರೀಗುರು ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ ಎನ್ನುವ ಕಂಪನಿ ಇಂದಿಗೂ ಯಶಸ್ವಿ ಪ್ರಯೋಗಗಳೊಂದಿಗೆ ನಡೆಯುತ್ತಿರುವುದು ಅಚ್ಚರಿಯ ಸಂಗತಿಯಾದರೂ ಸತ್ಯ ಎನ್ನುವದನ್ನು ಪ್ರಸ್ತುತ ಈ ಕಂಪನಿ ವಿಜಾಪುರದಲ್ಲಿರುವದನ್ನು ನೋಡಿ ತಿಳಿಯಬಹುದು.

ಈ ಕಂಪನಿಯನ್ನು ಹುಟ್ಟುಹಾಕಿದ ಇಬ್ಬರು ಕಲಾವಿದರ ಜೀವನವೂ ಅಷ್ಟೇ ರೋಚಕವಾಗಿದೆ. ಅಂದಿನಿಂದ ಇಂದಿನವರೆಗೂ ಇವರಲ್ಲಿ ಯಾವುದೇ ಭಿನ್ನಾಭಿಪ್ರಾಯ, ಮನಸ್ತಾಪಗಳಿಲ್ಲದೆ ಒಟ್ಟಾಗಿಯೆ ಕಂಪನಿ ನಿಭಾಯಿಸುತ್ತಿರುವುದು ಬೇರೆಯವರಿಗೆ ಮಾದರಿ ಎನಿಸಿದೆ. ಅದರಲ್ಲಿ ಮೊದಲನೆಯವರು ಇದೇ ಮಂಡಲಗಿರಿಯ ವೀರಯ್ಯ ಹಿರೇಮಠರಾದರೆ ಮತ್ತೊಬ್ಬರು ಅದೇ ಯಲಬುರ್ಗಿ ತಾಲೂಕಿನ ಹಿರೇಅರಳಿ ಹಳ್ಳಿಯ ಶಂಕರಭೀಮಪ್ಪಹಡಪದ. ಇವರದು ಮೂಲತಃ ಕುಷ್ಟಗಿ ತಾಲೂಕಿನ ಹಿರೇಮನ್ನಾಪುರವಾದರೂ ಹುಟ್ಟಿ ಬೆಳೆದದ್ದು ಕಲಿತದ್ದು ಹಿರೆಅರಳಿಹಳ್ಳಿಯಲ್ಲಿಯೆ; ಎಸ್‌ಎಸ್‌ಎಲ್‌ಸಿ ಕಲಿತು ನಾಟಕದ ಹುಚ್ಚಿನಿಂದ ಕಂಪನಿಸೇರಿದ ಶಂಕರ ಹಲವಾರು ಕಂಪನಿ ತಿರುಗಿ ಕಡೆಗೆ ವೀರಯ್ಯರೊಂದಿಗೆ ಶ್ರೀಗುರು ತೋಂಟದಾರ್ಯ ನಾಟ್ಯ ಸಂಘವನ್ನು ಸ್ಥಾಪಿಸುತ್ತಾರೆ. ಈಕಂಪನಿ ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಗುಬ್ಬಿವೀರಣ್ಣ ರಂಗಮಂದಿರದಲ್ಲಿಯೆ ೮ ತಿಂಗಳುಗಳ ಕಾಲ ನಡೆದದ್ದು ಗಮನಾರ್ಹ. ೧೯೯೩ ಡಿಸೆಂಬರಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ವಿಜಾಪುರದ ರಾಣಿ ಚೆನ್ನಮ್ಮ ರಂಗಮಂದಿರದಲ್ಲಿ ನಡೆಸಿದ ಶತಮಾನದ ಸಂದರ್ಭದಲ್ಲಿ ಈ ಸಂಸ್ಥೆ ನಾಟಕ ಪ್ರದರ್ಶಿಸಿ ಗಮನ ಸೆಳೆದಿದೆ.

೪೦ ಜನ ಕಲಾವಿದರೊಂದಿಗೆ ೨೧ ವರ್ಷ ಪೂರೈಸಿ ೨೨ ನೆಯ ವರ್ಷದಲ್ಲಿ ಮುಂದುವರೆದಿರುವ ಈ ಕಂಪನಿಯ ಸಾಧನೆ ಸಣ್ಣದಲ್ಲ. ಅಷ್ಟು ಜನರ ಹೊಣೆ ಹೊತ್ತು ನಿತ್ಯ ಕಷ್ಟ ನಷ್ಟ ಅನುಭವಿಸುತ್ತ ಈ ಕಂಪನಿ ಅನೇಕ ಕಲಾವಿದರಿಗೆ; ಶಿಕ್ಷಣ ಸಂಸ್ಥೆಗಳಿಗೆ ಸಹಾಯ ನೀಡಿದೆ. ೧೯೯೮ರಲ್ಲಿ ಹುಕ್ಕೇರಿಯಲ್ಲಿ "ಇದು ಹಿಂಗ್ಯಾಕಾತು? ಯಾಕಿಂಗಾತು?" ನಾಟಕದ ೨೫ನೆಯ ಪ್ರದರ್ಶನ ನಡೆದಾಗ ಹಿರಿಯ ರಂಗಚೇತನ ಏಣಗಿ ಬಾಳಪ್ಪನವರಿಗೆ ಸನ್ಮಾನಿಸಿದೆ. ೧೯೯೮ರಲ್ಲಿಯೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಗೆ ಬಂದಾಗ ಪಂಡಿತ ಪುಟ್ಟರಾಜ ಗವಾಯಿಗಳಿಗೆ ತುಲಾಭಾರ ಮಾಡಿದ್ದಲ್ಲದೆ, ಸಹಾಯಾರ್ಥ ನಾಟಕ ಪ್ರದರ್ಶಿಸಿ ಅಲ್ಲಿಯ ಗಣೇಶ ದೇವಸ್ಥಾನ ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿ ಸಂಗ್ರಹಿಸಿಕೊಟ್ಟಿದ್ದಾರೆ. ಅದೇರೀತಿ ಹುಕ್ಕೇರಿಯಲ್ಲಿ ಸಹಾಯಾರ್ಥ ನಾಟಕವಾಡಿ ಅಲ್ಲಿಯ ಶಾಲೆಗೆ ನಾಲ್ವತ್ತು ಸಾವಿರ ನಿಧಿ ಸಂಗ್ರಹಿಸಿ ನೀಡಿದ್ದಾರೆ.

೨೦೦೧ರಲ್ಲಿ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಹೆಚ್.ಟಿ. ಅರಸ ಮತ್ತು ಶ್ರೀಮತಿ ನಾಗರತ್ನಮ್ಮ ಇವರನ್ನು ಬೆಂಗಳೂರಿನಲ್ಲಿ ಸನ್ಮಾನಿಸಿದ್ದಾರೆ. ಹೀಗೆ ಈ ಸಂಸ್ಥೆ

ಸಾರ್ವಜನಿಕವಾಗಿ ಸ್ಪಂದಿಸುತ್ತ ಮುನ್ನಡೆದಿರುವುದು ಮಾದರಿಯಾಗಿದೆ. ಇದರಲ್ಲಿ ಶಂಕರವರ ಕಲಾವಿದ ಪತ್ನಿ ಮಮತಾಶ್ರೀ ಕೂಡಾ ನಟಿಸುತ್ತಿರುವುದು ವಿಶೇಷವಾಗಿದೆ. ೬೦ ವರ್ಷದ ವೀರಯ್ಯ ಮತ್ತು ೫೭ ವರ್ಷದ ಶಂಕರವರು ಇಂದಿಗೂ ನಟಿಸುತ್ತ ಕಂಪನಿಯನ್ನು ಮುಂದುವರಿಸಿಕೊಂಡು ಹೊರಟಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯ. ಇಬ್ಬರಿಗೂ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿರುವದಲ್ಲದೆ ಅನೇಕ ಸಂಘ ಸಂಸ್ಥೆಯವರು ಸನ್ಮಾನಿಸಿದ್ದಾರೆ.

ಹೀಗೆ ಕೊಪ್ಪಳ ಜಿಲ್ಲೆಯ ರಂಗಭೂಮಿಯ ಇತಿಹಾಸ ಹತ್ತೊಂಭತ್ತನೆಯ ಶತಮಾನದ ಆದಿಭಾಗದಿಂದ ಹಿಡಿದು ಇಂದಿನವರೆಗೆ ಮುಂದುವರೆದಿದೆ. ಅಂದಾಜು ನೂರುವರ್ಷಗಳ ಸುದೀರ್ಘ ಇತಿಹಾಸವನ್ನು ವಿವರವಾಗಿ ಬರೆದರೆ ಅದೇ ಒಂದು ಬೃಹತ್ ಗ್ರಂಥವಾದೀತು. ಆದರೆ ಅದಕ್ಕಿಲ್ಲಿ ಅವಕಾಶವಿಲ್ಲದ್ದರಿಂದ ಸಂಕ್ಷಿಪ್ತೀಕರಿಸಿ ಹೇಳಲಾಗಿದೆ. ಇದರಲ್ಲಿ ಬಿಟ್ಟುಹೋದ ಸಂಗತಿಗಳೇನಾದರೂ ಇದ್ದರೆ ಮತ್ತೆ ಅದನ್ನು ದಾಖಲಿಸುವ ಕೆಲಸವಾಗಬೇಕು.

# ಹವ್ಯಾಸಿ ರಂಗಭೂಮಿಯ ಸಂಕ್ಷಿಪ್ತ ಇತಿಹಾಸ

ಹವ್ಯಾಸಿ ರಂಗಭೂಮಿಗೆ ದೇಶದಲ್ಲಿ ದೊಡ್ಡ ಇತಿಹಾಸವಿದೆಯಾದರೂ ಅದಕ್ಕೆ ಸ್ಪಷ್ಟವಾದ ಸ್ವರೂಪಕೊಟ್ಟು ಸುದ್ದಿಗೆ ಗ್ರಾಸವನ್ನಾಗಿ ಮಾಡಿದ್ದು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಮಾತ್ರ, ಮರಾಠಿ ಹವ್ಯಾಸಿ ರಂಗಭೂಮಿಯ ಪ್ರಭಾವ ಕನ್ನಡ ಹವ್ಯಾಸಿ ರಂಗಭೂಮಿಗೆ ಹೆಚ್ಚಾಗಿ ಆಗಿರುವದನ್ನು ನೋಡುತ್ತೇವೆ. ಹಾಗೆ ರಾಜ್ಯದಲ್ಲಿ ಹವ್ಯಾಸಿರಂಗಭೂಮಿಯ ಚಟುವಟಿಕೆಗಳು ತೀವ್ರಗೊಂಡ ಸಂದರ್ಭದಲ್ಲಿಯೆ ಕೊಪ್ಪಳ ಜಿಲ್ಲೆಯಲ್ಲಿಯೂ ಅದರ ಪ್ರಕ್ರಿಯೆಗಳು ಪ್ರಾರಂಭಗೊಂಡವು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೊಪ್ಪಳ ಜಿಲ್ಲೆ ಯಾವತ್ತೂ ಹಿಂದುಳಿದಿಲ್ಲ. ಕೆಲವೊಂದು ಇಲ್ಲಿಂದಲೇ ನೂತನ ಪ್ರಯೋಗಗಳು ಪ್ರಾರಂಭಗೊಂಡಿರುವ ಇತುಹಾಸವಿದೆ. ಇಲ್ಲಿಯ ದೊಡ್ಡಾಟ ಕಕನಗಿರಿಯಲ್ಲಿ ಹುಟ್ಟಿಕೊಂಡ ಶ್ರೀಕೃಷ್ಣಪಾರಿಜಾತ ಇದಕ್ಕೆಲ್ಲ ಉದಾಹರಣೆಯಾಗಿವೆ. ಅದೇರೀತಿ ಹವ್ಯಾಸಿ ಕಲಾವಿದರು ಹಳ್ಳಿಹಳ್ಳಿಗಳಲ್ಲಿ ಪ್ರತಿ ವರ್ಷ ಜಾತ್ರೆ, ಹಬ್ಬ, ಹರಿದಿನ, ಅಮಾವಾಸ್ಯೆ, ಹುಣ್ಣಿಮೆಯಮಥ ಸಂದರ್ಭಗಳನ್ನು ಬಳಸಿಕೊಂಡು ಅಲ್ಲಿಯ ಕಲಾವಿದರನ್ನು ಸಿಧ್ಧಗೊಳಿಸುತ್ತಿದ್ದರು. ಅದು ಈಗಲೂ ಮುಂದುವರಿದಿದೆಯಾದರೂ ಮೊದಲಿನಷ್ಟಿಲ್ಲ ಎನ್ನುವುದು ನಿಜ. ಊರಿಗೆ ಎರಡು ಮೂರು, ಒಂದೊಂದು ಚಿಕ್ಕ ಹಳ್ಳಿಯಲ್ಲಿ ಏಳೆಂಟು ತಂಡಗಳು ಪೈಪೋಟಿಯಿಂದ ನಾಟಕ ಪ್ರದರ್ಶನ ಮಾಡುತ್ತಿದ್ದರು. ಇದರಲ್ಲಿ ಪಾತ್ರಧಾರಿಗಳೇ ದುಡ್ಡುಹಾಕಿ. ಟಿಕೇಟು ಹಚ್ಚಿದರೂ ಅದು ಖರ್ಚಿಗೆ ಸರಿತೂಗಿಸಲಾರದೆ ಹಾನಿ ಅನುಭವಿಸಿದ್ದ ನೋವನ್ನು ಮರೆಯುವಷ್ಟರಲ್ಲಿಯೆ ಮತ್ತೊಂದು ನಾಟಕಕ್ಕೆ ಸಿದ್ಧಗೊಳ್ಳುತ್ತಿದ್ದದ್ದು ನನ್ನ ಎಪ್ಪತ್ತರ ದಶಕದ ಅನುಭವ. ಈರೀತಿಯ ತಂಡಗಳ ಮೇಲೆಯೆ ಅನೇಕ ಹವ್ಯಾಸಿ ಕಲಾವಿದೆಯರು ಬದುಕಿದ್ದರೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಇವರು ವೃತ್ತಿ ನಾಟಕಗಳನ್ನೆ ಆಡುತ್ತಿದ್ದರೂ ಅದನ್ನು ಆಕಲಾವಿದರು ವೃತ್ತಿಯನ್ನಾಗಿಸಿಕೊಳ್ಳದೆ ಹವ್ಯಾಸಕ್ಕಾಗಿ ಆಡುತ್ತಿದ್ದ ಕಾರಣ ಅವರನ್ನು ನಾವು ಹವ್ಯಾಸಿ ಕಲಾವಿದರು ಮತ್ತು ಹವ್ಯಾಸಿ ಕಲಾತಂಡಗಳೆಂದೇ ಗುರುತಿಸಬೇಕಾಗುತ್ತದೆ, ಇಲ್ಲವಾದರೆ ವೃತ್ತಿ ನಾಟಕ ಕಂಪನಿ ಮತ್ತು ಹವ್ಯಾಸಿ ಕಲಾತ್ಮಕ ರಂಗತಂಡಗಳ ನಡುವೆ ಇವರು ಕೈಬಿಟ್ಟು ಹೋಗುತ್ತಾರೆ. ಇಂಥ ನಾಟಕ ತಂಡ ಕಟ್ಟಿ ತಮ್ಮ ಹೊಲಮನೆ ಕಳೆದುಕೊಂಡು ಬೀದಿಪಾಲಾದವರ ಉದಾಹರಣೆಗಳು ಬೇಕಾದಷ್ಟಿವೆ. ಆದದ್ದರಿಂದ ಅಂಥವರನ್ನು ಕಡೆಗಣಿಸಿದರೆ ರಂಗಭೂಮಿಯ ಇತಿಹಾಸಕ್ಕೆ ಚ್ಯುತಿಯಾಗುವದು ಖಚಿತ.

ಈ ಕುರಿತು ಬರೆಯಬೇಕಾದದ್ದು ಬೇಕಾದಷ್ಟಿದೆ. ಅದನ್ನೆಲ್ಲ ದಾಖಲಿಸಬೇಕೆಂದರೆ ಎಷ್ಟು ಸಂಪುಟವಾದರೂ ಸಾಲದು. ಆದರೆ ಕೆಲವು ಜಿಲ್ಲೆಗಳಲ್ಲಿ ತಾಲೂಕುಗಳಲ್ಲಿ ಆ ಕೆಲಸವನ್ನು ಮಾಡಿದ್ದಾರೆ. ೨೦೦೦ ಇಸ್ವಿಯಲ್ಲಿ "ಕುಷ್ಟಗಿ ತಾಲೂಕಾ ಕಲಾವಿದರ ಪರಿಚಯ" ಪುಸ್ತಕವನ್ನು ಶ್ರೀನಿವಾಸ ಜಹಗೀರದಾರ, ರವೀಂದ್ರ ಬಾಕಳೆ, ನಟರಾಜ ಸೋನಾರ, ನಾಗೇಶ ಕಾಟವಾ ಎನ್ನುವವರ ಸಂಪಾದಕತ್ವದಲ್ಲಿ ನಮ್ಮ ತಿರುಳ್ಗನ್ನಡ ಕ್ರಿಯಾ ಸಮಿತಿಯ ಪ್ರಕಾಶನ ಹೊರತಂದಿದ್ದಾರೆ. ಮಾಜಿ ನಾಟಕ ಅಕಾಡೆಮಿ ಸದಸ್ಯ ಎಸ್.ವಿ. ಪಾಟೀಲ ಗುಂಡೂರ ಇವರ ಮಾರ್ಗದರ್ಶನದಲ್ಲಿ ಗಂಗಾವತಿ ತಾಲೂಕಿನ ಕಲಾವಿದರನ್ನು ಪರಿಚಯಿಸುವ 'ಕಲಾಸೌರಭ' ಎನ್ನುವ ಗ್ರಂಥವನ್ನು ಶ್ರೀಮತಿ ವಾಣಿಶ್ರೀ ಪಾಟೀಲ ಮತ್ತು ಎಸ್.ಬಿ. ಗೊಂಡಬಾಳ, ರಮೇಶಗಬ್ಬೂರ ಸಂಪಾದಕತ್ವದಲ್ಲಿ ಪ್ರಕಟಣೆಗೆ ಸಿದ್ಧವಾಗಿದೆ. ಇವುಗಳಲ್ಲಿ ಆಯಾ ತಾಲೂಕಿನ ಕಲಾವಿದರ ಪರಿಚಯ ಸಿಗಬಹುದೆ ಹೊರತು ಇಡೀ ಜಿಲ್ಲೆಯ ಕಲಾವಿದರ ಮಾಹಿತಿ ಪುಸ್ತಕದ ಪ್ರಕಟಣೆಯ ಅಗತ್ಯವಿದೆ.

## ಕಂಪಸಾಗರದ ಹವ್ಯಾಸಿ ತಂಡ

ಪ್ರಸ್ತುತ ಜಿಲ್ಲೆಯ ಹವ್ಯಾಸಿ ರಂಗಭೂಮಿಯ ಇತಿಹಾಸವನ್ನು ಅವಲೋಕಿಸುವದಾದರೆ. ಕೊಪ್ಪಳ ತಾಲೂಕಿನ ಕಂಪಸಾಗರ ಎನ್ನುವ ಒಂದು ಚಿಕ್ಕ ಹಳ್ಳಿಯಲ್ಲಿ ೧೯೭೦ರಲ್ಲಿ ರಘುರಾವ್ ಎನ್ನುವವರು "ಶ್ರೀಮಂಜುನಾಥ ನಾಟ್ಯ ಸಂಘ", ಕಂಪಸಾಗರ ಎನ್ನುವದನ್ನು ಸ್ನೇಹಿತರೊಂದಿಗೆ ಪ್ರಾರಂಭಿಸಿದರು. ಇದರಲ್ಲಿ ಆಗಿನ ಜಿಲ್ಲಾ ಪರಿಷತ್ ಸದಸ್ಯರಾಗಿದ್ದ ದಿವಂಗತ ಈಶಪ್ಪವಡ್ಡರ. ರಾಮಣ್ಣ ಬಾರಕೇರ, ಕಪ್ಪತ್ತಪ್ಪ ಬಾರಕೇರ ಮುಂತಾದವರು ಪ್ರಮುಖರಾಗಿದ್ದರು ಇವರ ತಂಡ ಸುತ್ತೆಲ್ಲ ಭಾಗಕ್ಕೆ ಪ್ರಸಿದ್ಧಿ ಪಡೆಯಲು ಕಾರಣವೆಂದರೆ, ಹೊಸ ಹೊಸ ನಾಟಕಗಳನ್ನು ಆಯ್ದುಕೊಂಡು ಜತೆಗೆ ಹೆಸರಾಂತ ಕಲಾವಿದರನ್ನು ಕಲಾವಿದೆಯರನ್ನು ಕರೆಯಿಸಿಕೊಂಡು ತಿಂಗಳಾನುಗಟ್ಟಲೆ ರಿಹರ್ಸಲ್ ಮಾಡಿ ಕಂಪನಿ ನಾಟಕಗಳನ್ನು ಮೀರಿಸುವಂತೆ ಪ್ರಯೋಗಿಸುತ್ತಿದ್ದರು. ಹಣ ಖರ್ಚುಮಾಡಲು ಹಿಂಜರಿಯುತ್ತಿರಲಿಲ್ಲ. ಲಾಭಹಾನಿಯ ಕಡೆಲಕ್ಷ್ಯವಿರಲಿಲ್ಲ. ಪ್ರತೀ ವರ್ಷ ಮಾರುತಿ ಜಾತ್ರೆಯಲ್ಲಿ ಇವರ ನಾಟಕ ಇದ್ದೇ ಇರಬೇಕು. ಇದಕ್ಕಾಗಿ ಜನ ಕಾದಿರುತ್ತಿದ್ದರು. ಬಿ.ವಿ. ಈಶರ ಎಲ್ಲ ನಾಟಕಗಳು ಇಲ್ಲಿಯೇ ಮೊದಲು ಪ್ರಯೋಗಗೊಂಡು ನಂತರ ಕಂಪನಿಯವರ ಕೈಗೆ ಸಿಗುತ್ತಿದ್ದವೆಂದರೆ ಈ ಹವ್ಯಾಸಿ ಕಲಾತಂಡದ ವಿಶೇಷತೆಯನ್ನು ತಿಳಿಯಬಹುದು.

ಜಿಲ್ಲೆಯ ಪ್ರಸಿದ್ಧ ಸಂಗೀತ ನಿರ್ದೇಶಕ ಓಜಿನಳ್ಳಿಯ ದಿ. ಸಿದ್ಧಪ್ಪ ಮಾಸ್ತರ ಇಲ್ಲಿಯ ಎಲ್ಲ ನಾಟಕಗಳಿಗೆ ನಿರ್ದೇಶನ ಮತ್ತು ಸಂಗೀತ ನೀಡುತ್ತಿದ್ದರು. 'ಭಕ್ತ ಮಾರ್ಕಂಡೇಯ', 'ಆಶಾಲತಾ', 'ಗೌರಿಗೆದ್ದಳು', 'ಕೆಟ್ಟಮೇಲೆ ಬುದ್ಧಿ ಬಂತು', 'ಈಗ ಹ್ಯಾಗಾತು' ಇವರಿಂದ ಪ್ರಸಿದ್ಧಿ ಪಡೆದ ಇಂಥ ಹಲವಾರು ನಾಟಕಗಳಿವೆ. ಚಿತ್ರ ನಟ ದಿನೇಶ, ಸುಭದ್ರಮ್ಮ ಮನ್ಸೂರ, ಶಶಿಕಲಾ ಹಾನಗಲ್, ಲಲಿತಾಶ್ರೀ ಬಳ್ಳಾರಿ ಮುಂತಾದ

ಅನೇಕ ಹೆಸರಾಂತ ನಟ, ನಟಿಯರು, ಇಲ್ಲಿಗೆ ಬಂದು ಹೋಗಿದ್ದಾರೆ. ಇಂಥ ಸಾಧನೆಗಳನ್ನು ಕಡೆಗಣಿಸಲಾದೀತೆ?

## ಕೊಪ್ಪಳ ಪ್ರಗತಿ ಕಲಾವೇದಿಕೆ

೧೯೭೭ರ ಅವಧಿಯಲ್ಲಿ ಸೂರ್ಯಕಾಂತ ಗುಣಕಿಮಠ, ವಿಠ್ಠಪ್ಪ ಗೋರಂಟ್ಲಿ, ದಿ. ಗವಿಸಿದ್ಧ ಎನ್. ಬಳ್ಳಾರಿ, ಟಿ.ವಿ. ಮಾಗಳದ, ಲಲಿತಾ ದೇಮಶೇಟ್ಟಿ, ಮೀರಾ ಸೂರ್ಯಕಾಂತ, ದಿ, ಪ್ರಹ್ಲಾದ ಬೆಟಗೇರಿ. ಅಲ್ಲಮಪ್ರಭು ಬೆಟ್ಟದೂರು, ದಿ. ಲಲಿತಾ ಸಂಕ್ಲಾಪುರು ಮುಂತಾದ ಸಾಹಿತಿ ಬಳಗ ಸೇರಿ "ಪ್ರಗತಿ ಕಲಾ ವೇದಿಕೆ"ಯನ್ನು ಕೊಪ್ಪಳದಲ್ಲಿ ಹುಟ್ಟುಹಾಕಲಾಯಿತು. ಇದು ಸಾಹಿತ್ಯ ಚಟುವಟಿಕೆಗಳ ಜತೆಗೆ ರಂಗ ಚಟುವಟಿಕೆಯನ್ನೇ ಮುಖ್ಯವಾಗಿರಿಸಿಕೊಂಡಿತ್ತು. ಹಾಗಾಗಿ ಹೊಸ ಅಲೆಯ ನಾಟಕಗಳ ಮುಖಾಂತರ ಈವೇದಿಕೆ ಕೊಪ್ಪಳದಲ್ಲಷ್ಟೇ ಯಲ್ಲ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗಮನ ಸೆಳೆಯಿತು.

ಚಂದ್ರಶೇಖರ ಕಂಬಾರರ 'ಚಾಳೇಶ' ಎನ್ನುವ ಅಸಂಗತ ನಾಟಕವನ್ನು ದಿ: ೧೫-೮-೧೯೮೨ ರಮದು ಕೊಪ್ಪಳದ ಶಾರದಾಚಿತ್ರಮಂದಿರದಲ್ಲಿ ಯಶಸ್ವಿ ಪ್ರಯೋಗ ಕಂಡು ಮತ್ತೆ ಅದನ್ನು ಗದಗಿನ ಮಲ್ಲಮ್ಮ ಥೇಟರಿನಲ್ಲಿ ಪ್ರಯೋಗಿಸಿ ಗಮನ ಸೆಳೆಯಿತು. ಇದರಲ್ಲಿ ವಿಠ್ಠಪ್ಪ ಗೋರಂಟ್ಲಿ, ಮೀರಾ ಸೂರ್ಯಕಾಂತ, ಪ್ರಹ್ಲಾದ ಬೆಟಗೇರಿ, ಲಲಿತಾ ಸಂಕ್ಲಾಪುರ, ನಾರಾಯಣ ದೇವರಕೊಳ್ಳದ ಪ್ರಮುಖ ಪಾತ್ರದಲ್ಲಿದ್ದರು. ಸೂರ್ಯಕಾಂತ ಗುಣಕಿಮಠರು ಈ ನಾಟಕದ ನಿರ್ದೇಶನದ ಜತೆಗೆ ಹುಶ್ನೆಪ್ಪ ಎನ್ನುವ ಆಳುಮಗನ ಪಾತ್ರ ನಿರ್ವಹಿಸಿದ್ದರು. ಹಾಡುಗಳ ರಚನೆ ಸ್ವರಸಂಯೋಜನೆಯನ್ನೂ ಅವರೇ ಮಾಡಿದ್ದರು. ಭಾಗ್ಯ ನಗರದ ಕಲಾವಿದ ರಾಮಚಂದ್ರಪ್ಪ ಉಪ್ಪಾರ ಇದಕ್ಕೆ ಸಂಗೀತ ಸಂಯೋಜಿಸಿ ಹಾಡಿದ್ದರು.

ನಂತರ ಸೂರ್ಯಕಾಂತ ಗುಣಕಿಮಠರೇ ರಚಿಸಿದ ಮತ್ತೊಂದು ಅಸಂಗತ ನಾಟಕ 'ರಾಜಾ ಲೂಡಿಕ್ರಸ್' ಎನ್ನುವದನ್ನು ಅವರದೇ ನಿರ್ದೇಶನದಲ್ಲಿ ಹುಬ್ಬಳ್ಳಿಯ ವೈದ್ಯಕೀಯ ಕಾಲೇಜಿನ ಆಡಿಟೋರಿಯಂನಲ್ಲಿ ಪ್ರಯೋಗಿಸಿ ಮೆಚ್ಚುಗೆ ಪಡೆದದ್ದಲ್ಲದೆ ಬೆಂಗಳೂರಿನ ಯುವರಂಗ ತಂಡದವರು ರವೀಂದ್ರ ಕಲಾಕ್ಷೇತ್ರ ಬೆಂಗಳೂರಲ್ಲಿ ಏರ್ಪಡಿಸಿದ ನಾಟಕ ಸ್ಪರ್ಧೆಯಲ್ಲಿ ಅದೇ ರಾಜಾ ಲೂಡಿಕ್ರಸ್ ನಾಟಕ ಪ್ರದರ್ಶಿಸಿ ಅದರಲ್ಲಿ ಸೂರ್ಯಕಾಂತ ಗುಣಕಿಮಠರು ಅತ್ಯುತ್ತಮ ನಟ ಪ್ರಶಸ್ತಿ ಪಡೆಯಲು ಕಾರಣವಾಯಿತು.

ಮುಂದೆ ಸಮುದಾಯದ ಚಟುವಟಿಕೆಗಳು ರಾಜ್ಯಾದ್ಯಂತ ವಿಸ್ತರಿಸಿದ ಹಿನ್ನಲೆಯಲ್ಲಿ ಕೊಪ್ಪಳದಲ್ಲಿಯೂ ಅದರ ಘಟಕ ಆರಂಭಗೊಂಡು ಮೇಲಿನ ಸಾಹಿತಿಗಳ ಜತೆಗೆ ಹೊಸ ಯುವಕರ ಬಳಗವೂ ಅದಕ್ಕೆ ಸೇರ್ಪಡೆಗೊಂಡು ಪ್ರಗತಿ ಕಲಾವೇದಿಕೆಗೆ ಬದಲು ಸಮುದಾಯದ ಹೆಸರಿನ ಅಡಿಯಲ್ಲಿ ನಾಟಕದ ಚಟುವಟಿಕೆಗಳು ಮುಂದುವರೆದವು.

'ಬೋಲೋರಾಮನ ಜೀವ' ಎನ್ನುವ ಹಿಂದಿ ಕಥೆಯ ರೂಪಾಂತರದ ನಾಟಕ ಡಿ.ಎಚ್. ಕಂಬಳಿ ನಿರ್ದೇಶನದಲ್ಲಿ ತುಂಬಾ ಯಶಸ್ವಿಯಾಗಿ ಪ್ರಯೋಗಿಸಲಾಯಿತು. ಇದರಲ್ಲಿ ವಿಠ್ಠಪ್ಪ ಗೋರಂಟ್ಲಿ ನಾರದನ ಪ್ರಮುಖ ಪಾತ್ರವಹಿಸಿದ್ದರೆ, ಶಾಂತರಸರ ಮಗಳು ಭಾರತಿ ಮೋಹನ ಕೋಟೆ ಮುಂತಾದ ಉಪನ್ಯಾಸಕರು ನಟಿಸಿದ್ದು ವಿಶೇಷವಾಗಿತ್ತು. ನಂತರ ಸಮುದಾಯದ ಜವಾಬ್ದಾರಿಯನ್ನು ಮಲ್ಲಿಕಾರ್ಜುನ ಜಾನೇಕಲ್, ಕೆ. ವಾಸುದೇವ ವಹಿಸಿಕೊಂಡು 'ಕೆರೆಗೆ ಹಾರ', 'ಮಾರಾಟಕ್ಕಿದೆ', 'ವೈದೇಹಿ', 'ಮಾತಂಗಿ', ರಾವಿ ನದಿಯ ದಂಡೆಯಲ್ಲಿ ಮುಂತಾದ ಉತ್ತಮ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಕೊಪ್ಪಳ ಜಿಲ್ಲೆಯ ರಂಗ ಪರಂಪರೆಗೆ ಹೊಸ ರೂಪ ನೀಡಲಾಯಿತು. ಇದರಲ್ಲಿಯ ಕೆಲವು ನಾಟಕಗಳನ್ನು ಬೆಂಗಳೂರು, ಹೊಸಪೇಟೆ, ಶಕ್ತಿನಗರ, ಹರಪನಳ್ಳಿ, ಕುಷ್ಟಗಿ ಮುಂತಾದೆಡೆ ಹೋಗಿ ಪ್ರದರ್ಶಿಸಿ ಗಮನ ಸೆಳೆಯಲಾಗಿದೆ. ಅಲ್ಲದೆ ಹಲವಾರು ಬೀದಿ ನಾಟಕಗಳನ್ನೂ ಪ್ರಯೋಗಿಸುವ ಮೂಲಕ ಇಲ್ಲಿಯ ರಂಗ ಚಟುವಟಿಕೆಯ ನಿರಂತರತೆಯನ್ನು ಕಾಯ್ದುಕೊಂಡು ಬರಲಾಗಿದೆ.

ಈ ಎಲ್ಲ ಪರಂಪರೆಯನ್ನು ಮುಂದುವರಿಸಿಕೊಂಡು ಮತ್ತು ಅದನ್ನು ಮತ್ತಷ್ಟು ಉನ್ನತ ಮಟ್ಟಕ್ಕೇರಿಸುವ ದಿಸೆಯಲ್ಲಿ "ಕೊಪ್ಪಳ ತಾಲೂಕಾ ರಂಗ ಕಲಾವಿದರ ಸಂಘ" ರೂಪುಗೊಂಡು. ೨೦೦೬ರಲ್ಲಿ ನೊಂದಾಯಿತವಾಗಿ ರಾಜ್ಯದ ಹಲವಾರು ನಾಟಕಸ್ಪರ್ಧೆಗಳಲ್ಲಿ ಭಾಗವಹಿಸಿ ೨೦೦೮ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯಿಂದ ರಂಗ ಚೇತನ ಪ್ರಶಸ್ತಿ ಪಡೆದದ್ದಲ್ಲದೆ ಸಾಕಷ್ಟು ಗಮನ ಸೆಳೆದು ಬಹುಮಾನಗಳಿಸಿದೆ. ಇವರು ಆಶಾಲತಾ, ಕೆಟ್ಟಮೇಲೆ ಬುದ್ಧಿ ಬಂತು, ಎಚ್ಚಮ್ಮ ನಾಯಕ, ರಕ್ತರಾತ್ರಿ, ಗಂಡುಗಲಿ ಕುಮಾರರಾಮ, ಅಣ್ಣತಂಗಿ ಮುಂತಾದ ಮಹತ್ವ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಇತ್ತೀಚೆಗೆ ನಾಟಕ ಅಕಾಡೆಮಿ ಸಹಕಾರದೊಂದಿಗೆ ಏರ್ಪಡಿಸಿದ ನಾಟಕೋತ್ಸವದಲ್ಲಿ ಕೊಪ್ಪಳ ಸಾಹಿತ್ಯ ಭವನದಲ್ಲಿ ಪ್ರಯೋಗಿಸಿದ ಇವರ ರಕ್ತರಾತ್ರಿ ನಾಟಕ ತುಂಬಾ ಗಮನಸೆಳೆಯಿತು.

ಕಲಾವಿದರ ಸಂಘದ ಅಧ್ಯಕ್ಷರಾಗಿ ಕೊಟ್ರಯ್ಯ ಸ್ವಾಮಿ ಹುಲಗಿ ಉಪಾಧ್ಯಕ್ಷ, ಚಾಂದಪಾಶಾ ಕಿಲ್ಲೇದಾರ, ಖಜಾಂಚಿ, ಟಿ. ಸುಭಾಷ. ಕಾರ್ಯದರ್ಶಿ ಹನುಮಂತಪ್ಪ ಹುಲಗಿ ಸದಸ್ಯರಾಗಿ ರವಿ ಪುರೋಹಿತ, ತೋಟಪ್ಪ ಹ್ಯಾಟಿ, ಹಸನ್‌ಸಾಬ, ಹಾಲಯ್ಯ ಡಾ ವೀರೇಶ, ಕುಬೇರಪ್ಪ, ದೇವೇಂದ್ರಗೌಡ, ಚಂದ್ರು ಮುಂತಾದ ಕಲಾವಿದರು ಇದರಲ್ಲಿ ಪಾತ್ರ ನಿರ್ವಹಿಸುವದಲ್ಲದೆ ಕಲಾವಿದರ ಸಮಸ್ಯೆಗಾಗಿ ನಿರಂತರ ಶ್ರಮಿಸುತ್ತಿದ್ದಾರೆ.

ರಾಜ್ಯಕ್ಕೆ ಮಾದರಿಯಾಗುವ ರಿತಿಯಲ್ಲಿ ರಂಗ ಚಟುವಟಿಕೆಯಲ್ಲಿ ತೊಡಗಿರುವ ಇಲ್ಲಿಯ ಮತ್ತೊಂದು ಕಲಾಬಳಗವೆಂದರೆ "ಶಿಕ್ಷಕರ ಕಲಾವೃಂದ ಬಳಗ" ಎನ್ನುವ ಹೆಸರಿನಲ್ಲಿ ಶಿಕ್ಷಕರೆ ಸಂಘಟನೆಗೊಂಡು ಗಮನಾರ್ಹವಾದ ರಂಗ ಚಟುವಟಿಕೆಯಲ್ಲಿ ತೊಡಗಿದ್ದು, ಇವರು ಹೆಚ್ಚಾಗಿ ಐತಿಹಾಸಿಕ, ನೀತಿ ಬೋಧಕ ನಾಟಕಗಳನ್ನು ಹೊಸರೀತಿಯಲ್ಲಿ ಪ್ರಯೋಗಿಸುತ್ತಾರೆ.

ಇವರು ಪ್ರಯೋಗಿಸಿದ ನಾಟಕಗಳಲ್ಲಿ 'ಟಿಪ್ಪು ಸುಲ್ತಾನ' 'ಗಂಡುಗಲಿ ಕುಮಾರರಾಮ' 'ಸಂಗೊಳ್ಳಿ ರಾಯಣ್ಣ' 'ರಕ್ತರಾತ್ರಿ' ತುಂಬಾ ಗಮನಸೆಳೆದಿವೆ. ಅಲ್ಲದೆ ರಂಗ ವಿಜ್ಞಾನಿಯೆಂದೆ ಹೆಸರಾದ ಹಾಲ್ಕುರಿಕೆ ಶಿವಶಂಕರವರ ನಿರ್ದೇಶನದಲ್ಲಿ ಇತ್ತೀಚಿಗೆ ಪ್ರಯೋಗಿಸಲಾದ 'ಸಿಂಹಾಸನ ಖಾಲಿಯಿದೆ' ನಾಟಕ ರಂಗಭೂಮಿಯ ಇತಿಹಾಸದಲ್ಲಿಯೆ ಕಾಣದ ಹೊಸ ಆಯಾಮದೊಂದಿಗೆ ಪ್ರೇಕ್ಷಕರ ಹಮನ ಸೆಳೆಯಿತು.

ಈ ಶಿಕ್ಷಕ ಕಲಾವೃಂದ ಬಳಗ ಇಷ್ಟಕ್ಕೇ ಮಹತ್ವದ್ದಲ್ಲ ಇವರ ಅತ್ಯಂತ ಶ್ರೇಷ್ಠವಾದ ಸಮಾಜಸೇವೆಯೆಂದರೆ. ಇದರಲ್ಲಿರುವವರೆಲ್ಲ ಶಿಕ್ಷಕ ವೃತ್ತಿಯಲ್ಲಿದ್ದವರಾಗಿದ್ದರಿಂದ ಅವರು ಇದರಿಂದ ಒಂದು ಪೈಸೆಯ ಆಸೆಯನ್ನೂ ಇಟ್ಟುಕೊಳ್ಳದೆ. ತಾವೇ ಹಣ ಹಾಕಿ ನಾಟಕ ಪ್ರಯೋಗಿಸಿ ಅದರಿಂದ ಬಂದ ಹಣವನ್ನೆಲ್ಲ ಕಲಾವಿದರಿಗೆ ಸಮಾಜಸೇವಕರಿಗೆ ಅರ್ಪಿಸಿ ಸನ್ಮಾನಿಸುತ್ತಾರೆ. ಇದುವರೆಗೆ ಮೂರು ಲಕ್ಷ ರೂಪಾಯಿಗಳವರೆಗೆ ಆರೀತಿ ಸಂಗ್ರಹಿಸಿ ಸನ್ಮಾನದ ಮೂಲಕ ವಿವಿಧ ಕ್ಷೇತ್ರದ ಸಾಧಕರಿಗೆ ನೀಡಿದ್ದಾರೆ. ಸಾಲುಮರದ ತಿಮ್ಮಕ್ಕನಿಗೆ ೮೦ ಸಾವಿರ ನೀಡಿದ್ದು, ಗದಗಿನ ವಿರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳಿಗೆ ೬೨ ಸಾವಿರ ರೂ ನೀಡಿದ್ದು, ಕಲಾವಿದರಾದ ಹುಸೇನ್‌ಸಾಬ, ವಂದನಾ, ಬಸವರಾಜ ಧುತ್ತರಗಿ, ಹಾಲ್ಕುರಿಕೆ ಶಿವಶಂಕರ ಇಂತವರಿಗೆಲ್ಲ ಸಂಗ್ರಹಿಸಿಕೊಟ್ಟಿದ್ದು ಪ್ರಶಂಸನೀಯ. ಅಷ್ಟೇಯಲ್ಲದೆ ತಿಮ್ಮಕ್ಕನ ಸಮಕ್ಷಮ ೫೧೦೦ ಸಸಿಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಡಿದ್ದೂ ಈ ಕಲಾಬಳಗದ ವಿಶೇಷ.

ಶಿಕ್ಷಕರ ಕಲಾವೃಂದದಲ್ಲಿ ಪ್ರಾಣೇಶ ಪೂಜಾರ, ರಮೇಶ ಪೂಜಾರ, ರಾಮಣ್ಣ ಶ್ಯಾವಿ, ವಿಜಯಲಕ್ಷ್ಮಿ ಮಠದ, ಮಹಾಂತೇಶ, ಗವಿಸಿದ್ಧಪ್ಪಕೊನೆಸಾಗರ, ದಯಾನಂದ ಸಾಗರ, ಫಕೀರಪ್ಪ ಕಿಡದಾಳ, ವೀರೇಶ ಮೇಟಿ, ಕಾಳಪ್ಪ ಹ್ಯಾಟಿ, ಸುರೇಶ ಕಂಬಳಿ, ದೇವರಾಜ, ಶಂಕ್ರಯ್ಯ ಅಬ್ಬಿಗೇರಿ, ಶಿವನಗೌಡಪಾಟೀಲ, ಸಿದ್ದುಕೆರೆ ಮುಂತಾದ ಶಿಕ್ಷಕರ ಪಾತ್ರಾಭಿನಯ. ಕ್ರಿಯಾಶೀಲತೆ, ಸಾಮಾಜಿಕ ಕಳಕಳಿ ಅಭಿನಂದನೀಯ.

ಇದೆಲ್ಲದರೊಂದಿಗೆ ಜಿಲ್ಲೆಯ ರಂಗ ಚಟುವಟಿಕೆಗೆ ಹೊಸ ಆಯಾಮವನ್ನೇ ನಿರ್ಮಿಸಿದ್ದು ನಾಟಕವೆಂದರೆ ಕೇವಲ ಮಾತಲ್ಲ, ಅಭಿನಯವಲ್ಲ, ಕಥೆಯಲ್ಲ, ಮನೋರಂಜನೆಯಲ್ಲ, ಅದೊಂದು ಎಲ್ಲದರ ಒಟ್ಟುಗೂಡುವಿಕೆಯ ಪ್ರಯೋಗಾತ್ಮಕ ಮಹಾಯಾನ. ಅದರಲ್ಲಿ ಏನೆಲ್ಲ ಮಾಡಲಿಕ್ಕೆ ಸಾಧ್ಯವಿದೆ. ಅದು ಮಹಾಕಾವ್ಯವಾಗಬಹುದು. ಆಂಗಿಕ ಅಭಿನಯದಿಂದ ಹೃದಯ ತಟ್ಟಬಹುದು. ವಿಶ್ವವ್ಯಾಪಕ ತತ್ವದಿಂದ ಎಲ್ಲ ಗೋಡೆಗಳನ್ನು ಕೆಡವಿ ಮಾನವತೆಯ ಪರಿಮಳ ಬೀರಬಹುದು. ಶೋಷಿತರ ಧ್ವನಿಯಾಗಿ ಗಟ್ಟಿಯಾಗಿ ಚೀರಿ ಕಠೋರ ಹೃದಯವನ್ನು ಸೀಳಬಹುದೆನ್ನುವದನ್ನೆಲ್ಲ ತಮ್ಮ ನಿರಂತರ ಪರಿಶ್ರಮದೊಂದಿಗೆ ನಿತ್ಯ ನಿತ್ಯ ವಿನೂತನತೆಯನ್ನು ರಂಗಭೂಮಿಯಲ್ಲಿ ಪ್ರಯೋಗಿಸುವ ಪ್ರಯತ್ನದೊಂದಿಗೆ ರಾಜ್ಯದ ಗಮನವನ್ನು ಜಿಲ್ಲೆಯತ್ತ ಸೆಳೆಯುವಲ್ಲಿ ಯಶಸ್ವಿಯಾದವರು "ಹಾಲ್ಕುರಿಕೆ ಥಿಯೇಟರ್‌ನ" ಶಿವಶಂಕರ.

ಪ್ರಸ್ತುತ ನಾಟಕ ಅಕಾಡೆಮಿ ಸದಸ್ಯರಾಗಿರುವ ಶಿವಶಂಕರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕುಗ್ರಾಮ ಯಡಹಳ್ಳಿಯಲ್ಲಿಗೆ ನಾಲ್ಕೈದು ವರ್ಷಗಲ ಹಿಂದೆ

ಮೊದಲಿಗೆ ಬಂದು ವಾಸವಾಗಿದ್ದವರು. ಗುಡ್ಡಗಾಡು ಪ್ರದೇಶದ ಆದಿಮಾನವ ಸಂಸ್ಕೃತಿಯಲ್ಲಿದ್ದ ಅಲ್ಲಿಯ ಜನರಲ್ಲಿ ಕಲ್ಲಿನಲ್ಲಿ ನೀರಿನ ಸೆಲೆ ಚಿಮ್ಮಿಸಿದಂತೆ ಕಲ್ಲಿನಂಥ ವ್ಯಕ್ತಿಗಳಲ್ಲಿ ಕಲೆಯನ್ನು ಅರಳಿಸಿದವರು. ಜತೆಗೆ ಪತ್ನಿ ಶೀಲಾರ ಪರಿಶ್ರಮವೂ ಇದಕ್ಕೆ ಸಾಥಿಯಾಗಿ ಅಲ್ಲಿಂದ ಅನೇಕ ನಾಟಕಗಳನ್ನು ಸಿದ್ಧಗೊಳಿಸಿ ಬೇರೆ ಬೇರೆ ಕಡೆಗೆಲ್ಲ ಪ್ರಯೋಗಿಸಿ. ಬೂದು ಗುಂಪಿಗೆ ಬಂದು ನೆಲೆಗೊಂಡು ಅಲ್ಲಿಯ ಕಲ್ಲುಕಲ್ಲಿನಲ್ಲಿ ಕಲೆಯನ್ನು ಕೆತ್ತಿ ಹೊರತರುವ ಪ್ರಯತ್ನದಲ್ಲಿ ಪರಿಶ್ರಮಿಸಿ ಇದೀಗ ಕೊಪ್ಪಳ ಸಮೀಪದ ಭಾಗ್ಯನಗರದಲ್ಲಿ ವಾಸಿಸಿದ್ದಾರೆ.

ಇವರ ಹಾಲ್ಕುರಿಕೆ ಥೇಟರಿನಿಂದ ಮಾಡಿದ ಕಾಲೇಜು ರಂಗ ಪಯಣದಲ್ಲಿ ಡಾ. ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕವನ್ನು ವಿದ್ಯಾರ್ಥಿಗಳಿಂದಲೇ ಸಿದ್ಧಪಡಿಸಿ ರಾಜ್ಯದ ಅನೇಕ ಕಾಲೇಜುಗಳಲ್ಲಿ ಪ್ರಯೋಗಿಸಲಾಯಿತು.

ಅದೇರೀತಿ ಇತಿಹಾಸದಲ್ಲಿ ಮುಚ್ಚಿಹೊದ ಕೋರೆಗಾಂವ ದಲಿತ ಚಳುವಳಿಯ ಘಟನೆಗಳನ್ನಾಧರಿಸಿದ "ಕೋರೆಗಾಂವ" ನಾಟಕವನ್ನು ಶಿವಶಂಕರ ತಾವೇ ಬರೆದು ನಿರ್ದೇಶಿಸಿ ಕೊಪ್ಪಳ ಸಾಹಿತ್ಯ ಭವನದಲ್ಲಿ ಪ್ರಯೋಗಿಸುವ ಮೂಲಕ ಹಾಲ್ಕುರಿಕೆ ಥಿಯೇಟರ್ ಅಂದರೇನೇ ಅಲ್ಲೊಂದೇನಾದರೂ ವಿಶೇಷತೆ ಇದ್ದೇ ಇರುತ್ತದೆ ಎನ್ನುವ ವಿಶ್ವಾಸವನ್ನು ಪ್ರೇಕ್ಷಕರಲ್ಲಿ ಹುಟ್ಟಿಸಿದ್ದಾರೆ. ಮತ್ತೊಂದು ಇವರ ಹೊಸ ನಾಟಕ "ಚಿಗುರದ ಬಣ್ಣಗಳು" ಎನ್.ಜಿ.ಓ ಮಕ್ಕಳನ್ನು ಬಳಸಿಕೊಂಡು ಸತ್ಯಘಟನೆಗಳನ್ನೆ ಆಧಾರವಾಗಿಸಿ ರಚಿಸಿದ ನಾಟಕವಾಗಿದ್ದರಿಂದ ವಿಭಿನ್ನ ರೀತಿಯಲ್ಲಿ ದಲಿತ ಮಕ್ಕಳ ನೋವನ್ನು ಸಂಕೇತಗಳ ಮೂಲಕ ಮತ್ತು ಆಂಗಿಕ ಅಭಿನಯದಿಂದ ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾಯಿತು. ವಿಸ್ತಾರ ಚಿಲ್ಡ್ರನ್ ಥಿಯೇಟರ್ ಹಿರೇಬೀಡನಾಳಿನವರು ಇದನ್ನು ಪ್ರಾಯೋಜಿಸಿದ್ದರು. ದಿನಾಂಕ ೦೭-೦೨-೨೦೧೬ರಂದು ನಡೆದ ವಿಠ್ಠಪ್ಪ ಗೋರಂಟ್ಲಿ ಹೆಜ್ಜೆಗಳು ಕಾರ್ಯಕ್ರಮದಲ್ಲಿ ಅವರ ೪ ಕಥೆಗಳನ್ನು ಆಧರಿಸಿ ರಚಿಸಿದ "ಜೇಡ ಹಿಡಿದ ಜಾಡು" ರಂಗರೂಪ ಹಾಗು "ಕಲಬುರ್ಗಿ ಎಂಬ ಅಭಿವ್ಯಕ್ತಿಯ ಹತ್ಯೆ" ಎನ್ನುವ ನಾಟಕಗಳನ್ನು ಶಿವಶಂಕರ ಪ್ರೇಕ್ಷಕರು ದಂಗಾಗಿ ನೋಡುವಂತೆ ನಿರ್ದೇಶಿಸಿ ಪ್ರಯೋಗಿಸಿದರು.

ಇದೇ ರೀತಿಯ ಮತ್ತೊಂದು ಸಂಘಟನೆ ಲೋಕೋಪ ಇಲಾಖೆಯ ನೌಕರ ಬಳಗದವರನ್ನು ಒಳಗೊಂಡಂತೆ ಈಶ್ವರ ಹತ್ತಿಯವರ ವಿರಂಚಿ ಕಲಾಬಳಗ. ಹತ್ತಿಯವರು ಸಹಿತ ಹೊಸ ರೀತಿಯ 'ಅಪೂರ್ಣ' ಎನ್ನುವ ನಾಟಕವನ್ನು ರಚಿಸಿ ಪ್ರಯೋಗಿಸಿದರಲ್ಲದೆ ಕೊಪ್ಪಳ ಗವಿಸಿದ್ಧೇಶ್ವರ ಚರಿತ್ರೆಯನ್ನು ಆಧರಿಸಿದ "ಹದಿನೆಂಟು ಮೆಟ್ಟಿಲು" ನಾಟಕವನ್ನು ಇದೇ ಕಲಾತಂಡ ಶಿವಸಂಚಾರದ ರೀತಿಯಲ್ಲಿ ಪ್ರಯೋಗಿಸಿ ಗಮನ ಸೆಳೆಯಿತು.

ಹಾಗೆಯೆ ಹಿಂದಿನ ಪ್ರಗತಿ ಕಲಾ ವೇದಿಕೆಯನ್ನು ಪ್ರಗತಿ ಕಲಾ ತಂಡವಾಗಿ ಬದಲಾಯಿಸಿಕೊಂಡು ದಿ: ೮ ಜನವರಿ ೨೦೧೦ರಲ್ಲಿ ಕೊಪ್ಪಳ ಜಾತ್ರೆಯಲ್ಲಿ

ಪಿ. ಲಂಕೇಶ್‌ರ ಸಂಕ್ರಾಂತಿ ನಾಟಕವನ್ನು ವಿಠ್ಠಪ್ಪ ಗೋರಂಟಿ ನಿರ್ದೇಶಿಸಿ ಜತೆಗೆ ಬಸವಣ್ಣನ ಪಾತ್ರ ನಿರ್ವಹಿಸಿ ಹೊಸ ರೀತಿಯಲ್ಲಿ ಪ್ರಯೋಗಿಸಿದ್ದು ಮತ್ತು ನಂತರ ಜಿಲ್ಲಾ ಸಾಹಿತ್ಯ ಸಮ್ಮೇಳನ ದಿ: ೧೦-೧-೨೦೧೦ರಂದು ಮರು ಪ್ರಯೋಗಗೊಂಡು ಪ್ರೇಕ್ಷಕರಲ್ಲಿ ಹೊಸ ಭರವಸೆ ಮೂಡಿಸಿತು.

ಕೊಪ್ಪಳ ಮೀಡಿಯಾ ಕ್ಲಬ್‌ನವರೇ ಸೇರಿ ಕಳೆದ ೧೬.೧೧.೨೦೧೩ ರ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯ ಅಂಗವಾಗಿ ಪಿ.ಬಿ. ಧುತ್ತರಗಿಯವರ ಸಂಪತ್ತಿಗೆ ಸವಾಲು ನಾಟಕ ಪ್ರಯೋಗಿಸುವ ಮೂಲಕ ಜಿಲ್ಲೆಯ ನಾಟಕ ಪರಂಪರೆಗೆ ಹೊಸ ಪೀಳಿಗೆಯವರಲ್ಲಿ ಮತ್ತೆ ಹೊಸರೀತಿಯಲ್ಲಿ ಮರುಹುಟ್ಟು ಪಡೆಯಬಹುದೆನ್ನುವ ಭರವಸೆ ಮೂಡಿಸಿದರು.

ಹಲವಾರು ವರ್ಷಗಳಿಂದ ಪ್ರತಿಯೊಂದು ಹಳ್ಳಿಗಳಲ್ಲಿ ಒಂದೋ ಎರಡೋ ನಾಟಕ ತಂಡಗಳಿದ್ದು ಜಾತ್ರೆ ಹಬ್ಬ ಹರಿದಿನಗಳಲ್ಲಿ ಅದನ್ನೊಂದು ವ್ರತದಂತೆ ನಾಟಕ ಪ್ರಯೋಗಿಸುತ್ತ ಬರುತ್ತಿರುವದನ್ನು ನೋಡುತ್ತೇವೆ ಹಾಗೆ ಎಲ್ಲ ಊರುಗಳ ನಾಟಕ ತಂಡ ಕಲಾವಿದರ ಪರಿಚಯ ಮಾಡಿಸಬೇಕೆಂದರೆ ಅದು ದೊಡ್ಡ ಹೊತ್ತಿಗೆಯೆ ಆಗುತ್ತದೆ ಅದಕ್ಕಿಲ್ಲಿ ಅವಕಾಶವಿಲ್ಲದ್ದರಿಂದ ನಮ್ಮದೆ ಗ್ರಾಮ ಭಾಗ್ಯನಗರದ ಉದಾಹರಣೆಯೊಂದಿಗೆ ಅದನ್ನಿಲ್ಲಿ ಗಮನಿಸಿದರೆ ಸಾಕು. ಅರವತ್ತರ ದಶಕದಿಂದಲೇ ನಾವು ನೇಕಾರ ಯುವಕರೆಲ್ಲ ಒಟ್ಟಿಗೆ ಸೇರಿ ನಮ್ಮ ನೇಕಾರಿಕೆಯ ಕೆಲಸ ಮುಗಿದ ಬಳಿಕ ಪ್ರತಿ ಸಂಜೆ ಯಾವುದಾದರೊಂದು ನಾಟಕದ ರಿಹರ್ಸಲ್ ಮಾಡುತ್ತ ಹಾಗೆ ಕಲಿತ ನಾಟಕವನ್ನು ವರ್ಷಕ್ಕೆ ಒಂದು ಬಾರಿಯೋ ಎರಡು ಬಾರಿಯೋ ಆಡುತ್ತಿದ್ದೆವು. ಆ ರೀತಿ ತಾಯಿಕರುಳು, ಅತ್ತಿಗೆ, ಸೌಭಾಗ್ಯಲಕ್ಷ್ಮೀ ಮುಂತಾದ ನಾಟಕವಾಡಿ ೧೯೭೩ರಲ್ಲಿ ನಾನೇ ಬರೆದ "ದೇವರ ಹೂವು" ನಾಟಕ ನಂತರ "ಬಾಳೊಂದು ಚದುರಂಗ" "ಲಕ್ಷ್ಮಣ ರೇಖೆ" ಮುಂತಾದ ನಾಟಕ ಪ್ರಯೋಗಿಸಿದೆವು.

ಕಾಮನ ಹಬ್ಬದಲ್ಲಿ ನಮ್ಮ ಗ್ರಾಮದಲ್ಲಿ ಕಾಮಣ್ಣನನ್ನು ಕೂಡ್ರಿಸಿ ಮೆರವಣಿಗೆ ಮಾಡುವಾಗ ಎರಡು ಗುಂಪುಗಳ ನಡುವೆ ಬಡಿದಾಟವಾಗಿ ೧೪೪ನೆ ಕಲಂ ಜಾರಿಯಾಗುವಂತಾಯಿತು. ಬಹಳ ಅಶ್ಲೀಲವಾಗಿ ವರ್ತಿಸುತ್ತ ಹರಿಜನ ಹೆಣ್ಣು ಮಕ್ಕಳನ್ನು ಹಾಡುವದಕ್ಕೆ ಕರೆಯಿಸಿ ಹಿಂಸಿಸುತ್ತಿದ್ದರು. ನಾವು ಈ ಪರಂಪರೆಗೆ ಇತಿಶ್ರೀ ಮಾಡಿ ಅದನ್ನು ಸಾಂಸ್ಕೃತಿಕವಾಗಿ ಪರಿವರ್ತಿಸಿದೆವು. ಅಲ್ಲಿ ನಾಟಕಗಳನ್ನು ಪ್ರಯೋಗಿಸಿ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸಿದೆವು. ಆಗ ಗಿರೀಶ ಕಾರ್ನಾಡರ 'ಯಯಾತಿ' ನಾಟಕ ಹಾಗು ನಾನೇ ಬರೆದ "ಕಾಮದಹನ" "ಗದ್ಲೋಗದ್ಲ" ಹೀಗೆ ಅನೇಕ ನಾಟಕ ಪ್ರಯೋಗಿಸಿ ಹೊಸರುಚಿ ಹಚ್ಚಿದ್ದರಿಂದ ಇಂದಿಗೂ ಅದು ಮುಂದುವರೆದಿದೆ.

ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಭಾಗ್ಯನಗರ ಎನ್ನುವ ಹೆಸರಿನಲ್ಲಿ ಅದೀಗ ನೊಂದಾಯಿಸಿಕೊಂಡು ತನ್ನದೆ ಆದ ರಂಗಮಂದಿರವನ್ನು ನಿರ್ಮಿಸಿಕೊಂಡು ಈಗಲೂ ಯುವಕರು ಪ್ರತಿವರ್ಷದಲ್ಲಿ ಒಂದೋ ಎರಡೋ ನಾಟಕ ಆಡುತ್ತಿರುವದು

ಇನ್ನೂ ನಾಟಕಗಳ ಕಾಲ ಮುಗಿದಿಲ್ಲ ಅದು ಹೊಸ ಪೀಳಿಗೆಯಲ್ಲಿ ಹೊಸ ರೋಪದಲ್ಲಿ ಮುಂದುವರಿದಿದೆ ಎನ್ನುವುದನ್ನು ಸಾಬೀತು ಪಡಿಸುತ್ತದೆ. ಅದೇ ರೀತಿ ಶ್ರೀ ಬನಶಂಕರಿ ನಾಟ್ಯ ಸಂಘವೂ ತನ್ನ ಅಸ್ತಿತ್ವ ಕಾಯ್ದುಕೊಂಡು ಬಂದಿದೆ. ಇದು ಬಹುತೇಕ ಹಳ್ಳಿಗಳಲ್ಲಿ ನಡೆಯುತ್ತಿರುವುದನ್ನು ಕಾಣಬಹುದು.

ಇದು ಜಿಲ್ಲೆಯ ಹವ್ಯಾಸಿ ರಂಗ ತಂಡಗಳ ಸಂಕ್ಷಿಪ್ತ ಮಾಹಿತಿ.

ಸ್ವಾತಂತ್ರ್ಯ ಪೂರ್ವದಲ್ಲಿಯೆ ಇಂಥ ತಂಡಗಳ ಚಟುವಟಿಕೆ ಸಾಕಷ್ಟಿದ್ದಿತ್ತಾದರೂ ಆಗ ದೊಡ್ಡಾಟ, ಬಯಲಾಟ, ಸಣ್ಣಾಟ, ಡಪ್ಪಿನಾಟ ಕಿಳ್ಳೆಕೇತರಾಟ ಮುಂತಾದ ಜನಪದ ಕಲೆ ಹೆಚ್ಚಾಗಿತ್ತು.. ಅದೆಲ್ಲ ಸುಧಾರಣೆಗೊಂಡು ಟಿಕೇಟ ನಾಟಕಕ್ಕೆ ಪರಿವರ್ತನೆಗೊಂಡದ್ದು ನಂತರವೆ. ಹಾಗಾಗಿ ನಮಗೆ ಅಲ್ಲಿಂದ ಮಾತ್ರ ಮಾಹಿತಿ ಲಭ್ಯವಾಗುತ್ತದೆ. ವಿಶೇಷ ಮಾಹಿತಿಗೆ ವಿಶೇಷ ಅಧ್ಯಯನ ಬೇಕಾಗುತ್ತದೆ. ಅದಿಲ್ಲಿ ಅಗತ್ಯವಿಲ್ಲದ್ದರಿಂದ ಕೈಬಿಡಲಾಗಿದೆ.

# ಪ್ರಸಿದ್ಧ ನಾಟಕಕಾರ, ನಿರ್ದೇಶಕ, ನಟರ ಕುರಿತು ಅವಲೋಕನ

ರಂಗಭೂಮಿಗೆ ಮೊದಲಿಗೆ ಬೇಕಾದದ್ದು ಉತ್ತಮವಾಗಿ ರಚನೆಗೊಂಡ ನಾಟಕ. ಅದಿಲ್ಲದೆ ಬರೀ ರಂಗಸಜ್ಜಿಕೆ, ಸಂಗೀತಗಾರರು, ನಟರು ಏನು ಮಾಡಲು ಸಾಧ್ಯ? ಹಾಗಾಗಿ ಇಲ್ಲಿ ನಾಟಕಕಾರ ಪ್ರಥಮ ಆದ್ಯತೆಯ ಪಟ್ಟಿಯಲ್ಲಿ ಬರುತ್ತಾನೆ. ನಾಟಕ ರಚಿಸುವ ಸಾಹಿತಿಯನ್ನು ನಾಟಕಕಾರ ಅಥವಾ ಕವಿ ಎಂದು ಗುರುತಿಸುವುದು ರಂಗ ಕ್ಷೇತ್ರದಲ್ಲಿ ಪರಂಪರಾಗತವಾಗಿ ಬಂದಿರುತ್ತದೆ. ನಾಟಕಕಾರನನ್ನು ಕವಿ ಎಂದಾಗ ಆತನೇನು ಕಾವ್ಯ ರಚಿಸಿದ್ದಾನೆ ಎನ್ನುವ ಮಾತು ಸಾಮಾನ್ಯವಾಗಿ ಕೇಳಿ ಬರುತ್ತದೆ. ಆದರೆ ನಮ್ಮ ದೇಶದಲ್ಲಿ ಮೊಟ್ಟಮೊದಲಿಗೆ ನಾಟ್ಯ ಶಾಸ್ತ್ರವನ್ನು ರಚಿಸಿದ ಭರತ "ಕಾವ್ಯೇಷು ನಾಟಕಂ ರಮ್ಯಂ" ಎಂದು ಘೋಷಿಸಿದ. ಕಾವ್ಯಗಳಲ್ಲಿ ರಮ್ಯವಾದದ್ದು ನಾಟಕ ಎಂದಿರುವದನ್ನು ಗಮನಿಸಿದಾಗ ನಿಜವಾಗಲೂ ಅದು ನವರಸಭರಿತ ಕಾವ್ಯ ಎನ್ನುವದರಲ್ಲಿ ಸಂಶಯವಿಲ್ಲ. ಅದಕ್ಕೆ ಕರ್ನಾಟಕದ ಶೇಕ್ಸಫಿಯರ್ ಎಂದೇ ಹೆಸರಾದ ಕಂದಗಲ್ ಹನುಮಂತರಾಯ, ಎಚ್.ಟಿ. ಮಹಾಂತೇಶ ಶಾಸ್ತ್ರಿ, ನಲವಡಿ ಶ್ರೀಕಂಠ ಶಾಸ್ತ್ರಿ ಪಿ.ಬಿ. ಧುತ್ತರಗಿ, ಮಾಂಡ್ರೆ ಮೊದಲಾದವರ ನಾಟಕಗಳೇ ನಿದರ್ಶನಗಳಾಗಿವೆ. ಅವರ ನಾಟಕಗಳಲ್ಲಿ ಕಾವ್ಯಾಂಶ ತುಂಬಿ ತುಳುಕುತ್ತಿರುತ್ತದೆ. ಹಾಗಾಗಿ ಅವು ಹೆಚ್ಚು ಜನರನ್ನು ಆಕರ್ಷಿಸುತ್ತದೆ. ಇಂಥ ಕಾವ್ಯಾಂಶವಿಲ್ಲದೆ ಕೇವಲ ಕಥಾಹಂದರದ ಮೇಲೆಯೆ ಮಾತಿನ ಅಬ್ಬರಗಳಿಂದ ಪ್ರೇಕ್ಷಕರನ್ನು ರಂಜಿಸುವ ನಾಟಕಗಳನ್ನು ರಚಿಸಿದವರು ಅವರು ಕೇವಲ ನಾಟಕಕಾರರಾಗಿರುತ್ತಾರೆ. ಈ ಸೂಕ್ಷ್ಮ ವ್ಯತ್ಯಾಸವನ್ನು ಸಹೃದಯಿಗಳೇ ಗುರುತಿಸಬೇಕು. ಆದದ್ದರಿಂದ ಇಲ್ಲಿ ಕವಿ, ನಾಟಕಕಾರ ಎರಡೂ ಪದಗಳ ಬಳಕೆಯಿದೆ.

ಕೆಲವರು ನಿರ್ದೇಶಕರಾಗಿ ನಟರಾಗಿ ನಂತರ ನಾಟಕರಚಿಸಿದ್ದರೆ ಮತ್ತೆ ಕೆಲವರು ಮೊದಲಿಗೇನೇ ನಾಟಕ ರಚಿಸಿ ನಂತರ ಪಾತ್ರವಹಿಸಿ, ನಿರ್ದೇಶಕರಾಗಿ ಹೆಸರು ಪಡೆದಿದ್ದಾರೆ. ಇನ್ನು ಅಪರೂಪಕ್ಕೆ ಯಾವುದೇ ಪಾತ್ರ ಮಾಡದೆ, ನಿರ್ದೇಶನ ಮಾಡದೆ ಕೆವಲ ನಾಟಕ ರಚನೆಯಿಂದ ಬೆಳಕಿಗೆ ಬಂದವರಿದ್ದಾರೆ. ಇಲ್ಲಿ ನಿರ್ದೇಶಕರೆಂದರೆ ಅವರೇ ಹಾರ್ಮೋನಿಯಂ ಮಾಸ್ತರ, ಅಂದರೆ ಸಂಗೀತಗಾರರಾಗಿದ್ದವರೂ ಇದ್ದಾರೆ. ಅಲ್ಲದೆ ನಿರ್ದೇಶಕನೆ ಬೇರೆಯಾಗಿ ಹಾರ್ಮೋನಿಯಂ ಮಾಸ್ತರ ಮತ್ತೊಬ್ಬರಿದ್ದವರೂ ಇದ್ದಾರೆ. ಅದಕ್ಕಾಗಿ ಅವರನ್ನೆಲ್ಲ ಪ್ರತ್ಯೇಕಗೊಳಿಸಿದರೆ ವಿಸ್ತಾರವಾಗುವ ಆತಂಕದಿಂದ ಒಟ್ಟುಗೂಡಿಸಿ ಪರಿಚಯಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ನಾಟಕಕಾರರ ಸಂಖ್ಯೆ ಲೆಕ್ಕವಿಲ್ಲದಷ್ಟಿದೆ ಸುಪ್ರಸಿದ್ಧ ನಾಟಕಕಾರರಿಂದ ಹಿಡಿದು ಕಾಗುಣಿತದ ದೋಷವನ್ನೂ ತಿಳಿಯದೆ ಅಲ್ಪಪ್ರಾಣ ಮಹಾಪ್ರಾಣಗಳ ಅರಿವೂ ಇಲ್ಲದೆ. ಒಂದು ಪರಿಣಾಮಕಾರಿ ಕಥಾ ಹಂದರದ ಮೇಲೆ ನಾಟಕ ರಚಿಸಿ ಅವೇ ನಾಟಕ ಪ್ರಸಿದ್ಧಿಗೊಂಡು, ನಂತರ ಪ್ರಕಟಗೊಂಡು ಪ್ರದರ್ಶಿಸುತ್ತಿರುವ ಉದಾಹರಣೆಗಳೂ ಬೇಕಾದಷ್ಟಿವೆ. ಅಂಥ ನಾಟಕಗಳನ್ನು ಆಡುವವರೂ ಸಹಿತ ಹೆಣ್ಣು ಗಂಡು ಅಕ್ಷರಗಳ ಕಡೆ ಗಮನ ಕೊಡದೆ ಕೇವಲ ಅಬ್ಬರದೊಂದಿಗೆ ಕ್ಯಾಶಿಯೋ, ಡೋಲಕ್, ಡ್ರಮ್‌ಗಳ ಕಿವಿಗಡಚಿಕ್ಕುವ ಸಂಗೀತದಿಂದ ಸಾಮಾನ್ಯ ಪ್ರೇಕ್ಷಕರಿಂದ ಪ್ರಶಂಸೆಗಳಿಸಿರುವ ನಾಟಕಗಳು ಬೇಕಾದಷ್ಟಿವೆ.

ಇಲ್ಲಿಯ ನಾಟಕಕಾರರ ಕುರಿತೆ ಒಂದು ದೊಡ್ಡ ಗ್ರಂಥ ರಚಿಸುವಷ್ಟು ಸಾಮಾಗ್ರಿಯಿದೆ. ಆದರೆ ಅದೆಲ್ಲವನ್ನೂ ಕ್ರೋಢೀಕರಿಸಿ ಮುಖ್ಯವಾದ ಮತ್ತು ದಾಖಲಾರ್ಹ ನಾಟಕಕಾರ, ನಿರ್ದೇಶಕ, ನಟರ ಪರಿಚಯಕ್ಕೆ ಆದ್ಯತೆ ನೀಡಲಾಗಿದೆ. ವೃತ್ತಿರಂಗಭೂಮಿಯ ಸಂಕ್ಷಿಪ್ತ ಇತಿಹಾಸದಲ್ಲಿ ಕಂಪನಿ ಕಟ್ಟಿ ಬೆಳಸಿದವರ ಹೆಸರನ್ನಿಲ್ಲಿ ಪ್ರಸ್ತಾಪಿಸುವದು ಅನಿವಾರ್ಯವಾದರೂ ಪುನರಾವರ್ತನೆ ಹೆಸರಿಗೆ ಮಾತ್ರವಿದೆಯೆ ಹೊರತು ಕಂಪನಿಯ ವಿಷಯ ಬಿಟ್ಟು ಅವರ ನಾಟಕ ಮತ್ತು ನಟನೆಯ ವಿಶೇಷತೆಯನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ಜಿಲ್ಲೆಯಲ್ಲಿ ಮಹತ್ವದ ನಾಟಕಗಳ ಕೊಡುಗೆ ನೀಡಿದವರಲ್ಲಿ ಗರುಡಸದಾಶಿವರಾಯರು, ಮಾರುತೇಶ ಮಾಂಡ್ರೆ, ಪಿ.ಬಿ. ಧುತ್ತರಗಿ, ಮೋಹನಚಂದಕಿರಣಗಿ, ನಿಟ್ಟಾಲಿ ಶಿವರುದ್ರಪ್ಪ, ಎಸ್.ವಿ. ಪಾಟೀಲಗುಂಡೂರ ಮುಂತಾದವರಿದ್ದಾರೆ. ಇದರಲ್ಲಿ ಬಹುತೇಕ ಪ್ರಸಿದ್ಧ ನಾಟಕಕಾರರ ಕುರಿತು ಈಗಾಗಲೇ ಪರಿಚಯ ಗ್ರಂಥಗಳು ಬೇರೆ ಬೇರೆ ಮೂಲಗಳಿಂದ ಪ್ರಕಟಗೊಂಡಿವೆಯಾದರೂ ಅದೆಲ್ಲವೂ ಒಂದುಕಡೆ ಕ್ರೋಢೀಕರಣಗೊಳಿಸುವ ಉದ್ದೇಶಕ್ಕಾಗಿ ಇಲ್ಲಿ ಅಂಥವರ ಮುಖ್ಯವಾದ ಸಂಕ್ಷಿಪ್ತ ಪರಿಚಯಕ್ಕೆ ಮಾತ್ರ ಒತ್ತುಕೊಡಲಾಗಿದೆ. ಆ ಕುರಿತು ವಿಶೇಷ ಮಾಹಿತಿ ಬಯಸುವವರು ಲಭ್ಯ ಗ್ರಂಥಗಳಿಂದ ಪಡೆಯಬಹುದು.

## ವೃತ್ತಿರಂಗಭೂಮಿಯ ಪಿತಾಮಹ ವೆಂಕೋಬರಾಯ ಶಿರಹಟ್ಟಿ

ಕನ್ನಡ ವೃತ್ತಿರಂಗಭೂಮಿಯ ಪಿತಾಮಹನೆನಿಸಿದ ನಾಟಕ ಸಾರ್ವಭೌಮ ಶಿರಹಟ್ಟಿ ವೆಂಕೋಬರಾಯರು. ನಾಟಕ ಬರೆದಿರುವ ಬಗೆಗೆ ಯಾವುದೆ ಮಾಹಿತಿಯಿಲ್ಲ ಆದರೆ ನಟನೆಯಲ್ಲಿ ಮತ್ತು ಕಂಪನಿಯ ವೈಭವ ಪ್ರದರ್ಶನದಲ್ಲಿ ಯಾರೂ ಇವರನ್ನು ಸರಿಗಟ್ಟಲು ಸಾಧ್ಯವಿಲ್ಲ. ಲೋಕಮಾನ್ಯ ಬಾಲಗಂಗಾಧರ ತಿಲಕ, ಪಂಡಿತ ಜವಾಹರಲಾಲ ನೆಹರೂರಂಥವರೆ ಇವರ ನಾಟಕಗಳನ್ನು ಗಂಟೆಗಟ್ಟಲೆ ಕೂತು ನೋಡಿದ್ದಾರೆಂದರೆ ಇವರ ಅಭಿನಯದ ಪರಾಕಾಷ್ಠೆಗೆ ಇನ್ನೆಂಥ ನಿದರ್ಶನ ಬೇಕು?

ಆದರೆ ಶಿರಹಟ್ಟಿ ವೆಂಕೋಬರಾಯರ ತಮ್ಮ ಸಹೋದರ ಕೊಪ್ಪಳದ ತಮ್ಮಯ್ಯ ಹೂಲಗೇರಿ ಆಗಲೇ "ವೀರ ಅಭಿಮನ್ಯು", "ಭದ್ರಾಚಲ ರಾಮದಾಸ", "ಧರ್ಮಾತ್ಮ"

ನಾಟಕಗಳನ್ನು ಬರೆದಿದ್ದರಿಂದ "ಶ್ರೀ ಮಹಾಲಕ್ಷ್ಮೀ ಪ್ರಸಾದಿತ ಸಂಗಿತ ನಾಟಕ ಮಂಡಳಿ ಶಿರಹಟ್ಟಿ" ಕಂಪನಿಯಲ್ಲಿ ಇವು ಪ್ರಮುಖ ನಾಟಕಗಳಾಗಿ ಪ್ರದರ್ಶನಗೊಳ್ಳುತ್ತಿದ್ದವು. ಈ ಕಾರಣದಿಂದ ಕೊಪ್ಪಳ ಜಿಲ್ಲೆಯ ರಂಗಭೂಮಿಯ ಇತಿಹಾಸ ೧೮೯೮ರಿಂದಲೇ ಪ್ರಾರಂಭವಾಗುತ್ತದೆ. ಶಿರಹಟ್ಟಿ ವೆಂಕೋಬರಾಯರು ವೃತ್ತಿರಂಗಭೂಮಿಯ ಮೊಟ್ಟಮೊದಲ ಸ್ಥಾಪಕರಾದರೆ ಅವರ ತಮ್ಮ ಹೂಲಗೇರಿ ತಮ್ಮಯ್ಯ ಮೊದಲ ನಾಟಕಕಾರರಾಗಿ ಗೌರವಿಸಲ್ಪಡುತ್ತಾರೆ. ಈ ಇಬ್ಬರು ಕೊಪ್ಪಳ ಮೂಲದವರೆನ್ನಲಿಕ್ಕೆ ಇಲ್ಲಿ ಈಗಲೂ ಅವರ ಮನೆತನಗಳಿವೆ.

ಹೂಲಗೇರಿ ತಮ್ಮಯ್ಯ ನಾಟಕಕಾರರಾಗಿದ್ದಂತೆಯೆ ಉತ್ತಮ ನಟರೂ ಕೂಡಾ ಆಗಿದ್ದರು. ಇವರ ಕಂಪನಿಯಲ್ಲಿ ಅನೇಕ ಹೆಸರಾಂತ ನಟ, ನಟಿಯರಿದ್ದಿದ್ದರಿಂದ ತುಂಬಾ ಪ್ರಭಾವಿತವಾಗಿ ರಾಜ್ಯದ ಎಲ್ಲ ಭಾಗದಲ್ಲಿ ಸಂಚರಿದ್ದಲ್ಲದೆ ತಮಿಳ್ನಾಡು, ಮಹಾರಾಷ್ಟ್ರ, ಆಂಧ್ರ ರಾಜ್ಯಗಳಲ್ಲಿ ಬಹುತೇಕ ನಗರಗಳಲ್ಲಿ ಸಂಚರಿಸಿ ಅತ್ಯಂತ ಯಶಸ್ವಿ ನಾಟಕಗಳನ್ನು ಪ್ರದರ್ಶಿಸಿದ್ದು. ಇವರ ನಟನಾ ಹಿರಿಮೆಗೆ ಸಾಕ್ಷಿಯಾಗಿದೆ. ಇವರ ನಾಟಕ ತಂಡ ಒಂದು ಚಿಕ್ಕ ಸಂಸ್ಥಾನದಂತೆ ಇದ್ದು ನಗರದಿಂದ ನಗರಕ್ಕೆ ಯಾತ್ರೆ ಹೊರಟರೆ ರಾಜ ಪರಿವಾರವೇ ಹೊರಟಿದ್ದಂತೆ ಭಾಸವಾಗುತ್ತಿತ್ತಂತೆ. ಗುಬ್ಬಿ ವೀರಣ್ಣನವರಂಥ ದೊಡ್ಡ ಕಂಪನಿಯೂ ಸಹಿತ ಇವರ ಕಂಪನಿ ಜತೆ ಒಂದೇ ಕಡೆ ಕ್ಯಾಂಪ್ ಮಾಡಿದರೆ ತಮ್ಮ ಕಂಪನಿಯಲ್ಲಿ ದೀಪ ಹೊತ್ತಿಸಲಾರದ ಪ್ರಸಂಗ ಬರುತ್ತಿತ್ತೆಂದು ವೀರಣ್ಣನವರೇ ತಮ್ಮ ನೆನಪಿನಲ್ಲಿ ಬರೆದುಕೊಂಡಿರುವುದಾಗಿ ಸದಾನಂದ ಕನವಳ್ಳಿಯವರು ಉಲ್ಲೇಖಿಸಿದ್ದಾರೆಂದರೆ ವೆಂಕೋಬರಾಯರ ನಟನಾ ವೈಖರಿಗೆ ಸರಿಸಾಟಿಯಾದವರಿರಲಾರದೆನ್ನಿಸುತ್ತದೆ. ಇವರು ಜುಲೈ ೧೫ ೧೯೩೮ರಲ್ಲಿ ದಿವಂಗತರಾದದ್ದು ದೊಡ್ಡನಕ್ಷತ್ರವೊಂದು ಕಳಚಿಬಿದ್ದಂತಾಗಿದೆ.

## ನಾಟ್ಯರಂಗದ ಆಕಾಶಕ್ಕೆ ಹಾರಿದ ಗರುಡ

ನಾಟ್ಯ ಪರಂಪರೆಯಲ್ಲಿ ಗರುಡಶೈಲಿ ಎನ್ನುವ ಛಾಪನ್ನು ಮೂಡಿಸಿದ 'ನಾಟ್ಯಾಲಂಕಾರ', 'ಅಭಿನಯ ಕೇಸರಿ' ಬಿರುದಿಗೆ ಪಾತ್ರರಾದ ಗರುಡ ಸದಾಶಿವರಾಯರು ರಂಗಭೂಮಿಯನ್ನು ಯೋಗಭೂಮಿಯನ್ನಾಗಿಸಿದವರು. ಅವರು ನಾಟಕ ರಚನೆ, ಅಭಿನಯ, ನಿರ್ದೇಶನ, ಎಲ್ಲದರಲ್ಲಿಯೂ ತಮ್ಮದೇಆದ ಶಿಸ್ತು, ವಿಶೇಷತೆ ಮತ್ತು ನೈಪುಣ್ಯತೆಯನ್ನು ಸಾಧಿಸಿದವರು. ಭರತಮುನಿಯ ಸಂಸ್ಕೃತ ನಾಟ್ಯಶಾಸ್ತ್ರವನ್ನು ಅಧ್ಯಯನ ಮಾಡಿ, ತಮ್ಮ ಕಂಪನಿಯಲ್ಲಿ ಪಾರಸಿ ಥಿಯೇಟರ್‌ನ ವ್ಯಾಪಾರಿ ರಂಗತಂತ್ರಗಳನ್ನು ಕಡಿಮೆ ಪ್ರಮಾಣದಲ್ಲಿ ಅನುಕರಿಸಿ ಕನ್ನಡ ರಂಗಭೂಮಿಯಲ್ಲಿಯೆ ವಿನೂತನ ಕ್ರಾಂತಿ ಮಾಡಿದವರು.

ಗರುಡ ಸದಾಶಿವರಾಯರು ನಾಟಕಕಾರ ಮತ್ತು ನಟ, ನಿರ್ದೇಶಕರಾಗಿ ನಿರ್ವಹಿಸಿದ ಕಂಪನಿ ಅದೊಂದು ರಂಗಶಾಲೆಯಾಗಿ ಅನೇಕ ಪ್ರಸಿದ್ಧ ನಟರನ್ನು; ರಂಗಕರ್ಮಿಗಳನ್ನು ತರಬೇತುಗೊಳಿಸುವಲ್ಲಿ ತುಂಬಾ ಶ್ರಮಿಸಿದ್ದನ್ನು ಅವರ

ಜೀವನ ಚರಿತ್ರೆಯಲ್ಲಿ ಕಾಣುತ್ತೇವೆ. ಅವರಿಗೆ ನಾಟಕ ಕೇವಲ ಮನೋರಂಜನೆಯ ಸರಕಾಗಿರಲಿಲ್ಲ. ಪ್ರೇಕ್ಷಕನ ಜೀವನ ದೃಷ್ಟಿಯ ಕಡೆಗೆ ದೇಶಾಭಿಮಾನ, ಸ್ವಾತಂತ್ರ್ಯ ಹೋರಾಟದ ಪ್ರೇರಣೆ ಮುಂತಾದ ಮಹತ್ವಾಕಾಂಕ್ಷೆಯ ಉದ್ದೇಶದಿಂದ ಜನಾಂಗವನ್ನು ಜಾಗೃತಿಗೊಳಿಸುವುದಾಗಿತ್ತು.

ಮಡಿವಂತಿಕೆಯ ಮನೆತನದಲ್ಲಿ ಹುಟ್ಟಿದ ಗರುಡ ಸದಾಶಿವರಾಯರಿಗೆ ಬಾಲ್ಯದಲ್ಲಿಯೆ ವೇದ ಮಂತ್ರ ಪಠಣಗಳಿಂದ ನಾಲಿಗೆಗೆ ಶಿಕ್ಷಣ ಸಂಸ್ಕಾರ ಕೊಟ್ಟಿದ್ದರಿಂದ ಅಭಿನಯದ ಅಭಿಲಾಷೆ ಬೆಳೆದಿತ್ತಾದರೂ ನಾಟಕ ಆಡುವದಿರಲಿ ನೋಡಲಿಕ್ಕೂ ಅವಕಾಶ ನೀಡಿಲ್ಲದ್ದರಿಂದ ಅದನ್ನೆಲ್ಲ ಅದುಮಿಟ್ಟುಕೊಂಡಿದ್ದರಾದರೂ ಹುಟ್ಟಿದ ಊರು ಕವಲೂರನ್ನು ಬಿಟ್ಟು ಕಲಿಯಲಿಕ್ಕಾಗಿ ತಮ್ಮ ಸೋದರಮಾವ ಕೆಲಸ ಮಾಡುತ್ತಿದ್ದ ಕವಲೂರಿಗೆ ಬಂದಾಗ ಗರುಡರ ಕನಸಿಗೆ ಗರಿಗೆದರಲು ಅವಕಾಶವಾಯಿತು. ಆಗ ಅವರಿಗೆ ಕೇವಲ ೮ನೆಯ ವಯಸ್ಸು. ಮರಾಠಿ ನಾಲ್ಕನೆಯ ತರಗತಿ, ಉರ್ದು, ಫಾರಸಿ, ಇಂಗ್ಲೀಷ್ ಒಂದನೆಯ ತರಗತಿಯಿಂದಲೇ ಈ ಎಲ್ಲ ಭಾಷೆಗಳ ಪರಿಚಯ.

ನಂತರ ರಾಯಚೂರಿಗೆ ಬಂದಾಗ ಸಾಹಿತ್ಯದ ಓದು ಮತ್ತು ಸಾಂಸ್ಕೃತಿಕ ಚಟುವಟಿಕೆಯ ಪ್ರಭಾವದಿಂದ ತಮ್ಮ ಹದಿಹರೆಯದ ವಯಸ್ಸಿನಲ್ಲಿಯೆ ಸದಾಶಿವ ರಾಯರು ಗೆಳೆಯರನ್ನು ಕಟ್ಟಿಕೊಂಡು ಒಂದು ಹವ್ಯಾಸಿ ನಾಟಕ ಮಂಡಳಿಯನ್ನು ಕಟ್ಟುತ್ತಾರೆ. ಆಗ ಬಾಲಗಂಗಾಧರ ತಿಲಕರ ರಾಷ್ಟ್ರೀಯ ಚಳುವಳಿಯ ಭಾಗವಾಗಿ ರೂಪಿತವಾದ ಗಣೇಶೋತ್ಸವದಲ್ಲಿ ತಿಲಕರ ಸ್ಫೂರ್ತಿಯಿಂದ ತಾವೇ "ಬಂಧ ವಿಮೋಚನೆ" ಎನ್ನುವ ನಾಟಕ ಬರೆದು ರಂಗದ ಮೇಲೆ ಪ್ರದರ್ಶಿಸಿದಾಗ ನಾಟಕಕಾರ, ನಿರ್ದೇಶಕ, ನಟ ಮತ್ತು ಸಂಘಟಕ ಈ ಎಲ್ಲ ವ್ಯಕ್ತಿತ್ವ ಹೊರಹೊಮ್ಮಿ ಮುಂದೆ ೧೯೧೬ ಯಾದಗಿರಿಯಲ್ಲಿ "ಶಿವಸುತ ಪ್ರಸಾದಿತ ನಾಟ್ಯ ಮಂಡಳಿ" ಸ್ಥಾಪಿಸುತ್ತಾರೆ.

ಯಾದಗಿರಿಯಲ್ಲಿ 'ಬಲಸಿಂಹಾತಾರ' ನಾಟಕ ರಚಿಸಿ ಪ್ರದರ್ಶಿಸಿದಾಗ ಮೊದಲ ದಿನವೇ ಮುನ್ನೂರೈವತ್ತು ರೂಪಾಯಿ ಕಲೆಕ್ಷನ್ ಆಗಿದ್ದು 'ದತ್ತಾತ್ರೇಯ ಕಂಪನಿ' ಎನ್ನುವ ವ್ಯವಸಾಯರಂಗಭೂಮಿಗೆ ಕಾರಣವಾಗುತ್ತದೆ. 'ಶರಣ ಬಸವ' ಎನ್ನುವ ಭಕ್ತಿಪ್ರಧಾನ ಮತ್ತು 'ವಿಕ್ರಮ ಶಶಿಕಲಾ'ದಂತಹ ಪೌರಾಣಿಕ ನಾಟಕಗಳನ್ನು ಪ್ರಯೋಗಿಸಿ ಗರುಡರು ತಮ್ಮ ಅಭಿನಯ ಮತ್ತು ಹಾಡುಗಾರಿಕೆಗಳ ವೃತ್ತಿ ಜೀವನದಲ್ಲಿ ಭದ್ರ ನೆಲೆಯನ್ನು ಕಂಡುಕೊಳ್ಳುತ್ತಾರೆ.

ಶಿರಹಟ್ಟಿ ವೆಂಕೋಬರಾಯರು ವೈಶಿಷ್ಟ್ಯ ವೈಭವದ ರಂಗಸಜ್ಜಿಕೆಯಿಂದ ಪ್ರೇಕ್ಷಕರನ್ನು ನಯನ ಮನೋಹರ ದೃಶ್ಯಗಳಿಂದ ಬೆರಗುಗೊಳಿಸುವದಾದರೆ, ಸದಾಶಿವರಾಯರು ಸಹಜಾಭಿನಯವೇ ನಾಟಕದ ಜೀವಾಳ ಎಂದು ನಂಬಿದವರು. ತಮ್ಮ ನಾಟಕದ ಪ್ರಮುಖ ಪಾತ್ರಧಾರಿಗಳಿಗೆ ಪ್ರಥಮವಾಗಿ ಅದನ್ನೇ ಹೇಳಿಕೊಟ್ಟು, ಆಯಾ ಪಾತ್ರದ ಸ್ಥಾಯಿಭಾವ ಮತ್ತು ಸಂಚಾರಿಭಾವದ ಯಥೋಚಿತ ಪ್ರದರ್ಶನಕ್ಕೆ ಸಿದ್ಧಗೊಳಿಸುತ್ತಿದ್ದರು. ನಟಿಸುವಾಗ ನಟ ಪ್ರೇಕ್ಷಕರ ಭಾವ ಸಮ್ಮಿಳನ ಸಾಧಿಸುವಲ್ಲಿ

ಸಫಲನಾಗಬೇಕು. ಇದನ್ನೇ "ನಾಟ್ಯಯೋಗ" ಎಂದು ಗರುಡರು ಪ್ರತಿಪಾದಿಸುತ್ತಿದ್ದರು. ನಟರಿಗೆ ಭಾವಾವೇಶ ಎಲ್ಲಿ ಎಷ್ಟು ಬರಬೇಕೆಂಬುದನ್ನೆಲ್ಲ ನಿರ್ದೇಶಿಸುತ್ತಿದ್ದರು. ಸ್ವತಃ ತಾವೇ "ಪಾದುಕ ಪಟ್ಟಾಭಿಷೇಕ" ನಾಟಕ ರಚಿಸಿ ರಾಮಚಂದ್ರನ ಪಾತ್ರ ನಿರ್ವಹಿಸಿ, ಔಚಿತ್ಯಪೂರ್ಣ ನಟನೆಯೊಂದಿಗೆ ನಿದರ್ಶಿಸುತ್ತಿದ್ದರು.

ಆಗಿನ ಕಾಲದಲ್ಲಿ ಯುವಕರೆ ಸ್ತ್ರೀ ಪಾತ್ರ ಮಾಡಬೇಕಾಗಿದ್ದರಿಂದ ಸ್ತ್ರೀ ಕಂಠದ ಮೃದುತ್ವ, ಮೋಹಕತೆ ಸಹಜವಾಗಿ ಅಭಿವ್ಯಕ್ತಿಸುವಂತೆ ಸಿದ್ಧಗೊಳಿಸುತ್ತಿದ್ದ ಗರುಡರನ್ನು ನೆನಪಿಸುತ್ತ ಅವರ ಕಂಪನಿಯಲ್ಲಿ ಬಹುಕಾಲ ಸ್ತ್ರೀ ಪಾತ್ರ ನಿರ್ವಹಿಸಿದ ಹಮ್ಮಿಗಿ ನೀಲಕಂಠಪ್ಪನವರು "ರಾಯರು ನಮ್ಮ ದನ್ಯಾಗ ಹೂಹಣ್ಣು ತುಂಬಿಸಿಟ್ಟಂಗ ಮಾತ ಅನಸತಿದ್ರು. ಒಂದ ವಾಕ್ಯ ಅಂದ ಮ್ಯಾಲೆ ಮತ್ತೊಂದು ಅನಬೇಕಾದರ ಯಾಕ ಏರಿಸಬೇಕು, ಇಲ್ಲ ಇಳಿಸಬೇಕು ಅನ್ನೋದನ್ನ ಮನಗಾಣಿಸಿ ತಯಾರ ಮಾಡತಿದ್ರು" ಇದು ಗರುಡರ ನಿರ್ದೇಶನದ ವೈಶಿಷ್ಟ್ಯ.

ಗರುಡ ಸದಾಶಿವರಾಯರು ಹೆಚ್ಚಾಗಿ ಪೌರಾಣಿಕ ನಾಟಕ ರಚಿಸಿ ಪ್ರಯೋಗಿಸಿದರೂ ಅದರಲ್ಲಿ ಪ್ರಸ್ತುತ ಸ್ವಾತಂತ್ರ್ಯ ಹೋರಾಟ, ದೇಶಭಕ್ತಿಯ ವಿಷಯಕ್ಕೆ ಹೆಚ್ಚು ಒತ್ತುಕೊಟ್ಟು ಪ್ರೇಕ್ಷಕರನ್ನು ಪ್ರಚೋದಿಸುತ್ತಿದ್ದರು. 'ಮಾತೃಬಂಧ ವಿಮೋಚನೆ'(ಕಂಸವಧೆ) 'ಚವತಿ ಚಂದ್ರ'(ಶ್ಯಮಂತಕೋಪಾಖ್ಯಾನ) 'ವಸ್ತ್ರಾಪಹರಣ'(ಮಾಯಾಬಝಾರ್) 'ಭಸ್ಮಾಸುರ ಮೋಹಿನಿ' 'ಲಂಕಾದಹನ' (ಸ್ವಜನೋದ್ಧರ) 'ಗಿರಿಜಾ ಕಲ್ಯಾಣ' 'ಶಕ್ತಿ ವಿಲಾಸ' 'ಶ್ರೀ ಕೃಷ್ಣಲೀಲಾ' 'ಪಾದುಕಾ ಪಟ್ಟಾಭಿಷೇಕ' ಇವೆಲ್ಲ ಪೌರಾಣಿಕ ನಾಟಕಗಳಾದರೂ ಆ ನಾಟಕಗಳ ಶೀರ್ಷಿಕೆಗಳೆ ಆ ಸಂದರ್ಭದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಸಂಕೇತಗಳಾಗಿವೆ ಎನ್ನುವುದು ಸ್ಪಷ್ಟವಿದೆ.

ವಿಷಮ ವಿವಾಹ, ಕಾಲಚಕ್ರ, ನಮ್ಮ ಭಾಗ್ಯೋದಯ, ಸತ್ಯ ಸಂಕಲ್ಪ, ಉಗ್ರ ಕಲ್ಯಾಣ ಮುಂತಾದ ನಾಟಕಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಿದ್ದು ಆಗಿನ ಜನ ಜೀವನದ ಮೇಲೆ ತುಂಬಾ ಪ್ರಭಾವ ಬೀರಿದ್ದನ್ನು ನಿರಾಕರಿಸಲಿಕ್ಕಾಗದು. ೧೯೩೦ರಲ್ಲಿ ಗರುಡರ ಕಂಪನಿ ಕುಂದಾಪುರದಲ್ಲಿದ್ದಾಗ ಆಗಿನ ಪ್ರಧಾನಿ ನೆಹರೂ 'ಸತ್ಯಸಂಕಲ್ಪ' ಅವರ ನಾಟಕ ನೋಡಲು ಥಿಯೇಟರ್‌ಗೆ ಬಂದು ಸ್ವಲ್ಪಹೊತ್ತು ನಾಟಕ ನೋಡಿ ಮೆಚ್ಚುಗೆ ಸೂಚಿಸಿ ಹೋದರೆಂಬುದು ಅವರ ನಾಟಕ ಮತ್ತು ನಟನಾ ವಿಶೇಷತೆಗೆ ಸಾಕ್ಷಿಯಾಗಿದೆ. ಅದೇರೀತಿ 'ಲಂಕಾದಹನ' ನಾಟಕದಲ್ಲಿ ಹನುಮಂತ ರಾವಣನ ಆಸ್ಥಾನ ಹೊಕ್ಕು ಅವನನ್ನು ಮೂದಲಿಸುವ ಹಾಡಿನಲ್ಲಿ

ಅಕ್ಕರತೆಯನುಭವಿಸತಕ್ಕ ಬುವಿಯೊಳ್ವರಾ
ಚಿಕ್ಕಚಿಕ್ಕ ದೇಶಗಳ ಕಸಿದು। ಆ ಸರ್ವರಾ
ಅಕ್ಕರತೆಯ ಮುರಿದಿಕ್ಕಿ ಪರವಶದೊಳಿಕ್ಕಿದ
ಸೊಕ್ಕಿದ ಠಕ್ಕ ಶಿಖಾಮಣೀ॥ ದಾನವನಿವ.....

ಎಂದು ಗರುಡರೆ ಬರೆದದ್ದನ್ನು ಹನುಮಂತನ ಪಾತ್ರಧಾರಿ ಆವೇಶದಿಂದ ಹಾಡಿದಾಗ ಪ್ರೇಕ್ಷಕರಿಂದ ಕರತಾಡನ, "ಭಾರತ ಮಾತಾ ಕೀ ಜಯ್" "ಮಹಾತ್ಮಾ ಗಾಂಧೀಜಿ ಕೀ ಜಯ್" ಎನ್ನುವ ಘೋಷಣ ಕೇಳಿಬರುತ್ತಿತ್ತಂತೆ. ೧೯೨೯ರಲ್ಲಿ ಇದೇ ಸನ್ನಿವೇಶ ನಡೆದಾಗ ಒಬ್ಬ ಪ್ರೇಕ್ಷಕ ರಂಗಮಂದಿರದೊಳಗೆ ನುಗ್ಗಿ, ರಾವಣ ಪಾತ್ರಧಾರಿ ಗರುಡರಿಗೆ ತನ್ನ ತಲೆಯ ಮೇಲಿನ ಟೋಪಿ ಹಾಕಿ ಆಂಜನೇಯ ಪಾತ್ರಧಾರಿಯ ಪಾದಕ್ಕೆ ನಮಸ್ಕರಿಸಿದ್ದನಂತೆ. ಇದು ಸದಾಶಿವರಾಯರು ಹೇಗೆ ಪೌರಾಣಿಕ ನಾಟಕದಲ್ಲಿಯೂ ದೇಶಭಕ್ತಿಯನ್ನು ಪರಿಣಾಮಕಾರಿಯಾಗಿ ಅಳವಡಿಸುತ್ತಿದ್ದರೆನ್ನುವುದಕ್ಕೆ ನಿದರ್ಶನ.

ಗರುಡರು ಜಾತ್ಯಾತೀತ ಮನೋಭಾವದ ವ್ಯಕ್ತಿಯಾಗಿದ್ದರು. ಅವರು ಕೇವಲ ಹಿಂದೂ ಪುರಾಣವಷ್ಟೇಯಲ್ಲ ಕ್ರೈಸ್ತ ಪುರಾಣ ಪುರುಷ ಯೇಸು ಕ್ರಿಸ್ತನನ್ನು ಕುರಿತು ನಾಟಕ ರಚಿಸಿ ಅದರ ವೇಷಭೂಷಣ ರಂಗಪರಿಕರ ಸಿದ್ಧಪಡಿಸಿ ಮಂಗಳೂರಿನಲ್ಲಿ ಪ್ರಯೋಗಿಸಬೇಕೆಂದಾಗ ವಿರೋಧ ವ್ಯಕ್ತವಾಗಿ ದೊಡ್ಡ ಹಾನಿಯನ್ನು ಅನುಭವಿಸುವ ಪ್ರಸಂಗ ನಡೆದ ಪ್ರಸ್ತಾಪ ಅವರ ಚರಿತ್ರೆಯಲ್ಲಿದೆ. ಆಗಲೇನೇ ಅವರು ಅಸ್ಪೃಶ್ಯತೆಗೆ ಪ್ರಬಲ ವಿರೋಧವಾಗಿದ್ದರು. ಅದನ್ನು ಜನರಲ್ಲಿ ತಿಳಿಸಿ ಹೇಳಿ ಜಾಗೃತಿ ಮೂಡಿಸಲಿಕ್ಕಾಗಿಯೇ ೧೯೩೩ರಲ್ಲಿ ಶ್ರೀಮದುತ್ತರಾದಿಮಠ ಸತ್ಯಧ್ಯಾನ ತೀರ್ಥ ಪೂಜ್ಯಂಗಳವರ ಸಂದರ್ಶನದಿಂದ ಸ್ಫೂರ್ತಿಗೊಂಡು 'ನಮ್ಮ ಭಾಗ್ಯೋದಯ' ನಾಟಕ ಬರೆದರು. ಆಗ ಅದರ ಬಗ್ಗೆ ಜನರ ಹೆಚ್ಚಿನ ಗಮನ ಹರಿಯಲಾರದ್ದರಿಂದ ಆ ನಾಟಕವನ್ನು ಸ್ವಾತಂತ್ರ್ಯಾನಂತರ ಮರುಮುದ್ರಣಗೊಳಿಸುವ ಸಂದರ್ಭದಲ್ಲಿ ತಾವೇ ಮುನ್ನುಡಿ ಬರೆದ ಗರುಡರು "ಪ್ರಭಾವಿ ನಟರು ನಮ್ಮ ಉದ್ದೇಶವನ್ನು ಅರಿತುಕೊಂಡು ಲಕ್ಷಣವಾಗಿ ಕಲಾಪೂರ್ಣವಾಗಿ ತಕ್ಕ ಭಾವಯುಕ್ತವಾಗಿ ಈ ನಾಟಕವನ್ನು ಅಭಿನಯಿಸಿದರೆ ನಮ್ಮ ಭಾರತ "ಭಾಗ್ಯೋದಯ"ವಾದದ್ದು ಭದ್ರವಾಗಿ ನಿಲ್ಲುವದು ಎಂದು ಬರೆದಿದ್ದಾರೆ. ಆದರೆ ಇದರಲ್ಲಿ ದಿನಾಂಕ ಉಲ್ಲೇಖಿಸದಿರುವದರಿಂದ ಯಾವ ಸಂದರ್ಭ ಎನ್ನುವದು ಸ್ಪಷ್ಟವಾಗುವುದಿಲ್ಲ. ಆದರೆ ಆನಾಟಕದಲ್ಲಿ ಪುಟ ಸಂ. ೫೦ರಲ್ಲಿಯ ಫಕೀರನ ಮಾತು, "ಏಏ! ವಡೆಯರೆ, ಕೊಂದು ತಿನ್ನುವದು ಪಾಪವು ಹೇಗಾದೀತ್ರೀ? ಅದು ಪಾಪವಾಗಿದ್ರೇ, ಯಜ್ಞಾ ಮಾಡೊರು ಕುರಿಗಳನ್ನು ಕೊಂದು ತಿಂದಾರ್ರೇ?" ಎನ್ನುವುದನ್ನು ಇಂದು ಹೇಳಲಿಕ್ಕೆ ಹಿಂದುಮುಂದೆನೋಡುವಂಥದನ್ನು ಅಂದೇ ಹೇಳಿಸಿದ್ದನ್ನು ಗಮನಿಸಿದರೆ ಗರುಡರ ಪ್ರಗತಿಪರ ವಿಚಾರಧಾರೆ ನಾಟಕದಲ್ಲಿ ಆಗಲೇ ಎಷ್ಟು ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿದೆ ಎನ್ನುವುದನ್ನು ಕಾಣುತ್ತೇವೆ. ಅದಕ್ಕಾಗಿಯೆ ಅವರನ್ನು ಶಿವರಾಮ ಕಾರಂತ, ಟಿ.ಪಿ. ಕೈಲಾಸಂ, ಶ್ರೀರಂಗ, ಹುಯಿಲಗೋಳ ನಾರಾಯಣರಾಯರು, ಮುದವೀಡಕರ ಕೃಷ್ಣರಾಯರಂಥ ದಿಗ್ಗಜರು ಮೆಚ್ಚಿದ್ದಾರೆ. ತಿಲಕ ನೆಹರೂರಂಥವರು ಅವರ ನಾಟಕ ನೋಡಿ ಪ್ರಶಂಸಿಸಿದ್ದಾರೆ. ಇಂಥವರ ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ.

## ವಿದ್ಯೆಯ ನಿಧಿ ಕಲ್ಲಿನಾಥಶಾಸ್ತ್ರಿ

ಗರುಡರ ನಂತರ ನಮಗೆ ನಾಟಕ ರಚನೆಯಲ್ಲಿ ಗಮನ ಸೆಳೆಯುವ ಜಿಲ್ಲೆಯ ಮಹಾನ್ ಚೇತನ. ಯಲಬುರ್ಗಿ ತಾಲೂಕಿನ ದ್ಯಾಂಪುರದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು.. ಭರ್ತೃಹರಿಯ ವೈರಾಗ್ಯಜೀವನದ ಘಟನೆಗಳನ್ನಾಧರಿಸಿದ "ಪ್ರಪಂಚ ಪರೀಕ್ಷೆ" ನಾಟಕದಲ್ಲಿ ಶಾಸ್ತ್ರಿಗಳು ಪರಿಣಾಮಕಾರಿ ಪಾತ್ರರಚನೆ, ಕುತೂಹಲ ಮೂಡಿಸುವ ದೃಶ್ಯ ಸಂಯೋಜನೆ ಮತ್ತು ಜ್ಞಾನಬೋಧಕ ಸಂಭಾಷಣೆಯಿಂದ ಪ್ರೇಕ್ಷಕರನ್ನು ಬೇರೆ ಜಗತ್ತಿಗೆ ಕೊಂಡೊಯ್ಯುವಂತೆ ಮಾಡುವಂತಿದ್ದದ್ದರಿಂದ ಹಳ್ಳಿಹಳ್ಳಿಗಳಲ್ಲಿ ಸಾಕಷ್ಟು ಪ್ರಯೋಗ ಕಂಡಿದೆ. ಹಾಗೆಯೆ "ಸತ್ಯಸಂಧ ಹರಿಶ್ಚಂದ್ರ" "ವೈರಾಗ್ಯವಿಜಯ" "ಅನಸೂಯ" "ಅನ್ನದಾನ ಮಹತ್ವ" "ಸಾವಿತ್ರಿ" "ರುಕ್ಮಾಂಗದ" ಮುಂತಾದ ಮಹತ್ವದ ನಾಟಕಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಪುರಾಣ ಪ್ರವಚನಕಾರರಾಗಿದ್ದ ಕಲ್ಲಿನಾಥ ಶಾಸ್ತ್ರಿಗಳು ಬರೆದ ದೃಶ್ಯಕಾವ್ಯದಂತಿರುವ ಭಾಮಿನಿ ಷಟ್ಪದಿಯಲ್ಲಿರುವ ಶ್ರೀಶರಣ ಬಸವೇಶ್ವರ ಪುರಾಣ ಈ ಭಾಗದಲ್ಲಿ ಮನೆಮನೆಯ ಪಠಣ ಗ್ರಂಥವಾಗಿದೆ ಇಂಥ ಅನೇಕ ಪುರಾಣಗಳನ್ನು ರಚಿಸಿದ ಕಲ್ಲಿನಾಥಶಾಸ್ತ್ರಿಗಳು ೧೯೬೫ ಡಿಸೆಂಬರ್ ೯ರಂದು ಸೋಮವಾರ ತಮ್ಮ ೭೨ನೆಯ ವಯಸ್ಸಿನಲ್ಲಿ ಸ್ನಾನ ಪೂಜೆ ತೀರಿಸಿ ಹಾಲು ಕುಡಿದು ಯಾರೂ ಎಬ್ಬಿಸಬೇಡಿರೆಂದು ಮಲಗಿದವರು ತಮ್ಮ ನಾಟಕದ ಅಂಕದ ಪರದೆ ಎಳೆದುಕೊಂಡರೆಂಬುದು ಅವರ ಮೇರು ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

## 'ಭಾರತವೀರ' ಕಾವ್ಯಾನಂದ

ಕಲ್ಲಿನಾಥ ಶಾಸ್ತ್ರಿಗಳ ಮಗನಾದ 'ಕನ್ನಡಕ್ಕೊಬ್ಬನೇ ಕಾವ್ಯಾನಂದ' ಎಂದು ಹೆಸರಾದ ಡಾ. ಸಿದ್ಧಯ್ಯ ಪುರಾಣಿಕರು "ಏನಾದರೂ ಆಗು ಮೊದಲು ಮಾನವನಾಗು" ಎನ್ನುವ ಘೋಷವಾಕ್ಯವನ್ನು ಕೊಟ್ಟವರು. ಇವರು ತಂದೆಯನ್ನೂ ಮೀರಿಸಿ ಬೆಳೆದು ಸಾಹಿತ್ಯದ ಎಲ್ಲ ಪ್ರಾಕಾರದಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಇವರು ರಚಿಸಿದ 'ಆತ್ಮಾರ್ಪಣೆ' 'ಭಾರತವೀರ' 'ರಜತರೇಖೆ' ಮತ್ತು 'ಭಗ್ನನೂಪುರ"ರ ಎನ್ನುವ ನಾಲ್ಕು ನಾಟಕಗಳು ಕಲಾತ್ಮಕ ನಾಟಕಗಳ ಮೊದಲಸಾಲಿನಲ್ಲಿ ನಿಲ್ಲುತ್ತವೆ.

## ಶಿವರುದ್ರಪ್ಪ ನಿಟ್ಟಾಲಿಯವರ "ಜೀವನಯಾತ್ರೆ"

ಕೊಪ್ಪಳದಲ್ಲಿ ೧೯೨೪ರಲ್ಲಿ ಜನಿಸಿದ ಶಿವರುದ್ರಪ್ಪ ನಿಟ್ಟಾಲಿ ಆಗಿನಕಾಲದ ಉರ್ದು ಸ್ಕೂಲಿನಲ್ಲಿ ಮಾಟ್ರಿಕ್‌ವರೆಗೆ ಓದಿದರೂ ಅದನ್ನು ಪೂರ್ಣಗೊಳಿಸಲಾಗದೆ ದಲಾಲಿ ಅಂಗಡಿ ಮಾಡಿಕೊಂಡು ಗೆಳೆಯರೊಂದಿಗೆ "ಮಹೇಶ್ವರ ಸೇವಾ ನಾಟಕ ಮಂಡಳಿ" ರಚಿಸಿ ಕುಂಕುಮ ನಾಟಕದ ಪ್ರಾಕ್ಟೀಸ್ ಮಾಡುತ್ತಿದ್ದರು. ಆದರೆ ಅದೇ ಸಂದರ್ಭದಲ್ಲಿ ಏಣಗಿ ಬಾಳಪ್ಪನವರ ನಾಟಕ ಕಂಪನಿ ಕೊಪ್ಪಳಕ್ಕೆ ಬಂದು ಅದೇ ನಾಟಕವನ್ನು ಅದ್ಭುತವಾಗಿ ಪ್ರದರ್ಶಿಸಿದ್ದರಿಂದ ಇವರು ಬೇರೆ ನಾಟಕಕ್ಕೆ ಹುಡುಕಾಡಿ ಯಾವದೂ ಮನಸ್ಸಿಗೆ ಬಾರದ್ದರಿಂದ ಶಿವರುದ್ರಪ್ಪ ತಾವೇ "ಜೀವನ ಯಾತ್ರೆ" ಎನ್ನುವ ನಾಟಕ

ರಚಿಸಿ ಪ್ರಯೋಗಿಸುತ್ತಾರೆ. ೧೯೫೪ರಲ್ಲಿ ನಡೆದ ಈ ಘಟನೆಯಿಂದ ಖ್ಯಾತರಾದ ಅವರು ೧೯೭೭ರಲ್ಲಿ "ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ" ನಾಟಕ ರಚಿಸಿ ಅದರಲ್ಲಿ ಭಟ್ಟನ ಪಾತ್ರವಹಿಸಿ ಗಮನಾರ್ಹ ಅಭಿನಯ ನೀಡಿದ್ದನ್ನು ನೋಡಿದವರೆಲ್ಲ ಈಗಲೂ ನೆನೆಯುತ್ತಾರೆ. ಇವಲ್ಲದೆ 'ಪಂಕಜ' 'ಆಶಾದೀಪ' 'ಸಮಾಜಕ್ಕೆ ಸವಾಲು' 'ದೀಪೋತ್ಸವ' ಶಿವಯೊಗಿ ಸಿದ್ಧರಾಮ' ನಾಟಕಗಳನ್ನೂ ಇವರು ರಚಿಸಿದ್ದಾರೆ.

ಕಂದಗಲ್ ಹನುಮಂತರಾಯರ ಪ್ರಭಾವದಿಂದ ಅದೇ ಮಾದರಿಯ ಸಂಭಾಷಣೆಯ ಸತ್ವವನ್ನು ತಮ್ಮ ನಾಟಕದಲ್ಲಿ ನಿಟ್ಟಾಲಿಯವರು ಅಳವಡಿಸಿದ್ದರಿಂದ ಬಹಳಷ್ಟು ಪ್ರಸಿದ್ಧಿಪಡೆದು ಎಲ್ಲ ಕಂಪನಿಯವರು ಇವರ ನಾಟಕಗಳನ್ನು ಪ್ರಯೋಗಕ್ಕೆ ಪಡೆದಿರುವದನ್ನು ಗಮನಿಸಬೇಕಾಗಿದೆ.

ಶಿವರುದ್ರಪ್ಪನವರ ಜೀವನಯಾತ್ರೆಗೆ ಬದಲಾಗಿ "ಮಸಣಯಾತ್ರೆ" ನಾಟಕ ಬರೆದು ಹೆಸರಾದ ಕೊಪ್ಪಳದ ಮತ್ತೊಬ್ಬ ನಾಟಕಕಾರ ಎಸ್.ಎಮ್. ಪಾಟೀಲ,

ನಾಟಕ ಕಲಾವಿದನಾದ ಶೇಖರಗೌಡ ಮಲ್ಲನಗೌಡ ಪಾಟೀಲ ಹಲವಾರು ನಾಟಕಗಳಲ್ಲಿ ಪಾತ್ರ ಮಾಡಿದ್ದಾರೆ. ಮಾತಂಗ ಕನ್ಯೆಯಲ್ಲಿಯ ದೇವಕೇತು ಪಾತ್ರಕ್ಕೆ ಇವರು ಪ್ರಸಿದ್ಧರಾದವರು, ಸಾಕಷ್ಟು ಪೌರಾಣಿಕ ಸಾಮಾಜಿಕ ನಾಟಕಗಳಿಗೆ ಹಾರ್ಮೋನಿಯಂ ತಬಲ ಮತ್ತು ನಿರ್ದೇಶನ ನೀಡಿದ ಪಾಟೀಲರು ೨೦ ವರ್ಷಗಳ ಹಿಂದೆಯೇ ತೀರಿಕೊಂಡಿದ್ದಾರೆ.

## ಆದರ್ಶ ಪ್ರೇಮದ ಮೋಹನಚಂದ ಕಿರಣಗಿ

ಹೈ.ಕ. ಭಾಗದ ಬಹುತೇಕ ಹಳ್ಳಿಗಳಲ್ಲಿ 'ಅಣ್ಣ-ತಂಗಿ' 'ಆದರ್ಶಪ್ರೇಮ' ನಾಟಕ ಆಡದವರಿಲ್ಲ. ಇಂಥ ಪ್ರಸಿದ್ಧ ನಾಟಕ ಬರೆದ ಮೋಹನ ಚಂದ ಕಿರಣಗಿ ಮೂಲತಃ ಅವಿಭಜಿತ ಕಲಬುರಗಿ ಜಿಲ್ಲೆಯ ಜೇವರಗಿ ತಾಲೂಕಿನ ಮಳ್ಳಿಗ್ರಾಮದವರಾದರೂ ಇವರು ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು; ಈ ಎಲ್ಲ ನಾಟಕಗಳನ್ನು ರಚಿಸಿ ಪ್ರಯೋಗಿಸಿದ್ದು ಕೊಪ್ಪಳ ಜಿಲ್ಲೆಯಲ್ಲಿಯೆ. ಬಾಲ್ಯದಲ್ಲಿಯೆ ಅಭಿನಯ ಸತತಾಭ್ಯಾಸ ರೂಢಿಸಿಕೊಂಡ ಕಿರಣಗಿಯವರ ನಾಟಕಗಳ ಸಂಭಾಷಣೆಯಲ್ಲಿ ಕಂದಗಲ್ ಹನುಮಂತರಾಯರ ಛಾಪಿದೆ. ಸಾಹಿತ್ಯ ಸಮೃದ್ಧಿಯಿದೆ. ಪರಿಣಾಮಕಾರಿ ಕಥಾ ಹಂದರವಿದೆ ಹಾಗಾಗಿ ಅವರು ಬರೆದ ನಾಟಕಗಳ ಸಂಖ್ಯೆ ಹೆಚ್ಚಿಲ್ಲವಾದರೂ ಅವರ ನಾಟಕ ಪ್ರಯೋಗಿಸದ ಹಳ್ಳಿಗಳು ಮತ್ತು ಕಂಪನಿಗಳು ಕಡಿಮೆ ಅದಕ್ಕಾಗಿ ಅವರು ಮಹತ್ವದ ಕವಿ ಎನಿಸಿಕೊಂಡಿದ್ದಾರೆ. ಕೊಪ್ಪಳ ತಾಲೂಕಿನ ಹಿಟ್ನಾಳಲ್ಲಿ ಬಹುದಿನಗಳವರೆಗೆ ಶಿಕ್ಷಕರಾಗಿ ಸೇವೆ ಸಲ್ಲಿಸಿದಾಗ ಅಲ್ಲಿಯ ಮಕ್ಕಳಲ್ಲಿ ನಾಟಕಾಭಿರುಚಿ ಬೆಳೆಸುವದರಲ್ಲಿ ಪರಿಶ್ರಮಿಸಿದ್ದಾರೆ "ಜೈನಮುನಿ ಪ್ರೇಮಸಾಗರ ಮಹಾರಾಜರು" "ಜೀವದಯೆ ಜೈನ ಧರ್ಮ" ಏಕಾಂಕ ನಾಟಕ ಬರೆದು ಪ್ರಕಟಿಸಿದ್ದಾರೆ.

## ನಾಟಕದಲ್ಲಿ ಭಕ್ತಿರಸಪಾಕ ತುಂಬಿದ ಮಾಂಡ್ರೆ

ನಾಟಕರಂಗದಲ್ಲಿ ಮಾರುತೇಶ ಮಾಂಡ್ರೆಯವರ ಹೆಸರನ್ನು ಕೇಳದವರಿಲ್ಲ. ಅವರು ಅವಿಭಜಿತ ಧಾರವಾಡ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರಿನಲ್ಲಿ ೧೯೨೮ರಲ್ಲಿ ಹುಟ್ಟಿದರಾದರೂ ತಮ್ಮ ಬದುಕಿನ ಹೆಚ್ಚಿನ ಸಮಯವನ್ನೆಲ್ಲ ಕೊಪ್ಪಳ ತಾಲೂಕಿನ ಅಳವಂಡಿ ಪಕ್ಕದ ಭೈರಾಪೂರ ಗ್ರಾಮದಲ್ಲಿಯೆ ಕಳೆದರು ಎನ್ನುವ ಕಾರಣಕ್ಕಾಗಿ ಮಾಂಡ್ರೆ ಎಂದರೆ ಕೊಪ್ಪಳದವರೆ ಎನ್ನುವಷ್ಟು ಪರಿಚಿತರಾದರು ಮತ್ತು ತಮ್ಮ ಹೆಚ್ಚಿನ ನಾಟಕಗಳನ್ನು ಇಲ್ಲಿಯೆ ರಚಿಸಿದರು.

ನಿಟ್ಟಾಲಿ ಶಿವರುದ್ರಪ್ಪನವರು ಮೊದಲಿಗೆ "ಶ್ರೀ ಗವಿ ಸಿದ್ಧೇಶ್ವರ ಮಹಾತ್ಮೆ" ನಾಟಕ ಬರೆದು ಪ್ರಯೋಗಿಸಿ ಜನಮನ ಸೆಳೆದಿದ್ದರಾದರೂ ಅದನ್ನೆ ಮತ್ತೆ ಮಾಂಡ್ರೆಯವರು ತಮ್ಮ ವಿನೂತನ ಶೈಲಿಯಲ್ಲಿ ಭಕ್ತಿರಸಪೂರ್ಣವಾಗಿ ಮತ್ತು ಬೇಸರಕ್ಕೆ ಅವಕಾಶ ಕೊಡದಂತೆ ಅಷ್ಟೇ ಹಾಸ್ಯ ಸನ್ನಿವೇಶದೊಂದಿಗೆ ರಚಿಸಿದಾಗ ತುಂಬಾ ಜನಪ್ರಿಯವಾಗಿ ಆ ನಾಟಕ ನೋಡಲು ಜನ ಜಾತ್ರೆಯಂತೆ ಬರತೊಡಗಿದ್ದು ಮಾಂಡ್ರೆ ನಾಟಕದ ಮಾಂತ್ರಿಕತೆ ಎನಿಸಿತು.

೧೯೪೬ರಲ್ಲಿ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ಲಕ್ಷ್ಮೀಶನ ಜೈಮಿನಿ ಭಾರತ ಓದಿ ಪ್ರಭಾವಿತರಾಗಿ 'ಚಂದ್ರಹಾಸ' ನಾಟಕ ರಚಿಸಿದ ಮಾರುತೇಶ ಮಾಂಡ್ರೆ ಒಟ್ಟು ೧೫೦ ನಾಟಕ ರಚಿಸಿದ್ದಾರೆಂದರೆ ಅವರ ಸಾಧನೆ ಸಣ್ಣದಲ್ಲ ಆ ಎಲ್ಲ ನಾಟಕಗಳು ಹೆಚ್ಚು ಪ್ರಸಿದ್ಧಿ ಪಡೆದಿವೆ ಮತ್ತು ವೃತ್ತಿ ನಾಟಕ ಕಂಪನಿಯವರೆಲ್ಲ ಅವರ ನಾಟಕ ಪ್ರಯೋಗಿಸಿದ್ದು ವಿಶೇಷವಾಗಿದೆ. ಅವುಗಳಲ್ಲಿ ಸಾಮಾಜಿಕ, ಭಕ್ತಿರಸ ಪ್ರಧಾನ, ಪೌರಾಣಿಕ, ಐತಿಹಾಸಿಕ ಮತ್ತು ರಾಜಕೀಯ ನಾಟಕಗಳೆಲ್ಲ ಸೇರಿವೆ. 'ಕಲಬುರಗಿ ಶರಣ ಬಸವೇಶ್ವರ', 'ಮೋಳಿಗೆ ಮಾರಯ್ಯ, ಇಟಗಿ ಭೀಮಾಂಬಿಕಾ ಮಹಾತ್ಮೆ, ಹುಚ್ಚರೇಶ್ವರ ಮಹಾತ್ಮೆ, ಈ ಭಕ್ತಿರಸ ಪ್ರಧಾನ ನಾಟಕಗಳು ಹೆಚ್ಚು ಗಮನ ಸೆಳೆದಿವೆ, ಸಾಮಾಜಿಕದಲ್ಲಿ 'ಸೌಭಾಗ್ಯಲಕ್ಷ್ಮಿ', ಸ್ತ್ರೀರತ್ನ, ಗಂಡನಮನೆ, ಧರ್ಮದೇವತೆ ತುಂಬಾ ಹೆಸರು ಮಾಡಿದ ನಾಟಕಗಳು. "ಗರೀಬೀ ಹಟಾವೋ" ಇವರ ರಾಜಕೀಯ ನಾಟಕ ತುಂಬಾ ಗಮನಸೆಳೆದಿದೆ.

ಮಾಂಡ್ರೆ ನಾಟಕಕಾರರಾದಂತೆಯೆ ನಟನೆಯಲ್ಲಿಯೂ ಸೈ ಎನಿಸಿಕೊಂಡವರಾಗಿದ್ದಾರೆ. ಆದರೆ ನಟನೆಯನ್ನು ವೃತ್ತಿಯಾಗಿಸಕೊಂಡವರಲ್ಲ ಸಾಂದರ್ಭಿಕವಾಗಿ ಅನಿವಾರ್ಯ ಎನ್ನಿಸಿದಾಗ ಬಣ್ಣ ಹಚ್ಚಿ ರಂಗದಮೇಲೆ ಕಾಣಿಸಿಕೊಂಡಿದ್ದಾರೆ. ಅವರು ಶ್ರೀ ಗವಿಸಿದ್ಧೇಶ್ವರ ಮಹಾತ್ಮೆಯ ಮೀರಲಂ ಮತ್ತು ಪಾಶುಪತಾಸ್ತ್ರದ ಶ್ರೀಕೃಷ್ಣನ ಪಾತ್ರಗಳನ್ನು ಮಾಡಿ ಮೆಚ್ಚುಗೆ ಪಡೆದಿದ್ದಾರೆ ಜತೆಗೆ ಕಂಪನಿ ಕಟ್ಟಿ ಕೈಸುಟ್ಟುಕೊಂಡರಲ್ಲದೆ ಅನೇಕ ನಾಟಕಗಳ ನಿರ್ದೇಶನವನ್ನೂ ಮಾಡಿದ್ದಾರೆ. ಹೀಗಾಗಿ ಅವರನ್ನು ನಾಟಕ ಚಕ್ರವರ್ತಿ ಎಂದೇ ಗುರುತಿಸಿದ್ದಾರೆ, ಕೊನೆಗೆ ಅವರ ಸಮಾಧಿ, ತಾಯಿ ಮತ್ತು ಹೆಂಡತಿಯ ತವರೂರಾದ ಇದೇ ಕೊಪ್ಪಳ ತಾಲೂಕಿನ ಭೈರಾಪುರದಲ್ಲಿ ಆಗಿರುವದರಿಂದ ಅವರು ನಮ್ಮವರೆಂಬ ಹೆಮ್ಮೆಗೆ ಪಾತ್ರರಾಗಿದ್ದಾರೆ.

# ರಂಗಭೂಮಿಯ ಧೃವತಾರೆ ಧುತ್ತರಗಿ

ಈಗಾಗಲೇ ಹೇಳಿದಂತೆ ಕವಿ, ಕಲಾವಿದರಿಗೆ ನಿಶ್ಚಿತವಾದ ಊರು ತಾಲೂಕು ಜಿಲ್ಲೆ ಇಲ್ಲವಾದರೂ ಅವರು ಹುಟ್ಟಿದೂರು ಮತ್ತು ಬಹುಕಾಲ ನೆಲಸಿದೂರು ಕೊನೆಗೆ ಅಂತ್ಯಕಂಡ ಊರುಗಳನ್ನು ಅವರ ಊರುಗಳೆಂದು ಗುರುತಿಸಲಾಗುತ್ತದೆ. ಹಾಗಾಗಿ ಪಿ.ಬಿ. ಧುತ್ರಗಿಯವರು ಬಾಗಲಕೋಟೆ ಜಿಲ್ಲೆಯ ಸೂಳೆಬಾವಿಯಲ್ಲಿ ಹುಟ್ಟಿಬೆಳೆದರೆ ತಮ್ಮ ಕೊನೆಗಾಲದ ಬಹುತೇಕ ಸಮಯವನ್ನು ಕೊಪ್ಪಳಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ ಕಳೆದದ್ದರಿಂದ ಅವರನ್ನು ಎರಡೂ ಜಿಲ್ಲೆಯ ಜನ ಅಭಿಮಾನದಿಂದ ತಮ್ಮವರೆಂದು ಕರೆದುಕೊಳ್ಳುತ್ತಾರೆ.

ಸೂಳೇಬಾವಿಯ ಬಸನಗೌಡರು ಹಂದಿಗನೂರ ಸಿದ್ರಾಮಪ್ಪನವರ ಶ್ರೀ ವಿಶ್ವರಂಜನಿ ನಾಟ್ಯ ಸಂಘದಲ್ಲಿ ನಟರಾಗಿದ್ದವರು. ಅವರ ಪತ್ನಿ ಸಂಗಮ್ಮನವರ ಗರ್ಭದಲ್ಲಿ ದಿ.೧೫-೬-೧೯೨೯ ರಂದು ಜನಿಸಿದ ಪುಂಡಲೀಕಪ್ಪ ಬಾಲ್ಯದಲ್ಲಿಯೆ ನಾಟಕದ ಗೀಳು ಹಚ್ಚಿಕೊಂಡವರು ಅವರದು ನೇಕಾರಿಕೆ ಮನೆತನವಾದದ್ದರಿಂದ ಮನೆಯಲ್ಲಿ ತುಂಬಾ ಬಡತನ. ಆದದ್ದರಿಂದ ಹೆಚ್ಚು ಕಲಿಯಲಿಕ್ಕಾಗದೆ ೭ನೆಯ ತರಗತಿಯಲ್ಲಿ ಶಾಲೆಗೆ ಶರಣು ಹೊಡೆದು. ಮಗ್ಗದಲ್ಲಿ ಕುಳಿತರಾದರೂ ನಾಟಕದ ಆಸಕ್ತಿಯಿಂದ ಗೆಳೆಯರೆಲ್ಲ ಸೇರಿ "ರವೀಂದ್ರ ನಾಟ್ಯ ಸಂಘ" ಎನ್ನುವದನ್ನು ಕಟ್ಟಿ 'ಕುಂಕುಮ' ಹಾಗು ಕುವೆಂಪುರವರ 'ರಕ್ತಾಕ್ಷಿ' ನಾಟಕ ಆಡುವ ಮೂಲಕ ರಂಗಭೂಮಿಯ ಕೈಂಕರ್ಯ ಕೈಗೊಂಡು. ಕಂದಗಲ್ ಹನುಮಂತರಾಯ ಸಿದ್ಧನಕೊಳ್ಳದ ಸಿದ್ಧಪ್ಪಜ್ಜರ ಶಿಷ್ಯತ್ವ ವಹಿಸಿಕೊಂಡು ರಂಗಭೂಮಿಯ ಧೃವತಾರೆಯಾಗಿ ಮೆರೆದರು.

ಪುಂಡಲೀಕಪ್ಪ ಧುತ್ತರಗಿ ಎಂದರೆ ಅಷ್ಟಾಗಿ ಹೆಸರು ಗೊತ್ತಾಗದೆ "ಯಾರು?" ಎಂದು ಕೇಳಬಹುದು ಆದರೆ ಪಿ.ಬಿ. ಧುತ್ತರಗಿ ಎಂದರೆ ಸಾಕು ಕರ್ನಾಟಕದ ಜನತೆಗೆ ಬೇರೆ ಪರಿಚಯಿಸುವುದು ಬೇಕಾಗಿಲ್ಲ. ಅವರು ನಟರಾಗಿ ನಾಟಕಕಾರರಾಗಿ, ನಿರ್ದೇಶಕರಾಗಿ, ಕಂಪನಿಮಾಲಿಕರಾಗಿ ಇಡೀ ತಮ್ಮ ಸಂಪೂರ್ಣ ಬದುಕನ್ನು ನಾಟಕ ರಂಗಕ್ಕೆ ಮೀಸಲಿಟ್ಟರೂ ಕೊನೆಗೆ ಬಡತನದಲ್ಲಿಯೆ ಕಣ್ಣುಮುಚ್ಚಿದ್ದು ನಮ್ಮ ರಂಗಭೂಮಿಯ ದುರಂತ.

ಪಿ.ಬಿ. ಧುತ್ತರಗಿಯವರ ಒಂದೊಂದು ನಾಟಕಗಳೂ ಅವರ ಅನುಭವ ದ್ರವ್ಯ, ಸಾಹಿತ್ಯಸಿರಿ, ಪ್ರೇಕ್ಷಕರನ್ನು ಸಂವಹಿಸಬಲ್ಲ ಸರಳ ತಂತ್ರ, ಅಶ್ಲೀಲವಿಲ್ಲದ ಹಾಸ್ಯ, ನೀತಿಬೋಧಕ ತತ್ವಗಳಿಂದ ಕನ್ನಡ ರಂಗಭೂಮಿಯನ್ನೇ ಶ್ರೀಮಂತಗೊಳಿಸಿದವು. ಸಾಮಾಜಿಕ, ಪೌರಾಣಿಕ, ಭಕ್ತಿ ಪ್ರಧಾನ, ಐತಿಹಾಸಿಕ ಹೀಗೆ ಐವತ್ತೆರಡಕ್ಕೂ ಹೆಚ್ಚು ನಾಟಕ ರಚಿಸಿದ್ದಾರಾದರೂ ಕೆಲವೊಂದು ಲಭ್ಯವಾಗದಿರುವದು ವಿಷಾದನೀಯ. ಇವರ ಕುರಿತು ಪಿಎಚ್‌ಡಿ ಪ್ರಬಂಧವಾಗಿದೆ. ಇವರ ಹೆಸರಿನ ಟ್ರಸ್ಟ್ ಬಾಗಲಕೋಟೆಯಲ್ಲಿ ರಚಿತವಾಗಿದೆ. ಇದರಿಂದ ಧುತ್ತರಗಿ ಕುರಿತ ಕೃತಿಗಳ ಪುನರ್ಮುದ್ರಣ, ವಿಶೇಷ ಅಧ್ಯಯನ ನಡೆಯಬೇಕಿದೆ. ಅವರ ಕೊನೆಯ ಭಾಗದಲ್ಲಿ ಈ ಲೇಖನಿಗೆ ಪಿ.ಬಿ. ಧುತ್ತರಗಿಯವರ ಆತ್ಮೀಯತೆ ಒದಗಿ ನಿಕಟವಾದರೂ ಹೆಚ್ಚು ಸಮಯ ಅವರೊಂದಿಗೆ

ಕಳೆಯಲಾಗದ ಕೊರಗು ಹಾಗೆಯೆ ಉಳಿದಿದೆ. ಅವರಿಗೆ ಗುಬ್ಬಿವೀರಣ್ಣ ಪ್ರಶಸ್ತಿ ಬಂದಾಗ ಕೊಪ್ಪಳದ ಸಾಹಿತ್ಯ ಭವನದಲ್ಲಿ ದೊಡ್ಡ ಪ್ರಮಾಣದ ಸನ್ಮಾನ ಸಮಾರಂಭ ಏರ್ಪಡಿಸಿ. ಜತೆಗೆ ಪತ್ನಿ ಸರೋಜಮ್ಮನವರೊಂದಿಗೆ ಅವರನ್ನು ಗೌರವಿಸಿದ್ದು ಅವಿಸ್ಮರಣೀಯ. ಅಂದೇ ಅವರ 'ಇಲಕಲ್ ಸೀರೆ' ನಾಟಕ ಪ್ರಯೋಗಿಸಿ ಅದರಲ್ಲಿ ಪಿ.ಬಿ. ಧುತ್ತರಗಿ ಪತ್ನಿ ಸರೋಜಮ್ಮ, ಹಿರಿಯ ಕಲಾವಿದೆ ನಾಗರತ್ನಮ್ಮ, ಈ ಟಿವಿ. ವರದಿಗಾರ ಶರಣಪ್ಪ ಬಾಚಲಾಪುರ ಜತೆಗೆ ಈ ಲೇಖಕ ಪ್ರಮುಖ ಪಾತ್ರವನ್ನು ರಿಹರ್ಸಲ್ ಇಲ್ಲದೆ ನೇರವಾಗಿ ರಂಗಭೂಮಿಯಲ್ಲಿಯೆ ನಿರ್ವಹಿಸಿದ್ದು ಪವಾಡಸದೃಶ ಘಟನೆಯಾಗಿ ಉಳಿದಿದೆ. ಆದದ್ದರಿಂದ ಅವರನ್ನು ಕುರಿತು ಬರೆಯುವದು ಬಹಳವಿದೆಯಾದರೂ ಅದಕ್ಕೆ ಪ್ರತ್ಯೇಕ ಸಂದರ್ಭ ಕಾಯುತ್ತಾ ಇಲ್ಲಿ ಅವರಲ್ಲಿದ್ದ ನಾಟಕಕಾರ, ನಟ, ನಿರ್ದೇಶಕ ಮತ್ತು ಕಂಪನಿ ಮಾಲಿಕನ ವಿಶೇಷತೆ ತಿಳಿಸಲು ಒಂದೆರಡು ಪ್ರಸಂಗ ಉದಾಹರಿಸಿದರೆ ಸಾಕೆನಿಸುತ್ತದೆ.

ವರ್ಗಸಂಘರ್ಷದ ಹಿನ್ನಲೆಯಲ್ಲಿ ರಚಿತವಾಗ ಅವರ "ಸಂಪತ್ತಿಗೆ ಸವಾಲು" ನಾಟಕವನ್ನು ಪಿ. ಬಿ. ಧುತ್ತರಗಿಯವರು ದಿ.೧೨-೨-೧೯೬೪ ರಂದು ಬಸವರಾಜಪ್ಪ ಜವಳಿಮಠ ಎನ್ನುವವರ ಜತೆಸೇರಿ, ಶ್ರೀತ್ರಿಪುರಸುಂದರಿ ನಾಟ್ಯ ಸಂಘ ಸೂಳೇಬಾವಿ ಕಂಪನಿ ಕಟ್ಟಿ ಪ್ರದರ್ಶನಕ್ಕೆ ಸಿದ್ಧಪಡಿಸಿದರು; ತುಂಬಾ ಯಶಸ್ವಿಯಾಯಿತು. ಅದೇ ನಾಟಕ ಮುಂದೆ ರಾಜಕುಮಾರ್ ತೆಗೆದುಕೊಂಡು ಪದ್ಮಶ್ರೀ ಪಿಕ್ಚರ್ಸ್ ಬೆಂಗಳೂರು ಲಾಂಛನದಡಿಯಲ್ಲಿ ಏಕಕಾಲಕ್ಕೆ ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳ ದಕ್ಷಿಣ ಭಾರತದ ಈ ನಾಲ್ಕು ಭಾಷೆಯಲ್ಲಿ ಸಿನಿಮಾ ಆಗಿ ದಾಖಲೆ ನಿರ್ಮಿಸಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ.

ಅವರ ಇನ್ನೊಂದು ಯಶಸ್ವಿ ನಾಟಕ 'ತಾಯಿ ಕರುಳು' ಬರೆದು ಅದನ್ನು ಹೆಸರಾಂತ ಕಂಪನಿಯಿಂದ ಬೆಳಕಿಗೆ ತರಬೇಕೆಂದು ಧುತ್ತರಗಿಯವರು ಏಣಗಿ ಬಾಳಪ್ಪನವರ ಕಂಪನಿಗೆ ಹೋದಾಗ ಅದನ್ನು ಓದಿದ ಬಾಳಪ್ಪನವರು ಇದರಲ್ಲಿಯ 'ತಾಯಿ'ಯ ಪಾತ್ರವನ್ನು ನಿಮ್ಮ ಕಲ್ಪನೆಗೆ ತಕ್ಕಂತೆ ನಟಿಸುವ ಶಕ್ತಿಸಾಮರ್ಥ್ಯ ಯಾರಿಗಿದೆ. ನಮ್ಮ ಕಂಪನಿಯಲ್ಲಿ ಸ್ತ್ರೀ ಪಾತ್ರ ನಿರ್ವಹಿಸುತ್ತಿದ್ದ ಅನೇಕ ಪ್ರಸಿದ್ಧ ನಟರು ಬಿಟ್ಟು ಹೋಗಿದ್ದಾರೆ ಅಂದರೆ ಆಗ ಹೆಚ್ಚಾಗಿ ಪುರುಷರೆ ಸ್ತ್ರೀ ಪಾತ್ರ ನಿರ್ವಹಿಸುತ್ತಿದ್ದರು. ಅದ್ದರಿಂದ ಇದಕ್ಕೆ ಸಮರ್ಥ ಅಭಿವ್ಯಕ್ತಿ ನೀಡಬಲ್ಲ ವ್ಯಕ್ತಿಯೆಂದರೆ ಕುಕನೂರು ರೆಹಮಾನವ್ವ ನೀನು ಅವರಲ್ಲಿಗೆ ಹೋಗೆಂದು ಸಲಹೆ ನೀಡಿದ್ದರಿಂದ ಆಗ ಗಂಗಾವತಿಯಲ್ಲಿ ಕ್ಯಾಂಪ್ ಮಾಡಿದ್ದ ರೆಹಮಾನವ್ವನವರ ಶ್ರೀ ಲಲಿತಕಲಾ ನಾಟ್ಯ ಸಂಘಕ್ಕೆ ಬಂದು ಅವರನ್ನು ಕಂಡು ನಾಟಕ ಓದಿ ಹೇಳಿದಾಗ ಮೆಚ್ಚುಗೆಯಾಗಿ ಪ್ರಯೋಗಕ್ಕೆ ತೆಗೆದುಕೊಳ್ಳುತ್ತಾರೆ. ಅದು ಸಣ್ಣ ಕಂಪನಿಯಾದರೂ ರೆಹಮಾನವ್ವಳ ಆಕರ್ಷಕ ವ್ಯಕ್ತಿತ್ವ ಹಾಗು ಪ್ರಬುದ್ಧ ಅಭಿನಯದಿಂದ ಅದರಲ್ಲಿಯ ಗೌರವ್ವನ ತಾಯಿ ಪಾತ್ರಕ್ಕೆ ಜೀವತುಂಬುತ್ತಾರೆ. ಇದರಲ್ಲಿ ಆಕೆಯ ಮಕ್ಕಳೆಲ್ಲ ಅಭಿನಯಿಸುತ್ತಿದ್ದರಿಂದ ಹಿರಿಯ ಮಗ ಬಾಬಣ್ಣ ಸ್ತ್ರೀ ಪಾತ್ರ ಮಾಡುವದರಲ್ಲಿ ಹೆಸರಾಗಿದ್ದರಿಂದ ಅದರಲ್ಲಿಯ ಸೊಸೆ ಸರಸ್ವತಿಯ ಪಾತ್ರ ತೆಗೆದುಕೊಂಡರೆ, ಇನ್ನೊಬ್ಬ ಮಗಳು ಲಲಿತಾ ದಾಕ್ಷಾಯಿಣಿ ಆಗುತ್ತಾಳೆ, ಸಣ್ಣ ಮಗ

ಮುನ್ನಾ, ಶಂಕರನ ಪಾತ್ರ ಲಕ್ಷ್ಮಣ ತಾವರಗೆರೆ ಶಿವಮೂರ್ತಿ ಪಾತ್ರ, ನಾಗ ಸಮುದ್ರದ ಹನುಮಂತಪ್ಪ 'ಕಲ್ಯಾಣ ಶೆಟ್ಟಿ' ನಿರ್ದೇಶನ ಮಾಡಿದ್ದು ಎಷ್ಟು ಯಶಸ್ವಿಯಾಯಿತೆಂದರೆ ಅಲ್ಲಿಯೆ ನೂರಾರು ಪ್ರಯೋಗಕಂಡು ಕೊಪ್ಪಳ ಜಾತ್ರೆಗೆ ಈ ನಾಟಕ ಬಂದಾಗ ಸಿನಿಮಾ ಥೇಟರಿಗೆ ಪ್ರೇಕ್ಷಕರೆ ಬಾರದಂತಾಗಿ ದೊಡ್ಡ ಗಲಾಟೆಯಾಗಿಪೋಲಿಸರು ಅದನ್ನು ನಿಯಂತ್ರಿಸಬೇಕಾದ ಪ್ರಸಂಗ ಬಂದದ್ದು ಈ ಲೇಖಕನಿಗೆ ಅಚ್ಚಳಿಯದೆ ಉಳಿದ ನೆನಪಾಗಿದೆ. ಇದು ಅವರ ನಾಟಕಕಾರ, ನಟ, ನಿರ್ದೇಶನ ಎಲ್ಲ ಯಶಸ್ವಿ ಕೌಶಲ್ಯತನಕ್ಕೆ ಸಾಕ್ಷಿ ಎನ್ನಬಹುದು.

ಚಿತ್ರದುರ್ಗದ ಎಕ್ಸೈಜ್ ಖಾತೆಯ ಮೇಲಾಧಿಕಾರಿ ಟಿ. ಜಯಣ್ಣ ದೇವಿಯ ಮೇಲಿನ ಭಕ್ತಿಯಿಂದ ಧುತ್ತರಗಿಯವರನ್ನು ಕರೆಯಿಸಿ 'ದೇವಿ ಮಹಾತ್ಮೆ' ನಾಟಕ ಬರೆಯಿಸಿ ದೇವಿ ಪಾತ್ರಕ್ಕೆ ಮಾಲತಿಶ್ರೀ ಎನ್ನುವ ಕಲಾವಿದೆಗೆ ಸಂಪೂರ್ಣ ತರಬೇತುಗೊಳಿಸಿ ಪ್ರಯೋಗಿಸಿದಾಗ ರಂಗಭೂಮಿಯ ಇತಿಹಾಸದಲ್ಲಿಯೆ ಕಂಡರಿಯದ ಯಶಸ್ಸು ಲಭಿಸಿತು. ಇದರಿಂದ ಧುತ್ತರಗಿಯವರಿಗೆ ಅನೇಕ ಸನ್ಮಾನ ಲಕ್ಷಾಂತರ ಮೊತ್ತದ ಸಂಭಾವನೆ ದೊರೆತದ್ದು ಯಾವ ಕವಿಗೂ ಸಲ್ಲದ ಯಶಸ್ಸು ಎನ್ನಿಸಿದೆ.

## ನಾಟಕ ನಿರ್ಮಾಣದ ಕಾರ್ಖಾನೆ ಎಸ್.ವಿ. ಪಾಟೀಲ ಗುಂಡೂರು

ಹಿಂದಿನವರೆಲ್ಲರ ಮುಂದುವರಿಕೆಯ ಭಾಗವಾಗಿ ನಾಟಕಗಳನ್ನು ನೀರು ಕುಡುದಷ್ಟೇ ಸರಳವಾಗಿ ರಚಿಸಬಲ್ಲ ಜಿಲ್ಲೆಯ ಪ್ರಸ್ತುತ ನಾಟಕಕಾರ ಎಸ್.ವಿ. ಪಾಟೀಲ ಗುಂಡೂರು. ಗಂಗಾವತಿ ತಾಲೂಕಿನ ಚಿಕ್ಕಹಳ್ಳಿ ಗುಂಡೂರಿನಲ್ಲಿ ೧೯೬೦ ರಲ್ಲಿ ತಂದೆ ವಿರೂಪಾಕ್ಷ ಗೌಡ ತಾಯಿ ಕರಿವೀರಮ್ಮನವರ ಗರ್ಭದಲ್ಲಿ ಜನಿಸಿದ ಇವರು ತಮ್ಮ ೧೩ನೆಯ ವಯಸ್ಸಿನಲ್ಲಿಯೆ 'ಬಾಳನೌಕೆ' ಎನ್ನುವ ನಾಟಕ ಬರೆದು ಅದನ್ನು ನಿರ್ದೇಶಿಸಿ ತಾಲೂಕು ಮತ್ತು ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಪಡೆದರೆಂಬುದು ಇವರ ಹೆಗ್ಗಳಿಕೆಯಾಗಿದೆ.

ಅರಳು ಹುರಿದಂತೆ ಮಾತನಾಡುವ ಎಸ್.ವಿ. ಪಾಟೀಲ ನಾಟಕ ರಚನೆಯಲ್ಲಿಯೂ ಅಷ್ಟೇ ಫಾಸ್ಟ್ ಹಾಗಾಗಿ ಈಗಾಗಲೇ ಪೂರ್ಣ ಪ್ರಮಾಣದ ೩೧೧ ಕೃತಿಗಳನ್ನು ರಚಿಸಿದ್ದಾರೆಂದರೆ, ಇವರು ಕಾರ್ಖಾನೆಯಂತೆ ಕೆಲಸ ಮಾಡುತ್ತಾರೆನ್ನುವದರಲ್ಲಿ ಸಂಶಯವಿಲ್ಲ.

'ಶರಣೆ ಆಯ್ದಕ್ಕಿ ಲಕ್ಕಮ್ಮ' 'ಗುಡದೂರು ದೊಡ್ಡ ಬಸವೇಶ್ವರ ಮಹಾತ್ಮೆ' 'ಶ್ರೀಕನಕಗಿರಿ ವೈಭವ' 'ಮೋಳಿಗಮಾರಯ್ಯ' 'ಮಹಾ ಮಹಿಮ ಗವಿಸಿದ್ಧೇಶ್ವರ' 'ಶರಣೆ ಅಕ್ಕಮಹಾದೇವಿ' ಇವು ಪಾಟೀಲರ ಭಕ್ತಿ ಪ್ರಧಾನ ಮತ್ತು ಐತಿಹಾಸಿಕ ನಾಟಕಗಳು, 'ತೂಗತದ ನೋಡ ಜೋಕಾಲಿ' 'ಅಧಿಕಾರಕ್ಕೆ ಸವಾಲ್' 'ಸಿಂಹಸ್ವಪ್ನ' ' ಮಮತೆಮತ್ಸರ' ಮುಂತಾದವು ಸಾಮಾಜಿಕ ನಾಟಕಗಳು, ಆಕಾಶವಾಣಿ ದೂರದರ್ಶನಗಳಲ್ಲಿಯೂ ಇವರ ನಾಟಕಗಳು ಪ್ರಸಾರವಾಗಿವೆ. 'ಲಿಂಗನಾಯಕನಹಳ್ಳಿ ಶ್ರೀ ಚನ್ನವೀರ ಶಿವಯೋಗಿ' ಅನೇಕ ಜನರಿಂದ ಮೆಚ್ಚುಗೆ ಪಡೆದ ಇವರ ನಾಟಕವಾಗಿದೆ.

ಕುವೆಂಪು, ಶಿವರಾಮಕಾರಂತ, ಬಿ.ವಿ. ಕಾರಂತ, ಜಿ.ಎಸ್ಸೆಸ್ ಹಾಗು ಸಿಜಿಕೆ ಮುಂತಾದ ಹಿರಿಯ ಸಾಹಿತಿಗಳಿಂದ ಶಹಬ್ಬಾಸ್‌ಗಿರಿ ಗಿಟ್ಟಿಸಿಕೊಂಡ ಹಿರಿಮೆ ಪಾಟೀಲರಿಗಿದೆ, ಪುಟ್ಟರಾಜಗವಾಯಿಗಳು ೧೬ ವರ್ಷಗಳ ಹಿಂದೆಯೆ 'ಇಂತಹ ಕವಿ ಹುಟ್ಟಿದ್ದು ಧನ್ಯ' ಎನ್ನುವ ಪ್ರಶಂಸೆಯ ನುಡಿಗಳನ್ನಾಡಿದ್ದರಂತೆ, ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮಿಗಳು ಇವರ ನಾಟಕಗಳನ್ನು ಓದಿಸಿ ಕೇಳಿ ಸಂತಸ ಪಟ್ಟಿದ್ದಾರೆ.

ನಾಟಕದ ರಚನೆ, ನಿರ್ದೇಶನ, ನಟನೆ ಹೀಗೆ ಎಲ್ಲ ಮಗ್ಗುಲುಗಳನ್ನೂ ಪ್ರವೇಶಿಸಿ ಪರಿಣತಿ ಸಾಧಿಸಿದ ಪಾಟೀಲರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ನಾಡಿನ ಬೇರೆ ಬೇರೆ ಸಂಘಟನೆಗಳಿಂದ ಪ್ರಶಸ್ತಿ, ಸನ್ಮಾನಗಳು ದೊರೆತಿವೆ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು. ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಕಳೆದ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಒಟ್ಟಾರೆ ನಾಟಕವೆಂದರೆ ಜಿಲ್ಲೆಯಲ್ಲಿ ಪಾಟೀಲರ ಹೆಸರು ಪ್ರಥಮವಾಗಿ ಬರುತ್ತದೆ.

## ನಡೆದಾಡುವ ನಾಟಕ ಮಂಡಳಿ ಶಿವರುದ್ರಪ್ಪ ಶಾಸ್ತ್ರಿ

ಪಾಟೀಲರಂತೆ ಅವರಿಗಿಂತಲೂ ಮುಂಚಿತವಾಗಿ ನಾಟಕ ರಚನೆ, ನಿರ್ದೇಶನ ನಟನೆಯಲ್ಲಿ ಹೆಸರು ಮಾಡಿದವರೆಂದರೆ ಗಂಗಾವತಿಯ ಯು.ಆರ್. ಶಿವರುದ್ರಪ್ಪ ಶಾಸ್ತ್ರಿಗಳು ಇವರನ್ನು, ನಡೆದಾಡುವ ನಾಟಕ ಮಂಡಳಿಯೆಂದೆ ಗುರುತಿಸಲಾಗಿದೆ ಎಸ್. ಎಸ್. ಎಲ್.ಸಿ ವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿ ಸಂಪೂರ್ಣ ನಾಟಕರಂಗಕ್ಕೆ ತಮ್ಮನ್ನು ಅರ್ಪಿಸಿಕೊಂಡ ಶಾಸ್ತ್ರಿಗಳು ಆರಂಭದಲ್ಲಿ ಅಭಿನಯ ನಂತರ ನಾಟಕ ರಚನೆ ಮೂಲಕ ವೃತ್ತಿರಂಗಭೂಮಿಯಲ್ಲಿ ನಾಟಕ ಕಂಪನಿಗಳಲ್ಲಿ ದುಡಿಯುತ್ತ ತಮ್ಮ ೭೨ ವಯಸ್ಸು ಕಳೆದ ಅವರು ಹೇಳುವುದು "ನನ್ನ ಎಪ್ಪತ್ತೆರಡು ವಯಸ್ಸಿನಲ್ಲಿ ೭೨ ಗಂಟೆಯೂ ಸುಖ ಪಡಲಿಲ್ಲ" ಎನ್ನುವುದು.

ಇಪ್ಪತ್ತು ವೃತ್ತಿ ನಾಟಕಗಳನ್ನು ರಚಿಸಿದ ಶಾಸ್ತ್ರಿಗಳ 'ಹಣದರಾಣಿ' 'ಎಂ. ಎಲ್.ಎ' ಪ್ರಕಟವಾಗಿವೆ. ಹದಿನೈದು ಕಂಪನಿಗಳಲ್ಲಿ ನಾಯಕ, ಖಳನಾಯಕ ಹೀಗೆ ಎಲ್ಲಾ ವಿಧದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಮಾಸ್ಟರ್ ಹಿರಣ್ಣಯ್ಯನವರು ಒಮ್ಮೆ ಇವರೊಂದಿಗೆ ಕೂಡಿದಾಗ ಭುಜದ ಮೇಲೆ ಕೈಯಿಟ್ಟು "ನೀನು ಓದುವವನಾಗುವುದಿಲ್ಲ, ಬರೆಯುವವನಾಗುತ್ತಿ" ಎಂದಿದ್ದರಂತೆ 'ಗೌಡ್ರಗದ್ಲ' 'ಮಲಮಗಳು' 'ಮಂತ್ರಾಲಯ ಮಹಾತ್ಮೆ' 'ಶರಣ ಬಸವೇಶ್ವರ' ನಾಟಕಗಳಲ್ಲಿ ಇವರು ಮನೋಜ್ಞ ಅಭಿನಯ ನೀಡಿದ್ದಾರೆ. ಪ್ರಸ್ತುತ ಗಂಗಾವತಿಯಲ್ಲಿ ಪುರಾಣ ಹೇಳುತ್ತ ಪ್ರಶಾಂತ ಜೀವನ ಕಳೆಯುತ್ತಿದ್ದಾರೆ.

## ಅನಾಯಾಸ ರಂಗಭೂಮಿಗೆ ಧುಮುಕಿದ ವೆಂಕಟೇಶ ಕಟ್ಟಿಮನಿ

ಮೂಲತಃ ಕೊಪ್ಪಳದ ಪಾಸಪ್ಪ ಕಟ್ಟಿಮನಿ ಮತ್ತು ಭೀಮಮ್ಮ ಇವರ ಹೊಟ್ಟೆಯಲ್ಲಿ ದಿ.೧೫-೬-೧೯೪೦ ರಂದು ಹುಟ್ಟಿದ ವೆಂಕಟೇಶ ಕಟ್ಟಿಮನಿ ನಾಟಕ ರಂಗಕ್ಕೆ

ಧುಮುಕಿದ್ದೆ ಒಂದು ರೋಚಕ ಸಂಗತಿಯಾಗಿದೆ. ಕಿರಾಣಿ ವರ್ತಕರಮನೆತನದವರಾದ ಇವರು ೮ನೆಯ ತರಗತಿ ಓದುತ್ತಿದ್ದಾಗ ಕೊಪ್ಪಳ ಜಾತ್ರೆಗೆ ಬಂದಿದ್ದ ನಾಟಕ ಕಂಪನಿಗಳ ರಿಹರ್ಸಲ್ ನೋಡುತ್ತ ಅದಕ್ಕೆ ಆಕರ್ಷಿತನಾಗಿದ್ದರಿಂದ ಒಮ್ಮೆ ಯಾವನೋ ಕಲಾವಿದ ಇಲ್ಲವಾದದ್ದಕ್ಕಾಗಿ ಅನಿವಾರ್ಯವಾಗಿ ಕಟ್ಟಿಮನಿ ಆ ಪಾತ್ರ ನಿರ್ವಹಿಸಿ ಯಶಸ್ವಿಗೊಳಿಸಿದ್ದೆ ಮುಂದೆ ಆ ರಂಗದಲ್ಲಿ ಸಂಪೂರ್ಣ ಯಶಸ್ಸು ಸಾಧಿಸುವಂತಾಯಿತು.

೧೯೫೪-೫೫ರ ಸುಮಾರಿಗೆ ಗಂಗಾವತಿಗೆ ಬಂದು ನೆಲಸಿದ ವೆಂಕಟೇಶ ಕಟ್ಟಿಮನಿ ಅಲ್ಲಿಯ ಕಲಾಸಕ್ತರನ್ನು ಸೇರಿಸಿಕೊಂಡು "ಬಣ್ಣದ ಬಳಗ"ವನ್ನು ಕಟ್ಟುತ್ತಾರೆ. ಇದನ್ನು ಡಾ.ಎಚ್.ಕೆ. ರಾಮರಾವರವರು ಉದ್ಘಾಟಿಸಿದ್ದು ಗಮನಾರ್ಹ. 'ಖೋಟಾನೋಟು' 'ಭೂಮಿಗಿಳಿದ ಭೂಪ' 'ಹಸಿರು ಕ್ರಾಂತಿ' ನಾಟಕಗಳನ್ನು ರಚಿಸಿ ಅವುಗಳಲ್ಲಿ ನಾಯಕನ ಪಾತ್ರಗಳನ್ನು ನಿರ್ವಹಿಸಿ ಪ್ರಶಂಸೆ ಪಡೆದರಲ್ಲದೆ. ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ ನಾಟಕಕ್ಕೆ ಹಾಡು ಬರೆದು ಅದರಲ್ಲಿ ಮೀರ ಆಲಂನ ಪಾತ್ರದಿಂದ ರಂಗಾಸಕ್ತರ ಮನಸೂರೆಗೊಂಡಿದ್ದಾರೆ.

ಕಟ್ಟಿಮನಿಯವರು ಬರೆದ 'ಗಂಡುಗಲಿ ಕುಮಾರರಾಮ' ನಾಟಕವನ್ನು ಮೊದಲಿಗೆ ರಚಿಸಿದ್ದು ಸಾಕಷ್ಟು ಕಡೆಗಳಲ್ಲಿ ಯಶಸ್ವಿ ಪ್ರಯೋಗದ ಮೂಲಕ ಹೆಸರುಗಳಿಸಿದೆ. ಇವರ ಜೀವನಯಾತ್ರೆಯ ಅಂಕದ ಪರದೆ ಜಾರಿದ್ದು ದಿ.೯-೧೧-೧೯೮೭ ರಂದು. ಇಂಥ ಅನೇಕ ಮಹನೀಯರಿಂದ ಜಿಲ್ಲೆಯ ರಂಗಮಾಹಿತಿ ಸಮೃದ್ಧವಾಗಿದೆ.

## ನಾಟಕಗಳನ್ನೇ ಉಸಿರಾಡಿದ ಕುಲಕರ್ಣಿ

ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿಯೆ ತಮ್ಮ ಬಹುತೇಕ ಬದುಕನ್ನು ಕಳೆದು ಇಲ್ಲಿಯೆ ಕೊನೆಯುಸಿರೆಳೆದ ಎನ್.ಪಿ. ಕುಲಕರ್ಣಿ ಮೂಲತ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲುಕಿನ ಶಿವಣಗಿ ಗ್ರಾಮದಲ್ಲಿ ದಿ.೧೯-೭-೧೯೩೧ ರಲ್ಲಿ ಜನಿಸಿದವರೆನ್ನುವದು ಬಹಳಷ್ಟು ಜನರಿಗೆ ಗೊತ್ತಿಲ್ಲದ ಸಂಗತಿ; ೪೮ ವರ್ಷಗಳ ಹಿಂದೆ ಶಿಕ್ಷಕರಾಗಿ ಇಲ್ಲಿಗೆ ಆಗಮಿಸಿದ ನಾರಾಯಣ ಪಾಂಡುರಂಗ ಕುಲಕರ್ಣಿ ಎನ್.ಪಿ. ಕುಲಕರ್ಣಿಯೆಂದೇ ರಂಗಭುಮಿಯಲ್ಲಿ ಖ್ಯಾತರಾದವರು.

ಕಾಲೇಜಿನ ದಿನಗಳಲ್ಲಿಯೆ ನಾಟಕದ ಗೀಳನ್ನು ಹಚ್ಚಿಸಿಕೊಂಡ ಕುಲಕರ್ಣಿಯವರು ಆಗಲೇ ಇಪ್ಪತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದರು. ಹಾಗು ಅನೇಕ ನಾಟಕಗಳನ್ನು ನಿರ್ದೇಶಿಸಿದ್ದರು. ಏಣಗಿ ಬಾಳಪ್ಪ, ಪರ್ವತವಾಣಿ, ಎಸ್.ಕೆ. ಕರೀಂಖಾನ್, ದಾಶರಥಿ, ಕೆ. ಗುಂಡಪ್ಪ. ಶ್ರೀರಂಗ ಮುಂತಾದ ಪ್ರಸಿದ್ಧ ನಾಟಕಕಾರರ ನಾಟಕಗಳಲ್ಲಿ ನಟಿಸಿ, ನಿರ್ದೇಶಿಸಿ ಜನಮನ್ನಣೆಗೆ ಪಾತ್ರರಾದವರು.

ಇವರು ಅಭಿನಯಿಸಿದ ಮತ್ತು ನಿರ್ದೇಶಿಸಿದ ನಾಟಕಗಳೆಂದರೆ ಕುಂಕುಮ, ಬಹದ್ದೂರಗಂಡು, ಅಳಿಯದೇವರು, ಪ್ರಪಂಚ ಪಾಣಿಪತ್ತು, ವಿಮರ್ಶಕ ವೈದ್ಯ, ಬಾಯಿ ಬಂಡಾಯ, ಮನೆಯಲ್ಲೇ ಮ್ಯಾಟ್ನಿ, ನೆಚ್ಚಿದೆಮ್ಮಿ ಕ್ವಾಣ ಈಯ್ತು, ಸಂಗಣ್ಣನ ಸಂತಾಪ ಸೂಚಕ ಸಭೆ ಮುಂತಾದವುಗಳು. ಶ್ರೀರಂಗ, ರಾಘವೇಂದ್ರ ಇಟಗಿ,

ಯಮುನಾ ಮೂರ್ತಿ, ಎಂ.ಎಸ್.ವಾನಮನ, ಜಿ.ಎಂ.. ಶಿರಹಟ್ಟಿ, ರಮಾ ಹಿರೇಮಠ. ಪ್ರಭಾಶಿರೂರಂಥವರು ಕುಲಕರ್ಣಿಯವರ ನಾಟಕಗಳನ್ನು ನಿರ್ದೇಶಿಸಿದ್ದಾರೆಂದರೆ ಅವರ ನಾಟಕದ ಗುಣಮಟ್ಟ ಎಂಥದೆನ್ನುವದನ್ನು ತಿಳಿಯಬಹುದು.

ಮೂವತ್ತೊಂದಕ್ಕೂ ಹೆಚ್ಚು ನಾಟಕಗಳನ್ನು ರಚಿಸಿರುವ ಎನ್.ಪಿಯವರ ಹೆಚ್ಚಿನ ನಾಟಕಗಳು ಆಕಾಶವಾಣಿಗಾಗಿಯೆ ಬರೆದವುಗಳಾಗಿವೆ. ಇವರ "ನೆಚ್ಚಿದೆಮ್ಮಿ ಕ್ವಾಣಾ ಈಯ್ತು" ನಾಟಕ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದರೆ, 'ಬುದ್ಧಿವಂತರ ನ್ಯಾಯ' ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿದೆ. ವರದಕ್ಷಿಣೆ, ವಯೋವೃದ್ಧರ ಸಮಸ್ಯೆ, ವೇಶ್ಯಾಸಮಸ್ಯೆ, ಪಾನಪ್ರತಿಬಂಧ ಮುಂತಾದ ರಾಷ್ಟ್ರೀಯ ಜ್ವಲಂತ ಸಮಸ್ಯೆಗಳ ಮೇಲೆ ಇವರ ನಾಟಕಗಳು ಬೆಳಕು ಚೆಲ್ಲುತ್ತವೆ.

ಕುಲಕರ್ಣಿಯವರು ತಾವೊಂದೇ ಅಲ್ಲ ತಮ್ಮ ಇಡೀ ಕುಟುಂಬವನ್ನೆ ನಾಟಕರಂಗದಲ್ಲಿ ತೊಡಗಿಸಿದವರು. ಪತ್ನಿ ಶಕುಂತಲಾ ಇವರ ಸೇವೆಗೆ ಸಹಕಾರ ನೀಡುವದಲ್ಲದೆ ಉತ್ತಮ ಗಾಯಕಿಯಾಗಿ ಹಿನ್ನೆಲೆ ಹಾಡುಗಳನ್ನು ಹಾಡಿದ್ದಾರೆ. ಹಿರಿಯ ಮಗ ಸುಧೀಂದ್ರ ರಂಗಭೂಮಿಯ ಡಿಪ್ಲೋಮಾ ಪಡೆದಿದ್ದಾರೆ. ಸೊಸೆ ವಸುಂಧರಾ ಸಹಿತ ರಂಗಕಲಾವಿದೆ. ಕಿರುತೆರೆಯ ಧಾರವಾಹಿಗಳಲ್ಲಿಯೂ ಪಾತ್ರ ವಹಿಸಿದ್ದಾರೆ ಸುಧೀಂದ್ರರ ಮಗಳು ಅಂದರೆ ಎನ್.ಪಿ ಮೊಮ್ಮಗಳು ಪೂರ್ವಿ 'ಸಂಭ್ರಮ' ಚಲನಚಿತ್ರದಲ್ಲಿ ನಟಿಸಿದ್ದಾಳೆ. ಸುಧೀಂದ್ರರ ಮತ್ತೊಬ್ಬ ಮಗ ಸಮರ್ಥ ಬಾಲನಟನಾಗಿ ಗುರುತಿಸಿಕೊಂಡಿದ್ದಾನೆ. ಎನ್.ಪಿಯವರ ಎರಡನೆಯ ಮಗ ವೆಂಕಟೇಶ ಹಾಗು ಸೊಸೆ ಗೀತಾ ಕೃಷಿ ಪದವೀಧರರಾಗಿದ್ದರೂ ನಾಟಕ ರಚನೆ, ಅಭಿನಯದಲ್ಲಿ ಒಲವುಳ್ಳವರಾಗಿ ರಾಷ್ಟ್ರೀಯ ಅಂತರ್ರಾಷ್ಟ್ರೀಯ ಅನೇಕ ಪ್ರಶಸ್ತಿ ಪಡೆದಿದ್ದಾರೆ. ಇಂಥ ಕುಟುಂಬಗಳು ಅಪರೂಪ.

## ಹವ್ಯಾಸಿ ರಂಗಭೂಮಿಯ ಉತ್ತುಂಗದಲ್ಲಿ ಸೂರ್ಯಕಾಂತ ಗುಣಕಿಮಠ

೧೯೪೪ ರಲ್ಲಿ ವಿಜಾಪುರದಲ್ಲಿ ಸೂರ್ಯಕಾಂತ ಗುಣಕಿಮಠರು ಹುಟ್ಟಿ ಪ್ರಸ್ತುತ ಬೆಂಗಳೂರಲ್ಲಿ ನೆಲಸಿದ್ದರೂ ಅವರಿಗೆ ಸೇತುವೆಯಾಗಿ ಕೊಪ್ಪಳವೇ ಅವರಲ್ಲಿದ್ದ ಎಲ್ಲ ರಂಗ ಪ್ರತಿಭೆಯನ್ನು ಹೊರಹಾಕಿ ಬೆಳೆಯಲು ಕಾರಣವಾಗಿದ್ದರಿಂದ ಅವರನ್ನು ಕೊಪ್ಪಳದವರೆಂದೇ ಗುರುತಿಸಲಾಗುತ್ತಿದೆ.

ಎಂಎಸ್‌ಸಿ ಪದವೀಧರರಾಗಿ ಉಪನ್ಯಾಸಕ ವೃತ್ತಿಯನ್ನು ಅವಲಂಬಿಸಿ ಕೊಪ್ಪಳ, ದೇವದುರ್ಗ, ಚನ್ನಪಟ್ಟಣ ಮುಂತಾದೆಡೆ ಸೇವೆಸಲ್ಲಿಸಿ ಕೊನೆಗೆ ಬೆಂಗಳೂರಲ್ಲಿ ಪಿಯು. ಡಿಡಿಪಿಐ ಆಗಿ ನಿವೃತ್ತಿ ಹೊಂದಿದರೂ ನಾಟಕದ ಗೀಳನ್ನು ಬಿಡದೆ. ಪ್ರಸ್ತುತ ಬೆಂಗಳೂರು ಸಮುದಾಯದ ಉಪಾಧ್ಯಕ್ಷರಾಗಿ ಎಡೆಬಿಡದೆ ರಂಗ ಚಟುವಟಿಕೆಯಲ್ಲಿ ತೊಡಗಿರುವ ಗುಣಕಿಮಠರು ಕಲಾತ್ಮಕ ನಾಟಕಗಳ ನಟರಾಗಿ, ನಿರ್ದೇಶಕರಾಗಿ, ನಾಟಕಕಾರರಾಗಿ ರಂಗಭೂಮಿಗೆ ನೀಡಿದ ಸೇವೆ ದೊಡ್ಡದಾಗಿದೆ.

ಬಾಲ್ಯದಿಂದಲೇ ರಂಗಾಸಕ್ತಿಯನ್ನು ಬೆಳಸಿಕೊಂಡಿದ್ದ ಸೂರ್ಯಕಾಂತ ಗುಣಕಿಮಠ ೧೯೭೭ ರಲ್ಲಿ ಕೊಪ್ಪಳ ಮೂಲದ ಅನ್ನದಾನಿ ಹಿರೇಮಠ ನಿರ್ದೇಶಿಸಿದ ನಾಟಕದಲ್ಲಿ 'ಸಾಕ್ರೇಟಿಸ್' ಪಾತ್ರ ನಿರ್ವಹಿಸಿ ಮೆಚ್ಚುಗೆ ಪಡೆದು ೧೯೭೮ರಲ್ಲಿ ತಾವೇ ಬರೆದು ನಿರ್ದೇಶಿಸಿದ ಅಸಂಗತ ನಾಟಕ 'ರಾಜ ಲೂಡಕ್ರಸ್' ಬೆಂಗಳೂರಿನ ರವಿಂದ್ರ ಕಲಾಕ್ಷೇತ್ರದಲ್ಲಿ ಪ್ರಯೋಗಿಸಿ ಉತ್ತಮ ನಟನೆಗಾಗಿ ವೈಯಕ್ತಿಕ ಪ್ರಶಸ್ತಿ ಪಡೆದರು. ಈ ನಾಟಕ ಕೊಪ್ಪಳ ಹುಬ್ಬಳ್ಳಿ ಮುಂತಾದೆಡೆ ಪ್ರದರ್ಶನಗೊಂಡು ಪ್ರಶಂಸೆಗೆ ಪಾತ್ರವಾಯಿತು.

೧೯೮೧ ರಲ್ಲಿ ಚಂದ್ರಶೇಖರ ಕಂಬಾರರ ಅಸಂಗತ ನಾಟಕ 'ಚಾಳೇಶ' ಪ್ರಗತಿ ಕಲಾವೇದಿಕೆಯ ಮೂಲಕ ಸೂರ್ಯಕಾಂತರೆ ಅದಕ್ಕೆ ಹಾಡುಗಳನ್ನು ರಚಿಸಿ ಸ್ವರ ಸಂಯೋಜಿಸಿ, ನಿರ್ದೇಶಿಸಿ ಕೊಪ್ಪಳ ಗದಗಗಳಲ್ಲಿ ಪ್ರದರ್ಶನಗೊಳ್ಳುವಂತೆ ಮಾಡಿದರು. ೧೯೮೫ ರಲ್ಲಿ ಚನ್ನಪಟ್ಟಣದ ಕಲಾತಂಡ ಪ್ರದರ್ಶಿಸಿದ 'ಬಹದ್ದೂರ ಗಂಡು' ಪರ್ವತವಾಣಿಯವರ ನಾಟಕ ನಿರ್ದೇಶಿಸಿ ಅದರಲ್ಲಿ ಪಾತ್ರವಹಿಸಿದರು. ಹಾಗೆಯೆ ಅದೇ ತಂಡ ಕಂಬಾರರ 'ಹರಕೆಯ ಕುರಿ' ನಾಟಕ ಪ್ರದರ್ಶಿಸಿದಾಗ ಅದರ ನಿರ್ದೇಶನ ಮಾಡಿದ್ದರು.

ಮೈಸೂರಿನ ಅಮರಕಲಾವಿದರ ಸಂಘ ೧೯೮೮ರಲ್ಲಿ ಬಿ.ವಿ.ಕಾರಂತರ ನೇತೃತ್ವದಲ್ಲಿ ನಾಟಕ ಅಕಾಡೆಮಿ 'ಕಿಂಗ್ಲೀಯರ್' ನಾಟಕ ಪ್ರಯೋಗಿಸಿದಾಗ ಅದರಲ್ಲಿ ಗುಣಕಿಮಠ ಮಾರ್ಖಿನ ಪಾತ್ರ ವಹಿಸಿದ್ದರು ಮತ್ತು ರಾಯಚೂರ ಜಿಲ್ಲೆಯ ದೇವದುರ್ಗದ ಶಾಲಾ ಮಕ್ಕಳಿಗೆ ಕುವೆಂಪು ವಿರಚಿತ 'ಜಲಗಾರ' ನಾಟಕ ನಿರ್ದೇಶಿಸಿದರು.

೨೦೦೨ರಲ್ಲಿ ಕನ್ನಡ ಜನಪ್ರಿಯ ನಾಟಕಗಳನ್ನು ಹಿಂದಿಗೆ ಮತ್ತು ಹಿಂದಿ ನಾಟಕಗಳನ್ನು ಕನ್ನಡದಲ್ಲಿ ಪ್ರಯೋಗಿಸಲು 'ದಕ್ಷಿಣಿ' ಥಿಯೇಟರ್ ಗ್ರೂಪನ್ನು ಹುಟ್ಟು ಹಾಕಲಾಯಿತು. ಇದರ ಕಲಾ ನಿದೇಶಕರು ಆರ್. ನಾಗೇಶ್ ಆಗಿದ್ದಾರೆ. ಸೂರ್ಯಕಾಂತ ಗುಣಕಿಮಠ ಅಧ್ಯಕ್ಷರಾಗಿ ಮತ್ತು ಬೆನಕಕಿಟ್ಟಿ ಖಜಾಂಚಿಯಾಗಿ ಸೇವೆ ಸಲ್ಲಿಸಿದರು. ಆಗ ಟಿ.ಎನ್.ಸೀತಾರಾಮ್ ಮನ್ ಹೀ ಮನ್ ದಲ್ಲಾ ನಾಚೆ ಎನ್ನುವ ಹಿಂದಿ ನಾಟಕವನ್ನು 'ನಮ್ಮೊಳಗೊಬ್ಬ ನಾಜೂಕಯ್ಯ' ಹಾಗು ಕಾರ್ನಾಡರ ತಲೆದಂಡ ನಾಟಕ ಹಿಂದಿಗೆ 'ರಕ್ತಕಲ್ಯಾಣ'ವಾಗಿ ಭಾಷಾಂತರಿಸಿ ಅಭಿನಯಿಸಿದಾಗ ಅವುಗಳಲ್ಲಿ ಗುಣಕಿಮಠ ಪ್ರಮುಖ ಪಾತ್ರ ವಹಿಸಿದ್ದರು.

ಹಾಗೆಯೆ 'ಹುಲಿಸೀರೆ' 'ಸ್ವಾತಂತ್ರ್ಯದ ಓಟ' ಶ್ರೀರಂಗರ 'ಹುಟ್ಟಿದ್ದು ಹೊಲೆಯೂರ' ಮುಂತಾದ ಮಹತ್ವದ ನಾಟಕಗಳಲ್ಲಿ ಅಭಿನಯಿಸಿದ ಹೆಗ್ಗಳಿಕೆ ಗುಣಕಿಮಠರದು. ಇವರಿಂದ ಅನುವಾದಿತವಾದ "ಬಂದಿಖಾನೆಯಲ್ಲಿ ಬಾಪು" ನಾಟಕವನ್ನು ೨೦೧೧ರಲ್ಲಿ ಬೆಂಗಳೂರು ಮಹಾನಗರ ಸಾರಿಗೆಯ ಸಾಂಸ್ಕೃತಿಕ ತಂಡ ಅಭಿನಯಿಸಿದೆ.

ಗುಣಕಿಮಠರ ವಿಶೇಷ ಗಮನಸೆಳೆದ 'ಕೂಗ ಕೇಳುವವರಿಲ್ಲ' ರಂಗರೂಪಾಂತರ ಏಕವ್ಯಕ್ತಿ ಪ್ರದರ್ಶನ ಈವರೆಗೆ ರಾಜ್ಯದ ಬೇರೆ ಬೇರೆಕಡೆ ಹನ್ನೊಂದು ಪ್ರದರ್ಶನ ಕಂಡಿದೆ. ವಿಜಯಪುರದ ಅಭಿರಂಗ ತಂಡದ 'ಧರಣಿ ಮಂಡಲ ಮಧ್ಯದೊಳಗೆ' ನಾಟಕ

ನಿರ್ದೇಶಿಸಿ ಅಭಿನಯಿಸಿದ್ದಾರೆ. ಪ್ರಸ್ತುತ ಜಂಬಣ್ಣ ಅಮರಚಿಂತರ ಕಾದಂಬರಿ ಆಧಾರಿತ ನಾಟಕ 'ವರಾಹ ಪುರಾಣ'ದಲ್ಲಿ ಕುರುಮಯ್ಯನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಇಷ್ಟು ಸಾಧನೆ ಮಾಡಿದರೂ ಸೂರ್ಯಕಾಂತ ಗುಣಕಿಮಠ ಎಂದೂ ಪ್ರಶಸ್ತಿ ಸನ್ಮಾನಗಳ ಬೆನ್ನು ಹತ್ತಿ ಹೋದವರಲ್ಲ. ಇಂಥವರನ್ನುಗುರುತಿಸಿ ಗೌರವಿಸುವ ಅಗತ್ಯವಿದೆ ಇವರ ಪತ್ನಿ ಮೀರಾ ಅವರೂ ಸಹಿತ ಚಾಳೇಶ ನಾಟಕದಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಅವರೂ ಉಪನ್ಯಾಸಕಿಯಾಗಿ ಕೊನೆಗೆ ಪಿಯು ಡಿಡಿಪಿಐ ಆಗಿ ನಿವೃತ್ತಿಯಾಗಿದ್ದಾರೆ. ಇದು ಅಪರೂಪದ ಜೋಡಿ.

## ಸ್ತ್ರೀ ಪಾತ್ರದ ಶಿವಲಿಂಗಶಾಸ್ತ್ರಿ

೭೪ ವಯಸ್ಸಿನ ಶಿವಲಿಂಗ ಶಾಸ್ತ್ರಿಗಳು ಮೂಲತಃ ಯಲಬುರ್ಗಿ ತಾಲೂಕಿನ ಮಂಗಳೂರಿನವರಾದರೂ ವಿಜಯನಗರದ ಪತನದ ನಂತರ ಇವರ ಮನೆತನದವರು ಅದೇ ಯಲಬುರ್ಗಿ ತಾಲೂಕಿನ ಸಂಕನೂರಿಗೆ ಬಂದು ನೆಲಸಿದ್ದರಿಂದ ಇವರ ಹೆಸರಿನೊಂದಿಗೆ ಸಂಕನೂರು ಸೇರಿದೆ. ಏಳನೆಯ ತರಗತಿ ಓದುತ್ತಿರುವಾಗಲೇ ಪಕ್ಕದ ಬೇವೂರಿಗೆ ಬಂದಿದ್ದ ಮೃಡದೇವಗವಾಯಿಗಳ ಕಂಪನಿಯಲ್ಲಿ ಬಾಲ ಪರುಶುರಾಮನ ಪಾತ್ರ  ಮಾಡುವ ಮೂಲಕ ರಂಗ ಪ್ರವೇಶ ಮಾಡಿದರು.

ಮಹಾ ಕೂಟೇಶ್ವರ ಕಂಪನಿ. ಸಂಗಮೇಶ್ವರ ಕಂಪನಿ, ನಾಕೋಡ, ಓಟಳೇಶ್ವರ, ಗೋಕಾಕ, ಅಪ್ಪುರಾಜ, ಮೈಸೂರು, ಸೂಡಿ, ಬೆಳವಣಿಕೆ, ಗುಡಗೇರಿ, ಆಶಾಪೂರ ಮುಂತಾದವರ ಕಂಪನಿಗಳಲ್ಲೆಲ್ಲ ಲೆಕ್ಕವಿಲ್ಲದಷ್ಟು ಪಾತ್ರಗಳನ್ನು ಮಾಡಿ ಕೊನೆಗೆ ೧೯೭೪ರಲ್ಲಿ ತಾವೇ ಶಿವಲಿಂಗೇಶ್ವರ ನಾಟ್ಯ ಸಂಘವನ್ನು ಮಾಡಿ ಅನೇಕ ನಾಟಕ ಪ್ರದರ್ಶಿಸಿದ್ದಾರೆ.

ಶಿವಲಿಂಗ ಶಾಸ್ತ್ರಿಗಳು ಕ್ಷಣಾರ್ಧದಲ್ಲಿ ಸ್ತ್ರೀವೇಷಧರಿಸಿ ಬಂದರೆ ಯಾರೂ ಗುರುತಿಸುತ್ತಿರಲಿಲ್ಲ. ಅವರ ಸ್ತ್ರೀ ಪಾತ್ರಕ್ಕೆ ಸಾಕಷ್ಟು ಜನ ಮೋಹಿತರಾಗಿದ್ದುಂಟು, ಅಲ್ಲದೆ ನಾಯಕನಾಗಿ, ಖಳನಾಯಕನಾಗಿ ಹಾಸ್ಯ ಪಾತ್ರಧಾರಿಯಾಗಿ ಎಲ್ಲ ಬಗೆಯ ಪಾತ್ರ ನಿರ್ವಹಿಸಿದ್ದಾರೆ. ಅಷ್ಟೇಯಲ್ಲ ಹಾರ್ಮೋನಿಯಂ ವಾದಕರಾಗಿ, ಹಾಡುಗಾರರಾಗಿ ಹೆಸರು ಮಾಡಿದ್ದಾರೆ, ಇವರು ಬರೆದ 'ಹಾಳ್ಕೆರೆ ಅನ್ನದಾನೇಶ' ನಾಟಕ ಮುದ್ರಣಗೊಂಡು ಸಾಕಷ್ಟು ಪ್ರಯೋಗ ಕಂಡಿದೆ. ಹಾಗೆಯೆ ಶ್ರೀ ಹಾನಗಲ್ ಕುಮಾರೇಶ, ಶರಣದಸರಯ್ಯ, ಸಂಗೊಳ್ಳಿರಾಯಣ್ಣ ನಾಟಕಗಳನ್ನೂ ಬರೆದು ಪ್ರಯೋಗಿಸಿದ್ದಾರೆ. ಹೀಗೆ ನಾಟಕಕಾರ, ನಟ, ನಿರ್ದೇಶಕರಾಗಿ ಕಲಾಪ್ರಾವೀಣ್ಯತೆ ಮೆರೆದ ಶಾಸ್ತ್ರಿಗಳು ಹಾಸ್ಯರತ್ನ, ಅಭಿನಯರತ್ನ, ಬಸವತತ್ವ ರತ್ನಾಕರ ಮುಂತಾದ ಬಿರುದಿಗೆ ಪಾತ್ರರಾಗಿದ್ದಾರೆ.

## ರಂಗಕರ್ಮಿ ಹಾಲ್ಕುರಿಕೆ ಶಿವಶಂಕರ

ಕನ್ನಡ ರಂಗಭೂಮಿಯಲ್ಲಿ ವಿನೂತನ ಮಾದರಿಯನ್ನು ಪ್ರಯೋಗಕ್ಕೆ ಒಳಪಡಿಸುವ ಮೂಲಕ ಅದನ್ನು ವೈಜ್ಞಾನಿಕ ನೆಲೆಯಲ್ಲಿ ನಿರೂಪಿಸುವ ಕೈಂಕರ್ಯ ತೊಟ್ಟಿರುವ ಹಾಲ್ಕುರಿಕೆ ಶಿವಶಂಕರ ತುಮಕೂರ ಜಿಲ್ಲೆಯ ತಿಪಟೂರ ತಾಲೂಕಿನ ಹಾಲ್ಕುರಿಕೆಯಲ್ಲಿ ದಿ.೧೬-೬-೧೯೭೩ ರಂದು ಹುಟ್ಟಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ನಂತರ ತಮ್ಮ ಆಸಕ್ತಿಯ ನೀನಾಸಂ ರಂಗ ಶಿಕ್ಷಣದಿಂದ ೭೫ಕ್ಕೂ ಹೆಚ್ಚು ನಾಟಕ ನಿರ್ದೇಶಿಸಿ ೧೫೦ ಅಭಿನಯರಂಗ ಶಿಬಿರ ಮತ್ತು ರಂಗರೂಪಕ ವಿಚಾರ ಸಂಕಿರಣಗಳನ್ನು ನಡೆಸಿ ಹಾಲ್ಕುರಿಕೆ ಥಿಯೇಟರ್ ಮೂಲಕ ನೂರಾರು ಪ್ರತಿಭಾವಂತ ನಟ ನಟಿಯರನ್ನು ಸಿದ್ಧಗೊಳಿಸಿದ್ದಾರೆ. 'ಹಾಲ್ಕುರಿಕೆ ಥಿಯೇಟರ್ ಮಿರರ್' ಎನ್ನುವ ಪತ್ರಿಕೆಯ ಸಂಪಾದಕರು, ಪ್ರಕಾಶಕರೂ ಆಗಿ ಆ ಮುಖಾಂತರ ಹೊಸ ಹೊಸ ರಂಗ ಪ್ರಯೋಗದ ಪರಿಕಲ್ಪನೆಯ ಹರಿಕಾರರಾಗಿದ್ದಾರೆ.

ಬೆಂಗಳೂರಿನಂಥ ರಾಜಧಾನಿಯಲ್ಲಿ ಅನಾಯಾಸ ದೊರೆಯಬಹುದಾದ ಖ್ಯಾತಿ, ಜನಪ್ರಿಯತೆ, ಜೀವನಶೈಲಿ, ಸಂಪರ್ಕಗಳನ್ನೆಲ್ಲ ಕಡಿದುಕೊಂಡು ಶಿವಶಂಕರ ತಮ್ಮ ಕಲಾವಿದೆ ಪತ್ನಿ ಶೀಲಾರೊಂದಿಗೆ ಮೊದಲು ಬಂದು ನೆಲೆಸಿದ್ದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗುಡ್ಡಗಾಡುಗಳ ಮಧ್ಯೆ ಇರುವ ಚಿಕ್ಕಹಳ್ಳಿ ಯಡಹಳ್ಳಿಯಲ್ಲಿ ಅಲ್ಲಿಯ ಅಂಗನವಾಡಿ ಕೇಂದ್ರವನ್ನೇ ವಾಸಸ್ಥಳವಾಗಿಸಿಕೊಂಡು ರಂಗ ಚಟುವಟಿಕೆಗೆ ಬೇಕಾಗುವ ಯಾವುದೇ ಸೌಕರ್ಯ, ಸವಲತ್ತು ಇಲ್ಲದಿದ್ದರೂ ಗ್ರಾಮವನ್ನೆ ರಂಗಸ್ಥಳವಾಗಿ ಪರಿವರ್ತಿಸಿ. ಅಲ್ಲಿಯ ಮಕ್ಕಳಿಗೆ ಬೆಳಗಿನ ಜಾವ ಎಬ್ಬಿಸಿ ಗುಡ್ಡಕ್ಕೆ ಕರೆದುಕೊಂಡು ಹೋಗಿ ಅ ಆ ಇ ಈ ಜತೆ ಎ ಬಿ ಸಿ ಡಿಯೊಂದಿಗೆ ರಂಗಕಲೆಯಲ್ಲಿ ತರಬೇತುಗೊಳಿಸುವ ಕೆಲಸ ಮಾಡಿದ್ದು ಸಣ್ಣ ಸಾಧನೆಯಲ್ಲ. ಯಡಹಳ್ಳಿ ಗ್ರಾಮದ ಜನರನ್ನೆಲ್ಲ ಜಾಗೃತಗೊಳಿಸಿ ಯುವಕರಿಗೆ ಸಂಜೆ ನಾಟಕದ ತಾಲೀಮು ಮಾಡಿಸುತ್ತ ಅಲ್ಲಿಯ ಕೆರೆಯ ಪಕ್ಕದಲ್ಲಿ ರಂಗ ಚಟುವಟಿಕೆಗೆ ಬೇಕಾದ ಶೆಡ್ ನಿರ್ಮಿಸಲು ಮುಂದಾದಾಗ ಊರಿನ ಹಿರಿಯರು, ಯುವಕರು, ಮಕ್ಕಳು ಸೇರಿ ನಾಮುಂದು ತಾಮುಂದು ಎನ್ನುತ್ತ ಬಲ್ಲೀಸು ತಪ್ಪಲು ಮರಮುಟ್ಟು ಜೋಡಿಸಿ ೧೦೦*೮೦ ಅಳತೆಯ ರಂಗ ಮಂದಿರದ ಶೆಡ್ ನಿರ್ಮಿಸಿದ್ದು ಜಿಲ್ಲೆಯಲ್ಲಿಯೆ ಅಪರೂಪವಾದದ್ದು.

ಇದರಲ್ಲಿ ಥಿಯೇಟರ್ ಲ್ಯಾಬ್‌ಗೆ ಬರುವ ಶಿಬಿರಾರ್ಥಿಗಳಿಗೆ, ನಟ, ನಟಿಯರಿಗೆ, ಸಂದರ್ಶಕರಿಗೆ ಊರಲ್ಲಿಯೆ ದವಸಧಾನ್ಯ ಸಂಗ್ರಹಿಸಿ ಊಟದ ವ್ಯವಸ್ಥೆಯನ್ನು ಮಾಡಲಾಯಿತು. ಹೀಗೆ ಹೆಸರೇ ಕೇಳಿರದ ಯಢಹಳ್ಳಿ ಗ್ರಾಮವನ್ನು ರಾಜ್ಯಕ್ಕೆ ಪರಿಚಯಿಸಿದವರು, ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಅನಕ್ಷರಸ್ಥರನ್ನು ಒಂದೆಡೆ ಸೇರಿಸಿ ದ್ವಿತೀಯ ಪಿಯುಸಿ ಪಠ್ಯವಾಗಿದ್ದ ಸಿದ್ಧಲಿಂಗಯ್ಯನವರ 'ಏಕಲವ್ಯ' ಮತ್ತು ಕಂಬಾರರ ಬೆಪ್ಪುತಕ್ಕಡಿ ಬೋಳೆಶಂಕರ ನಾಟಕಗಳನ್ನು ರಂಗ ಪ್ರಯೋಗಕ್ಕೆ ಸಿದ್ಧಗೊಳಿಸಿ "ಕಾಲೇಜು ರಂಗ ಪಯಣ" ಎನ್ನುವ ಪರಿಕಲ್ಪನೆಯಲ್ಲಿ ಹಲವಾರು ಜಿಲ್ಲೆಗಳಲ್ಲಿ ಪ್ರದರ್ಶಿಸಿ ಮೆಚ್ಚುಗೆ ಪಡೆದದ್ದು ದಾಖಲಾರ್ಹ.

ಶಿವಶಂಕರ ಒಬ್ಬ ಅದ್ಭುತ ರಂಗಶಿಲ್ಪಿ. ಕಲ್ಲಿನಲ್ಲಿ ಸುಂದರವಾದ ಮೂರ್ತಿಯನ್ನು ಶಿಲ್ಪಿ ನಿರ್ಮಿಸಿದಂತೆ ಏನೂ ಅರಿಯದ ಅನಕ್ಷರಸ್ತರನ್ನು ತನ್ನ ರಂಗ ಮಾಂತ್ರಿಕ ಶಕ್ತಿಯಿಂದ ಅದ್ಭುತ ನಟರನ್ನಾಗಿ ರೂಪಿಸುವುದು ಎಲ್ಲರಿಗೂ ಸಾಧ್ಯವಾದಂತದಲ್ಲ.

ದೇವದಾಸಿಯ ಮಕ್ಕಳನ್ನೆ ತೆಗೆದುಕೊಂಡು ವಾಸ್ತವ ಘಟನೆಗಳೊಂದಿಗೆ ತಾವೇ ರಚಿಸಿದ 'ಚಿಗುರದ ಬಣ್ಣಗಳು' ನಾಟಕವನ್ನು ದಿ.೨೪-೧೦-೨೦೧೪ ರಂದು ಕೊಪ್ಪಳ ಸಾಹಿತ್ಯ ಭವನದಲ್ಲಿ ಪ್ರದರ್ಶಿಸಿದ್ದು ರಂಗಾಸಕ್ತರಿಗೆ ಹೊಸದಿಕ್ಕಿನಲ್ಲಿ ಆಲೋಚಿಸುವಂತೆ ಮಾಡಿತು. ಶಿವಶಂಕರ ಅಭಿನಯರಂಗವನ್ನೇ ಕೇಂದ್ರವಾಗಿಸಿಕೊಂಡು ಬದುಕಿನ ವಾಸ್ತವಗಳನ್ನು ಮೂರ್ತ ಮತ್ತು ಅಮೂರ್ತ ನೆಲೆಯಲ್ಲಿ ಉದ್ದೀಪನಗೊಳಿಸಿ ಪ್ರೇಕ್ಷಕರ ಬೌದ್ಧಿಕತೆಯನ್ನು ಆಕ್ರಮಿಸುತ್ತಾರೆ. ಅವರ ಹಾಲ್ಕುರಿಕೆ ಥಿಯೇಟರ್‌ನ ಸಿದ್ಧಾಂತ 'ಶೂನ್ಯ ಪರಿಕಲ್ಪನೆಯ ಆಧುನಿಕ ಅಭಿನಯ' ರಂಗ ಜಗತ್ತಿನ ಎಲ್ಲ ಆಯಾಮಗಳನ್ನೂ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅದನ್ನು ಹೊಸರೂಪದೊಂದಿಗೆ ಮಾರ್ಪಡಿಸಿ ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಶಿವಶಂಕರ ಯಶಸ್ವಿಯಾಗಿದ್ದಾರೆ. ಅನೇಕ ನಾಟಕಗಳನ್ನು ರಚಿಸಿ ನಿರ್ದೇಶಿಸಿ ಹಾಗೆಯೆ ನಟಿಸಿ ತಮ್ಮ ಇಡೀ ಬದುಕನ್ನು ರಂಗಕಲೆಗೆ ಅರ್ಪಿಸಿಕೊಂಡು ನಿರಂತರ ಶ್ರಮಿಸುತ್ತಿದ್ದಾರೆ.

ಯಡಹಳ್ಳಿಯಿಂದ ಪ್ರಸ್ತುತ ಕೊಪ್ಪಳ ತಾಲೂಕಿನ ಬೂದಗುಂಪಿಯಲ್ಲಿ ವಾಸವಾಗಿ ಇದೀಗ ಕೊಪ್ಪಳ ಹತ್ತಿರದ ಭಾಗ್ಯನಗರದಲ್ಲಿ ನೆಲಸಿದ ಹಾಲ್ಕುರಿಕೆ ಶಿವಶಂಕರ ಕುಟುಂಬ ಕೊಪ್ಪಳ ಜಿಲ್ಲೆಯ ರಂಗಪರಂಪರೆಗೆ ಉನ್ನತಮಟ್ಟದ ಹೊಳಪು ನೀಡಿ ರಾಜ್ಯಾದ್ಯಂತ ಪರಿಚಯಿಸುವಲ್ಲಿ ಪರಿಶ್ರಮಿಸುತ್ತಿರುವುದು ಹೆಮ್ಮೆಯ ಸಂಗತಿ.

## ಹಾಲ್ಕುರಿಕೆಯವರ ಪ್ರಕಟಿತ ಕೃತಿಗಳು

'ಆ ಬಿಳಿಹೂವುಗಳು', 'ಆ ಕನಸಿನ ಬಣ್ಣಗಳು', 'ಕೋರೆಗಾಂವ' ಮತ್ತು ಚಿಗುರದ ಬಣ್ಣಗಳು ಇವೆಲ್ಲ ನಾಟಕಗಳಾದರೆ. ರಂಗಮುಸೂರು ಇದು ರಂಗಸಾಹಿತ್ಯ, ಇನ್ನಿತರ ರಂಗ ರೂಪಗಳು ಮತ್ತು ಕೃತಿಗಳು, ಮಹಾತ್ಮರ ಪ್ರತಿಮೆ, ಮುಟ್ಟು, ಚಿಗುರದ ಕವಲುಗಳು, ನಿಯಂತ್ರಣ, ಸ್ವಾತಂತ್ರ್ಯ ಅಂದರೆ ಏನು?, ನಾವೇಕೆ ಹಿಂಗಿದ್ದೀವಿ, ಮಣಿಕಂಠ ಮುಂತಾದವು.

ಶಿವಶಂಕರ ನಿರ್ದೇಶಿಸಿದ ಟಿಪ್ಪು ಸುಲ್ತಾನ, ಸಿಂಹಾಸನ ಖಾಲಿಯಿದೆ, ಕೃಷ್ಣೇಗೌಡರ ಆನೆ, ಕೋರೆಗಾಂವ, ಚಿಗುರದ ಬಣ್ಣಗಳು, ನಾಟಕಗಳು ಪ್ರೇಕ್ಷಕರ ಗಮನ ಸೆಳೆದು ಹೊಸ ಚಿಂತನೆಗೆ ತೊಡಗಿಸುವಂತೆ ಮಾಡಿದವು.

## ಪ್ರತಿಭಾವಂತ ಕಲಾವಿದ ಬಸವರಾಜ ಬಿನ್ನಾಳ

ಯಲಬುರ್ಗಿ ತಾಲುಕಿನಲ್ಲಿ ನಾಟಕಕಾರರು, ನಟರು, ನಾಟಕ ಕಂಪನಿ ಹಾಗು ಕಲಾವಿದರಿರುವಷ್ಟು ಬಹುಶಃ ಬೇರಾವ ತಾಲೂಕಿನಲ್ಲಿಯೂ ಇರಲಾರರೆನ್ನಿಸುತ್ತದೆ. ಅದಕ್ಕೆಂದೆ ಡಾ. ಮಲ್ಲಿಕಾರ್ಜುನ ಕುಂಬಾರ ಇಲ್ಲಿಯ ನಾಟಕರಂಗ ಕುರಿತಂತೆಯೆ

ಪಿಎಚ್‌ಡಿ ಮಹಾಪ್ರಬಂಧ ರಚಿಸಿದ್ದಾರೆ. ಇಲ್ಲಿಯ ಹಳ್ಳಿಗಳಲ್ಲಿ ನಾಟಕಕಾರ ಅಥವಾ ಕಲಾವಿದ ಒಬ್ಬರಾದರೂ ಇದ್ದೇ ಇರುತ್ತಾರೆ. ಮಂಡಲಗಿರಿಯಲ್ಲಿ ಒಂದು ರಂಗ ಮಂದಿರವನ್ನೇ ನಿರ್ಮಿಸಿದ್ದಾರೆ. ಇಲ್ಲಿಯ ಕಂಪನಿಯೊಂದು ಈಗಲೂ ನಡೆಯುತ್ತದೆ. ದಿ. ದೇವೇಂದ್ರಪ್ಪ ಮಾಸ್ತರ ತುಂಬಾ ಪ್ರಸಿದ್ಧರಾಗಿ ಎಲ್ಲ ಕಡೆ ನಾಟಕ ನಿರ್ದೇಶನ, ಸಂಗೀತ ಮಾಡುತ್ತಲೇ ಜೀವನ ಕಳೆದು ಕಣ್ಣುಮುಚ್ಚಿದರು.

ಅದರಂತೆ ಇಲ್ಲಿಯ ಇನ್ನೂ ೪೨ರ ತರುಣ ಬಸವರಾಜ ಬಿನ್ನಾಳ ತನ್ನ ೨೧ನೆಯ ವಯಸ್ಸಿನಲ್ಲಿಯೆ ೧೯೮೯ ರಲ್ಲಿ 'ಒಂದು ಗೂಡಿದ ಬಾಳು' ನಾಟಕ ಬರೆದು ಪ್ರಯೊಗಿಸುವ ಮೂಲಕ ರಂಗಭೂಮಿಗೆ ಕಾಲಿಟ್ಟು, ಇಲ್ಲಿಯವರೆಗೆ ೬೫ ನಾಟಕಗಳಲ್ಲಿ ಪಾತ್ರ ಮಾಡಿದ್ದಾರೆ. ೧೯೯೨ರಲ್ಲಿ ಇವರು ಬರೆದ 'ಕನಿಕರವಿಲ್ಲದ ಧನಿಕರು' ತುಂಬಾ ಪ್ರಸಿದ್ಧಿ ಪಡೆದು ಎಲ್ಲಕಡೆ ಪ್ರಯೋಗಗೊಂಡಿದೆ. ಹಾಗೆಯೆ 'ದುಡ್ಡಿನ ದುರಹಂಕಾರಿಗಳು' 'ರಣರಂಗದಲ್ಲಿ ರೌಡಿರಂಗ' ಹಳ್ಳಿಗಳಲ್ಲೆಲ್ಲ ಅಮೆಚ್ಯೂರ ಕಂಪನಿಯವರು ಆಡುತ್ತಿರುತ್ತಾರೆ.

ಹಾಸ್ಯಪಾತ್ರವನ್ನು ತುಂಬಾ ಯಶಸ್ವಿಯಾಗಿ ಅಭಿನಯಿಸುವ ಬಸವರಾಜಬಿನ್ನಾಳ 'ವರದಕ್ಷಿಣೆ', 'ಸತ್ಯದಸತಿ, ಅಸತ್ಯದ ಪತಿ' ಎನ್ನುವ ಎರಡು ಏಕಾಂಕ ನಾಟಕಗಳನ್ನೂ ಬರೆದಿದ್ದಾರೆ. ಪತ್ರಕರ್ತರಾಗಿ ಪ್ರಸ್ತುತ ಕೊಪ್ಪಳದಲ್ಲಿ ವಾಸಿಸಿರುವ ಬಿನ್ನಾಳ ಪ್ರತಿಭಾವಂತ ಕಲಾವಿದ.

## ಹವ್ಯಾಸಿ ರಂಗಭೂಮಿಯ ಮಲ್ಲಿಕಾರ್ಜುನ ಜಾನೆಕಲ್

ದಿ:೧-೬-೧೯೫೮ರಂದು ಗಂಗಾವತಿಯಲ್ಲಿ ಜನಿಸಿದ ಮಲ್ಲಿಕಾರ್ಜುನ ತಂದಿ ಅಮರಯ್ಯ ಜಾನೆಕಲ್, ಬಿ.ಎ. ಪಾಸುಮಾಡಿ ಕಂದಾಯ ಇಲಾಖೆಯ ನೌಕರನಾದರೂ ಪ್ರವೃತ್ತಿಯಿಂದ ನಿರಂತರ ಹವ್ಯಾಸಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ೧೯೮೪ ರಲ್ಲಿ ವಿ.ಎನ್. ಅಕ್ಕಿಯವರ ಮೂಲಕ ಸಮುದಾಯದ ರಂಗ ಚಟುವಟಿಕೆಯಲ್ಲಿ ಗುರುತಿಸಿಕೊಂಡ ಜಾನೆಕಲ್ ೧೯೮೭ರಲ್ಲಿ ಕೊಪ್ಪಳಕ್ಕೆ ಬಂದು ಸಮುದಾಯದ ಸಂಚಾಲಕತ್ವ ವಹಿಸಿಕೊಂಡು 'ಕೆರೆಗೆ ಹಾರ' ನಾಟಕದ ಸಹನಿರ್ದೇಶಕರಾದರಲ್ಲದೆ ೧೯೯೧-೯೨ರಲ್ಲಿ "ಜನಮರುಳೋ ಜಾತ್ರೆ ಮರುಳೋ" ಎನ್ನುವ ನಾಟಕವನ್ನು ತಾವೆ ಬರೆದು ನಿರ್ದೇಶಿಸಿದ್ದು ಕೊಪ್ಪಳ, ಹೊಸಪೇಟೆ, ಹರಪನಳ್ಳಿ, ಮರಿಯಮ್ಮನಳ್ಳಿ ಮುಂತಾದೆಡೆ ೧೦-೧೫ ಪ್ರಯೋಗ ಕಂಡಿತು. ನಾಟಕ ಅಕಾಡೆಮಿ ಇದರ ಪ್ರಾಯೋಜಕವಾಗಿತ್ತು. ಲಲಿತಾದೇಮಶೇಟ್ಟಿಯವರ 'ವೈದೇಹಿ' ಪ್ರಸಿದ್ಧ ಕಾದಂಬರಿಯನ್ನು ಜಾನೆಕಲ್ ರಂಗರೂಪಕ್ಕೆ ಅಳವಡಿಸಿ ಪ್ರಯೋಗಿಸಿದರು. ಲಕ್ಷ್ಮಣ ಸಾಲಮನಿ ಇದರ ನಿರ್ದೇಶನ ಮಾಡಿದರು. ಇವರು ರಂಗರೂಪಕ್ಕೆ ಅಳವಡಿಸಿ ನಿರ್ದೇಶಿಸಿದ 'ಪುಣ್ಯಕೋಟಿ' ಸರ್ವೋದಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಭಾಗ್ಯನಗರದ ಮಕ್ಕಳಿಂದ ಇಟಗಿ ಆನೆಗುಂದಿ ಉತ್ಸವ ಮತ್ತು ಗಂಗಾವತಿ ಮಹಿಳಾ ಕಾಲೇಜಿನಲ್ಲಿ ಪ್ರದರ್ಶನಗೊಂಡು ಗಮನ ಸೆಳೆಯಿತು. ಇನ್ನೊಂದು ಇವರದೇ 'ಕಿತ್ತೂರ ಚನ್ನಮ್ಮ' ರೂಪಕ ರೆಡ್ಡಿವೀರಣ್ಣ ಕಾಲೇಜಿನಲ್ಲಿ ಪ್ರಯೋಗವಾಗಿದೆ. "ರಾವಿನದಿಯ

ದಂಡೆಯಲ್ಲಿ" ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿದ ಜಾನೆಕಲ್ ಇಂದಿಗೂ ರಂಗಾಸಕ್ತಿಯನ್ನು ಕಳೆದುಕೊಂಡಿಲ್ಲ.

## ಪಾತ್ರಕ್ಕೆ ಜೀವ ತುಂಬುವ ವಾಸುದೇವ

ಜಾನೆಕಲ್ ಜತೆಗೆ ಸೇರಿಕೊಳ್ಳುವ ಮತ್ತೊಂದು ಹೆಸರು ಕೊಪ್ಪಳದ ಕೆ. ವಾಸುದೇವ. ೫೧ ವಯಸ್ಸಿನ ವಾಸು ತಮ್ಮ ಹೊಟೆಲ್ ಉದ್ದಿಮೆಯಲ್ಲಿ ಎಡೆಬಿಡದೆ ತೊಡಗಿದ್ದರೂ ನಾಟಕದ ಆಸಕ್ತಿಯಿಂದ ನಿರಂತರ ರಂಗಚಟುವಟಿಕೆಯಲ್ಲಿ ತೊಡಗಿದವರು. ಛಲತೀರಿತು, ಮದುಮಗಳು, ಬಂಜೆ ತೊಟ್ಟಿಲು, ಗಂಡುಗಲಿ ಎಚ್ಚಮ್ಮನಾಯಕ, ಯಾರ ಹೂವು ಯಾರ ಮುಡಿಗೋ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ೧೯೮೮ರಿಂದ ಸಮುದಾಯ ರಂಗತಂಡ ಪ್ರವೇಶಿಸಿ ಕರೆಗೆಹಾರ, ಮಾರಟಕ್ಕಿದೆ, ಬೋಲೋರಾಮನ ಜೀವ, ವೈದೇಹಿ, ಮಾತಂಗಿ ಮುಂತಾದ ನಾಟಕಗಳಲ್ಲಿ ಅಭಿನಯ, ಹಾಡುಗಳ ಮೂಲಕ ಹೆಸರು ಮಾಡಿದವರು.

೧೯೯೨ರಿಂದ ಕೊಪ್ಪಳ ಸಮುದಾಯದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವವರು ನಿರ್ದೇಶಿಸಿದ 'ರಾವಿನದಿಯ ದಂಡೆಯಲ್ಲಿ' ನಾಟಕ ಬೆಂಗಳೂರು, ಹೊಸಪೇಟೆ, ಶಕ್ತಿನಗರ, ಹರಪನಹಳ್ಳಿ, ಕುಷ್ಟಗಿ ಮೊದಲಾದೆಡೆ ಪ್ರಯೋಗವಾಗಿ ಗಮನ ಸೆಳೆದಿದೆ. ಹಲವು ಬೀದಿ ನಾಟಕಗಳಲ್ಲಿಯೂ ವಾಸು ಅಭಿನಯಿಸಿದ್ದಾರೆ. ಪಾತ್ರಗಳಿಗೆ ಜೀವ ತುಂಬುವದರಲ್ಲಿ ಪರಿಣತರಾಗಿದ್ದಾರೆ.

## ಮೂರ್ತಗೊಂಡ ರಂಗ ಪ್ರತಿಭೆ ರೆಹಮಾನವ್ವ

ರಂಗಭೂಮಿಯೆಂದರೆ ರೆಹಮಾನವ್ವ, ರೆಹಮಾನವ್ವನೆಂದರೆ ಸಾಕು ರಂಗಭೂಮಿಯೆಂದು ಹೇಳಬೇಕಾಗಿಲ್ಲ. ಆಕೆಯ ಜೀವಂತ ರಂಗಭೂಮಿ ಎನ್ನುವಷ್ಟು ಅದರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಈಗಾಗಲೇ ಜಿಲ್ಲೆಯಲ್ಲಿ ಮಹಿಳೆಯೊಬ್ಬರು ನಾಟಕ ಕಂಪನಿಯೊಂದನ್ನು ಯಶಸ್ವಿಯಾಗಿ ಮಾಡಿರುವ ಇತಿಹಾಸವನ್ನು ನೋಡಿದ್ದೇವೆ. ಈಗ ರೆಹಿಮಾನವ್ವನವರ ರಂಗ ಸಾಧನೆಯನ್ನು ಪರಿಚಯಿಸದಿದ್ದರೆ ಮಾಹಿತಿ ಅಪೂರ್ಣವಾದೀತು.

ಯಲಬುರ್ಗಿ ತಾಲೂಕಿನ ಕುಕನೂರಿನಲ್ಲಿ ಪಾತ್ರದವರ ಮನೆತನದ ಸಂದಿಮನಿ ಹಸನಮ್ಮಳ ಮಗಳಾದ ಹುಸೇನಮ್ಮನ ಗರ್ಭದಲ್ಲಿ ೧೯೧೭ ರಲ್ಲಿ ಮೂಲಾ ನಕ್ಷತ್ರದಲ್ಲಿ ಜನಿಸಿದ ರೆಹಮಾನಬಿಯೇ ಮುಂದೆ ರೆಹಮಾನವ್ವಳೆಂದು ಖ್ಯಾತಳಾದದ್ದು. ಬಾಲ್ಯದಲ್ಲಿಯೆ ತಾಯಿಯನ್ನು ಕಳೆದುಕೊಂಡು ಅನೇಕ ಕಷ್ಟದಿಂದ ಶಾಲೆಯನ್ನು ಕಲಿಯಲಿಕ್ಕಾಗದೆ ತಳಕಲ್ಲಿನ ವೆಂಕರೆಡ್ಡಿಯವರ ಮನೆಯಲ್ಲಿ ದನಾಕಾಯಲಿಕ್ಕೆ ಅವರ ಅಜ್ಜಿ ಸೇರಿಸಿದ್ದರಿಂದ ವೆಂಕರೆಡ್ಡಿಯವರ ಶ್ರೀರಂಜನಿ ನಾಟ್ಯಸಂಘದ ನಾಟಕಗಳನ್ನು ಅವರ ರಿಹರ್ಸಲ್ಲಗಳನ್ನು ನೋಡುತ್ತ ಮಾತು ಕಲಿತು ಕಿತ್ತೂರ ಚನ್ನಮ್ಮ ನಾಟಕದ ಪಾತ್ರಧಾರಿ ಜಮುನಾ ಹೇಳದೆ ಕೇಳದೆ ಹೋಗಿದ್ರಿಂದ ಆ ಪಾತ್ರ ಮಾಡುವ

ಅದೃಷ್ಟ ರೆಹಮಾನವ್ವನಿಗೆ ಖಿಲಾಯಿಸಿ ಯಶಸ್ವಿಯಾಗಿದ್ದರಿಂದ ರಂಗಭೂಮಿಯ ಇತಿಹಾಸದಲ್ಲಿಯೆ ದಾಖಲೆ ನಿರ್ಮಿಸಲು ಕಾರಣವಾಯಿತು.

ರೆಹಮಾನವ್ವ ಕಂದಗಲ್ ಹನುಮಂತರಾಯರ ರಕ್ತರಾತ್ರಿ ನಾಟಕದಲ್ಲಿ ದ್ರೌಪದಿಯ ಪಾತ್ರಮಾಡಿದರೆ ಆಕೆಯ ರೌದ್ರ ಅಭಿನಯ ಬೆಂಕಿ ಕಾರುವ ಮಾತುಗಳಿಂದ ಪ್ರೇಕ್ಷಕರನ್ನು ಬೆಚ್ಚಿಬೀಳಿಸುತ್ತಿದ್ದಳಂತೆ ಅದೇರೀತಿ ಚಿತ್ರಾಂಗದೆಯ ಪಾತ್ರದಲ್ಲಿ ಧೈರ್ಯ, ಶೌರ್ಯಗಳ ಜೊತೆಗೆ ಶೃಂಗಾರ ರಸದಲ್ಲಿ ಪ್ರೇಕ್ಷಕರ ಮನದಲ್ಲಿ ಅಚ್ಚೊತ್ತಿ ನಿಲ್ಲುವ ಅಭಿನಯದೊಂದಿಗೆ ಎಲ್ಲ ಕಲಾವಿದರನ್ನು ಮೀರಿಸಿ ನಿಲ್ಲುತ್ತಿದ್ದಳು. ಆದರೆ ಹೇಮರೆಡ್ಡಿಮಲ್ಲಮ್ಮನಾದಾಗ ಭಕ್ತಿ ಭಾವದ ಅಭಿನಯದೊಂದಿಗೆ ಅಮೋಘ ಹಾಡುಗಾರಿಕೆಯಿಂದ ಅಪೂರ್ವ ಅನುಭವ ನೀಡಿದ್ದನ್ನು ನೋಡಿದವರು ಇಂದಿಗೂ ನೆನೆಯುತ್ತಾರೆ.

ರೆಹಮಾನವ್ವನವರ ತಾಯಿಯಕರುಳಿನ ತಾಯಿಯ ಪಾತ್ರವಂತು ಪಕ್ವ ಅಭಿನಯದಿಂದ ಪ್ರೇಕ್ಷಕರ ಹೃದಯಹೊಕ್ಕು ಕಣ್ಣೀರು ಹರಿಸುವಂತೆ ಮಾಡುತ್ತಿದ್ದರಿಂದ ಆಕೆಗಾಗಿಯೇ ಧುತ್ತರಗಿಯವರು ಆ ನಾಟಕ ಬರೆದಿದ್ದಾರೇನೋ ಎನ್ನುವಂತಿತ್ತು. ಪುರುಷರೆ ಸ್ತ್ರೀ ಪಾತ್ರ ಮಾಡಬೇಕಾಗಿದ್ದ ಅನಿವಾರ್ಯತೆಯ ಆ ಕಾಲದಲ್ಲಿ ರೆಹಮಾನವ್ವ ಅದಕ್ಕೆ ವಿರುದ್ಧವಾಗಿ ಪುರುಷಪಾತ್ರ ನಿರ್ವಹಿಸಿ ಯಶಸ್ವಿಗೊಳಿಸಿದ್ದು ಆಕೆಯಲ್ಲಿ ರಕ್ತಗತವಾಗಿ ಬಂದಿದ್ದ ಕಲೆಗೆ ಸಾಕ್ಷಿ ಎನ್ನಿಸಿದೆ. ಲಂಕಾದಹನದಲ್ಲಿ ಆಂಜನೇಯನ ಪಾತ್ರ ಹಾಕಿದ ಅವರನ್ನು ಯಾರೂ ಗುರುತಿಸಲಿಕ್ಕೆ ಸಾಧ್ಯವಿರಲಿಲ್ಲವಂತೆ. ಅದೇ ರೀತಿ ಶ್ರೀಕೃಷ್ಣ, ಮಲ್ಲಿಕಾರ್ಜುನನಂಥ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸಿ ಮೆಚ್ಚುಗೆ ಗಳಿಸಿದ್ದು ಅವರ ಅಸಾಮಾನ್ಯ ರಂಗಾಭಿವ್ಯಕ್ತಿಗೆ ನಿದರ್ಶನ ಎನ್ನಿಸಿದೆ.

ರೆಹಮಾನವ್ವನಿಗೆ ಐದು ಜನ ಮಕ್ಕಳು ಅವರೆಲ್ಲರೂ ಕಲಾವಿದರೆ ಹಾಗಾಗಿ ಅವರೆಲ್ಲರನ್ನೂ ಒಂದೆಡೆ ಪರಿಚಯಿಸಬೇಕಾದ ಅಗತ್ಯವಿದೆ ಅವರ ಜನ್ಮ ನಾಮ ಒಂದಾದರೆ ರೂಢಿಯಲ್ಲಿ ಕರೆಯುವ ಹೆಸರುಗಳೇ ಬೇರೆ ಬೇರೆ. ಮೊದಲಮಗ ಜಮಾಲುದ್ದೀನ್–ಬಾಬಣ್ಣ, ಮಗಳು ಜನ್ನತಬಿ–ಲಲಿತಾ, ಎರಡನೆ ಮಗ ಉಮರಸಾಬ–ಉಮೇಶ, ಇನ್ನೊಬ್ಬ ಮಗಳು ಮಹಮ್ಮದಬಿ–ಮಂಜುಳಾ ಕೊನೆಯ ಮಗ ರಫಿಕ್–ಮುನ್ನಾ ಈ ಹೆಸರುಗಳೇ ಕೋಮುಸೌಹಾರ್ದತೆಯ ಸಂಕೇತಗಳಾಗಿವೆ ಎಲ್ಲರೂ ಹುಟ್ಟು ಕಲಾವಿದರಾಗಿದ್ದರೆಂದು ಹಲವಾರು ಕಂಪನಿ ಸುತ್ತಾಡಿ ಕೊನೆಗೆ ಜತೆಗೊಂದಿಷ್ಟು ಕಲಾವಿದರನ್ನು ಕರೆದುಕೊಂಡು ಕಂಪನಿ ಕಟ್ಟುವದು ಅನಿವಾರ್ಯವಾಯಿತು. ರೆಹಮಾನವ್ವನ ನಂತರ ಆ ಕಂಪನಿಯನ್ನು ಮಗ ಬಾಬಣ್ಣ ಕೆಲವು ದಿವಸ ಮುಂದುವರಿಸಿದ. ಇಷ್ಟೆಲ್ಲ ಅನುಭವದೊಂದಿಗೆ ರೆಹಮಾನವ್ವ ಅನೇಕ ನಾಟಕಗಳನ್ನೂ ನಿರ್ದೇಶನ ಮಾಡಿದ್ದಾರೆ. ಕೊನೆಗೆ ಅಮ್ಮೆಚೂರ ಕಂಪನಿಗಳಿಗೂ ಹೋಗಿ ನಟಿಸಿದ್ದಾರೆ, ನಿರ್ದೇಶಿಸಿದ್ದಾರೆ. ರೆಹಮಾನವ್ವನೆಂದರೆ ಮೂರ್ತಗೊಂಡ ರಂಗ ಪ್ರತಿಭೆ ಎನ್ನಬಹುದು.

## ಹುಟ್ಟು ಕಲಾವಿದ ಬಾಬಣ್ಣ

ಪ್ರಸ್ತುತ ೮೨ ವರ್ಷದ ಬಾಬಣ್ಣ ಹೆಸರಾಂತ ರಂಗ ಕಲಾವಿದೆ ರೆಹಮಾನವ್ವನ ಹಿರಿಯ ಮಗನಾಗಿದ್ದರಿಂದ ಇವರಿಗೆ ಕಲೆ ಹುಟ್ಟಿನಿಂದಲೇ ಬಂದಿದ್ದಾಗಿದೆ. ತಾಯಿಯ ಕಂಪನಿಯಲ್ಲಿ ಒಮ್ಮೆ ಸ್ತ್ರೀ ಪಾತ್ರಧಾರಿ ನಟಿ ಕೈಕೊಟ್ಟಿದ್ದರಿಂದ 'ಸ್ತ್ರೀರತ್ನ' ನಾಟಕದಲ್ಲಿಯಮುಖ್ಯ ಸ್ತ್ರೀ ಪಾತ್ರವನ್ನು ಮಾಡಲು ತಾಯಿಯ ಆದೇಶಬಂದಿದ್ದೆ ತಡ ಅದನ್ನು ಎಲ್ಲರೂ ನಿಬ್ಬೆರಗಾಗುವಂತೆ ಅಭಿನಯಿಸಿದ್ದೆ ಬಾಬಣ್ಣನವರಲ್ಲಿದ್ದ ಕಲಾವಂತಿಕೆ ಹೊರಬೀಳಲು ಕಾರಣವಾಗಿದೆ. ನಂತರ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿ, ಅರಿಷಿಣಗೋಡೆ ಕಂಪನಿ, ಗುಡಗೇರಿ, ಸೂಡಿಶೇಕರಯ್ಯ, ಗವಾಯಿ, ದೇಸಾಯರ ಕಂಪನಿಗಳಲ್ಲೆಲ್ಲ ಸುತ್ತಾಡಿ ಸತ್ಯಹರಿಶ್ಚಂದ್ರ, ಗಂಡನ ಮಾನ, ಬದುಕು ಬಂಗಾರವಾಯಿತು, ಅಕ್ಕಮಹಾದೇವಿ, ಪ್ರಪಂಚ ಪರೀಕ್ಷೆ, ಹೀಗೆ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದರು ೧೯೫೭ ರಲ್ಲಿ ಮೆಹಬೂಬಿ ಎನ್ನುವರನ್ನು ಮತ್ತು ನಟಿ ಅಂಬುಜಾ ಎನ್ನುವವರನ್ನು ಕೈಹಿಡಿದಿದ್ದಾರೆ.

೧೯೭೭ರಲ್ಲಿ ವಿಜಯಲಕ್ಷ್ಮೀ ನಾಟ್ಯ ಸಂಘ ಎನ್ನುವ ಸ್ವಂತ ಕಂಪನಿಕಟ್ಟಿ ಅದನ್ನು ಟ್ರಸ್ಟನ್ನಾಗಿಸಿ ಇಂದಿಗೂ ಕಾಪಾಡಿಕೊಂಡು ಬಂದಿದ್ದಾರೆ. ಹೆಣ್ಣಾಗಿರುವ ತಾಯಿ ಪುರುಷಪಾತ್ರದಲ್ಲಿ ಮಿಂಚಿ ಪ್ರತಿಭೆ ಮೆರೆದರೆ ಗಂಡಾದ ಬಾಬಣ್ಣ ಸ್ತ್ರೀ ಪಾತ್ರದಲ್ಲಿ ಹೆಸರು ಮಾಡಿದ್ದು ಇಲ್ಲಿಯ ವಿಶೇಷ. ಎಲ್ಲ ಬಗೆಯ ಪಾತ್ರ ಮಾಡುವಲ್ಲಿ ಬಾಬಣ್ಣ ಸೈ ಎನಿಸಿಕೊಂಡವರು. ಚಿಂದೋಡಿ ಲೀಲಾರ ಕಂಪನಿಯೊಂದಿಗೆ ದೆಹಲಿ, ಮುಂಬಯಿ ಮುಂತಾದ ಹೊರರಾಜ್ಯಕ್ಕೆ ಹೋಗಿ ನಟಿಸಿದ್ದಾರೆ. ನಟನೆಯೊಂದಿಗೆ ಹಾರ್ಮೋನಿಯಂ ತಬಲಾ ಡೋಲಾಕ್ ಕಾಂಗೋ ವಾದ್ಯಗಳನ್ನು ನುಡಿಸುವದರಲ್ಲಿ ಬಾಬಣ್ಣ ಸಿದ್ಧಹಸ್ತ.

ಇವರ ರಂಗಭೂಮಿಯ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಮೈಸೂರ ದಸರಾ ಸನ್ಮಾನ, ರಂಗಭೂಮಿರತ್ನ ಮುಂತಾದ ಪ್ರಶಸ್ತಿ ಪಡೆದಿದ್ದಾರೆ.

## ಕಮರಿದ ಕಲ್ಮನಿಯ ಕಲಾಕುಡಿಗಳು: ಲಲಿತಾ–ಮಂಜುಳಾ

ರೆಹಮಾನವ್ವನವರ ಈ ಇಬ್ಬರೂ ಮಕ್ಕಳು ಅಭಿಜಾತ ಕಲಾವಿದೆಯರು. ಈ ಇಬ್ಬರೂ ತಾಯಿಯ ಕಂಪನಿಯಲ್ಲಿ ರೇಣುಕಾ ನಾಟಕದಲ್ಲಿ ಬಾಲಪರಶುರಾಮನ ಮೂಲಕ ರಂಗಭೂಮಿಗೆ ಕಾಲಿಟ್ಟು ಅನೇಕ ಕಂಪನಿಗಳಲ್ಲಿ ಪ್ರಮುಖ ಪಾತ್ರಧಾರಿಗಳಾಗಿ ಗಮನ ಸೆಳೆದವರು. ಮಂಜುಳಾ ಕಲ್ಮನಿ ರೆಹಮಾನವ್ವ ಹರಿಶ್ಚಂದ್ರದಲ್ಲಿಯ ತಾರಾಮತಿ ಪಾತ್ರ ಮಾಡಿದಾಗ ರಂಗಭೂಮಿಯಲ್ಲಿಯೇ ಜನಿಸಿದವಳು, ಆಗ ತಾರಾಮತಿಯೇ ಹಡೆದಳೆಂದು ಜನ ನೋಡಲು ರಂಗಭೂಮಿಗೆ ನುಗ್ಗಿದರು. ಈಕೆಯನ್ನು ಪ್ರೀತಿಯಿಂದ ಮಹಮ್ಮದಬಿ ಎಂದು ಕರೆದರೆ, ಲಲಿತಾರನ್ನು ಜನ್ನತಬಿ ಎಂದು ಕರೆಯುತ್ತಿದ್ದರು. ಈಕೆ ರಾಯಚೂರಿನ ಗೌಸ್ಮಾಸ್ತರರನ್ನು ಮದುವೆಯಾಗಿ ನವೀನ ಮುತ್ತು ಎನ್ನುವ ಇಬ್ಬರು ಮಕ್ಕಳನ್ನು ಪಡೆದರು.

ಈ ಇಬ್ಬರೂ ೧೯೮೦ರಲ್ಲಿ ಗುಡುಗೇರಿ ಕಂಪನಿಯಲ್ಲಿದ್ದದ್ದರಿಂದ ಹುಬ್ಬಳ್ಳಿ ಕ್ಯಾಂಪಿನಲ್ಲಿ 'ರೈತನ ಮಕ್ಕಳು' ಚಿತ್ರೀಕರಣ ಮುಗಿಸಿಕೊಂಡು ಬರುವಾಗ ಕಾರು ಅಪಘಾತದಲ್ಲಿ ಧಾರವಾಡ ಹತ್ತಿರ ನಿಧನರಾದರು.

ನಂತರ ಅಜ್ಜಿ ರೆಹಿಮಾನವ್ವಳ ಆಶ್ರಯದಲ್ಲಿ ಬೆಳೆದ ಲಲಿತಾಳ ಮಗಳು ಮಮತಾ ಕೂಡಾ ಸೋದರ ಮಾವ ಬಾಬಣ್ಣ ಕಂಪನಿಯಲ್ಲಿ ಅನೇಕ ನಾಟಕಗಳಲ್ಲಿ ಪಾತ್ರ ಮಾಡಿ ಪ್ರಸ್ತುತ ರಂಗಭೂಮಿಯಿಂದ ದೂರ ಸರಿದು ಶಿಕ್ಷಕಿಯಾಗಿದ್ದಾರೆ.

## ರಂಗಭೂಮಿಯಲ್ಲಿಯೇ ಜನಿಸಿದ ರಫಿಕ್

ರೆಹಮಾನವ್ವ ಹೇಗೆ ರಂಗಭೂಮಿಯಲ್ಲಿಯೇ ಮಂಜುಳಾಗೆ ಜನ್ಮ ನೀಡಿದರೋ ಅದೇರೀತಿ ಅದೇ ಹರಿಶ್ಚಂದ್ರ ನಾಟಕದ ತಾರಮತಿ ಪಾತ್ರ ಮಾಡುತ್ತಿರುವಾಗಲೇ ಕೊನೆಯ ಮಗ ರಫಿಕ್‌ಗೆ ಜನ್ಮ ನೀಡಿದರು. ಈತನಿಗೆ ಮುನ್ನಾ ಎಂದು ಕರೆಯುತ್ತಿದ್ದರು. ತಾಯಿಯ ಕಂಪನಿಯಲ್ಲಿ ಬಾಲ್ಯದಲ್ಲಿಯೇ ಪಾತ್ರ ಮಾಡತೊಡಗಿದ ಮುನ್ನಾ ಕಲೆಯನ್ನು ಕರಗತ ಮಾಡಿಕೊಂಡು ಅಣ್ಣ ಬಾಬಣ್ಣ, ಚಿಂದೋಡಿ, ಆಶಾಪುರ, ಸುಮತಿಶ್ರೀ, ರಾಜು ತಾಳಿಕೋಟೆ ಮುಂತಾದವರ ಕಂಪನಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾ 'ಅಭಿನಯ ಚತುರ' ಎನ್ನುವ ಬಿರುದಿಗೆ ಪಾತ್ರರಾದರು, ನಟಿ ಆಶಾರನ್ನು ಕೈಹಿಡಿದ ಇವರಿಗೆ ಇಬ್ಬರು ಮಕ್ಕಳಿದ್ದಾರೆ.

## ರಂಗಭೂಮಿಯ ಹುಲಿ ಉಮೇಶ ಕಲ್ಮನಿ

ರೆಹಮಾನವ್ವ ತನ್ನ ಮೂರ್‍ನಾಲ್ಕು ಮಕ್ಕಳಿಗೆ ಜನ್ಮ ನೀಡಿದ್ದು ರಂಗಭೂಮಿಯಲ್ಲಿಯೆ ಎನ್ನುವದು ಅವರ ವೃತ್ತಿ ನಿಷ್ಠೆಯ ದ್ಯೋತಕವಾಗಿದೆ. ಹಾಗೆ ಈ ಉಮೇಶ ಉರ್ಫ ಉಮ್ಮರ ಸಾಬ ಕೂಡಾ ಹುಟ್ಟಿದ್ದು ರಂಗಭೂಮಿಯಲ್ಲಿಯೆ ಆದದ್ದರಿಂದ ಇವರನ್ನು ಹುಟ್ಟು ಕಲಾವಿದರೆನ್ನುವುದು ಪ್ರಶಂಸೆಯ ಮಾತಿಗಲ್ಲ. ಕಟು ವಾಸ್ತವದ ಮಾತು. ಹಾಗೆಯೇ ಉಮೇಶ ಕಲ್ಮನಿ ತಾಯಿಯ ಲಲಿತಕಲಾ ನಾಟ್ಯ ಸಂಘದಲ್ಲಿ ಸ್ತ್ರೀ ರತ್ನದೊಳಗಿನ ಬಾಲಕ ಶಂಕರನ ಪಾತ್ರದ ಮೂಲಕ ರಂಗ ಪ್ರವೇಶಿಸಿ ಅಭಿನಯದ ಎಲ್ಲ ಪಟ್ಟುಗಳನ್ನು ಸಾಧಿಸುತ್ತ ಅನೇಕ ಪ್ರಮುಖ ಪಾತ್ರಗಳನ್ನು ನಿರ್ವಹಿಸಿ ಹಲವಾರು ದೊಡ್ಡ ದೊಡ್ಡ ಕಂಪನಿಗಳಲ್ಲಿ ಅಭಿನಯಿಸಿ ೧೯೯೦ರಲ್ಲಿ ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ ಕುಕನೂರು ಎನ್ನುವ ಹೆಸರಿನಲ್ಲಿ ಸ್ವಂತ ಕಂಪನಿ ಕಟ್ಟಿದರೂ ಎರಡು ವರ್ಷ ಮಾತ್ರ ಅದನ್ನು ನಡೆಸಿ ನಿಲ್ಲಿಸಿದರು. ಕಲಾಭಿಮಾನಿಗಳಿಂದ ರಂಗಭೂಮಿಯ ಹುಲಿ ಎನ್ನುವ ಬಿರುದು ಪಡೆದ ಉಮೇಶ ಬದುಕಿನಲ್ಲಿ ಸಾಕಷ್ಟು ನೋವು ಅನುಭವಿಸಿ ಮೂರು ಮಕ್ಕಳ ತಂದೆಯಾಗಿ ಕೊನೆಗೆ ಗಂಗಾವತಿಯಲ್ಲಿ ಮಾಲತಿ ಸುಧೀರರವರ ಕಂಪನಿಯಲ್ಲಿದ್ದಾಗ ೨೦೦೪ರಲ್ಲಿ ನಿಧನರಾದರು. ರಂಗಭೂಯಲ್ಲಿಯೆ ಹುಟ್ಟಿ ಅಲ್ಲಿಯೆ ನಿಧನರಾದ ಅಪ್ಪಟ ಕಲಾ ಪ್ರತಿಭೆ ಉಮೇಶ.

## ಗೃಹಿಣಿಯಾಗಿ ನಟನೆ ಕೈಬಿಟ್ಟ ದಾನಮ್ಮ

ರೆಹಮಾನವ್ವನ ಮೊಮ್ಮಗಳು ಅಂದರೆ ಬಾಬಣ್ಣ ಕಲ್ಮನಿಯವರ ಮಗಳಾಗಿದ್ದ ದಾನಮ್ಮ ಅಜ್ಜಿಯ ಗರಡಿಯಲ್ಲಿ ಪಳಗಿ ಬಾಲ ಪಾತ್ರದಿಂದ ಪ್ರಾರಂಭಿಸಿ ಅನೇಕ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತ ತಂದೆಯ ಕಂಪನಿಯ ಜೊತೆಗೆ ಬೇರೆ ಕಂಪನಿಗಳಲ್ಲಿಯೂ ನಟಿಸಿ ಮೋಹಕ ನಟಿ ಎನಿಸಿ ಕಲಾವಿದ ಶಿಕ್ಷಕ ಮಹೇಶ ಭಾರತೇಶರವರನ್ನು ಮದುವೆಯಾಗಿ ವೃತ್ತಿಗೆ ವಿದಾಯ ಹೇಳಿ ಎರಡು ಮಕ್ಕಳ ತಾಯಿಯಾಗಿ ಸದ್ಗೃಹಿಣಿ ಎನ್ನಿಸಿಕೊಂಡಿದ್ದಾರೆ.

ಒಟ್ಟಾರೆ ರೆಹಮಾನವ್ವರ ಇಡೀ ಕುಟುಂಬ ರಂಗಭೂಮಿಯಲ್ಲಿಯೆ ತೊಡಗಿ ಮೊಮ್ಮಕ್ಕಳವರೆಗೆ ಮುಂದುವರಿದಿದ್ದು ಅಪರೂಪ ಹಾಗಾಗಿ ಸಮಾಜಕ್ಕೆ ಇವರ ಸೇವೆ ವಿಶೇಷವಾಗಿದೆ. ನಿಜವಾದ ಜಾತ್ಯಾತೀತ ನೆಲೆಯಲ್ಲಿ ಮಾನವ ಪ್ರೀತಿಯೊಂದನ್ನೆ ಆಧರಿಸಿಕೊಂಡಿರುವ ಇಂಥ ಕುಟುಂಬಗಳು ಸಮಾಜದ ಕಣ್ಣಿದ್ದಂತೆ.

## ಅಭಿಜಾತ ಕಲಾವಿದೆ ಸರೋಜಮ್ಮ ಧುತ್ತರಗಿ

ಪ್ರಸಿದ್ಧ ನಾಟಕ ಕಲಾವಿದರಿಗೆ ಯಲಬುರ್ಗಿ ತಾಲೂಕಿನ ಕುಕನೂರು ಹೇಗೆ ಕೇಂದ್ರ ಸ್ಥಳವಾಗಿತ್ತೋ ಹಾಗೆ ಕುಷ್ಟಗಿ ತಾಲೂಕಿನ ಹನುಮಸಾಗರವೂ ಅನೇಕ ಮಹಾನ್ ಕಲಾವಿದರಿಗೆ ಆಶ್ರಯ ನೀಡಿದ ಗ್ರಾಮ ಎನ್ನಲಿಕ್ಕೆ ಇಲ್ಲಿಯ ಪಿ.ಬಿ. ಧುತ್ತರಗಿ ಮತ್ತು ಎಚ್. ಟಿ. ಅರಸ್‌ರಿಗೆ ಗುಬ್ಬಿವೀರಣ್ಣ ಪ್ರಶಸ್ತಿ, ಸರೋಜಮ್ಮ ಧುತ್ತರಗಿಯವರಿಗೆ ರಾಜ್ಯೋತ್ಸವ ಪ್ರಶಸ್ತಿ ಪಡೆದಂಥವರಲ್ಲದೆ ಎನ್.ಪಿ. ಕುಲಕರ್ಣಿ, ಕಲೆಗಾಗಿಯೆ ಬದುಕು ಕಳೆದ ದಿ. ವೀರಪ್ಪ ಕುಬ್ಬಣ್ಣ ಚಲುಮಿ, ನಟಕಲಾ ಕೇಸರಿ ನಾರಾಯಣಸಾ, ಬಿ. ದೇವಳೆ, ಹಿರಿಯ ನಾಟಕಕಾರ ಸೇತು ಮಾಧವಾಚಾರ್ ಹಂಜಕ್ಕಿ; ರಾಮಚಂದ್ರಪ್ಪ ಬಡಿಗೇರ, ಕಲಾವಿದೆ ಜಯಶ್ರೀ ಮತ್ತು ಉಮಾದೇವಿ ಅಲ್ಲದೆ ಇತ್ತೀಚಿನವರಾದ ಅಂಬಾಸಾಬಸುದೆ, ನಾಗೇಶ ಕಾಟ್ವಾ, ವಿರುಪಾಕ್ಷಪ್ಪ ಧುತ್ತರಗಿ, ದಿ. ಬಸವರಾಜ ಧುತ್ತರಗಿ, ಶರಣಪ್ಪ ಬಾಚಲಾಪೂರ, ಶ್ರೀನಿವಾಸ ಜಹಗೀರದಾರ ಇನ್ನೂ ಹಲವಾರು ಹೆಸರಾಂತ ಕಲಾವಿದರೆಲ್ಲ. ಈ ಹನುಮಸಾಗರದವರೇ ಎನ್ನುವುದು ತುಂಬಾ ಗಮನಾರ್ಹವಾದದ್ದಾಗಿದೆ. ಅದರಲ್ಲಿ ಇದೇ ೨೦೧೪ರ ಆರಂಭದಲ್ಲಿ ನಿಧನರಾದ ಸರೋಜಮ್ಮ ಧುತ್ತರಗಿ ಅಭಿಜಾತ ಕಲಾವಿದೆಯಾಗಿ ಇಡೀ ರಾಜ್ಯವೇ ಗುರುತಿಸುವ ಅಪ್ರತಿಮ ಪ್ರತಿಭೆ. ಅವರನ್ನು ಕುರಿತು ಡಾ. ಎನ್. ಎಚ್. ಪೂಜಾರ ೨೦೧೩ರಲ್ಲಿ ಕಿರುಪರಿಚಯದ ಪುಸ್ತಕ ಹೊರತಂದಿದ್ದರಾದರು ಪ್ರಸ್ತುತಕ್ಕೆ ಬೇಕಾದಷ್ಟನ್ನು ಇಲ್ಲಿ ಹೇಳಲೇಬೇಕಾಗಿದೆ.

ಬೆಂಗಳೂರಿನ ಮುನಿರೆಡ್ಡಿಪಾಳ್ಯದಲ್ಲಿ ಕಟ್ಟಡಗಳ ಗುತ್ತಿಗೆದಾರ ಅಪ್ಪಾಲೆಪ್ಪ ಮತ್ತು ಅಕ್ಕಮ್ಮ ಎನ್ನುವ ದಂಪತಿಗಳ ಹೊಟ್ಟೆಯಲ್ಲಿ ದಿ: ೧೪-೨-೧೯೩೨ ರಂದು ಕೊನೆಯ ಮಗಳಾಗಿ ಜನ್ಮ ತಳೆದ ಸರೋಜಮ್ಮ ತಂದೆ ತಾಯಿ ಚಿತ್ರದುರ್ಗಕ್ಕೆ ಬಂದು ನೆಲೆಸಿದಾಗ ಪ್ರಾಥಮಿಕ ಶಾಲೆಗೆ ಸೇರಿಸಿದಾಗಲೇ ನೃತ್ಯ, ಹಾಡುಗಾರಿಕೆ, ಚಿತ್ರಕಲೆ, ನಾಟಕ ಮುಂತಾದ

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ. ಮೂರನೆಯ ತರಗತಿ ಓದುವಾಗ ಶಿಕ್ಷಕರು ಮಕ್ಕಳಿಂದ 'ಗಯಚರಿತೆ' ನಾಟಕ ಪ್ರಯೋಗಿಸಿದ್ದರಲ್ಲಿ ರುಕ್ಮಿಣಿಯ ಪಾತ್ರವನ್ನು ಸರೋಜಾಳಿಗೆ ನೀಡುತ್ತಾರೆ. ಅದನ್ನು ಒಂದೇ ವಾರದಲ್ಲಿ ಕಲಿತು ಅದ್ಭುತವಾಗಿ ಅಭಿನಯಿಸಿದ್ದರಿಂದ ಆಕೆಯನ್ನು ರುಕ್ಮಿಣಿ ಎಂದೇ ಕರೆಯತೊಡಗುತ್ತಾರೆ. ಹೀಗೆ ಪ್ರಾರಂಭವಾದ ಅವರ ರಂಗಭೂಮಿಯ ಬದುಕು ಮುಂದೆ ಕುಮಾರ್ ಎನ್ನುವವರಲ್ಲಿ ನೃತ್ಯ ಕಲಿತು. ಕಂಚಿನ ಕಂಠದ ಹಾಡುಗಾರಿಕೆ, ಹಾವಭಾವ, ನಯವಿನಯ ಮತ್ತು ಮೋಹಕ ಕಲಾಭಿನಯದಿಂದ ಚಿತ್ರದುರ್ಗದಲ್ಲಿ ಮನೆಮಾತಾಗುತ್ತಾರೆ. ಅಲ್ಲಿಗೆ ಬರುವ ಕಂಪನಿಗಳಲ್ಲದೆ ತಂದೆಯ ಪ್ರೋತ್ಸಾಹದಿಂದ ಸುತ್ತ ಮುತ್ತಲಿನ ಹೊಸದುರ್ಗ, ಹೊಳಲ್ಕೆರೆ, ಚಳ್ಳಕೆರೆ, ಹಿರಿಯೂರು ಮೊದಲಾದ ಕಡೆಗಳಲ್ಲೆಲ್ಲ ಅಭಿನಯಿಸುವ ಮೂಲಕ ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿದ್ದಲ್ಲದೆ ಆ ಕಾಲದಲ್ಲಿಯೆ ಆಕೆಯ ಅಭಿಮಾನಿಬಳಗಗಳು ಹುಟ್ಟಿಕೊಂಡಿದ್ದವೆಂದರೆ ಅಭಿನಯ ಕೌಶಲ್ಯಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನವಿನ್ನೇನು ಬೇಕು.

ನಂತರ ಗೋಕಾಕ ಕಂಪನಿ ಸೇರಿ ಬಳಿಕ ಗುಬ್ಬಿ ಕಂಪನಿ, ಶ್ರೀ ಸತ್ಯಸಾಹಿತ್ಯ ನಾಟಕ ಮಂಡಳಿ. ಸುಬ್ಬಯ್ಯ ನಾಯ್ಡು ಕಂಪನಿ ಹಿರಣ್ಣಯ್ಯ ಮಿತ್ರ ಮಂಡಳಿ ಮುಂತಾದ ದೊಡ್ಡ ದೊಡ್ಡ ನಾಟಕ ಕಂಪನಿಗಳಲ್ಲಿ ಹೆಸರಾಂತ ನಟರ ಜೊತೆಗೆ ನಟಿಸಿದ್ದು ಸರೋಜಮ್ಮ ರಂಗಭೂಮಿಯ ರಾಣಿಯಾಗಿ ಮೆರೆಯಲು ಕಾರಣವಾಯಿತು.

ಸರೋಜಮ್ಮನ ಅಭಿನಯ ಕಂಡು ಮೆಚ್ಚಿದ ನಾಡಿನ ಹಿರಿಯ ಕವಿ ದ.ರಾ.ಬೇಂದ್ರೆಯವರು ೧೯೫೩ ರಲ್ಲಿ ಧಾರವಾಡದ ತಮ್ಮ ಮನೆಗೆ ಕರೆಯಿಸಿಕೊಂಡು ಗೌರವಿಸಿದ್ದು ಅವರ ಬದುಕಿನ ಅವಿಸ್ಮರಣೀಯ ಘಟನೆ.

೧೯೬೦ರಲ್ಲಿ ಸರೋಜಮ್ಮ ಗುರಪ್ಪ ಮೆದಕೇರಿ ಕಂಪನಿಯಲ್ಲಿದ್ದಾಗ ಅದು ಬಾದಾಮಿಯ ಬನಶಂಕರಿ ಜಾತ್ರೆಯಲ್ಲಿ ಕ್ಯಾಂಪ್ ಮಾಡಿತ್ತು. ಆಗ 'ಮನ ಒಂದು ಮನೆ ಎರಡು' ನಾಟಕದಲ್ಲಿ ತನ್ನದೇ ಹೆಸರಿನ ಪಾತ್ರ ಮಾಡಿದ್ದ 'ಸರೋಜಾ'ರ ಮೇಲೆ ಪಿ.ಬಿ.ಧುತ್ತರಗಿಯವರಿಗೆ ಪ್ರೇಮಾಂಕುರವಾಗಿ ಆಗಲೇ ಅವರ ಧರ್ಮಪತ್ನಿ ಶಾಂತಮ್ಮ ತೀರಿಕೋಂಡಿದ್ದರಿಂದ ಮದುವೆಯಾಗಲು ವಿಚಾರಿಸುತ್ತಾರೆ. ಅದಕ್ಕೆ ಸರೋಜಮ್ಮ ಕೊನೆಯವರೆಗೆ ಕೈಬಿಡುವುದಿಲ್ಲ ಎನ್ನುವ ಭರವಸೆ ದೊರೆತಮೇಲೆ ಮದುವೆಯಾಗುತ್ತದೆ.

ಧುತ್ತರಗಿಯವರ ಎಲ್ಲ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸರೋಜಮ್ಮ ಪತಿಗೆ ಅಸ್ವಸ್ಥವಾದಾಗ ೧೯೭೫ರಲ್ಲಿ ಅವರು ಸ್ಥಾಪಿಸಿದ ಶ್ರೀ ಸಿದ್ಧಲಿಂಗ ವಿಜಯ ನಾಟ್ಯ ಸಂಘದ ಜವಾಬ್ದಾರಿ ವಹಿಸುತ್ತಾರೆ. ಅದರಲ್ಲಿ 'ಕಿತ್ತೂರ ಚೆನ್ನಮ್ಮ' ನಾಟಕದಲ್ಲಿ ರಾಣಿ ಚೆನ್ನಮ್ಮನ ಪಾತ್ರ ತುಂಬಾ ಪ್ರಖ್ಯಾತಿಯನ್ನು ತಂದು ಕೊಡುತ್ತದೆ. ನಾಂದೀಗೀತೆಯೊಂದಿಗೆ ಪ್ರೇಕ್ಷಕರನ್ನು ಸೆರೆಹಿಡಿಯುತ್ತಿದ್ದ ಸರೋಜಮ್ಮ ಆ ಪಾತ್ರವನ್ನು ತನ್ನಲ್ಲಿ ಆಹ್ವಾನಿಸಿಕೊಂಡು ಬ್ರಿಟೀಷರೊಡನೆ ನಡೆಸುತ್ತಿದ್ದ ಬಿರುಸಿನ ಸಂಭಾಷಣೆ ರೋಮಾಂಚನಗೊಳಿಸುತ್ತಿದ್ದವು. ಆ ಆವೇಶ ಭಾವಾಭಿನಯವನ್ನು ಕೊನೆ ಉಸಿರಿನವರೆಗೆ ಉಳಿಸಿಕೊಂಡಿದ್ದರು. ಬಸವರಾಜ ಮತ್ತು ಶ್ರೀದೇವಿ ಎನ್ನುವ ಇಬ್ಬರು ಮಕ್ಕಳಿಗೆ ಜನ್ಮ ನೀಡಿ ಹನುಮಸಾಗರದಲ್ಲಿಯೆ

ವಾಸವಾಗಿದ್ದು. ಗಂಡ ಮತ್ತು ಮಗನ ಸಾವಿನಿಂದ ಜರ್ಝರಿತರಾಗಿ ಕೊನೆ ಉಸಿರೆಳೆದರು. ಗಂಡನ ಮೊದಲಿನ ಮಕ್ಕಳನ್ನಲ್ಲದೆ ವಿರುಪಾಕ್ಷಪ್ಪ ಎನ್ನುವ ದತ್ತು ಮಗನನ್ನು ಬೆಳೆಸಿ ಅವರಿಗೆಲ್ಲ ಮದುವೆ ಮಾಡಿ ಕಾಪಾಡಿದ್ದು ಅವರ ವಿಶಾಲ ಹೃದಯವನ್ನು ತೋರಿಸುತ್ತದೆ.

೧೯೯೪ರಲ್ಲಿ ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪುರಸ್ಕಾರ ಪಡೆದ ಸರೋಜಮ್ಮನವರಿಗೆ ೨೦೦೭ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ದಿನವೆ ಪತಿ ಧುತ್ತರಗಿಯವರ ನಿಧನದ ಸುದ್ದಿ ತಿಳಿದದ್ದು ಆಘಾತಕಾರಿ ವಿಷಯವಾಯಿತು. ಅವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ ತನಗಿಂತಲು ಕಿರಿಯರಿಗೆ ಸಿಕ್ಕರೂ ತನಗೆ ಸಿಗಲಿಲ್ಲ ಎನ್ನುವ ಕೊರಗಿನೊಂದಿಗೆ ಕೊನೆ ಉಸಿರೆಳೆಯುವಂತಾಯಿತು.

## ರಂಗರಾಜ್ಯದ ಅರಸು

ಹನುಮಸಾಗರದ ತಿಪ್ಪರಾಜು ತಾಯಿ ನಾಗರತ್ನಮ್ಮ ಮತ್ತು ತಂದೆ ಯಮನಪ್ಪನವರ ಹೊಟ್ಟೆಯಲ್ಲಿ ಹುಟ್ಟಿ ಬಡನೇಕಾರಿಕೆಯ ವೃತ್ತಿಯಿಂದ ಹೊರಬಂದು ಎಚ್.ಟಿ. ಅರಸು ಎಂದು ಖ್ಯಾತರಾಗಿ ನಿಜವಾಗಿಯೂ ರಂಗರಾಜ್ಯದ ಅರಸನಾಗಿ ಮೆರೆದದ್ದೇ ಒಂದು ರೋಚಕ ಇತಿಹಾಸ.

ಮಗನಲ್ಲಿದ್ದ ರಂಗಾಸಕ್ತಿಯನ್ನು ಕಂಡು ಎಲ್ಲಿ ತಮ್ಮ ತಂದೆ ತಾಯಿ ಮಗ ಅದನ್ನೇ ತನ್ನ ವೃತ್ತಿಯನ್ನಾಗಿ ಸ್ವೀಕರಿಸುತ್ತಾನೋ ಎನ್ನುವ ಭಯದಲ್ಲಿ ವಿರೋಧಿಸಿದರು. ಹನುಮಸಾಗರದಲ್ಲಿ ಆಗ ಮುಲ್ಕಿಯೆಂದರೆ ಏಳನೆಯ ತರಗತಿಯವರೆಗೆ ಮಾತ್ರ ಓದಿ ಮುಂದೆ ಕಲಿಯಲಿಕ್ಕಾಗದೆ ನೇಕಾರಿಕಾ ವೃತ್ತಿಯಲ್ಲಿ ತೊಡಗಿದರು ಬಾಲ ನಟನಾಗಿ ನಂತರ ಸ್ತ್ರೀ ಪಾತ್ರ ಮಾಡುತ್ತ ಅಮ್ಯೆಚೂರ್ ಕಂಪನಿಗಳಲ್ಲಿ ನಟಿಸುತ್ತಿದ್ದ ತಿಪ್ಪರಾಜು ತಮ್ಮ ೧೮ನೆಯ ವಯಸ್ಸಿನಲ್ಲಿಯೆ ಹೇಮಾವತಿ ಎನ್ನುವ ಕನ್ನೆಯ ಕೈ ಹಿಡಿದು. ಬಣ್ಣ ಹಚ್ಚುವ ಖಯಾಲಿಯಲ್ಲಿ ಮನೆಯನ್ನೆ ಮರೆಯುತ್ತಿದ್ದರಿಂದ ತಂದೆ ಯಮನಪ್ಪ ಕೋಪಗೊಂಡು ಬೇರೆ ಮನೆ ಮಾಡಲು ಆದೇಶಿಸುತ್ತಾರೆ. ಅದರಿಂದ ಸ್ವತಂತ್ರಗೊಂಡಂತಾದ್ದರಿಂದ ಮತ್ತಷ್ಟು ಗರಿಗೆದರಿ ವೃತ್ತಿರಂಗಭೂಮಿಯ ಕಡೆ ತಿರುಗಿದ ತಿಪ್ಪರಾಜು ಹೊರಳಿ ನೋಡಲಿಲ್ಲ.

೧೯೨೭ ತಮ್ಮ ಏಳನೆಯ ವಯಸ್ಸಿನಲ್ಲಿ 'ಭಕ್ತ ಪ್ರಹ್ಲಾದ' ನಾಟಕದಲ್ಲಿ ಪ್ರಹ್ಲಾದನ ಪಾತ್ರ ಮಾಡಿ ಗಮನ ಸೆಳೆದಿದ್ದ ತಿಪ್ಪರಾಜು ೧೭ನೆಯ ವಯಸ್ಸಿನಲ್ಲಿ ಸ್ತ್ರೀಪಾತ್ರ ಮಾಡತೊಡಗುತ್ತಾರೆ. ನಂತರ "ಜಯ ಲಕ್ಷ್ಮೀ ನಾಟ್ಯ ಸಂಘ" ಎನ್ನುವ ವೃತ್ತಿ ಕಂಪನಿ ಸೇರಿ ಅದನ್ನೇ ವೃತ್ತಿಯಾಗಿಸಿಕೊಂಡು ಹೆಂಡತಿಯನ್ನು ಬೇರೆ ಮನೆಯಲ್ಲಿಟ್ಟು ಕಾಪಾಡುತ್ತ ನಾಲ್ಕು ಮಕ್ಕಳ ತಂದೆಯಾಗುತ್ತಾರೆ.

ಏಣಗಿ ಬಾಳಪ್ಪನವರ ಕಂಪನಿ, ಗೋಕಾಕ ಕಂಪನಿ, ಕನ್ನಡ ಥೇಟರ್ಸ್, ದೇಸಾಯಿ ಕಂಪನಿ, ಶ್ರೀಕಂಠೇಶ್ವರ ನಾಟಕ ಮಂಡಳಿ, ಹೀಗೆ ಹಲವಾರು ಕಂಪನಿಗಳಲ್ಲಿ ಕಲ್ಯಾಣ ಕ್ರಾಂತಿ, ದ್ರುಪದ ಕನ್ಯೆ, ಭಕ್ತಕುಂಬಾರ, ಚಿತ್ರಾಂಗದ, ಕುರುಕ್ಷೇತ್ರ, ರಕ್ತರಾತ್ರಿ,

ಅಕ್ಷಯಾಂಬರ, ಬಾಣಸಿಗ ಭೀಮ ಮುಂತಾದ ಪೌರಾಣಿಕ ಮತ್ತು ಬೆಳ್ಳಿ ಚುಕ್ಕಿ, ಕುಂಕುಮ ಮೊದಲಾದ ಸಾಮಾಜಿಕ ನಾಟಕ. ಸಿಂಧೂರ ಲಕ್ಷ್ಮಣ, ಚಂದ್ರಹಾಸ, ರಾಜಾವಿಕ್ರಮ ಐತಿಹಾಸಿಕ ನಾಟಕಗಳಲ್ಲೆಲ್ಲ ಅಭಿನಯಿಸಿ ಹೆಸರು ಗಳಿಸಿದ ತಿಪ್ಪರಾಜು, ರಂಗಸಜ್ಜಿಕೆಯಲ್ಲಿ ಅರಸನಾಗಿ ಮೆರೆದ ಕಾರಣ ಗೋಕಾಕ ಕಂಪನಿಯಲ್ಲಿದ್ದಾಗ ಇವರ ಅಭಿನಯ ನೋಡಿ ಮೆಚ್ಚಿದ ಸಿನಿಮಾ ನಿರ್ದೇಶಕ ಶಂಕರ ಸಿಂಗ್ ಇವರಿಗೆ ಸಿನಿಮಾದಲ್ಲಿ ಒಂದು ಛಾನ್ಸ್ ಕೊಡಬೇಕಂದುಕೊಂಡು ಮೈಸೂರಿಗೆ ಬರಲು ಹೇಳಿ ಹೋದರು. ಆಗ ಅವರು ತಿಪ್ಪರಾಜು ಎನ್ನುವ ಹೆಸರು ಸರಿಯಿಲ್ಲ. ಎಚ್. ಎಂದರೆ ಹನುಮಸಾಗರ, ಟಿ. ಎಂದರೆ ತಿಪ್ಪರಾಜು ಜೊತೆಗೆ ಮೈಸೂರಿನ ಅರಸು ಸೇರಿಸಿ ಎಚ್.ಟಿ. ಅರಸು ಎಂದು ಹೇಳಬೇಕೆಂದು ಹೇಳಿದ್ದೆ ಅದು ರಂಗ ಭೂಮಿಯ ಖ್ಯಾತಿಯ ಹೆಸರಾಯಿತು.

ಖಳನಾಯಕನ ಪಾತ್ರಗಳಿಗೆ ಜೀವ ತುಂಬುತ್ತಿದ್ದ ಎಚ್.ಟಿ.ಅರಸರ ಅಭಿನಯ ಕಂಡು ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್.ಆರ್.ಕಂಠಿ ಮನ ತುಂಬಿ ಹೊಗಳಿದ್ದಾರೆ. ೧೯೬೧ರಲ್ಲಿ ಮೈಸೂರಿನ ಕನ್ನಡ ಥೇಟರ್ಸ್ ಕಂಪನಿಯಲ್ಲಿ 'ರಾಜಾವಿಕ್ರಮ' ನಾಟಕ ದಲ್ಲಿ ದುರ್ಜಯನ ಪಾತ್ರವಹಿಸುತ್ತಿದ್ದರು. ಆಗ ಅದರ ಪ್ರಯೋಗ ಬೆಂಗಳೂರಿನಲ್ಲಿದ್ದದ್ದರಿಂದ ಆಗಿನ ಪ್ರಧಾನಿಯಾಗಿದ್ದ ಜವಾಹರಲಾಲ ನೆಹರು ಬೆಂಗಳೂರಿಗೆ ಬಂದವರು ತಮ್ಮ ಬಿಡುವಿಲ್ಲದ ಕೆಲಸದ ನಡುವೆಯೂ ಕೆಲ ನಿಮಿಷ ಇವರ ನಾಟಕ ನೋಡಲು ಬರುತ್ತಾರೆ. ಬಂದವರಿಗೆ ನಾಟಕ ಸೆರೆಹಿಡಿದ ಕಾರಣ ಭಾಷೆ ತಿಳಿಯದಿದ್ದರೂ ಅರಸು ಅವರ ಅಭಿನಯವನ್ನು ಬೆರಗಾಗಿ ನೋಡುತ್ತ ಒಂದೂವರೆ ತಾಸು ಕೂಡ್ರುತ್ತಾರೆ. ನಂತರ ರಂಗಸಜ್ಜಿಕೆಗೆ ಬಂದು ದುರ್ಜಯನ ಪಾತ್ರಧಾರಿ ಅರಸು ಅವರನ್ನು ಪ್ರಶಂಸೆ ಮಾಡಿ ಸನ್ಮಾನಿಸುತ್ತಾರೆ. ಇಂಥ ಸೌಭಾಗ್ಯ ಕೆಲವೇ ಕೆಲವು ಕಲಾವಿದರಿಗೆ ಮಾತ್ರ ದೊರೆಯುವಂಥದ್ದು.

ಓಬಳೇಶ್ವರ, ಎಲಿವಾಳ ಸಿದ್ಧಯ್ಯ, ಮಾರ್ತಾಂಡರಾವ್, ರಟ್ಟೆಹಳ್ಳಿ ಗಂಗಾಧರಪ್ಪ ಮುಂತಾದ ಮಹಾನ್ ನಟರ ಒಡನಾಡಿಯಾಗಿದ್ದ ಅರಸು ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ರಾಜಕುಮಾರ್ ಜೊತೆ ಮಾರ್ಗದರ್ಶಿ, ಮೇಯರ್ ಮುತ್ತಣ್ಣ, ಮಯೂರ ಸಿನಿಮಾಗಳಲ್ಲಿ ನಟಿಸಿ ಮನೋಜ್ಞ ಅಭಿನಯ ನೀಡಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿವೀರಣ್ಣ ಪ್ರಶಸ್ತಿಗಳಲ್ಲದೆ ಅನೇಕ ಸಂಘ ಸಂಸ್ಥೆಗಳು ಅವರಿಗೆ ಪ್ರಶಸ್ತಿ, ಸನ್ಮಾನ ಗೌರವಗಳ ಮೂಲಕ ಅಭಿನಂದಿಸಿವೆ. ಇಂಥ ಅಪರೂಪದ ಕಲಾವಿದನಿಗೆ ಕೊನೆಯವರೆಗೂ ಕಷ್ಟಗಳು ತಪ್ಪಲಿಲ್ಲ.

ಗುಬ್ಬಿ ವೀರಣ್ಣ ಪ್ರಶಸ್ತಿ ಅರಸುಗಿಂತ ಮೊದಲು ಗಿರೀಶ ಕಾರ್ನಾಡರಿಗೆ ಸಿಕ್ಕಾಗ ಅವರು ಪ್ರಶಸ್ತಿ ಸ್ವೀಕರಿಸುವಾಗ, "ಈ ಪ್ರಶಸ್ತಿ ನನಗಿಂತ ಅರಸು ಅವರಿಗೆ ಸಲ್ಲಬೇಕಿತ್ತು" ಎಂದ ಮಾತು.. ಅವರಲ್ಲಿದ್ದ ಕಲಾಪ್ರತಿಭೆಗೆ ನಿದರ್ಶನವಾಗಿದೆ.

ಮೇಕಪ್‌ನಲ್ಲಿಯೂ ಪರಿಣತಿ ಸಾಧಿಸಿದ್ದ ಅರಸು ತಮ್ಮ ಪಾತ್ರಕ್ಕೆ ತಾವೇ ಬಣ್ಣ ಬಳಿದುಕೊಂಡು ಮೇಕಪ್‌ನೊಂದಿಗೆ ಕ್ಷಣಾರ್ಧದಲ್ಲಿ ಸಿದ್ಧರಾಗುತ್ತಿದ್ದರಲ್ಲದೆ ಬೇರೆ ಪಾತ್ರಗಳನ್ನೂ ಸಿದ್ಧಗೊಳಿಸುತ್ತಿದ್ದುದು ಇಲ್ಲಿಯ ವಿಶೇಷ.

## ನಡೆದಾಡುವ ರಂಗಪ್ರತಿಭೆ ಅಂಜಲಿದೇವಿ

ಜಿ. ಎನ್. ಅಂಜಲಿದೇವಿ ಎಂದು ವೃತ್ತಿರಂಗ ಭೂಮಿಯಲ್ಲಿ ಹೆಸರು ಮಾಡಿದ್ದ ಪ್ರಸ್ತುತ ೧೯೯೧ರಿಂದ ಗಂಗಾವತಿಯಲ್ಲಿಯೆ ವಾಸವಾಗಿರುವ ಅಂಜಲಿದೇವಿ, ದಿ.೧೦-೩-೧೯೪೦ರಲ್ಲಿ ತಮ್ಮ ತಂದೆ ಕಟ್ಟಿದ "ಶಾರದಾ ನಾಟ್ಯ ಸಂಘ ಅದೋನಿ" ಕಂಪನಿ ಬಳ್ಳಾರಿಯಲ್ಲಿದ್ದಾಗ ಹುಟ್ಟಿದವರು; ಮುಂದೆ ಆ ಕಂಪನಿ ೧೫ ವರ್ಷಗಳ ಕಾಲ ನಡೆದು ನಿಂತು ಹೋದಾಗ ಮತ್ತೆ ಬೇರೆ ಬೇರೆ ಕಂಪನಿ ಅಲೆದಾಡಿ ಗಂಡ ನೀಲಕಂಠಪ್ಪನವರ ಗದಗಿನಲ್ಲಿ ಕೆಲವು ದಿವಸ ವಾಸವಾಗಿ ಕೊನೆಗೆ ಕೊಪ್ಪಳ ಜಿಲ್ಲೆಯಲ್ಲಿಯೆ ನೆಲೆಯೂರಿದ್ದರಿಂದ ಇವರು ಸಂಪೂರ್ಣ ಈ ಜಿಲ್ಲೆಯ ವ್ಯಕ್ತಿಯೆ ಎನಿಸಿದ್ದಾರೆ.

ಅಂಜಲಿ ೧೯೪೬ರಲ್ಲಿ ತನ್ನ ಆರನೆಯ ವಯಸ್ಸಿನಲ್ಲಿಯೆ 'ಸತ್ಯವಾನ ಸಾವಿತ್ರಿ' ನಾಟಕದಲ್ಲಿ ಬಾಲ ಸತ್ಯವಾನನಾಗಿ ಪಾದಾರ್ಪಣೆ ಮಾಡಿದವರು.. ಕೋಗಿಲೆಯಕಂಠ, ನವಿಲಿನ ನರ್ತನದ ಬೆಡಗಿನಿಂದ ಪ್ರೇಕ್ಷರನ್ನು ಬೆರಗುಗೊಳಿಸಿದ ಹುಡುಗಿ ಕ್ರಮೇಣ ನಾಯಕಿ ಪಾತ್ರಗಳಿಗೆ ಬಡ್ತಿ ಪಡೆದು. ಪ್ರೇಮ ಜ್ಯೋತಿ, ಜಗಜ್ಯೋತಿ ಬಸವೇಶ್ವರ, ಶಿವಜಲಂಧರ ಮುಂತಾದ ನಾಟಕಗಳಲ್ಲಿ ನಾಯಕಿಯಾಗಿ, ಖಳನಾಯಕಿಯಾಗಿ ಮೆಚ್ಚುಗೆ ಪಡೆದರು. ಇವರು ಹೇಮರೆಡ್ಡಿ ಮಲ್ಲಮ್ಮನ ಪಾತ್ರದಿಂದ ಕಲಿಯುಗದ ಮಲ್ಲಮನೆಂದೇ ಕರೆಸಿಕೊಂಡರು.

ಗೋಕಾಕ ಬಸವಣೆಪ್ಪನ ಕಂಪನಿಯಿಂದ ಅಂಜಲಿಯವರಿಗೆ ಬುಲಾವ್ ಬಂದಾಗ; ಅಲ್ಲಿ ರಕ್ತ ರಾತ್ರಿ ನಾಟಕದ ಇವರ ದ್ರೌಪದಿ ಪಾತ್ರಕ್ಕೆ ಕರ್ನಾಟಕದ ಶೇಕ್ಸ್‌ಪಿಯರ್ ಎಂದೇ ಖ್ಯಾತರಾದ ಆ ನಾಟಕದ ಕರ್ತೃ ಸ್ವತಃ ಕಂದಗಲ್ ಹನುಮಂತರಾಯರೆ ಅದರ ನಿರ್ದೇಶಕರೆಂದು ತಿಳಿದಾಗ ಭಯ ಮತ್ತು ಸಂತಸ ಎರಡನ್ನು ಏಕಕಾಲದಲ್ಲಿ ಅನುಭವಿಸಿದ್ದುಂಟು. ಅದರಲ್ಲಿ ಎಲಿವಾಳ ಸಿದ್ಧಯ್ಯನಂಥವರ ಅಶ್ವತ್ಥಾಮನ ಪಾತ್ರವೆಂದಾಗ ಕೇಳಬೇಕೆ? ಆ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದಾಗ ದ್ರೌಪದಿಯ ಪಾತ್ರಕ್ಕೆ ಅವರನ್ನು ಪಟ್ಟಗಟ್ಟಿದಂತಾಯಿತು. ಅದರಿಂದ ಕರ್ನಾಟಕದ ಹಳ್ಳಿ ಹಳ್ಳಿಗಳಿಗೆ ಹೋಗಿ ಅಮ್ಯೆಚೂರ್ ಕಂಪನಿಗಳಲ್ಲಿ ಆ ಪಾತ್ರ ಮಾಡಿದ ಯಶಸ್ಸು ಅಂಜಲಿಯವರದು.

ಪಡೆಸೂರ ಕಂಪನಿ ಗದಗಿನಲ್ಲಿದ್ದಾಗ ಅದರಲ್ಲಿ ಬಸವೇಶ್ವರನ ಪಾತ್ರ ಮಾಡುತ್ತಿದ್ದ ಉತ್ತಮ ಗಾಯಕ, ನಟ, ಸಂಗೀತ ನಿರ್ದೇಶಕ ನೀಲಕಂಠಪ್ಪ ಮತ್ತು ನೀಲಮ್ಮನ ಪಾತ್ರ ಮಾಡುತ್ತಿದ್ದ ಅಂಜಲಿದೇವಿ ಪರಸ್ಪರ ಮನಸೋತು ನಾಟಕದ ದಂಪತಿಗಳು ನಿಜಜೀವನದ ದಂಪತಿಗಳಾಗಿ ದಿ.೧೨-೧೨-೧೯೬೩ರಲ್ಲಿ ವಿವಾಹವಾದರು. ಇವರ

ಜೋಡಿಯ ಸಂಗೊಳ್ಳಿರಾಯಣ್ಣ ೫೦೧ ಪ್ರಯೋಗ ಕಂಡರೆ; ಬೂದಿ ಮುಚ್ಚಿದ ಕೆಂಡ ಗದಗಿನಲ್ಲಿಯೆ ೨೦೧ ಪ್ರಯೋಗ ಕಂಡಿದೆ.

ಇಟಗಿ ಗ್ರಾಮದವರು ಇಟಗಿ ಭೀಮಾಂಬಿಕಾ ನಾಟ್ಯ ಸಂಘ ಎನ್ನುವದನ್ನು ಹುಟ್ಟುಹಾಕಿ ಅದರಲ್ಲಿಯ ಮಹಾಶರಣೆ, ಮೂಢನಂಬಿಕೆಗಳನ್ನು ಬಿಡಿಸಿ ಚರಕದ ಕಾಯಕತತ್ವ ಸಾರಿದ ಭೀಮಾಂಬಿಕೆಯ ಪಾತ್ರಕ್ಕಾಗಿ ಅಂಜಲಿದೇವಿಯನ್ನೆ ಆಹ್ವಾನಿಸಿದ್ದರಿಂದ ಇವರ ಪಕ್ವ ಮತ್ತು ಭಕ್ತಿಪೂರ್ಣ ಅಭಿನಯದಿಂದ ಮತ್ತೊಮ್ಮೆ ಭೀಮಾಂಬಿಕೆ ಅವತರಿಸಿದಂತೆ ಮಾಡಿದರಲ್ಲದೆ. ನಾಟಕ ಅಭೂತ ಪೂರ್ವ ಯಶಸ್ಸು ಕಂಡು ಹಲವಾರು ಪ್ರಯೋಗವಾದ ಬಳಿಕ ಅಂಜಲಿದೇವಿ ಭಿಮಾಂಬಿಕೆಯ ಪರಮಭಕ್ತಳಾಗಿ ಈಗಲೂ ಗಂಗಾವತಿ ಸಮೀಪದ ಕ್ಯಾಂಪಿನಲ್ಲಿ ತಾವೇ ಭೀಮಾಂಬಿಕೆಯ ಮಂದಿರ ನಿರ್ಮಿಸಿಕೊಂಡು ನಿವೃತ್ತಿ ಜೀವನ ಕಳೆಯುತ್ತಿರುವದು ಉತ್ತಮ ಕಲಾವಿದೆಯ ಉನ್ನತ ಮಟ್ಟದ ಬದುಕಿಗೆ ನಿದರ್ಶನವಾಗಿದೆ.

೧೯೬೪ರಲ್ಲಿ ಒಬ್ಬಳೆ ಮಗಳು ವಂದನಾ ಹುಟ್ಟಿ ಆಕೆಯೂ ತಾಯಿಯ ಹಾದಿಯಲ್ಲಿ ಮುಂದುವರೆದರೆ ದಿ. ೩೦-೦೩-೧೯೮೪ ರಲ್ಲಿ ಪತಿ ನೀಲಕಂಠಪ್ಪ ನಿಧನರಾಗಿದ್ದರಿಂದ ಅವರಿದ್ದ ಗದಗನ್ನೆ ಬಿಟ್ಟು ಗಂಗಾವತಿಗೆ ಬಂದು ನೆಲೆಸುತ್ತಾರೆ.

೧೯೯೮ರಲ್ಲಿ ಗಂಗಾವತಿಯಲ್ಲಿ ನಡೆದ ರಂಗೋತ್ಸವದಲ್ಲಿ ಅಂಜಲಿದೇವಿಗೆ ವಿಶೇಷ ಸನ್ಮಾನವಾದರೆ ೧೯೯೯ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಈಗ ಎಲ್ಲ ಸದ್ದು ಗದ್ದಲದಿಂದ ದೂರಾಗಿ ಏಕಾಂತ ಜೀವನ ಅನುಭವಿಸುತ್ತಿರುವ ಅಂಜಲಿದೇವಿ ನಮ್ಮ ನಡುವಿನ ಸಂತತಳಂತೆ ತೋರುತ್ತಿದ್ದಾಳೆ.

## ರಂಗಲತೆಯಲ್ಲರಳಿದ ಕಲಾಕುಸುಮ ವಂದನಾ

ಮಹಾನ್ ಕಲಾವಿದರಾದ ಅಂಜಲಿದೇವಿ ಮತ್ತು ನೀಲಕಂಠಪ್ಪನವರ ಮಗಳಾದ ವಂದನಾ ಅವರ ತಂದೆ ತಾಯಿಯರ ಮುಂದುವರಿದ ಭಾಗವೆಂಬಂತೆ. ಮೂವತ್ತು ವರ್ಷಗಳಿಂದ ಕಲಾಸೇವೆ ಮಾಡುತ್ತ ಗಂಗಾವತಿಯಲ್ಲಿಯೆ ನೆಲೆಸಿದ್ದಾಳೆ. ಎಸ್.ಎಸ್. ಎಲ್.ಸಿ ವರೆಗೆ ಓದಿ ಬಣ್ಣದ ಬದುಕಿಗೆ ಕಾಲಿಟ್ಟ ವಂದನಾ, ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ, ಧುತ್ತರಗಿಯವರ ಕಂಪನಿ, ವೀರೇಶ್ವರ ನಾಟ್ಯ ಸಂಘ ಗದಗ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ, ಸಿದ್ದರಾಮೇಶ್ವರ ನಾಟ್ಯ ಸಂಘ ಇಲಕಲ್ ಮುಂತಾದ ಪ್ರಮುಖ ಕಂಪನಿಗಳಲ್ಲಿ ನಟಿಸಿದ್ದಾರೆ.

ತಾಯಿಯಂತೆಯೆ ಹಾಡುವ ಕಂಠಸಿರಿ, ಅಭಿನಯ ಹೊಂದಿರುವ ವಂದನಾ ರಂಗಲತೆಯಲ್ಲರಳಿದ ಕಲಾಕುಸುಮ ಎನ್ನುವದಕ್ಕೆ ಅನ್ವರ್ಥಕವಾಗಿದ್ದಾಳೆ. ಹಾಗಾಗಿ ತಾಯಿಯ ಜೊತೆಯಲ್ಲಿಯೆ ಇವರ ಪರಿಚಯ ಸೂಕ್ತವಾಗಿದೆ.

ರಕ್ತರಾತ್ರಿ, ಅಶ್ವಮೇಧ, ಕುರುಕ್ಷೇತ್ರ, ಚಿತ್ರಾಂಗದ ಮುಂತಾದ ಪೌರಾಣಿಕ ನಾಟಕಗಳಲ್ಲಿ ದ್ರೌಪದಿ, ಉತ್ತರೆ, ಚಿತ್ರಾಂಗದ ಪಾತ್ರಗಳನ್ನು ಪರಕಾಯ ಪ್ರವೇಶದಂತೆ

ಅಭಿನಯಿಸಿ ತಾಯಿಯನ್ನು ನೆನಪಿಸುವಂತೆ ಮಾಡಿದರೆ. ಮಾತಂಗಕನ್ಯೆ, ಕಿತ್ತೂರಚನ್ನಮ್ಮ, ಮಲಮಗಳು, ಬೆಳ್ಳಿಚುಕ್ಕಿ ಹೀಗೆ ಸಾಮಾಜಿಕ ಐತಿಹಾಸಿಕ ನಾಟಕಗಳಲ್ಲಿ ಎಲ್ಲಾ ಬಗೆಯ ಪಾತ್ರ ಮಾಡುವ ಮೂಲಕ ರಂಗಭೂಮಿಯಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಸುತ್ತಲಿನ ಅಮ್ಯೆಚೂರ್ ಕಂಪನಿಗಳಲ್ಲಿ ನಟಿಸಿ ಅನೇಕ ಹವ್ಯಾಸಿ ಸಂಘ ಸಂಸ್ಥೆಗಳ ಸನ್ಮಾನಕ್ಕೆ ಪಾತ್ರವಾಗಿದ್ದಾರೆ.

ಪ್ರಸ್ತುತ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ವಂದನಾ ಕೊಪ್ಪಳ ತಲೂಕು ಕಲಾವಿದರ ಸಂಘದ ಪದಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಕಲಾಕುಶಲ ಬಾಲರಾಜ ಸಿಂಗನಾಳ

ಕೊಪ್ಪಳ ಜಿಲ್ಲೆಯಲ್ಲಿಯೆ ಹುಟ್ಟಿ ಪ್ರಸ್ತುತ ಕೊಪ್ಪಳ ಜಿಲ್ಲೆಯ ಗಂಗಾವತಿಯ ಸಿಂಗನಾಳಲ್ಲಿ ವಾಸವಿರುವ ಬಿ. ಬಾಲರಾಜ ಸಿಂಗನಾಳ ನಟನಾಗಿ, ನಾಟಕಕಾರನಾಗಿ ಮತ್ತು ನಿರ್ದೇಶಕನಾಗಿ ಅದ್ವಿತೀಯ ಸಾಧನೆ ಮಾಡಿದ್ದರೂ ಹೆಚ್ಚು ಪ್ರಸ್ತಾಪವಾಗದೆ ಜಿಲ್ಲೆಗೆ ಅಪರಿಚಿತ ವ್ಯಕ್ತಿಯಾಗಿಯೆ ಉಳಿದಿದ್ದಾರೆ.

೧೯೩೯ ಮೇ ೨ ರಂದು ಜಿಲ್ಲೆಯ ಕುಷ್ಟಗಿ ತಾಲುಕಿನ ಗ್ವಾತಗಿ ಗ್ರಾಮದಲ್ಲಿ ಹನುಮಂತಪ್ಪ ಹಾಗು ಯಮನಮ್ಮ ದಂಪತಿಗಳ ಏಕೈಕ ಮಗನಾಗಿ ಜನಿಸಿದ ಬಾಲರಾಜ ಪ್ರಾಥಮಿಕ ಶಿಕ್ಷಣ ಇಲ್ಲಿಯೇ ಪೂರೈಸಿ ಏಳನೆಯ ತರಗತಿಯನ್ನು ದಾವಣಗೆರೆಯ ಚಿಕ್ಕಮ್ಮ ದುರಗಮ್ಮನ ಮನೆಯಲ್ಲಿದ್ದು ಪೂರೈಸಿದರು ನಂತರ ಅಲ್ಲಿಯ ಸಂಗೀತ ವಿದ್ವಾಂಸರಾದ ಎನ್. ನಾರಾಯಣ ರಾವ ಮಿರಜಕರ ಅವರಲ್ಲಿ ಐದು ವರ್ಷಗಳ ಸಂಗೀತ ಅಭ್ಯಾಸ ಮಾಡಿದರು.

ಅಕ್ಕನಾಗಮ್ಮ ಎನ್ನುವವರೊಂದಿಗೆ ಮದುವೆಯಾದ ಬಾಲರಾಜ ಮಡದಿಯೊಂದಿಗೆ ಕಲಾಸೇವೆ ಮಾಡುತ್ತ ರಾಜ್ಯಾದ್ಯಂತ ಸಂಚರಿಸಿದ್ದಾರೆ. 'ಗಂಡನ ಮನೆ', ಪುತ್ಥಳಿ, ಹರಗಿರಜೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಕೀರ್ತಿ ತಂದ ಕಿರಣ-೧೯೭೪, ನೀತಿ ಬೆಳಗಿದ ಜ್ಯೋತಿ-೧೯೭೪, ಗುರಿ ಸಾಧಿಸಿದ ಗಂಡು-೧೯೮೫, ಸಿಡಿದೆದ್ದ ಸಿಂಹ-೧೯೮೭, ಕಲಿಯುಗ ಕಾಲಾಂತಕರು-೨೦೦೫ ಮತ್ತು ಪ್ರಚಂಡ ರಾವಣ, ಲವಕುಶ ವಿಜಯ ಎನ್ನುವ ಪೌರಾಣಿಕ ನಾಟಕಗಳನ್ನು, ಅಪರಾಧಿಯಾರು? ಎಂಬ ಏಕಾಂಕ ನಾಟಕವನ್ನು ರಚಿಸಿದ್ದಾರೆ.

ಬಾಲರಾಜ ನಿರ್ದೇಶಿಸಿದ ನಾಟಕಗಳು ಸಾಮ್ರಾಟ ಉತ್ತರ ಕುಮಾರ, ಹರಗಿರಜೆ, ರಕ್ತರಾತ್ರಿ, ಕುರುಕ್ಷೇತ್ರ, ಶಿವಶರಣ ವೀರಸಂಗಯ್ಯ, ಆದರ್ಶ ಪ್ರೇಮ ಮತ್ತು ತಮ್ಮ ನಾಟಕಗಳಿಗೆಲ್ಲ ತಾವೇ ಸಂಗೀತ ನೀಡಿ ನಿರ್ದೇಶನ ಮಾಡಿದ್ದಾರೆ.

ಕವಿಕಿರಣ ಪ್ರಶಸ್ತಿ, ರಂಗ ಮಲ್ಲಿಗೆ ನಾಟಕೋತ್ಸವ ಪ್ರಶಸ್ತಿ, ಎಮ್ಮಿಗನೂರ ಜಡಿಶಾತನವರಿಂದ ಕಲಾಕುಶಲ ಪ್ರಶಸ್ತಿ, ರಂಗವಿಭೂಷಣ ಪ್ರಶಸ್ತಿ-೨೦೧೧ ಪಡೆದಿದ್ದಾರೆ.

## ರಂಗದಿಂದ ರಂಗಿನ ಬದುಕು ಪಡೆದ ಪ್ರಹ್ಲಾದ ಬೆಟಗೇರಿ

ಮೂಲತಃ ಕೊಪ್ಪಳ ಪಕ್ಕದ ಭಾಗ್ಯನಗರದ ವಾಸಿಯಾದ ಪ್ರಹ್ಲಾದ್ ಬೆಟಗೇರಿ ದಿ.೭-೧೧-೧೯೫೨ರಲ್ಲಿ ಜನಿಸಿದವರು. ಗವಿ ಸಿದ್ಧೇಶ್ವರ ಕಾಲೇಜಿನಲ್ಲಿ ಬಿ.ಎ ಪಾಸಾದ ಬಳಿಕ ನಾಟಕದ ಹುಚ್ಚಿನಿಂದ ಮನೆಯವರ ವಿರೋಧವನ್ನೂ ಲೆಕ್ಕಿಸದೆ. ಇದೇ ಭಾಗ್ಯನಗರದ ಸಾಹಿತಿ ವಿಠ್ಠಪ್ಪ ಗೋರಂಟ್ಲಿ ಬರೆದ 'ದೇವರ ಹೂವು' ನಾಟಕದಲ್ಲಿ ವಿಲಾಸ್ ಎನ್ನುವ ವಿಲನ್ ಪಾತ್ರ ವಹಿಸಿ ದಿ.೨೪-೧೨-೧೯೭೩ ರಂದು ಅಭಿನಯಿಸಿದಾಗ ಖಳನಾಯಕನ ಪಾತ್ರಕ್ಕೆ ಹೊಸ ಕಳೆಯನ್ನು ಕೊಟ್ಟು ಇವರೊಬ್ಬ ಕಲಾವಿದನಾಗುವ ಪ್ರತಿಭೆಯುಳ್ಳವರೆಂದು ನಿರೂಪಿಸಿದ ಪ್ರಹ್ಲಾದ ಅದೇ ಖಯಾಲಿಯಿಂದ ೭೭ರಲ್ಲಿ ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಕಂಪನಿಯನ್ನು ಸೇರಿ ವೃತ್ತಿ ರಂಗಭೂಮಿಯ ನಟನಾಗುತ್ತಾರೆ.

ನಂತರ ಶಿವಲಿಂಗ ಶಾಸ್ತ್ರಿಗಳ ಕಂಪನಿಯಲ್ಲಿಯೂ ಕೆಲವು ಕಾಲ ಪಾತ್ರ ವಹಿಸಿ ಮತ್ತೆ ಭಾಗ್ಯನಗರಕ್ಕೆ ಬಂದು ಪ್ರಗತಿ ಕಲಾವೇದಿಕೆ ಎನ್ನುವ ಹವ್ಯಾಸಿ ಕಲಾತಂಡವನ್ನು ಕೊಪ್ಪಳದಲ್ಲಿ ರಚಿಸಿ ಅದರಿಂದ ಚಂದ್ರಶೇಖರ ಕಂಬಾರರ ಅಸಂಗತ ನಾಟಕ 'ಚಾಳೇಶ' ಪ್ರಯೋಗಿಸಿದಾಗ ಅದರಲ್ಲಿ ಶಂಕರನ ಪಾತ್ರವಹಿಸುತ್ತಾರೆ. ಕುದರಿ ಮೋತಿ, ಗೋಕಾಕ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ನಂತರ ಬೆಂಗಳೂರು ಸೇರುವ ಪ್ರಹ್ಲಾದ್. ಅನೇಕ ಚಲನಚಿತ್ರಗಳಲ್ಲಿ ನಟಿಸಿದ್ದಲ್ಲದೆ, ಈಶ್ವರ ಅಲ್ಲಾ ನೀನೇ ಎಲ್ಲಾ ಮತ್ತು ಬೆಂಗಳೂರು ಇದು ನಮ್ಮ ಊರು ಎಂಬ ಧಾರವಾಹಿಗಳ ನಿರ್ವಹಣೆ ಹೊತ್ತು ಯಶಸ್ವಿಗೊಳಿಸಿದ್ದಾರೆ.

ವಿಶ್ವೇಶ್ವರಯ್ಯಾ ಪ್ರತಿಷ್ಠಾನ ಮುಂತಾದ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಹಲವು ಸಾಹಿತ್ಯಿಕ ಕೃತಿ ರಚಿಸಿರುವ ಪ್ರಹ್ಲಾದ್‌ರ ಹಿರಿಯ ಮಗ ಅಂಕುರ ಚಿಕ್ಕವಯಸ್ಸಿನಲ್ಲಿಯೆ ಸಾಹಿತಿಯಾಗಿ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾನೆ. ಪತ್ನಿ ವಿಜಯಲಕ್ಷ್ಮಿ ಮತ್ತು ಕಿರಿಯ ಮಗ ಅತೀತನೊಂದಿಗೆ ಬೆಂಗಳೂರು ವಾಸಿಯಾಗಿದ್ದ ಪ್ರಹ್ಲಾದ್ ೦೫-೦೩-೨೦೧೬ರಂದು ನಿಧನರಾದರು. ಪ್ರಸ್ತುತ ಇವರ ಕುಟುಂಬ ದೆಹಲಿಯಲ್ಲಿ ವಾಸವಾಗಿದೆ.

## ಮುರಾರೆಪ್ಪ ಮಾಸ್ತರ ಮತ್ತು ಓಜಿನಳ್ಳಿ ಸಿದ್ಧಪ್ಪ ಮಾಸ್ತರ

ಭಾಗ್ಯನಗರ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ನಾಟಕದ ಹವ್ಯಾಸ ಬೆಳೆಸಲು ಎರಡು ಅಧ್ಬುತ ಪ್ರತಿಭೆಗಳು ಕಾರಣವಾಗಿವೆ. ಹಿರಿಯ ತಲೆಮಾರಿನ ಅವರನ್ನು ನೆನೆಯದಿದ್ದರೆ ರಂಗ ಮಾಹಿತಿಗೆ ಕುಂದಾದೀತು. ಅದರಲ್ಲಿ ಒಬ್ಬರು ಭಾಗ್ಯನಗರದ ರಂಗಭೂಮಿಯ ಕಲೋಪಾಸಕ ಮುರಾರೆಪ್ಪ ಬಗಾಡೆ ಮಾಸ್ತರ ಮತ್ತೊಬ್ಬರು ಪಕ್ಕದ ಓಜಿನಳ್ಳಿಯ ಎಚ್. ಸಿದ್ಧಪ್ಪ ಮಾಸ್ತರ.

ಇವರಾಗಲೇ ದಿವಂಗತರಾಗಿ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಾಗಿದ್ದರೂ ಇಂದಿಗೂ ಈ ಭಾಗದಲ್ಲಿ ಇವರನ್ನು ನೆನೆಯದ ಕಲಾವಿದರಿಲ್ಲ. ಇಬ್ಬರೂ ಹಾರ್ಮೋನಿಯಂ ನುಡಿಸುವದರಲ್ಲಿ ನಾಟಕ ನಿರ್ದೇಶನ ಮಾಡುವದರಲ್ಲಿ ಅದ್ಭುತ ಪರಿಣತಿ ಸಾಧಿಸಿದ್ದರು. ಇವರಿಲ್ಲದೆ ಈ ಭಾಗದಲ್ಲಿ ಯಾವ ನಾಟಕಗಳೂ ನಡೆಯುತ್ತಿದ್ದಿಲ್ಲ.

ರಂಗಗೀತೆಗಳಿಗೆ ಹೊಸ ಟ್ಯೂನ್ ಹಾಕುವುದರಲ್ಲಿ ಇಬ್ಬರೂ ನಿಸ್ಸೀಮರು. ಕಂಪಸಾಗರದ ಹವ್ಯಾಸಿ ಕಲಾವಿದರ ಎಲ್ಲ ನಾಟಕಗಳಿಗೆ ಸಿದ್ಧಪ್ಪ ಮಾಸ್ತರ ವರ್ಷಾನುಗಟ್ಟಲೆ ಅಲ್ಲಿದ್ದು ತರಬೇತಿ ನೀಡುತ್ತಿದ್ದರು. ನಿರ್ವಂಚನೆಯಿಂದ ಮತ್ತು ನಿರಪೇಕ್ಷೆಯಿಂದ ಇಬ್ಬರೂ ವಿದ್ಯೆ ನೀಡುವದರಲ್ಲಿ ಹೆಸರಾದವರು. ಇಬ್ಬರೂ ಬಡತನವನ್ನು ಅಪ್ಪಿಕೊಂಡೇ ಕಣ್ಮುಚ್ಚಿದರು.

## ವೀರಣ್ಣ ಹುರಕಡ್ಲಿ

ಇದೇ ಭಾಗ್ಯನಗರ ಗ್ರಾಮದ ೭೪ ವ್ರುಸ್ಸಿನ ವೀರಣ್ಣ ಹುರಕಡ್ಲಿ ಬಾಲ್ಯದಲ್ಲಿಯೆ ಹಾರ್ಮೋನಿಯಂ ಗೀಳಿನಿಂದ ರಂಗಭೂಮಿಗೆ ಬಂದು ಕೆಲವು ನಾಟಕ ನಿರ್ದೇಶಿಸಿದ್ದಲ್ಲದೆ 'ಸಾಧ್ವಿ ಅನ್ನಪೂರ್ಣಾ-೧೯೭೬' ಎನ್ನುವ ನಾಟಕವನ್ನು ತಮ್ಮ ಚಿಕ್ಕವಯಸ್ಸಿನಲ್ಲಿಯೆ ರಚಿಸಿ ಪ್ರಯೋಗಿಸಿದವರು.

ಕುರುಕ್ಷೇತ್ರ ನಾಟಕದಲ್ಲಿ ಕೃಷ್ಣನ ಪಾತ್ರ ವಹಿಸಿದ್ದು ಮತ್ತು ತಮ್ಮದೇ ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರಲ್ಲದೆ ದೊಡ್ಡಾಟಗಳಲ್ಲಿ ಅಭಿನಯಿಸಿದ್ದಾರೆ. ನಾಟಕ ಅಕಾಡೆಮಿಯಿಂದ ಮಾಸಾಶನ ಪಡೆಯುತ್ತಿದ್ದಾರೆ.

## ರಾಜ್ಯಮಟ್ಟದಲ್ಲಿ ಮಿಂಚುತ್ತಿರುವ ಭಾಗ್ಯನಗರದ ರಂಗ ಪ್ರತಿಭೆಗಳು

ಕೈಗಾರಿಕೋದ್ಯಮಕ್ಕೆ ಅಂತರ್ರಾಷ್ಟ್ರೀಯವಾಗಿ ಹೆಸರಾದ ಕೊಪ್ಪಳ ಪಕ್ಕದ ಭಾಗ್ಯನಗರ ಗ್ರಾಮ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಹಿಂದುಳಿದಿಲ್ಲ. ಈಗಾಗಲೇ ಪ್ರಸ್ತಾಪಿಸಲಾದವರಲ್ಲದೆ ಅನೇಕ ಯುವ ಪ್ರತಿಭೆಗಳು ರಂಗಭುಮಿಯಲ್ಲಿ ಹಾರ್ಮೋನಿಯಂ, ಕ್ಯಾಸಿಯೋ, ತಬಲಾ, ಡೋಲಕ ಮುಂತಾದ ವಾದ್ಯ ನುಡಿಸುವ ಮೂಲಕ ಮತ್ತು ಹಾಡುಗಾರಿಕೆ, ಅಭಿನಯ, ನಿರ್ದೇಶನಗಳ ಮೂಲಕ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸುತ್ತ ಅದನ್ನೆ ವೃತ್ತಿಯಾಗಿಸಿಕೊಂಡವರಿದ್ದಾರೆ. ಅವರ ಸಂಕ್ಷಿಪ್ತ ಪರಿಚಯದ ಅಗತ್ಯ ಇಲ್ಲಿರುವದರಿಂದ ಒಟ್ಟು ಒಂದೆಡೆ ಸೇರಿಸಿ ಹೇಳಲಾಗಿದೆ.

## ಸಂಗೀತ ಸಾಮ್ರಾಟ ರಾಮಚಂದ್ರಪ್ಪ ಉಪ್ಪಾರ

ತಮ್ಮ ೧೪ನೆಯ ವಯಸ್ಸಿನಲಿಯೆ ಇಲಕಲ್ಲಡಾದ ಖ್ಯಾತ ಹಾರ್ಮೋನಿಯಂ ಮಾಸ್ತರ ವೀರಭದ್ರಪ್ಪನವರಲ್ಲಿ ಸಂಗೀತ ಅಭ್ಯಾಸ ಮಾಡಿದ ರಾಮಚಂದ್ರಪ್ಪ ಉಪ್ಪಾರ, ಸಂಗೀತದಲ್ಲಿ ವಿದ್ವತ್ ಪಾಸ್ ಮಾಡಿದ್ದಾರೆ. ಪ್ರತೀವರ್ಷ ರಾಜ್ಯದ ಬೇರೆ ಬೇರೆ

ಭಾಗಗಳಿಗೆ ಹೋಗಿ ೫೦-೬೦ ನಾಟಕಗಳಿಗೆ ಸಂಗೀತ ನೀಡುವ ಮೂಲಕ ಅದನ್ನೆ ವೃತ್ತಿಯಾಗಿಸಿಕೊಂಡಿದ್ದಾರೆ.

ಗ್ರಾಮದ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಪ್ರಯೋಗಿಸಿದ ಬಂಜೆತೊಟ್ಟಿಲು, ರತ್ನಮಾಂಗಲ್ಯ, ರಕ್ತರಾತ್ರಿ, ಬಾಳೊಂದು ಚದುರಂಗ, ಲಕ್ಷ್ಮಣ ರೇಖೆ ಮತ್ತು ಪ್ರಗತಿ ಕಲಾ ವೇದಿಕೆ ಕೊಪ್ಪಳದ ಹವ್ಯಾಸಿ ತಂಡದ ಚಾಳೇಶ ರಾಜಾ ಲೂಡಿಕ್ರಸ್ ಮುಂತಾದ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿ ಹೆಸರು ಗಳಿಸಿದ ಉಪ್ಪಾರ ತಾವೇ ೨೦೦೨ರಲ್ಲಿ ಶ್ರೀ ಗುರು ಪಂಚಾಕ್ಷರಿ ಸೇವಾ ಸಂಸ್ಥೆಯನ್ನು ಸ್ಥಾಪಿಸಿ ಸಾಕಷ್ಟು ಕಲಾವಿದರಿಗೆ ತರಬೇತಿ ನೀಡಿದ್ದಾರೆ.

ಪಂಚಾಕ್ಷರಿ ಗವಾಯಿಗಳ ನಾಟ್ಯಸಂಘ, ಸಿದ್ದನಾಲತ್ವಾಡ ಕಂಪನಿ, ತಾಳಿಕೋಟೆ ಕಂಪನಿ, ಶ್ರೀ ಗುರು ಕರ್ನಾಟಕ ಕಲಾ ಸಂಘ ಮೈಸೂರು ಮುಂತಾದ ಪ್ರತಿಷ್ಠಿತ ಕಂಪನಿಗಳ ನಾಟಕಗಳಿಗೂ ಸಂಗೀತ ನೀಡಿದ ಶ್ರೇಯಸ್ಸು ಉಪ್ಪಾರವರದು.

ಪಂಚಾಕ್ಷರಿ ಗವಾಯಿಗಳ ಕಂಪನಿಯಲ್ಲಿ ನಾಲ್ಕು ತಿಂಗಳು ಸಂಗೀತ ಸೇವೆ ಸಲ್ಲಿದ್ದಕ್ಕಾಗಿ ೨೦೧೩ರಲ್ಲಿ ಬೀರೇಶ್ವರ ಪುಣ್ಯಾಶ್ರಮ ಗದಗ ಇವರು ರಾಮಚಂದ್ರಪ್ಪನಿಗೆ ಸಂಗೀತ ಸಾಮ್ರಾಟ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಗೌರವ ಸನ್ಮಾನಗಳೂ ಇವರಿಗೆ ಸಂದಿವೆ.

## ಹಿನ್ನಲೆ ಹಾಡುಗಾರ ಆನಂದ

ರಾಮಚಂದ್ರಪ್ಪ ಉಪ್ಪಾರರ ತಮ್ಮ ೩೧ ವಯಸ್ಸಿನ ಆನಂದ ಉಪ್ಪಾರ ಅಧ್ಭುತವಾದ ಹಿನ್ನಲೆ ಹಾಡುಗಾರ. ಈ ಭಾಗದಲ್ಲಿ ಎಲ್ಲಿಯೆ ನಾಟಕ ನಡೆರೂ ಅಲ್ಲಿಯ ಸ್ತ್ರೀ ಪಾತ್ರ ಮತ್ತು ಪುರುಷ ಪಾತ್ರಗಳಿಗೆ ಆನಂದನ ಧ್ವನಿ ಇದ್ದೇ ಇರುತ್ತದೆ.

ಆನಂದ ಹೆಣ್ಣು ಧ್ವನಿಯಲ್ಲಿ ಹಾಡುವಾಗ ಹಾಡುವಾಕೆ ಎಲ್ಲಿದ್ದಾಳೆಂದು ಸಾಕಷ್ಟು ಜನ ಹುಡುಕಾಡಿ ಬೆಸ್ತು ಬಿದ್ದಿದ್ದಾರೆ. ಈಗಾಗಲೇ ಸಾವಿರಾರು ನಾಟಕಗಳಿಗೆ ಹಿನ್ನೆಲೆ ಹಾಡಿರುವ ಆನಂದ ಹಾರ್ಮೋನಿಯಂ ನುಡುಸುವದರಲ್ಲಿಯೂ ಸಾಧನೆ ಮಾಡಿದ್ದಾರೆ. ಕಲಬುರ್ಗಿ ವಿಭಾಗಮಟ್ಟದ ರಂಗಗೀತೆ ಸ್ಪರ್ಧೆಯಲ್ಲಿ ಭಾಹವಹಿಸಿ ೨೦೦೩ರಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾನೆ. ಹಾಗೆಯೆ ಕನ್ನಡ ಸಂಸ್ಕೃತಿ ಇಲಾಖೆ ಮತ್ತು ನಾಟಕ ಅಕಾಡೆಮಿಗಳು ಏರ್ಪಡಿಸಿದ ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾನೆ.

ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಹೀಗೆ ಎಲ್ಲರೀತಿಯ ನಾಟಕಗಳಿಗೂ ಸಂಗೀತ ನೀಡಿದ್ದು ಮತ್ತು ಹಾಡಿದ್ದು ಆನಂದನ ವಿಶೇಷವಾಗಿದೆ.

## ಪರಶುರಾಮ ದಲಬಂಜನ್

ಇದೇ ಪರಂಪರೆಯಲ್ಲಿ ಹೊರಬಂದ ಮತ್ತೊಂದು ಪ್ರತಿಭೆ ಭಾಗ್ಯನಗರದ ಪರಶುರಾಮ ದಲಬಂಜನ್. ೨೦-೦೩-೧೯೮೧ರಂದು ಹುಟ್ಟಿದ ಈತ ಹೊಟೆಲ್

ಉದ್ಯೋಗ ಮಾಡುತ್ತಲೇ ರಾಮಚಂದ್ರ ಉಪ್ಪಾರ ಹತ್ತಿರ ಸಂಗಿತ ಅಭ್ಯಾಸ ಮಾಡಿ ೨೦೦೩ರಲ್ಲಿ ಸಂಗೀತದಲ್ಲಿ ಜೂನಿಯರ್ ಪಾಸಾಗಿದ್ದಾನೆ.

ಶಾರದಾ ಸಂಗೀತ ನಾಟಕ ಮಿತ್ರ ಮಂಡಳಿಯ ಸಂಚಾಲಕನಾಗಿ ಅದರಿಂದ ಪ್ರಯೊಗವಾದ ಕೆರಳಿದ ಸರ್ಪ, ದೀಪಾ, ಪರಶುರಾಮ, ಅಣ್ಣನ ಒಡಲು ಬಂಗಾರದ ಕಡಲು, ಸರ್ಕಾರದ ಹುಲಿ, ಕಲಿಯುಗದ ಕುಬೇರ, ನಗುವ ದೇವರು ಮುಂತಾದ ನಾಟಕ ನಿರ್ದೇಶನ ಮಾಡಿದ್ದಾನೆ.

## ಕೀ ಬೋರ್ಡಿನ ಪರಶುರಾಮ

ಭಾಗ್ಯನಗರದ ಕಲಾವಿದ ದಿ. ಕೀರಪ್ಪ ಬಣ್ಣದವರ ಮಗ ಪರಶುರಾಮ ಬಣ್ಣದ ಕೂಡಾ ಕೀಬೋರ್ಡ ನುಡಿಸುವದರಲ್ಲಿ ಮತ್ತು ನಾಟಕಕ್ಕೆ ಸಂಗೀತ ನಿರ್ದೇಶನ ಮಾಡುವದರಲ್ಲಿ ಪರಿಣತಿ ಸಾಧಿಸಿದ್ದಾರೆ. ಸುತ್ತಲಿನ ಅನೇಕ ಕಡೆಹೋಗಿ ನಾಟಕಗಳಿಗೆ ಕೀಬೋರ್ಡ ನುಡಿಸುವದಲ್ಲದೆ, ಹಾಡುಗಾರಿಕೆಯಲ್ಲಿಯೂ ಹಿಂದೆ ಬಿದ್ದವರಲ್ಲ. ಸುಮಾರ ೨೫ ವರ್ಷಗಳಿಂದ ಈ ಸೇವೆಯಲ್ಲಿ ನಿರತರಾಗಿದ್ದಾರೆ. ಸಂಗೀತ ಪರೀಕ್ಷೆಯಲ್ಲಿ ಸೀನಿಯರ್ ಮತ್ತು ವಿದ್ವತ್ ಪಾಸಾಗಿದ್ದಾರೆ.

## ರಂಗವೃತ್ತಿ ಮೂಲದ ಮಾರುತೇಶ

ಕಳೆದ ಹದನ್ಯೆದು ಇಪ್ಪತ್ತು ವರ್ಷಗಳಿಂದಲೂ ಭಾಗ್ಯ ನಗರದಲ್ಲಿ ವಾಸ ವಾಗಿರುವ ಬುಡಗಜಂಗಮ ಮನೆತನದ ಹತ್ತಾರು ಕುಟುಂಬಗಳು ತಲತಲಾಂತರದಿಂದ ವೇಷಗಾರಿಕಾ ವೃತ್ತಿಯನ್ನು ಮಾಡುತ್ತ ಬಂದವರು. ಅವರು ಪೌರಾಣಿಕ ನಾಟಕಗಳ ಒಂದೊಂದು ದೃಶ್ಯದ ವೇಷಹಾಕಿಕೊಂಡು ಹಾರ್ಮೋನಿಯಂ ಮತ್ತು ತಬಲಾ ಜೊತೆ ಹಾಡುತ್ತ ಸಂಭಾಷಣೆ ಹೇಳುತ್ತ ಬೀದಿ ಬೀದಿಗಳಲ್ಲಿ ಮತ್ತು ಮನೆ ಮನೆಗಳಿಗೆ ಪ್ರದರ್ಶನ ನೀಡುತ್ತ ತಿಂಗಳುಗಳವರೆಗೆ ಸಂಚರಿಸಿ ಕೊನೆಗೆ ದೇಣಿಗೆ ಪಡೆಯುವ ಪದ್ಧತಿ. ಆದರೆ ಸಿನಿಮಾ, ಟಿ.ವಿಗಳ ಹಾವಳಿಯಿಂದ ಈ ವೇಷಗಾರಿಕರ ಆಕರ್ಷಣೆ ಕಳೆದುಕೋಂಡಿದ್ದರಿಂದ ಈ ವೃತ್ತಿಯ ಬಹುತೇಕರು ಸಂಗೀತ ಕಲಿತು ರಂಗ ಕಲೆಯತ್ತ ವಾಲಿದರು. ಅದರಲ್ಲಿ ಪ್ರಸಿದ್ಧರಾದ ಕೆಲವರ ಪರಿಚಯ ಇಲ್ಲಿದೆ.

ಹದಿನ್ಯೆದು ವರ್ಷಗಳಿಂದ ರಂಗಕಲಾವಿದನಾಗಿ, ನಾಟಕ ನಿರ್ದೇಶಕನಾಗಿ ಮತ್ತು ತಬಲಾ ವಾದಕನಾಗಿ ರಂಗಭೂಮಿಯ ಸೇವೆ ಮಾಡುತ್ತಿರುವ ಮಾರುತೇಶ ತಂದಿ ಶಿವರಾಮಪ್ಪ ವಿಭೂತಿ ಜಿಲ್ಲೆಯ ಸುತ್ತಮುತ್ತಲ ಹಳ್ಳಿಗಳಲ್ಲಿ ನಾಟಕಗಳಿಗೆ ತಬಲಾ ನುಡಿಸುವದರಲ್ಲಿ ಹೆಸರು ಮಾಡಿದ್ದಾರೆ.

ಗದಗ, ವಿಜಯಪುರಗಳಿಗೂ ಹೋಗಿ ನಾಟಕಗಳಿಗೆ ತಬಲಾ ಸಾಥ್ ಮಾಡಿದ್ದಾರೆ, ಹಾಡಿದ್ದಾರೆ, ಹಾರ್ಮೋನಿಯಂ ನುಡಿಸಿದ್ದಾರೆ. ನಾಟಕೋತ್ಸವ, ರಂಗಸಂಭ್ರಮ, ಸಾಹಿತ್ಯ ಸಮ್ಮೇಳನ, ಆನೆಗುಂದಿ ಉತ್ಸವ ಮುಂತಾದೆಡೆ ಭಾಗವಹಿಸಿದ್ದಾರೆ.

## ಹಾರ್ಮೋನಿಯಂ ರಿಪೇರಿಯ ಚಂದ್ರಕಾಂತ

ಅದೇ ರೀತಿ ಮತ್ತೊಬ್ಬ ೩೯ ವಯಸ್ಸಿನ ಚಂದ್ರಕುಮಾರ ಮಹಾಂತ ಸಹಿತ. ಭಾಗ್ಯನಗರದ ಕೀರ್ತಿ ಕಾಲನಿಯ ನಿವಾಸಿಯಾಗಿ. ೨೮ವರ್ಷಗಳಿಂದ ರಂಗಕಲಾವಿದನಾಗಿ. ಅನೇಕ ನಾಟಕಗಳಿಗೆ ತಬಲಾ ವಾದಕರಾಗಿ ಹೆಸರು ಮಾಡಿದ್ದಾನೆ. ಈತ ರಿದಂ ಪ್ಯಾಡ್ ನುಡಿಸುವಲ್ಲಿ ನಿಪುಣನಾಗಿದ್ದು. ಸುತ್ತಲಿನ ಅಮ್ಯಚೂರ್ ನಾಟಕ ಕಂಪನಿಗಳಲ್ಲೆಲ್ಲ ಈತನ ವಾದ್ಯ ಮೊಳಗುತ್ತಿರುತ್ತದೆ.

ಬುಡಕಟ್ಟು ಜನಾಂಗದ ಬುಡಗ ಜಂಗಮಕ್ಕೆ ಸೇರಿದ ಚಂದ್ರಕಾಂತ ತಮ್ಮ ಕುಲವೃತ್ತಿ ವೇಷಗಾರಿಕೆ ಆಕರ್ಷಣೆ ಕಳೆದುಕೊಂಡಿದ್ದರಿಂದ ವಾದ್ಯ ನುಡಿಸುವದು ಮತ್ತು ಹಾಡುಗಾರಿಕೆ ಕಲಿತದ್ದಲ್ಲದೆ, ಹಾರ್ಮೋನಿಯಂ ರಿಪೇರಿ ಮಾಡುವದನ್ನು ಕಲಿತು ಕೊಪ್ಪಳದಲ್ಲಿ "ಸರಸ್ವತಿ ಹಾರ್ಮೋನಿಯಂ ವರ್ಕ್ಸ್" ಎನ್ನುವ ಅಂಗಡಿಯನ್ನು ಪ್ರಾರಂಭಿಸಿದ ಏಕೈಕ ವ್ಯಕ್ತಿಯಾಗಿದ್ದಾನೆ. ಆ ಅಂಗಡಿಯನ್ನು ಪ್ರಸ್ತುತ ಅವರ ತಮ್ಮ ರವಿ ಮಹಾಂತ ಮುಂದುವರಿಸಿಕೊಂಡು ಹೊರಟಿದ್ದಾರೆ.

## ಜನಪ್ರಿಯ ರಿದಂ ವಾದಕ ಶೇಖರ

ಮಹಾಂತಾ ಕುಟುಂಬದ ಮತ್ತೊಂದು ಕಲಾಪ್ರತಿಭೆ ೩೮ರ ತರುಣ, ಶೇಖರಪ್ಪ ಲಿಂಗಪ್ಪ ಮಹಾಂತಾ. ಚಿಕ್ಕ ವಯಸ್ಸಿನಲ್ಲಿಯೆ ತಬಲಾ ಮತ್ತು ರಿದಂ ಪ್ಯಾಡ್ ನುಡಿಸುವದನ್ನು ಕಲಿತು ಜತೆಗೆ ಕೀರ್ತನ ಗಾಯನ ಮಾಡುವ ಮೂಲಕ ಜನಪ್ರಿಯತೆ ಪಡೆದಿದ್ದಾನೆ.

ಸಿದ್ದು ನಾಲತ್ವಾಡ ಕಂಪನಿ, ಕುಂಟೋಜಿ ನಾಗಯ್ಯ ಕಂಪನಿ, ಗುಡಗೇರಿ ಕಂಪನಿ, ಅಕ್ಕಲಕೋಟಿ ರೇಣುಕಾ ಕಂಪನಿ, ಪಂಚಾಕ್ಷರಿ ಗವಾಯಿಗಳ ಕಂಪನಿ, ಹೆಲನ್ ಕಂಪನಿ ಮತ್ತು ಮಂಡಲಗಿರಿ ಕಂಪನಿ ಹೀಗೆ ಹತ್ತು ಹಲವಾರು ನಾಟಕ ಕಂಪನಿಗಳಲ್ಲಿ ತಬಲಾ, ರಿದಂ ನುಡಿಸುವದರ ಮೂಲಕ ಹಾಗೂ ಹಾಡುವದರ ಮೂಲಕ ಹೆಸರಾಗಿದ್ದಾರೆ.

ಕೊಪ್ಪಳ ಜಿಲ್ಲಾ ನಾಟಕೋತ್ಸವ, ಕ.ಜಾನಪದ ಅಕಾಡೆಮಿ, ಹಂಪಿ, ಆನೆಗೊಂದಿ ಉತ್ಸವ, ವಿಶ್ವ ಕನ್ನಡ ಮೇಳ ಮುಂತಾದ ದೊಡ್ಡ ಕಾರ್ಯಕ್ರಮಗಳಲ್ಲಿ ವಾದ್ಯ ನುಡಿಸಿದ ಹಿರಿಮೆಯಿದೆ. ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿ ಪ್ರಶಸ್ತಿ ಪುರಸ್ಕಾರ ನೀಡಿವೆ.

ಮಗ ತಂದ ಮಾಂಗಲ್ಯ, ದಿಲ್ಲಿ ಹೊಕ್ಕ ಪುಂಡ ಹುಲಿ, ಬಡವ ಬೀಸಿದ ಕೊಡ್ಲಿ ಹೀಗೆ ನೂರಾರು ನಾಟಕಗಳಲ್ಲಿ ವಾದ್ಯದ ನಿನಾದ ತುಂಬಿದ್ದಾರೆ.

## ಹಗಲು ವೇಷದ ನಿಂಗಪ್ಪ

ಮಹಾಂತ ಕುಟುಂಬದ ಹಿರಿಯ ಕಲಾವಿದ ೬೧ರ ಇಳಿ ವಯಸ್ಸಿನಲ್ಲಿಯೂ ಕ್ರಿಯಾ ಶೀಲವಾಗಿರುವ ನಿಂಗಪ್ಪ ಈಶಪ್ಪ ಮಹಾಂತ. ಕೃಷ್ಣ, ರಾವಣ, ಭಸ್ಮಾಸುರ,

ಬೇಡರ ಕಣ್ಣಪ್ಪ, ಮುಂತಾದ ಪೌರಾಣಿಕ ಪಾತ್ರ ಧರಿಸಿ ಬೀದಿ ಬೀದಿಗಳಲ್ಲಿ ಅಭಿನಯಿಸಿ ರಂಜಿಸಿದವರು.

ಮೈಸೂರ ದಸರಾ ಜಿಲ್ಲಾ ಉತ್ಸವ, ವಿಶ್ವ ಕನ್ನಡ ಮೇಳ ಬೆಳಗಾವಿ ಮುಂತಾದೆಡೆ ಇವರ ಪ್ರದರ್ಶನವಾಗಿದೆ. ಅದಕ್ಕಾಗಿ ಅನೇಕ ಮೆಚ್ಚುಗೆ ಪತ್ರಗಳನ್ನು ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಕ್ಯಾಸಿಯೋ ರಮೇಶ

ಕ್ಯಾಸಿಯೋ ರಮೇಶನೆಂದೆ ಖ್ಯಾತನಾದ ಭಾಗ್ಯನಗರದ ೨೮ರ ತರುಣ. ತಮ್ಮ ೧೮ನೆಯ ವಯಸ್ಸಿನಲ್ಲಿಯೆ ಕ್ಯಾಸಿಯೋ ವಾದಕನಾಗಿ ರಂಗಭೂಮಿಯಲ್ಲಿ ಗುರುತಿಸಿಕೊಂಡಿದ್ದಾನೆ. ೨೦೧೦ರಲ್ಲಿ ಇವರು ಮೈಸೂರು ದಸರಾ ಮಹೋತ್ಸವದಲ್ಲಿ ನೀಡಿದ ನಾಟಕಕ್ಕೆ ಸಾಂಸ್ಕೃತಿಕ ಉಪಸಮಿತಿ ಅಭಿನಂದನಾ ಪತ್ರ ನೀಡಿದೆ. ಬಳ್ಳಾರಿಯಲ್ಲಿ ನಡೆದ ನಾಟಕ ಅಕಾಡೆಮಿಯ ನಾಟಕೋತ್ಸವದಲ್ಲಿ ಮೆಚ್ಚಿಗೆ ನೀಡಿದ್ದಾರೆ.

ಎಲ್ಲ ಅಮ್ಯೆಚೂರ್ ಕಂಪನಿ ನಾಟಕಗಳಿಗೆ ಕ್ಯಾಸಿಯೋ ನುಡಿಸಲು ರಮೇಶ ಇದ್ದೇ ಇರುತ್ತಾರೆ. ಹಾಗಾಗಿ ಸನ್ಮಾನ ಪ್ರಶಸ್ತಿಗಳೂ ಲಭಿಸಿವೆ. ಈ ರಮೇಶ ಕೂಡಾ ವಿಭೂತಿ ಮನೆತನದ ಕಲಾಪ್ರತಿಭೆಯಾಗಿ ಇವರೆಲ್ಲರ ಕುಟುಂಬಗಳು ಕಲೆಯ ಮೇಲೆಯೆ ಜೀವನ ಸಾಗಿಸುವವರಾಗಿದ್ದಾರೆ.

## ಕಲೆಗಾಗಿಯೆ ಬದುಕು ಸವೆಸಿದ ಲಿಂಗರಾಜ

ಭಾಗ್ಯನಗರದ ಪಕ್ಕದ ಯತ್ನಟ್ಟಿ ಗ್ರಾಮದ ಲಿಂಗರಾಜ ಪಲ್ಲೇದ ಶಿದ್ಲಿಂಗಪ್ಪ ಮತ್ತು ನೀಲಮ್ಮರ ಹೊಟ್ಟೆಯಲ್ಲಿ ದಿ. ೫-೯-೧೯೪೨ರಲ್ಲಿ ಜನಿಸಿ ೬ನೆಯ ತರಗತಿವರೆಗೆ ಮಾತ್ರ ಓದಿ ನಾಟಕದ ಖಯಾಲಿಗೆ ಬಿದ್ದವರು.

ಬಡತನದ ಕಾರಣದಿಂದ ಬಾಲ್ಯದಲ್ಲಿಯೆ ಸೂಡಿ ಕಂಪನಿ ಸೇರಿದ ಲಿಂಗರಾಜ ವೃತ್ತಿ ಕಲಾವಿದನಾಗಿ ಶ್ರೀಕಂಠೇಶ್ವರ ನಾಟ್ಯ ಸಂಘ ಮೈಸೂರು, ಆಶಾಪುರ, ಗಡಗೇರಿ, ಸಂಕನೂರ, ಮಂಡಲಗಿರಿ, ವೀರೇಶ್ವರ ನಾಟ್ಯಸಂಘ ಗದಗ ಹೀಗೆ ಹಲವಾರು ಪ್ರತಿಷ್ಠಿತ ಕಂಪನಿಗಳಲ್ಲಿ ನಟರಾಗಿ ಗಾಯಕರಾಗಿ ವ್ಯವಸ್ಥಾಪಕರಾಗಿ ೨೮ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಲಿಂಗರಾಜರ ರಂಗ ಸೇವೆಗಾಗಿ ೨೦೧೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ರೇಣುಕಾ ಎಲ್ಲಮ್ಮ, ಶನಿಮಹಾತ್ಮೆ, ಪಟ್ಟಣಕ್ಕೆ ಬಂದ ಪತ್ನಿಯರು, ಸಂಪತ್ತಿಗೆ ಸವಾಲು, ಮುಂತಾದ ನೂರಾರು ಪೌರಾಣಿಕ ಸಾಮಾಜಿಕ ನಾಟಕಗಳಲ್ಲಿ ಸ್ತ್ರೀಪಾತ್ರ, ಹಾಸ್ಯ, ಎಲ್ಲರೀತಿಯ ಪಾತ್ರಗಳನ್ನು ಮಾಡಿದ್ದಾರೆ. ೭೪ ವಯಸ್ಸು ದಾಟಿದ್ದರೂ ಈಗಲೂ ನಟಿಸುವ ಹುಮ್ಮಸ್ಸನ್ನು ಕಳೆದುಕೊಳ್ಳದ ಲಿಂಗರಾಜ ಪಲ್ಲೇದವರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಮೈಸೂರಿನಲ್ಲಿ ರಂಗಸಾಧನೆಗಾಗಿ ವಾರ್ಷಿಕ ಪ್ರಶಸ್ತಿ,

ಮಹಾತ್ಮಾ ಜ್ಯೋತಿಬಾಫುಲೆ ಪ್ರಶಸ್ತಿ, ಪೆರಿಯಾರ್ ರಾಮಸ್ವಾಮಿ ಪ್ರಶಸ್ತಿ, ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿವೆ.

## ರಂಗರತ್ನ ಬಸವರಾಜ ಹೆಸರೂರ

ಮೂಲತಃ ಕೊಪ್ಪಳ ತಾಲೂಕಿನ ಕವಲೂರಿನವರಾದ ಬಸವರಾಜ ಸದಾಶಿವಪ್ಪ ಹೆಸರೂರ ಪ್ರಸ್ತುತ ಕೊಪ್ಪಳದಲ್ಲಿಯೆ ವಾಸವಾಗಿದ್ದಾರೆ.. ದಿ.೧-೫-೧೯೫೫ ರಲ್ಲಿ ಜನಿಸಿದ ಇವರು ೭೭ರಲ್ಲಿ ಬಿಕಾಂ ಪದವಿ ಪಡೆದು ರಂಗಭೂಮಿಯ ವೃತ್ತಿಯನ್ನು ಕೈಗೊಂಡವರು. ನಟನೆ, ನಿರ್ದೇಶನ, ಸಂಗೀತ ಹೀಗೆ ಎಲ್ಲರೀತಿಯ ಕಲೆಯನ್ನು ಹುಟ್ಟಿನೊಂದಿಗೆ ಮೈಗೂಡಿಸಿಕೊಂಡಿರುವ ಬಸವರಾಜ ೧೯೭೮ರಿಂದ ರಂಗಚಟುವಟಿಕೆಯಲ್ಲಿ ಭಾಗವಹಿಸುತ್ತ ೧೫೦ಕ್ಕೂ ಹೆಚ್ಚು ಸಾಮಾಜಿಕ ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ರಕ್ತರಾತ್ರಿ, ಸಂತಶಿಶುನಾಳ ಷರೀಫ್, ಸಂಗೊಳ್ಳಿರಾಯಣ್ಣ, ಸರ್ಪಸ್ನೇಹ, ಎಚ್ಚರ ತಂಗಿ ಎಚ್ಚರ, ಕಲಿತ ಕಳ್ಳ, ಮುಂತಾದ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ವಿಭಿನ್ನ ಅಭಿನಯ ನೀಡಿ ಹೆಸರಾಗಿದ್ದಾರೆ. ಮಹಾನವಮಿ, ಬಂಗಾರಿ, ಕೆಳದಿ ಚನ್ನಮ್ಮ ಹಲವಾರು ಟಿ.ವಿ ಧಾರಾವಾಹಿಗಳಲ್ಲಿಯೂ ಮತ್ತು ನೇಗಿಲಯೋಗಿ, ಶಿರಹಟ್ಟಿ ಹೊಳಲಮ್ಮದೇವಿ ಮಹಾತ್ಮೆ ಸಿನಿಮಾಗಳಲ್ಲಿಯೂ ನಟಿಸಿದ್ದಾರೆ.

ಅನೇಕ ನಾಟಕಗಳಿಗೆ ಹಾರ್ಮೋನಿಯಂ ಸಂಗೀತ ನಿರ್ದೇಶನ ನೀಡಿ ರಂಗಗೀತೆಗಳನ್ನು ಹಾಡಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಕಲಾಕುಸುಮ ಸಂಸ್ಥೆ "ರಂಗರತ್ನ ಪ್ರಶಸ್ತಿ", ಕೊಪ್ಪಳ ಜಿಲ್ಲಾ ನಾಟಕೋತ್ಸವ ಮೆಚ್ಚುಗೆ ಪತ್ರ, ಧಾರವಾಡ ಜಿಲ್ಲಾ ರಂಗೋತ್ಸವ, ವಿಶ್ವ ಕನ್ನಡ ಸಮ್ಮೇಳನ ಮುಂತಾದ ಕಡೆಗಳಲ್ಲಿ ಸನ್ಮಾನಕ್ಕೆ ಪಾತ್ರರಾಗಿದ್ದಾರೆ.

## ಅಂಧರಾದರೂ ಅದ್ಭುತ ಸಾಧನೆಯ ಅಂಬಣ್ಣ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ತಾವರಗೇರಿಯಲ್ಲಿ ಆದಪ್ಪ ಮತ್ತು ಲಕ್ಷ್ಮೀದೇವಿ ದಂಪತಿಗಳಿಗೆ ೫-೬-೧೯೫೭ರಲ್ಲಿ ಜನಿಸಿದ ಅಂಬಣ್ಣ ಕೂಪ್ಪರದ ಕೆಲದಿನಗಳಲ್ಲಿಯೆ ಸಂಪೂರ್ಣ ಅಂಧರಾದರೂ ಎದೆಗುಂದದೆ ತಮ್ಮ ಅಗಾಧ ಸಾಧನೆಯ ಮೂಲಕ ಬದುಕನ್ನು ಕಟ್ಟಿಕೊಂಡವರು.

ಗದಗಿನ ಪಂಡಿತ ಪುಟ್ಟರಾಜರ ಆಶ್ರಮ ಸೇರಿ ತಬಲಾ, ಹಾರ್ಮೋನಿಯಂ, ಕೊಳಲು, ಕ್ಯಾಸಿಯೋ ,ತಂಬೂರಿ ಹೀಗೆ ಅನೇಕ ವಾದ್ಯಗಳನ್ನು ನುಡಿಸುವಲ್ಲಿ ನಿಪುಣರಾದ ಅಂಬಣ್ಣ ಎಸ್.ಎಸ್.ಎಲ್.ಸಿಯನ್ನೂ ಪಾಸುಮಾಡಿಕೊಂಡರು. ಆದದ್ದರಿಂದ ಇವರ ಸಾಧನೆಗೆ ನೌಕರಿ ಹುಡುಕಿಕೊಂಡು ಬಂದವು. ರೇಲ್ವೆ ಇಲಾಖೆಯಲ್ಲಿ ನೌಕರಿ ದೊರೆತರೂ ಅದನ್ನು ಬೇಡವೆಂದು ಗುರುಗಳ ಆಯ್ಕೆಯಂತೆ ೧-೬-೧೯೮೫ರಲ್ಲಿ ಕೊಪ್ಪಳ ತಾಲೂಕಿನ ಹಿಟ್ನಾಳ ಶಾಲೆಗೆ ಸಂಗೀತ ಶಿಕ್ಷಕರಾಗಿ

ಸೇರಿದರು. ಕೊಪ್ಪಳ, ಭಾಗ್ಯನಗರ ಮುಂತಾದೆಡೆ ಸೇವೆ ಸಲ್ಲಿಸಿರುವ ಅಂಬಣ್ಣನವರು ರಂಗಭೂಮಿಗೆ ಸಲ್ಲಿಸಿದ ಸೇವೆಯೂ ಅಪಾರವಾಗಿದೆ.

೧೯೮೦ರಲ್ಲಿ ಶ್ರೀ ಪಂಚಾಕ್ಷರಿ ನಾಟ್ಯ ಸಂಘದಲ್ಲಿ ಸತತ ಮೂರು ತಿಂಗಳು. ೮೧ರಲ್ಲಿ ಪುಟ್ಟರಾಜ ಗವಾಯಿಗಳ ಶ್ರೀ ಕುಮಾರೇಶ್ವರ ನಾಟ್ಯ ಸಂಘದಲ್ಲಿ ಮತ್ತು ಶ್ರೀ ರೇವಣಸಿದ್ಧೇಶ್ವರ ನಾಟ್ಯ ಕಲಾಸಂಘದಲ್ಲಿ ಹಾರ್ಮೋನಿಯಂ, ತಬಲಾ ಮತ್ತು ಕೊಳಲು ಸಾಥ್ ನೀಡುತ್ತ ರಾಜ್ಯಾದ್ಯಂತ ಸುತ್ತಿದ್ದಾರೆ. ೧೯೮೭ರಿಂದ ಹವ್ಯಾಸಿ ನಾಟಕ ರಂಗಭೂಮಿಗೆ ಸೇವೆ ಸಲ್ಲಿಸಲು ಹುಲಗಿ, ಹಿಟ್ನಾಳ, ತಾವರಗೆರೆ, ಕಂಪಸಾಗರ, ಓಜಿನಳ್ಳಿ ಮುಂತಾದೆಡೆ ತಿರುಗಿದ್ದಾರೆ.

ಅಂಬಣ್ಣ ಅನೇಕ ಕಲಾವಿದರಿಗೆ ಹಾರ್ಮೋನಿಯಂ, ತಬಲಾ, ಕೊಳಲು ಮುಂತಾದ ವಾದ್ಯಗಳನ್ನು ಮತ್ತು ಹಾಡನ್ನು ಉಚಿತವಾಗಿ ಕಲಿಸುತ್ತ ನಾಟಕ ಮಾಸ್ಟರ್‌ಗಳಾದ ಶಿವಪುತ್ರಪ್ಪ ಬಡಿಗೇರ ಹನುಮಂತಪ್ಪ, ರಾಜು ಸಾಡ್ಲಗೇರಿ ಮುಂತಾದವರನ್ನು ತಯಾರುಗೊಳಿಸಿದ್ದಾರೆ. ಸಂಗೀತರತ್ನ, ಕೊಳಲುವಾದನ ನಿಪುಣ, ಶ್ರೀ ಹಾನಗಲ್ ಕುಮಾರಶ್ರೀ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿ ಸನ್ಮಾನಗಳು ಅಂಬಣ್ಣನವರನ್ನು ಹುಡುಕಿಕಂಡು ಬಂದಿವೆ.

## ಕೊಪ್ಪಳದ ರಂಗಕಲೆಗೆ ಹೊಸಕಳೆ ನೀಡಿದ ಈಶ್ವರ ಹತ್ತಿ

ಯಲಬುರ್ಗಿ ತಾಲುಕಿನ ಗುನ್ನಾಳ ಗ್ರಾಮದ ಹನುಮಂತಪ್ಪ ಹತ್ತಿ ಮತ್ತು ಕಳಕಮ್ಮ ದಂಪತಿಗಳಿಗೆ ೧೯೫೫ರಲ್ಲಿ ಜನಿಸಿದ ಈಶ್ವರ ಹತ್ತಿ ಕಷ್ಟದಿಂದಲೇ ಎಂ.ಎ. ಪದವಿ ಮತ್ತು ಕಾನೂನು ಪದವಿ ಪಡೆದು ಲೋಕೋಪಯೋಗಿ ಇಲಾಖೆಯ ನೌಕರರಾದರೂ ಇವರಿಗೆ ಬರವಣಿಗೆ ಮತ್ತು ನಾಟಕದ ಹವ್ಯಾಸ ಬಾಲ್ಯದಿಂದಲೇ ಅಂಟಿಕೊಂಡು ಬಂದಿದೆ.

೧೯೭೫-೭೬ರ ಅವಧಿಯಲ್ಲಿ ಹತ್ತಿಯವರು ಕಾಲೇಜು ವ್ಯಾಸಂಗ ಮಾಡುತ್ತಿರುವಾಗಲೇ 'ಬಿಡುಗಡೆ' ಎನ್ನುವ ನಾಟಕ ಬರೆದು ಗೆಳೆಯರ ಕಲಾತಂಡದೊಂದಿಗೆ ಪ್ರದರ್ಶಿಸಿ ವಿಭಾಗ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದದ್ದು ಇವರ ಅಪ್ರತಿಮ ಪ್ರತಿಭೆಗೆ ಸಾಕ್ಷಿಯಾಗಿದೆ. ೧೯೭೭ರಲ್ಲಿ 'ಮನೆಯ ಮಗ ಮನೆಗೆ ಬರಲಿಲ್ಲ', ಈಶ್ವರ ಹತ್ತಿಯವರು ಬರೆದ ರೇಡಿಯೋ ನಾಟಕ ಗುಲ್ಬರ್ಗಾ ಆಕಾಶವಾಣಿಯಲ್ಲಿ ಪ್ರಸಾರವಾಗಿ ಜನಪ್ರಿಯತೆ ಗಳಿಸಿತು.

ಬೀದರ್‌ನಲ್ಲಿರುವಾಗ ಅಲ್ಲಿಯ 'ಹವ್ಯಾಸಿ ಕಲಾವಿದರ ಬಳಗ' ರಚಿಸಿ 'ಅತೃಪ್ತ ಆತ್ಮಗಳು' ಮತ್ತು 'ಮೊಳಕೆ' ನಾಟಕ ಪ್ರದರ್ಶಿಸಿದರಲ್ಲದೆ ೧೯೮೭ರಲ್ಲಿ ತಾವೇ ಬರೆದ ಹೊಸ ಅಲೆಯ ನಾಟಕ ಅಪೂರ್ಣವನ್ನು ಯಶಸ್ವಿಯಾಗಿ ಪ್ರಯೋಗಿಸಿ ಮೆಚ್ಚುಗೆ ಪಡೆದರು. ಹತ್ತಿಯವರಿಗೆ ನಾಟಕದ ಹುಚ್ಚು ಎಷ್ಟು ಆವರಿಸಿತ್ತೆಂದರೆ

ವಿದ್ಯಾರ್ಥಿಯಾಗಿದ್ದಾಗಲೇ ವೃತ್ತಿ ನಾಟಕ ಕಂಪನಿ ಸೇರಿ 'ಹಸಿರುಕ್ರಾಂತಿ' ನಾಟಕದಲ್ಲಿ ಕೆಲವು ತಿಂಗಳು ಅಭಿನಯಿಸಿ ಹೊರಬಂದರು.

ಹತ್ತಿಯವರು ಎಲ್ಲಿಗೆ ಹೋಗಲಿ ಅಲ್ಲೊಂದು ಕಲಾಬಳಗ ಕಟ್ಟಿ ನಾಟಕ ಪ್ರಯೋಗಿಸಿದಾಗಲೇ ಅವರಿಗೆ ತೃಪ್ತಿ. ಕೃಷ್ಣಾ ಮೇಲ್ದಂಡೆ ಯೋಜನೆಯ ಕಾರ್ಯನಿರ್ವಹಿಸಲು ಭೀಮರಾಯನ ಗುಡಿಗೆ ವರ್ಗವಾದಾಗ ೧೯೮೫ರಲ್ಲಿ ಕಲಾಬಳಗ ಕಟ್ಟಿ ದಾರಿಯಾವುದಯ್ಯ ಮುಂದೆ? ಅಪೂರ್ಣ, ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಮುಂತಾದ ನಾಟಕ ಪ್ರಯೋಗಿಸಿದರು.

೧೯೯೫ರಿಂದ ಕೊಪ್ಪಳ, ಜಿ.ಪಂ. ಇಂ. ವಿಭಾಗಕ್ಕೆ ವರ್ಗವಾಗಿ ಬಂದಾಗಿನಿಂದ ಇಲ್ಲಿಯೆ ವಾಸವಾಗಿ ತಮ್ಮ ಇಲಾಖೆಯ ಹೆಚ್.ಹನುಮಂತಯ್ಯ, ಮಲ್ಲಿಕಾರ್ಜುನ ಗೌಡ ಪಾಟೀಲ, ಬಿ.ಎ. ಆಡೂರ, ಎಂ. ಬಿ. ದಾನರೆಡ್ಡಿ, ಎಚ್.ಟಿ. ಹಂಚಿನಾಳ ಎನ್ನುವವರೊಂದಿಗೆ 'ವಿರಂಚಿ' ಎನ್ನುವ ಕಲಾಬಳಗ ನಿರ್ಮಿಸಿಕೊಂಡು, ಹಲವಾರು ನಾಟಕ ಪ್ರಯೊಗಿಸಿದ್ದಾರೆ. ಅದರಲ್ಲಿ ಅವರ 'ಅಪೂರ್ಣ' ಮತ್ತು 'ಹದಿನೆಂಟು ಮೆಟ್ಟಿಲು' ನಾಟಕಗಳು ಕೊಪ್ಪಳ ಕಲಾವಿದರಿಗೆ ಹೊಸ ಅನುಭವ ನೀಡಿವೆ. ಸರಳ ಸಜ್ಜನಿಕೆಯ ಈಶ್ವರ ಹತ್ತಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ರಚಿಸಿದ್ದಾರೆ. ಇವರೊಬ್ಬ ಅಪರೂಪದ ರಂಗಾರಾಧಕ.

## ಕಲಾಸಕ್ತ ಮಲ್ಲಿಕಾರ್ಜುನ ಗೌಡ ಪಾಟೀಲ

ಎಂ.ಎ. ಪದವಿಧರನಾಗಿ ಲೋಕೋಪಯೋಗಿ ಇಲಾಖೆ ನೌಕರನಾದ ಕೊಪ್ಪಳ ತಾಲೂಕಿನ ಹಲಗೇರಿ ಗ್ರಾಮದ ೫೯ ವರ್ಷದ ಮಲ್ಲಿಕಾರ್ಜುನ ಗೌಡ ಪಾಟೀಲ. ಬಾಲ್ಯದಿಂದಲೇ ಹಿರಿಯರಿಂದಲೇ ಕಲಾಸಕ್ತಿಯನ್ನು ಬೆಳೆಸಿಕೊಂಡು ೭ನೆಯ ವಯಸ್ಸಿನಲ್ಲಿಯೆ ಮಂಗಳಾ ಕಿರುನಾಟಕದಲ್ಲಿ ಸ್ತ್ರೀ ಪಾತ್ರ ವಹಿಸಿದ್ದು ನಂತರ ಗ್ರಾಮದಲ್ಲಿ ಹಲವಾರು ನಾಟಕದಲ್ಲಿ ಅಭಿನಯಿಸಿ ಪ್ರಸ್ತುತ ಈಶ್ವರ ಹತ್ತಿಯವರ ವಿರಂಚಿ ಕಲಾಬಳಗದ ಪ್ರಮುಖನಾಗಿ ಅವರ ನಾಟಕಗಳಲ್ಲಿ ಪ್ರಮುಖಪಾತ್ರವಹಿಸಿದ್ದಾರೆ.

ಸ್ತ್ರೀ ಪಾತ್ರ, ಹಾಸ್ಯ ಮತ್ತು ಎಲ್ಲ ಬಗೆಯ ಪಾತ್ರಗಳಲ್ಲಿ ಪಾಟೀಲರು ಅಭಿನಯಿಸಿದ್ದಾರೆ.

## ನಾಟಕ ನನ್ನ ಪ್ರಪಂಚವೆನ್ನುವ ಪ್ರಾಣೇಶ

ಕೊಪ್ಪಳ ತಾಲೂಕಿನ ಗಿಣಗೇರಿ ಗ್ರಾಮದ ೩೪ ವಯಸ್ಸಿನ ಪ್ರಾಣೇಶ ಪೂಜಾರ ರಂಗಭೂಮಿಯ ಮೂಲಕ ಏನೆಲ್ಲ ಸಹಾಯ ಸೇವೆ ಮಾಡಬಹುದೆನ್ನುವುದನ್ನು ಸಾಧಿಸಿ ತೋರಿಸಿದವರು. ಪ್ರಸ್ತುತ ಇದೇ ತಾಲೂಕಿನ ಜಿ. ಎಚ್. ಪಿ. ಎಸ್. ಹನುಮನಳ್ಳಿಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಚಿಕ್ಕವಯಸ್ಸಿನಲ್ಲಿಯೆ ಅಭಿನಯದ ಹವ್ಯಾಸ ಮೈಗಂಟಿಸಿಕೊಂಡ ಪ್ರಾಣೇಶ ತನ್ನಂಥ ಕಲಾಸಕ್ತ ಶಿಕ್ಷಕರನ್ನೆಲ್ಲ ಒಟ್ಟುಗೂಡಿಸಿ 'ಶಿಕ್ಷಕ ಕಲಾವೃಂದ'ವನ್ನು ರಚಿಸಿಕೊಂಡು

ಸಮಾಜಕ್ಕೆ ಉತ್ತಮ ಭೋಧನೆ ನೀಡುವ ನಾಟಕಗಳನ್ನೆ ಆಯ್ದುಕೊಂಡು ತಾವೇ ಹಣಹಾಕಿ ಸಮಾಜಸೇವಕರಿಗೆ ಅಸಹಾಯಕರಿಗೆ ನೀಡುವದು ಶ್ಲಾಘನೀಯ.

ಸಂಗೊಳ್ಳಿ ರಾಯಣ್ಣ, ಗಂಡುಗಲಿ ಕುಮಾರರಾಮ, ಟಿಪ್ಪು ಸುಲ್ತಾನ, ಸಿಂಹಾಸನ ಖಾಲಿಯಿದೆ, ರಕ್ತರಾತ್ರಿ ಇವರು ಪ್ರಯೊಗಿಸಿದ ಪ್ರಮುಖ ನಾಟಕಗಳು. ರಾಯಣ್ಣ, ಟಿಪ್ಪು ಸುಲ್ತಾನ, ಪುಢಾರಿ ಮುಂತಾದ ಪಾತ್ರವಹಿಸಿ ಪಾತ್ರಗಳಿಗೆ ಪ್ರಾಣ ತುಂಬಿದ ಪ್ರಾಣೇಶ ಬುದ್ಧಿವಂತರ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಜಿಲ್ಲೆಯಲ್ಲದೆ ರಾಜ್ಯದ ಬೇರೆ ಕಡೆಗಳಲ್ಲಿಯೂ ತಂಡದೊಂದಿಗೆ ಹೋಗಿ ಅಭಿನಯಿಸಿದ್ದಾರೆ. ಹಾಗಾಗಿ ಪ್ರಾಣೇಶ್‌ಗೆ ನಾಟಕವೆಂದರೆ ಪ್ರಾಣ ಎನ್ನುವಂತಾಗಿದೆ.

## ಬಹುಮುಖ ಪ್ರತಿಭೆಯ ವಿಜಯಲಕ್ಷ್ಮಿ ಕೊಟಗಿ

ವೃತ್ತಿರಂಗಭೂಮಿಯ ಕಲಾವಿದೆಯರನ್ನು ಬಿಟ್ಟರೆ ಹೆಣ್ಣುಮಕ್ಕಳು ಹವ್ಯಾಸಿ ಕಲಾವಿದರಲ್ಲಿ ರಂಗಭೂಮಿಗೆ ಬರುವವರು ಅಪರೂಪ ಅಂಥವರಲ್ಲಿ ಕೊಪ್ಪಳದ ನಿವಾಸಿ ೪೪ ವಯಸ್ಸಿನ ಶಿಕ್ಷಕಿ ವಿಜಯಲಕ್ಷ್ಮಿ ಕೊಟಗಿ ಒಬ್ಬರು. ಸದಾ ಕ್ರಿಯಾಶೀಲವಾಗಿರುವ ಇವರು ಏಕಪಾತ್ರಾಭಿನಯ, ಏಕಾಂಕ ನಾಟಕಗಳಲ್ಲೆಲ್ಲ ಅಭಿನಯಿಸುತ್ತ ವಿರಂಚಿ ಕಲಾಬಳಗ ಮತ್ತು ಶಿಕ್ಷಕರ ಕಲಾಬಳಗದ ಬಹುತೇಕ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿ ಗಮನ ಸೆಳೆದಿದ್ದಾರೆ.

'ಆತ್ಮಶಾಂತಿ' ಎನ್ನುವ ಮಹಿಳಾ ಶೈಕ್ಷಣಿಕ ಜಾಗೃತಿಯ ನಾಟಕವನ್ನು ವಿಜಯಲಕ್ಷ್ಮಿ ರಚಿಸಿ ನಿರ್ದೇಶಿಸಿ. ಅದರಲ್ಲಿ ತಾಯಿಯ ಪಾತ್ರವನು ನಿರ್ವಹಿಸಿದ್ದಾರೆ. ಕಲ್ಯಾಣ ನಿರ್ಗಮನದಲ್ಲಿ ಅಕ್ಕಮಹಾದೇವಿಯಾಗಿ 'ಸ್ತ್ರೀ ಜಾಗೃತಿ' ರೂಪದಲ್ಲಿ ಪದ್ಮಾವತಿಯ ಹಾಸ್ಯಪಾತ್ರದಲ್ಲಿ, ಕಿತ್ತೂರ ಚೆನ್ನಮ್ಮ, ಆಯ್ದಕ್ಕಿಲಕ್ಕಮ್ಮ, ಲಾಯರ್ ಮುಂತಾದ ಪಾತ್ರಗಳನ್ನು ಅಭಿನಯಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಟಿಪ್ಪುಸುಲ್ತಾನ ನಾಟಕದಲ್ಲಿ ಮೈಸೂರ ಮಹಾರಾಣಿಯ ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸಿದ ವಿಜಯಲಕ್ಷ್ಮಿ ಕವಯಿತ್ರಿಯಾಗಿ, ನಿರೂಪಕಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದಾನಿರತರಾಗಿದ್ದರೂ ಬೇವಿನಳ್ಳಿಯ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ರೋಟರಿ ಕ್ಲಬ್ಬಿನಿಂದ ಆದರ್ಶ ಶಿಕ್ಷಕಿ ಪ್ರಶಸ್ತಿ, ಕರಕುಶಲ ಕಲೆಗಾಗಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಅದ್ಭುತ ಅಂಗಾಭಿನಯದ ದಯಾನಂದ ಸಾಗರ

ಮೂಲತಃ ದಾವಣಗೆರೆ ಜಿಲ್ಲೆಯವರಾದರೂ ಕಳೆದ ಹತ್ತಾರು ವರ್ಷಗಳಿಂದ ಕೊಪ್ಪಳ ತಾಲೂಕಿನ ಗಬ್ಬೂರಿನ ಸ.ಕಿ.ಪ್ರಾ. ಶಾಲೆಯ ವಿಜ್ಞಾನ ಶಿಕ್ಷಕನಾಗಿ ಗಿಣಗೇರಿಯಲ್ಲಿ ವಾಸವಾಗಿರುವ ದಯಾನಂದ ಸಾಗರ ಸ್ಥಳೀಯರೇ ಆಗಿಬಿಟ್ಟಿದ್ದಾರೆ.

ರಂಗಶತಾಬ್ದಿ ಮುಗಿಸಿಕೊಂಡು 'ಮೃತ್ಯು' 'ಸಂಕ್ರಾಂತಿ' 'ಬೆಳೆದವರು' ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಕೊಪ್ಪಳಕ್ಕೆ ಬಂದಾಗ ಮತ್ತೆ ಬಣ್ಣದ ಕನಸಿಗೆ ಗರಿಗೆದರಿ ಶಿಕ್ಷಕ ಕಲಾವೃಂದದಲ್ಲಿ ಸಕ್ರಿಯರಾಗಿ. ರಕ್ತರಾತ್ರಿಯಲ್ಲಿ ಶಕುನಿ, ಸಂಗೊಳ್ಳಿರಾಯಣ್ಣದಲ್ಲಿ ಕ್ಯಾಪ್ಟನ್, ಗಂಡುಗಲಿಕುಮಾರರಾಮದಲ್ಲಿ ಬೈಚಪ್ಪ ನಾಯಕ, ಟಿಪ್ಪು ಸುಲ್ತಾನದಲ್ಲಿ ಮೀರಸಾದಿಕ್ ಮುಂತಾದ ಪ್ರಮುಖ ಪಾತ್ರಗಳನ್ನು ತನ್ನೊಳಗೆ ಆಹ್ವಾನಿಸಿಕೊಂಡು ಆ ಪಾತ್ರಗಳ ಸೇಡು, ನೋವು, ನಲಿವು, ವಿಕೃತತೆಗಳನ್ನು ಇಡೀ ತನ್ನ ಶರೀರದ ಅಂಗಾಂಗಗಳ ಮೂಲಕವಾಗಿ ಹೊರಹಾಕುತ್ತ ಮೈತುಂಬಿಕೊಂಡು ಅಭಿನಯಿಸುವ ದಯಾನಂದಸಾಗರ ಕಲೆಯ ಸಾಗರವಾಗಿದ್ದಾನೆ.

## ದೇವರಾಜ ಮೇಟಿ

ಶಿಕ್ಷಕ ಕಲಾವೃಂದದ ಮತ್ತೊಬ್ಬ ನಟ ದೇವರಾಜ ಮೇಟಿ, ಗಿಣಗೇರಿಯಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿರುವ ಮೇಟಿ. ೨೦೦೧ರಲ್ಲಿ 'ನಾಂದಿ' ಎನ್ನುವ ಕಿರುನಾಟಕದ ಮೂಲಕ ರಂಗಕ್ಕೆ ಕಾಲಿರಿಸಿ 'ಚೆಲ್ಲಿದ ಚರಗ' 'ಕೊಬ್ಬಿನಿಂತ ಕರಿಜಿಂಕೆ' 'ಸಿಂಹಾಸನ ಖಾಲಿಯಿದೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾನೆ.

## ಶಂಕ್ರಯ್ಯ ಅಬ್ಬಿಗೇರಿ ಮಠ

ಕಾಲೇಜು ಉಪನ್ಯಾಸಕರಾದ ಶಂಕ್ರಯ್ಯ ಅಬ್ಬಿಗೇರಿ ಮಠ ಕೊಪ್ಪಳದವರಾಗಿದ್ದು ಶಿಕ್ಷಕ ಕಲಾವೃಂದದ ಸದಸ್ಯನಾಗಿ ಅದರ ಎಲ್ಲ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರಲ್ಲದೆ. ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಪಂಡಿತನ ಪಾತ್ರದಲ್ಲಿ ಗಮನಸೆಳೆದಿದ್ದಾರೆ.

## ಅಭಿನಯ ಮೈಗೂಡಿಸಿಕೊಂಡ ಜೂಡಿ

ಯಮನಪ್ಪ ಭೀಮಪ್ಪ ಜೂಡಿ ಮೂಲತಃ ಗಂಗಾವತಿ ತಾಲೂಕಿನ ಹಣವಾಳ ಗ್ರಾಮದವರಾದರೂ ಕೊಪ್ಪಳದಲ್ಲಿಯೆ ನೆಲೆಯಾಗಿ ವೈ.ಬಿ. ಜೂಡಿ ಎಂದು ಪ್ರಸಿದ್ಧಿ ಪಡೆದವರು. ಬಿ.ಕಾಂ. ಪದವಿಧರನಾಗಿ ೨೦೦೫ರಲ್ಲಿ ರಂಗಾಯಣ ಮೈಸೂರು, ಐಟಿಐ ಹಾಗು ಕರ್ನಾಟಕ ನಾಟಕ ಅಕಾಡೆಮಿ ಮೈಸೂರಲ್ಲಿ ನಡೆಸಿದ 'ಯುವ ರಂಗ ತರಬೇತಿ' ಪಡೆದು ನಂತರ ೨೦೧೧ ಮತ್ತು ೨೦೧೪ರಲ್ಲಿ ಕಲಬುರಗಿ, ಕಮಲಾಪುರ, ಮೈಲಾರ ಸಂಸ್ಥೆಯಲ್ಲಿ ವಿಭಾಗ ಮಟ್ಟದ ವಿಶೇಷ ತರಬೇತಿ ಪಡೆದಿದ್ದಾರೆ.

ಜಗಜ್ಯೋತಿಬಸವೇಶ್ವರ, ಗರುಡರಾಜ್ಯದಲ್ಲಿ ಘಟಸರ್ಪ, ಕೆರೆಗೆ ಹಾರ, ಜೋಗತಿ, ಸಂಕ್ರಾಂತಿ ಮುಂತಾದ ವೃತ್ತಿ ಮತ್ತು ಹವ್ಯಾಸಿ ನಾಟಕಗಳಲ್ಲೆಲ್ಲ ಅಭಿನಯಿಸಿ ಖ್ಯಾತ ನಿರ್ದೇಶಕ ಬಸವಲಿಂಗಯ್ಯನವರ ನಿರ್ದೇಶನದಲ್ಲಿ ೨೦೦೭ರಲ್ಲಿ ಹುಲಕೋಟೆಯಲ್ಲಿ ನಡೆದ ಉದ್ಯೋಗ ಖಾತ್ರಿ ಕಾರ್ಯಗಾರದಲ್ಲಿ ತರಬೇತಿ ಪಡೆದಿದ್ದಾರೆ.

ಪತ್ರಕರ್ತನೂ ಆಗಿರುವ ಜೂಡಿ, ಜಿಲ್ಲಾ ವಾರ್ತಾ ಇಲಾಖೆಯ ಸಹಯೋಗದಲ್ಲಿ ತಮ್ಮ ದ್ವಾರಕಾ ಸಮುದಾಯ ಅಭಿವೃದ್ಧಿ ಸಂಸ್ಥೆಯಿಂದ ವರ್ಷವಿಡೀ ವಿವಿಧ ಯೋಜನೆಯ ಪ್ರಾಯೋಜಿತ ಕಾರ್ಯಕ್ರಮ ಕುರಿತು ನಾಟಕ ಪ್ರದರ್ಶನ ಮಾಡುತ್ತಿರುತ್ತಾರೆ.

ಸುವರ್ಣ ಕರ್ನಾಟಕ ರಂಗ ಸನ್ಮಾನ–೨೦೦೬. ಕರ್ನಾಟಕ ನಾಟಕ ಅಕಾಡೆಮಿ, ರಂಗಭಾರತಿ ಹೂವಿನ ಹಡಗಲಿ ಇವರಿಂದ ಚಾಲುಕ್ಯ, ವಿಕ್ರಮಾದಿತ್ಯ ಪ್ರಶಸ್ತಿ–೨೦೧೩ ನಾಗರಿಕ ವೇದಿಕೆ ಸನ್ಮಾನ ವೈ.ಬಿ. ಜೂಡಿಗೆ ಸಂದಿವೆ.

## ಅರುಣಾ ನರೇಂದ್ರ

ಜೂಡಿಯವರ ಸಹೋದರಿ ಅರುಣಾ ನರೇಂದ್ರ ಬಿ.ಎಡ್. ಮತ್ತು ಎಂ.ಎ ಪದವೀಧರೆಯಾಗಿ ಪ್ರಸ್ತುತ ಕಿನ್ನಾಳಿನ ಸ.ಪ್ರಾ. ಶಾಲೆಯ ಶಿಕ್ಷಕಿಯಾಗಿ ಕೊಪ್ಪಳದಲ್ಲಿಯೆ ವಾಸವಾಗಿದ್ದಾರೆ. ಅಭಿನಯದಲ್ಲಿ ಆಸಕ್ತಿಯಿರುವ ಅರಣಾ ಕಿತ್ತೂರ ರಾಣಿ ಚನ್ನಮ್ಮ, ಅಬ್ಬಕ್ಕರಾಣಿ ಮುಂತಾದ ಏಕಪಾತ್ರಾಭಿನಯ ಮಾಡಿ ವಿರಂಚಿ ಕಲಾಬಳಗದ ಗವಿಸಿದ್ಧೇಶ್ವರ ಮಹಾತ್ಮೆಯಲ್ಲಿ ಮತ್ತು ಕಲ್ಯಾಣ ನಿರ್ಗಮನ ರೂಪಕದಲ್ಲಿ ಅಭಿನಯಿಸಿದ್ದಾರೆ. ಸಾಹಿತಿಯಾಗಿರುವ ಇವರಿಗೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

## ಅಭಿನಯ ಚತುರ ಮಲ್ಲಪ್ಪಕುರಿ

ಕೊಪ್ಪಳ ತಾಲೂಕಿನ ಬಿಕನಹಳ್ಳಿ ಗ್ರಾಮದ ೬೬ ವರ್ಷದ ಮಲ್ಲಪ್ಪ ತಂದಿ ಭರಮಪ್ಪ ಕುರಿ ೧೨ನೆಯ ವಯಸ್ಸಿನಲ್ಲಿಯೆ ವೀರ ಧನಂಜಯ ನಾಟಕದಲ್ಲಿ ದೇವೇಂದ್ರನ ಪಾತ್ರ ವಹಿಸಿ ಮುಂದೆ ಆಶಾಲತಾ ವೀರ ಪುರುಷ, ತಾಯಿಯ ಕರುಳು, ಭಲೆ ಮಗಳೆ ಮುಂತಾದ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಗೌಡ್ರಗದ್ಲ ನಾಟಕದಲ್ಲಿ ಮಲ್ಲಪ್ಪ ಕುರಿಜೊತೆ ಪ್ರೇಮಾಗುಳೇದಗುಡ್ಡ ನಟಿಸಿದ್ದು, ಇದು ೧೦೮ ಪ್ರಯೋಗ ಕಂಡಿದೆ.

ಕೊಪ್ಪಳ ತಾಲೂಕಾ ರಂಗಕಲಾವಿದರ ಸಂಘದ ಉಪಾಧ್ಯಕ್ಷರಾಗಿರುವ ಇವರಿಗೆ ಡಾ. ರಾಜ್‌ಕುಮಾರ್ ಪ್ರಶಸ್ತಿ ಲಭಿಸಿದೆ. ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ.

## ಗವಿಸಿದ್ದಪ್ಪ ಕೆರಿ

ಕೊಪ್ಪಳ ತಾಲೂಕಿನ ಕಾಸನಕಂಡಿಯ ಗವಿಸಿದ್ದಪ್ಪ ಕೆರಿ ವನಬಳ್ಳಾರಿಯ ಸ.ಹಿ.ಪ್ರಾ. ಶಾಲೆಯ ಶಿಕ್ಷಕನಾಗಿದ್ದು. ಶಿಕ್ಷಕ ಕಲಾವೃಂದದ ರಕ್ತರಾತ್ರಿ, ಸಂಗೊಳ್ಳಿರಾಯಣ್ಣ, ಗಂಡುಗಲಿ ಕುಮಾರರಾಮ ನಾಟಕಗಳಲ್ಲಿ ಅಭಿನಯಿಸಿದ್ದಾನೆ.

## ರಾಮಣ್ಣ ಶ್ಯಾವಿ

ಶಿಕ್ಷಕ ವೃಂದದ ಆಧಾರ ಸ್ತಂಭದಂತಿರುವ ರಾಮಣ್ಣ ಶ್ಯಾವಿ ಸಾ.ಶಿ. ಇಲಾಖೆಯಲ್ಲಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಯಾಗಿದ್ದಾನೆ. ರಕ್ತರಾತ್ರಿಯಲ್ಲಿ ದುರ್ಯೋಧನ, ಗಂಡುಗಲಿ

ಕುಮಾರ ರಾಮದಲ್ಲಿ ತುಘಲಕ್, ಸಂಗೊಳ್ಳಿರಾಯಣ್ಣದಲ್ಲಿ ಚೆನ್ನಬಸಪ್ಪ, ಟಿಪ್ಪು ಸುಲ್ತಾನದಲ್ಲಿ ಗುಲಾಮ, ಸಿಂಹಾಸನ ಖಾಲಿಯಿದೆಯಲ್ಲಿ ಗಂಡ, ಆತ್ಮಶಾಂತಿಯಲ್ಲಿ ತಂದೆಯ ಪಾತ್ರ ನಿರ್ವಹಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಗವಿಸಿದ್ಧಪ್ಪ ಕೋನಸಾಗರ

ಹಾಲಹಳ್ಳಿಯ ಸ.ಹಿ.ಪ್ರಾ.ಶಾಲೆಯ ಸಹಶಿಕ್ಷಕ ಗವಿಸಿದ್ದಪ್ಪ ಚೆನ್ನಬಸಪ್ಪ ಕೋನಸಾಗರ ೨೦ ವರ್ಷಗಳಿಂದ ಕಲಾ ಸೇವೆಯಲ್ಲಿ ತೊಡಗಿದ್ದಾರಲ್ಲದೆ. ಶಿಕ್ಷಕ ಕಲಾ ವೃಂದ ಮತ್ತು ವಿರಂಚಿ ಕಲಾ ಬಳಗದ ಎಲ್ಲ ನಾಟಕಗಳಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ.

'ಸತ್ಯಕ್ಕೆ ಸೋತಿತು ಸರ್ಕಾರ' ನಾಟಕಕ್ಕೆ ಗವಿಸಿದ್ದಪ್ಪ ಮಾಡಿದ ವಸ್ತ್ರಾಲಂಕಾರ ಗಮನ ಸೆಳೆದಿದೆ. ಸುವರ್ಣ ಕರ್ನಾಟಕ ರಾಜ್ಯ ಪ್ರಶಸ್ತಿ, ಚುಟುಕು ಶ್ರೀ ಮುಂತಾದ ಪ್ರಶಸ್ತಿ ಲಭಿಸಿವೆ.

## ಕೋಮಲಾ ಕುದರಿಮೋತಿ

ಕೊಪ್ಪಳದ ಮಹಿಳಾ ಸಂಘಟನೆಗಳ ಮುಂಚೂಣಿಯಲ್ಲಿರುವ ಕೋಮಲಾ ಕುದರಿಮೋತಿ, ಅಕ್ಕಮಹಾದೇವಿ, ಪೋಸ್ಟ್‌ಮಾನ್, ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಕ್ಕ ಅಲ್ಲಮರ ಸಂವಾದದಲ್ಲಿ ಅಕ್ಕನಾಗಿ ಗಮನ ಸೆಳೆದಿದ್ದಾರೆ. ಮಹಿಳೆಯರಿಗೆ, ಮಕ್ಕಳಿಗೆ ನಾಟಕಕ್ಕೆ ವೇದಿಕೆ ಒದಗಿಸುವಲ್ಲಿ ಶ್ರಮಿಸಿದ ಇವರಿಗೆ ಕಿತ್ತೂರ ರಾಣಿ ಚನ್ನಮ್ಮ ಮುಂತಾದ ರಾಜ್ಯ ಪ್ರಶಸ್ತಿಗಳು ದೊರಕಿವೆ.

## ಕಲೆಯನ್ನೆ ವೃತ್ತಿಯಾಗಿಸಿಕೊಂಡ ಲಲಿತಾ ಪೂಜಾರ

ಯಲಬುರ್ಗಿ ತಾಲೂಕಿನ ರ್‍ಯಾವಣಕಿಯಲ್ಲಿ ದಿ.೭-೬-೧೯೭೫ ರಂದು ಜನಿಸಿ ೭ನೆಯ ತರಗತಿಯವರೆಗೆ ಓದಿದ ಲಲಿತಾ ತಂದೆ ಈರಪ್ಪ ಪೂಜಾರ ಕಲೆಯನ್ನೆ ವೃತ್ತಿಯಾಗಿಸಿಕೊಂಡವರು.

ರಾಜ್ಯ ಮತ್ತು ವಿಭಾಗ, ಜಿಲ್ಲಾ ಮಟ್ಟದ ವಿವಿಧ ಸಂಸ್ಥೆಗಳ ಹತ್ತಾರು ತರಬೇತಿ ಶಿಬಿರದಲ್ಲಿ ಅನುಭವ ಪಡೆದು. ವಾರ್ತಾ ಇಲಾಖೆಯಿಂದ ಗ್ರಾಮಸಂಪರ್ಕ ಕಾರ್ಯಕ್ರಮದ ಬೀದಿನಾಟಕಗಳಲ್ಲಿ ಮತ್ತು ಇತರೆ ಇಲಾಖೆಗಳ ಎಲ್ಲ ಪ್ರಾಯೋಜಿತ ಬೀದಿನಾಟಕಗಳಲ್ಲಿ ಪಾತ್ರ ವಹಿಸುವ ಏಕೈಕ ಮಹಿಳೆಯಾಗಿದ್ದಾರೆ. ೧೫ ವರ್ಷಗಳಿಂದ ಈ ವೃತ್ತಿಯಲ್ಲಿ ತೊಡಗಿರುವ ಲಲಿತಾ ಸಂಕ್ರಾಂತಿಯಂತಹ ಕಲಾತ್ಮಕ ನಾಟಕದಲ್ಲಿಯೂ ಅಭಿನಯಿಸಿದ್ದಾರೆ.

ಸಮುದಾಯ ಸಾಂಸ್ಕೃತಿಕ ಕಲಾಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ದ್ವಾಸ.ಅ. ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ಮತ್ತು ದೇವದಾಸಿ ಮಹಿಳಾ

ವಿಮೋಚನಾ ಸಂಘದ ತಾಲೂಕಾ ಸಂಚಾಲಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಲಲಿತಾ ಪೂಜಾರ ಜಾನಪದ ಹಾಡುಗಾರ್ತಿಯೂ ಆಗಿದ್ದಾರೆ.

## ಪಂಪಣ್ಣ ಕಿನ್ನಾಳ

ತಂದೆ ಕೊಟ್ರಪ್ಪನವರ ಕಲೆಯಿಂದ ಪ್ರೇರಿತರಾಗಿ ರಂಗಭೂಮಿಯ ಆಸಕ್ತಿ ಬೆಳಸಿಕೋಂಡ ಪಂಪಣ್ಣ ಕಿನ್ನಾಳ, ಪೌರಾಣಿಕ, ಐತಿಹಾಸಿಕ ಹಾಗು ಸಾಮಾಜಿಕ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಗುಡದೂರ ಗುರುದೇವ, ಶಿವಶರಣ ಮೋಳಿಗಮಾರಯ್ಯ, ಚನ್ನವೀರ ಶಿವಯೋಗಿ ಇವರು ಅಭಿನಯಿಸಿದ ಭಕ್ತಿ ಪ್ರಧಾನ ನಾಟಕಗಳು ದೂರದರ್ಶನ ಮತ್ತು ಹೊಸಪೇಟೆ ಆಕಾಶವಾಣಿಗಳಲ್ಲಿ ಪಂಪಣ್ಣ ಅಭಿನಯಿಸಿದ ನಾಟಕಗಳು ಪ್ರಸಾರವಾಗಿವೆ.

## ಚಿತ್ರಕಲೆಗೆ ಹೆಸರಾದ ಕಿನ್ನಾಳ ಗ್ರಾಮದ ಭರಮಪ್ಪ ಜುಟ್ಲದ

ತಂದೆ ಹನುಮಂತಪ್ಪ ಜುಟ್ಲದ ಮತ್ತು ತಾಯಿ ಬಸಮ್ಮರ ಗರ್ಭದಲ್ಲಿ ದಿ.೬-೨-೧೯೪೪ ರಲ್ಲಿ ಹುಟ್ಟಿದವರು. ೩ನೆಯ ತರಗತಿಯವರೆಗೆ ಮಾತ್ರ ಕಲಿತು ೩೫ ವರ್ಷಗಳ ರಂಗಭೂಮಿಯ ಅನುಭವಹೊಂದಿದ್ದಾರೆ. ನೇಕಾರಿಕೆ ವೃತ್ತಿಯಿಂದ ಬಾಲ್ಯದಲ್ಲಿಯೆ ದೊಡ್ಡಾಟಗಳಲ್ಲಿ ಪಾತ್ರ ಮಾಡುತ್ತ ೧೯೭೬ರಿಂದ ವೃತ್ತಿ ರಂಗಭೂಮಿ ಪ್ರವೇಶಿಸಿದರು.

ಶ್ರೀ ವಿಜಯಕಲಾ ನಾಟ್ಯ ಸಂಘ ಇಲಕಲ್ ಕಂಪನಿಯಲ್ಲಿ ಐದು ವರ್ಷಗಳವರೆಗೆ ಸೇವೆ ಸಲ್ಲಿಸಿದ ಜುಟ್ಲದ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹೀಗೆ ನೂರಾರು ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಶ್ರೀ ವೀರೇಶ್ವರ ನಾಟ್ಯ ಸಂಘದಲ್ಲಿಯೂ ಸೇವೆ ಸಲ್ಲಿಸಿದ್ದಕ್ಕೆ ಪತ್ರ ನೀಡಲಾಗಿದೆ.

ಹಲವು ಕಂಪನಿಗಳಲ್ಲಿ ಅಭಿನಯಿಸುತ್ತ ರಾಜ್ಯದ ಎಲ್ಲ ಭಾಗಗಳಲ್ಲಿ ಸಂಚರಿಸಿದ ಭರಮಪ್ಪ ಜಟ್ಲದವರಿಗೆ ಪ್ರಶಂಸಾಪತ್ರಗಳು ಪ್ರಶಸ್ತಿ, ಸನ್ಮಾನ ಲಭಿಸಿವೆ.

## ಶ್ರೀಧರ ದೇವಪೂರ

ಹುಟ್ಟಿನಿಂದಲೇ ಕಲೆಯನ್ನು ಮೈಗೂಡಿಸಿಕೊಂಡಿರುವ ಕೊಪ್ಪಳದ ಶ್ರೀಧರ ದೇವಪೂರ ತಮ್ಮ ಅಕ್ಕಸಾಲಿ ವೃತ್ತಿಯೊಂದಿಗೆ ಮಾತಂಗಿ, ಚೋರ ಚರಣದಾಸ, ದೇವರಿದ್ದರೆ ಬರಲಿ, ಮಾರಟಕ್ಕಿದೆ ಮುಂತಾದ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಜ್ಯೂನಿಯರ್ ಸುನೀಲ ಎಂದು ಗುರುತಿಸಿಕೊಂಡಿರುವ ಶ್ರೀಧರ ಓ ಪ್ರೇಮ ದೇವತೆ ಸಿನಿಮಾದಲ್ಲಿಯೂ ನಟಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಸನ್ಮಾನ, ಪ್ರಶಸ್ತಿ ಇವರಿಗೆ ದೊರೆತಿವೆ.

## ಕಲೋಪಾಸಕ ಈಶಪ್ಪ ಹಡಪದ

ಖ್ಯಾತ ಹಾರ್ಮೋನಿಯಂ ಮಾಸ್ತರ ಸಿದ್ದಪ್ಪ ಮಾಸ್ತರರ ಮಗಳನ್ನು ಮದುವೆಯಾಗಿ ಅವರ ಓಜಿನಹಳ್ಳಿ ಗ್ರಾಮದಲ್ಲಿಯೆ ನೆಲಸಿರುವ ೫೭ ವಯಸ್ಸಿನ ಈಶಪ್ಪ ತಂದಿ ಸಿದ್ಧಪ್ಪ ಹಡಪದ ಬಾಲ್ಯದಲ್ಲಿಯೆ ನಾಟಕದ ಗೀಳು ಅಂಟಿಸಿಕೊಂಡು ೧೯೭೪ರಲ್ಲಿಯೆ ಮೋಸಗೈದ ಮಡದಿ ನಾಟಕದಲ್ಲಿ ಹಾಸ್ಯ ಸ್ತ್ರೀ ಪಾತ್ರ ಮಾಡುವ ಮೂಲಕ ರಂಗ ಪ್ರವೇಶಿಸಿದರು.

ಏಣಗಿ ಕಾಶಿಮಸಾಬರಂಥ ಮಹಾನ್ ಕಲಾವಿದರ ಕೈಯಲ್ಲಿ ಕಲಿತು ದೇವೇಂದ್ರ ರೆಡ್ಡಿ ನಂದಿಮಠ ಕಂಪನಿಯ ಹರಿಶ್ಚಂದ್ರ ನಾಟಕದಲ್ಲಿ ತಾರಾಮತಿಯ ಪಾತ್ರ ವಹಿಸುತ್ತ ವೃತ್ತಿ ನಾಟಕ ಕಂಪನಿಯ ನಟನಾದ ಈಶಪ್ಪ ಹಡಪದ ಸಂಗೀತ ಕಲಿತು ನಾಟಕ ನಿರ್ದೇಶನ ಮಾಡತೊಡಗಿದ್ದಾರೆ.

ಸಿ. ಬಸವಲಿಂಗಯ್ಯರಿಂದ ಬೀದಿ ನಾಟಕ ತರಬೇತಿ ಪಡೆದು. ಜಲ ನಿರ್ಮಲ ಯೋಜನೆ ಮತ್ತು ಏಡ್ಸ್ ಕುರಿತು ಬೀದಿ ನಾಟಕ ಮಾಡುತ್ತ ಗದಗ, ಬಳ್ಳಾರಿ, ಕೊಪ್ಪಳ, ವಿಜಾಪುರ, ಗುಲ್ಬರ್ಗ ಈ ಎಲ್ಲ ಜಿಲ್ಲೆಗಳನ್ನು ಸಂಚರಿಸಿದ್ದಾರೆ. ಕೊಪ್ಪಳ ಜಿಲ್ಲಾ ವಾರ್ತಾ ಇಲಾಖೆಯ ಕಾರ್ಯಕ್ರಮಗಳಲ್ಲಿ ೯ ವರ್ಷಗಳಿಂದ ಭಾಗವಹಿಸುತ್ತ ಕಲೋಪಾಸಕನಾಗಿ ಈಶಪ್ಪ ಹಡಪದ ಸೇವೆ ಸಲ್ಲಿಸುತ್ತಿದ್ದಾರೆ.

## ಕಲಾವೃತ್ತಿಯಲ್ಲಿಯೆ ಕಾಲ ಕಳೆದ ಲಿಂಗರಾಜ ಬಿಸರಳ್ಳಿ

ತೊಂಡಿಹಾಳ ಗ್ರಾಮದ ಶಿವಮೊಗ್ಗೆಪ್ಪ ಮತ್ತು ಬಸಮ್ಮ ದಂಪತಿಗಳಿಗೆ ದಿ.೧೨-೨-೧೯೪೬ರಂದು ಜನಿಸಿದ ಲಿಂಗರಾಜ ಬಿಸರಳ್ಳಿ. ಎಸ್.ಎಸ್.ಎಲ್.ಸಿ ಪಾಸಾದ ಬಳಿಕ ಗದಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಶಿಕ್ಷಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನಾಟಕ ನಿರ್ದೇಶನ ರಂಗಗೀತೆ ಹಾಡುತ್ತ ಬಂದಿದ್ದಾರೆ.

ಹಾರ್ಮೋನಿಯಂ ಮತ್ತು ಕ್ಯಾಸಿಯೋ ನುಡಿಸುವದರಲ್ಲಿ ವಿಶೇಷ ಪರಿಣತಿ ಸಾಧಿಸಿದ ಲಿಂಗರಾಜ ಇಲಕಲ್ಲಿನ ಗೂಡಸಾಹೇಬರ ಕಂಪನಿ, ಜಮಖಂಡಿ ಬಾಲರಾಜ ಕಂಪನಿ, ರೋಣದ ಬಸವಂತಪ್ಪವಾಲಿ ಮುಂತಾದವರ ನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ರಂಗಗೀತೆ ತಾವೇ ರಚಿಸಿ ಹಾಡುವದರಲ್ಲಿ ಮತ್ತು ವಿವಿಧ ಇಲಾಖೆಗಳ ಕಾರ್ಯಕ್ರಮಗಳಲ್ಲಿ ಕಾಲ ಕಳೆಯುತ್ತಿರುವ ಲಿಂಗರಾಜ ಬಿಸರಳ್ಳಿ ಕಲಾವಿದ ಮಾಶಾಸನ ಪಡೆಯುತ್ತಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಸನ್ಮಾನಕ್ಕೆ ಪಾತ್ರರಾಗಿದ್ದಾರೆ.

## ನಾಟಕಕಾರ ಟಿ.ಎಚ್. ತಳಕಲ್

ಕೊಪ್ಪಳ ತಾಲೂಕಿನ ಅಗಳಿಕೇರಾ ಗ್ರಾಮದ ನಾಟಕ ಕವಿಗಳೆಂದೇ ಹೆಸರಾದ ಟಿ.ಎಚ್. ತಳಕಲ್ ೧೯೮೭ರಿಂದ ನಾಟಕ ರಚನೆಯಲ್ಲಿ ತೊಡಗಿದ್ದಾರೆ. ಹುಚ್ಚ ಹಚ್ಚಿದ

ಕಿಚ್ಚು, ದರ್ಪ ಮೆಟ್ಟಿದ ಸರ್ಪ, ಸರಕಾರಕ್ಕೆ ಬುದ್ಧಿ ಇಲ್ಲ ರೈತನಿಗೆ ನಿದ್ದೆ ಇಲ್ಲ ಮುಂತಾದ ನಾಟಕಗಳು ವೀರೇಶ್ವರ ಪುಣ್ಯಾಶ್ರಮ ಮತ್ತು ಕೆಲಸಗಾರರ ಪ್ರಿಂಟಿಗ್ ಪ್ರೆಸ್‌ನಿಂದ ಹಲವು ಮುದ್ರಣ ಕಂಡಿವೆ. ಧರ್ಮದೈವ ಗೆದ್ದಿತು, ಕಟ್ಟಿಲ್ಲದ ಟೊಪ್ಪಿಗೆ, ಸೊಕ್ಕಿಲ್ಲದ ಸರಕಾರ ಅಚ್ಚಿನಲ್ಲಿವೆ.

## ಅಭಿನಯದಲ್ಲಿ ತೃಪ್ತಿ ಕಂಡ ಗುರಯ್ಯ ಸ್ವಾಮಿ

ಯಲಬುರ್ಗಿ ತಾಲೂಕಿನ ಸಂಕನೂರಿನ ವೀರಯ್ಯ ಮತ್ತು ಗೌರಮ್ಮನವರ ಮಗನಾದ ಗುರಯ್ಯ ಸ್ವಾಮಿ ಹಿರೇಮಠ. ೧೯೪೫ ರಲ್ಲಿ ಜನಿಸಿದವರು, ಅಣ್ಣ ಶಿವಲಿಂಗ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ರಂಗಭೂಮಿಯ ಬದುಕನ್ನು ಆಯ್ದುಕೊಂಡು ಅವರ ಶಿವಲಿಂಗೇಶ್ವರ ನಾಟ್ಯ ಸಂಘದ ಅನುಭವದೊಂದಿಗೆ ತಾವೇ ಸ್ವಂತ ಶಿವಪ್ರಸಾದ ನಾಟ್ಯ ಸಂಘ ಕಟ್ಟಿ ಆರು ವರ್ಷಗಳ ಕಾಲ ನಡೆಸಿದರು.

ಪಿ.ಬಿ. ಧುತ್ತರಗಿಯವರ ಛತ್ರಪತಿ ಶಿವಾಜಿ ನಾಟಕದಲ್ಲಿ ಅವರ ನಿರ್ದೇಶನದಲ್ಲಿ ಶಿವಾಜಿ ಪಾತ್ರ ವಹಿಸಿದ್ದು, ಖ್ಯಾತ ರಂಗ ನಿರ್ದೇಶಕ ಶ್ರೀಧರಗಟ್ಟಿ ರೇವಣ್ಣ ಸಿದ್ಧಯ್ಯರ ನಿರ್ದೇಶನದಲ್ಲಿ ಅಕ್ಕಮಹಾದೇವಿ ನಾಟಕದಲ್ಲಿ ಕೌಶಿಕನ ಪಾತ್ರವಹಿಸಿ ಮೆಚ್ಚುಗೆ ಪಡೆದದ್ದು ತಮ್ಮ ಸುಕೃತವೆಂದು ಭಾವಿಸಿದ ಗುರಯ್ಯನವರು. ಅನೇಕ ನಾಟಕಗಳಲ್ಲಿ ವಿಭಿನ್ನ ಪಾತ್ರಗಳ ಅಭಿನಯದ ಮೂಲಕ ಜನಮನ್ನಣೆ ಪಡೆದಿದ್ದಾರೆ. ಪ್ರಸಿದ್ಧ ಸಂಗೀತಗಾರ, ದಿ.ಮಹಾಂತೇಶ ಧನ್ನೂರ ಅವರಿಂದ ಸಂಗೀತ ಅಭ್ಯಾಸ ಕಲಿತು ರಂಗಗೀತೆ ಹಾಡುತ್ತ ಹಾಡಿಸುತ್ತ ೧೯೭೪ರಿಂದ ರಂಗಭೂಮಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಮಠಾಧೀಶರು ಇವರನ್ನು ಸನ್ಮಾನಿಸಿದ್ದಾರೆ. ಪ್ರಸ್ತುತ ಸಂಕನೂರಿನಲ್ಲಿಯೆ ತಮ್ಮತೃಪ್ತಿಯ ಜೀವನ ಅನುಭವಿಸುತ್ತಿದ್ದಾರೆ.

## ಎಲ್ಲ ಬಗೆಯ ಪಾತ್ರಕ್ಕೆ ಸೈ ಎಂದ ವೀರಯ್ಯ ಹಿರೇಮಠ

ಕಲಾಗ್ರಾಮವೆಂದೇ ಗುರುತಿಸಲಾದ ಯಲಬುರ್ಗಿ ತಾಲೂಕಿನ ಮಂಡಲಗಿರಿಯ ಬಸಲಿಂಗಯ್ಯ ಸಣ್ಣ ವೀರಮ್ಮನವರ ಮಗನಾದ ವೀರಯ್ಯ ಹಿರೇಮಠ, ಪಿಯೂಸಿ ಓದಿ ಆರ್ಥಿಕ ತೊಂದರೆಯಿಂದ ಅಲೆದಾಡಿ ಆಯುರ್ವೇದ ಕಲಿತು ಮತ್ತೆ ಗ್ರಾಮಕ್ಕೆ ಬಂದು ಹವ್ಯಾಸಿ ಕಲಾವಿದರು ಆಡಿದ ಸ್ತ್ರೀರತ್ನ ನಾಟಕದಲ್ಲಿ ಶೋಭಾಳ ಸ್ತ್ರೀಪಾತ್ರ ವಹಿಸುವ ಮೂಲಕ ರಂಗಭೂಮಿಗೆ ಪಾದಾರ್ಪಣೆ ಮಾಡಿದವರು. ಇಂದಿಗೂ ಅದನ್ನು ಮುಂದುವರಿಸಿಕೊಂಡು ಹೊರಟಿದ್ದಾರೆ.

ಮದ್ದಾನೇಶ್ವರ ನಾಟ್ಯಸಂಘ ಶಿರಗುಪ್ಪಿ ಕಂಪನಿ ಗಂಗಾವತಿಯಲ್ಲಿ ಕ್ಯಾಂಪ್ ಮಾಡಿದಾಗ ಅದರಲ್ಲಿ ಸೇರಿ ಅದೇ ಶೋಭಾಳ ಪಾತ್ರ ಮತ್ತು ಬಂಜೆ ತೊಟ್ಟಿಲಿನ ಸಾವಿತ್ರಿ ಪಾತ್ರದಿಂದ ಹೆಸರು ಮಾಡಿ ೧೯೮೨ರಲ್ಲಿ ಶ್ರೀಶೈಲ ನಾಟ್ಯಸಂಘ ಸೇರಿ ೩ವರ್ಷ ನಂತರ ೧೯೮೬ ರಿಂದ ೯೩ ರ ವರೆಗೆ ಆಶಾಪುರ ಕಂಪನಿ, ಗುಡಗೇರಿ ಕಂಪನಿಯಲ್ಲಿ

ಪಾತ್ರ ವಹಿಸಿದ ವೀರಯ್ಯ 'ಎಚ್ಚರ ತಂಗಿ ಎಚ್ಚರ' ನಾಟಕದ ಕುಡಕರಂಗನ ಪಾತ್ರದ ಮೂಲಕ ಪ್ರಸಿದ್ಧಿಗೆ ಬಂದರು.

ನಟಿ ಮಮತಾಶ್ರೀಯನ್ನು ಮದುವೆಯಾದ ಮನ್ನಾಪುರದ ಶಂಕರ ಹಡಪದರ ಸ್ನೇಹದೊಂದಿಗೆ ವೀರಯ್ಯ ಧೈರ್ಯ ಮಾಡಿ ಮೂರೂಜನ ಸೇರಿ ೧೯೯೩ರಲ್ಲಿ ಶ್ರೀ ಗುರುರಾಘವೇಂದ್ರ ಕೃಪಾಪೋಷಿತ ನಾಟಕ ಮಂಡಳಿ ಹಿರಿಯೂರು ಎನ್ನುವದನ್ನು ಸ್ಥಾಪಿಸಿದಾಗ ಅದು ಕೇವಲ ೩ ದಿನ ನಡೆದು ಬಂದ್ ಆಯಿತು. ಆದರೆ ಛಲಬಿಡದೆ ಆಗಿನ ಪುಟ್ಟರಾಜ ಗವಾಯಿಗಳ ಆಶೀರ್ವಾದದೊಂದಿಗೆ ಅದೇ ವರ್ಷ ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ ಎನ್ನುವದನ್ನು ಸ್ಥಾಪಿಸಿದ್ದು ಇಂದಿಗೂ ಮುಂದುವರೆದಿದೆ.

೨೦೦೧-೦೨ರ ಸಾಲಿನ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ವೀರಯ್ಯ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ. ಯಾವುದೇ ರೀತಿಯ ಪಾತ್ರವನ್ನು ಲೀಲಾಜಾಲವಾಗಿ ಅಭಿನಯಿಸುವ ಹಿರೇಮಠರಿಗೆ ಕಲೆ ರಕ್ತಗತವಾಗಿ ಬಂದಿದೆ.

## ಅಭಿನಯವನ್ನೆ ಉಸಿರಾಡಿದ ಶಂಕರ ಹಿರೇಮನ್ನಾಪೂರ

ಕುಷ್ಟಗಿ ತಾಲೂಕಿನ ಹಿರೇಮನ್ನಾಪೂರದ ಭಿಮಪ್ಪ ಹಡಪದ ಮತ್ತು ಮೂಕವ್ವರ ಮಗನಾದ ಶಂಕರ ಹಡಪದ ಯಲಬುರ್ಗಿ ತಾಲೂಕಿನ ಹಿರೇಅರಳಿ ಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದ್ದರಿಂದ ಎರಡೂ ಗ್ರಾಮಗಳ ಸಂಬಂಧ ಮತ್ತು ಹಡಪದಗೂ ಅನ್ವಯಿಸುವಂತೆ 'ಎಚ್' ಸೇರಿಸಿಕೊಂಡು ಎಚ್. ಶಂಕರ ಎಂದೇ ಹೆಸರಾಗಿದ್ದಾರೆ.

ವೀರಯ್ಯ ಹಿರೇಮಠ ಮತ್ತು ಶಂಕರರದು ಅಪರೂಪದ ಜೋಡಿಯಾಗಿರುವದರಿಂದ ಜತೆಯಲ್ಲಿಯೆ ಪರಿಚಯಿಸಬೇಕಾದ ಅಗತ್ಯವಿದೆ. ಎಸ್.ಎಸ್.ಎಲ್.ಸಿ ಓದಿ ನಾಟಕದ ಹುಚ್ಚು ಬೆಳಸಿಕೊಂಡಿದ್ದರಿಂದ ೧೯೭೦ರಲ್ಲಿ ಮಲ್ಲಿಕಾರ್ಜುನ ನಾಟ್ಯ ಸಂಘ ಬಾಗಲವಾಡ ಕಂಪನಿಸೇರಿ ಪಾತ್ರವಹಿಸುತ್ತ ನಂತರ ಗೋಕಾಕ ಕಂಪನಿ, ಸುಳ್ಳದ ಕಂಪನಿ, ಆಶಾಪುರ ಕಂಪನಿ, ಗುಡಗೇರಿ ಕಂಪನಿ ಸುತ್ತಾಡಿ ಅಭಿನಯದಲ್ಲಿ ಹೆಸರು ಮಾಡಿ ೧೯೯೦ರಲ್ಲಿ ನಟಿ ಮಮತಾಶ್ರೀ ಕೈಹಿಡಿದು ೧೯೯೩ರಲ್ಲಿ ವೀರಯ್ಯರೊಂದಿಗೆ ಮಂಡಲಗಿರಿ ಕಂಪನಿ ಮಾಡಿ ಮೂವರೂ ಅದನ್ನು ಇಂದಿಗೂ ಮುಂದುವರಿಸಿದ್ದು ಗಮನಾರ್ಹವಾಗಿದೆ.

ಮರಿಬ್ಯಾಡ ನೀ ನ್ನ ಮರಿಬ್ಯಾಡ, ಮಗಳಾಗಿ ಬಂದಳು ಸೊಸೆಯಾಗಿ ನಿಂದಳೂ. ನಾಟಕಗಳ ಮೂಲಕ ಪ್ರಸಿದ್ಧಿ ಪಡೆದ ಎಚ್. ಶಂಕರ ನಿರ್ದೇಶಕನಾಗಿ, ಹಿನ್ನಲೆ ಹಾಡುಗಾರನಾಗಿ ಬಹುಮುಖಿ ಪ್ರತಿಭೆ ತೋರಿದ್ದಾರೆ. ಅನೇಕ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಭಕ್ತಿ ಪ್ರಧಾನ ನಾಟಕಗಳಲ್ಲಿ ಪಾತ್ರವಹಿಸಿ ಅಭಿನಯವನ್ನೇ ತಮ್ಮ ಉಸಿರಾಗಿಸಿಕೊಂಡಿದ್ದಾರೆ.

೨೦೦೨ರಲ್ಲಿ ರಂಗಭೂಮಿಯ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಶಂಕರವರನ್ನು ಅನೇಕ ಸಂಘ ಸಂಸ್ತೆಗಳು ಪ್ರಶಂಸಿಸಿ ಸನ್ಮಾನಿಸಿವೆ. ಈ ಎರಡು ಪ್ರತಿಭೆಗಳು ಜಿಲ್ಲೆಯ ರಂಗಕಲೆಯನ್ನು ರಾಜ್ಯಾದ್ಯಂತ ಸಾರುತ್ತಿವೆ.

## ಅಪರೂಪ ಕಲಾವಿದೆ ಶಾಂತಮ್ಮ ಪೂಜಾರ

ಪ್ರಸ್ತುತ ಯಲಬುರ್ಗಿಯಲ್ಲಿ ವಾಸವಾಗಿರುವ ೬೫ ವಯಸ್ಸಿನ ಶಾಂತಮ್ಮ ಪೂಜಾರ ರಂಗಭೂಮಿಗೆ ಪಾದಾರ್ಪಣೆ ಮಾಡಿದ್ದೇ ಒಂದು ಅಪರೂಪದ ಘಟನೆಯಾಗಿದೆ. ಗಂಡ ಪುಟ್ಟಪ್ಪ ರಂಗಭೂಮಿಯಲ್ಲಿ ವಾಯರ್ಮನ್ ಆಗಿ ಮತ್ತು ಬೇರೆ ಬೇರೆ ಕೆಲಸ ಮಾಡುತ್ತ ಕಂಪನಿ ಕಂಪನಿ ಸುತ್ತುತ್ತಿದ್ದರಿಂದ ಆತನೊಂದಿಗೆ ಅನಿವಾರ್ಯವಾಗಿ ಹೋಗಬೇಕಾಗಿದ್ದ ಶಾಂತಮ್ಮ ಕಂಪನಿಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡುವದರ ಜತೆಗೆ ರಿಹರ್ಸಲ್ ಮತ್ತು ನಾಟಕ ನೋಡುತ್ತ ನಾಟಕದ ಎಲ್ಲ ಪಾತ್ರಗಳ ಮಾತುಗಳನ್ನು ಕಲಿಯುತ್ತಿದ್ದರು. ಎಂಟನೆಯ ತರಗತಿ ಓದಿದ್ದರಿಂದ ಓದಲಿಕ್ಕೂ ಬರೆಯಲಿಕ್ಕೂ ಬರುತ್ತಿತ್ತು.

ಕೆ.ಎಚ್.ರೆಡ್ಡಿ ಕಂಪನಿಯಲ್ಲಿದ್ದಾಗ ಹಾವೇರಿಯಲ್ಲಿ ಅದರಲ್ಲಿ ಪಾತ್ರ ಮಾಡುತ್ತಿದ್ದ ಶಂಕ್ರಪ್ಪ ಮತ್ತು ಅವರ ಪತ್ನಿ ಕಮಲಾ ಹೇಳದೆ ಕೇಳದೆ ಓಡಿ ಹೋದರು. ಆಗ ಬಸ್ ಹಮಾಲ ನಾಟಕ ನಡೆಯುತ್ತಿತ್ತು. ಅದರಲ್ಲಿಯ ರಂಗಿಯ ಪಾತ್ರದ ಎಲ್ಲ ಮಾತುಗಳನ್ನು ಕಲಿತಿದ್ದ ಶಾಂತಮ್ಮನನ್ನು ಆ ಪಾತ್ರವಹಿಸಲು ಮಾಲಿಕರು ಕೇಳಿದಾಗ ಬಣ್ಣದ ಹುಚ್ಚಿನಿಂದ ಒಪ್ಪಿಕೊಂಡು ಆ ಪಾತ್ರವನ್ನು ಅಧ್ಭುತವಾಗಿ ಅಭಿನಯಿಸಿದಾಗ ನಂತರ ಅದೇ ವೃತ್ತಿಯಾಯಿತು ಆಗ ಆಕೆಗೆ ೩೫ ವಯಸ್ಸು.

ಗೋಕಾಕ ಕಂಪನಿ, ರೆಹಮಾನವ್ವ ಕಂಪನಿ, ಕಡಪಟ್ಟಿಕಂಪನಿ, ಕುಕನೂರ ಯಲ್ಲಪ್ಪ ಕಂಪನಿ, ಹೀಗೆ ಹಲವಾರು ಕಂಪನಿಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತ ಪಿ.ಬಿ.ಧುತ್ತರಗಿಯವರ ಕಂಪನಿ ಸೇರಿ ಪಾತ್ರವಹಿಸುವಾಗ ಅದು ೧೯೮೫ರಲ್ಲಿ ಯಲಬುರ್ಗಿಗೆ ಬಂದು ಸ್ಥಗಿತಗೊಂಡಿದ್ದರಿಂಧ ಶಾಂತಮ್ಮ ದಂಪತಿಗಳು ಇಲ್ಲಿಯೆ ವಾಸವಾಗಿದ್ದಾರೆ.

ಸುಧೀರ್, ಧೀರೇಂದ್ರ ಗೋಪಾಲ ಮುಂತಾದವರ ಜತೆ ನಡಿಸಿರುವ ಶಾಂತಮ್ಮ 'ತವರು ಮನೆ' ನಾಟಕದಲ್ಲಿ ಒಬ್ಬಾಕೆಯೆ ಮೂರು ಪಾತ್ರ ನಿರ್ವಹಿಸಿದ್ದು ವಿಶೇಷ. ಅನೇಕ ಪ್ರಸಿದ್ಧ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಇವರನ್ನು ಕಲಾ ಪ್ರಪಂಚ ನಿರ್ಲಕ್ಷಿಸಿರುವುದೇ ಸೋಜಿಗ.

## ವಾಯರ್‌ಮನ್ ಪುಟ್ಟಪ್ಪ

ಅನೇಕ ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ವಾಯರ್‌ಮನ್ ಆಗಿ ಕೆಲಸ ಮಾಡುತ್ತ ತಮ್ಮ ಬದುಕಿನ ಬಹುಭಾಗವನ್ನು ಸವೆಸಿರುವ ಪುಟ್ಟಪ್ಪ ತಮ್ಮ ಪತ್ನಿ ಶಾಂತಮ್ಮಗೆ ಉತ್ತೇಜನ ನೀಡಿ ರಂಗಭೂಮಿಯಲ್ಲಿ ನಟಿಸಲು ಅವಕಾಶ ಕಲ್ಪಿಸಿದವರು. ಪ್ರಸ್ತುತ

ಯಲಬುರ್ಗಿಯ ಹೊರವಲಯದ ಜನತಾಮನೆಯಲ್ಲಿ ವಾಸ ಸಣ್ಣ ಪಾನ ಬೀಡಾ ಅಂಗಡಿ ನಡೆಸುತ್ತ ಪತ್ನಿ ಮಕ್ಕಳೊಂದಿಗೆ ವಾಸವಾಗಿದ್ದಾರೆ.

ಮುಟ್ಟಪ್ಪ ತಂದಿಬಸಪ್ಪ ಪೂಜಾರರದು ಮೂಲತಃ ಹಾವೇರಿ ಜಿಲ್ಲಾ ಹಾನಗಲ್ ತಾಲೂಕಿನ ಬಾಳಂಬಿಡ ಗ್ರಾಮ ಇಲ್ಲಿಗೆ ಬಂದು ೩೫ವರ್ಷಗಳು ಕಳೆದಿದ್ದರಿಂದ ಇಲ್ಲಿಯವರೆಂದೇ ಗುರುತಿಸುತ್ತಾರೆ.

## ನಾಟಕಕಾರ ಶೇಖರ ರೆಡ್ಡಿ

ಯಲಬುರ್ಗಿ ತಾಲೂಕಿನ  ಶಿರೂರ ಗ್ರಾಮದ ೫೮ ವಯಸ್ಸಿನ ಎಂ. ಶೇಖರ ರೆಡ್ಡಿ. ೧೯೮೦ರಲ್ಲಿ 'ಅಣ್ಣತಂಗಿ' ನಾಟಕದಲ್ಲಿ ಗಂಗಾ ಸ್ತ್ರೀ ಪಾತ್ರ, ನಂತರ ವಸಂತನ ಪಾತ್ರ ವಹಿಸುವ ಮೂಲಕ ನಾಟಕದ ಹುಚ್ಚನ್ನು ತಲೆಗೇರಿಸಿಕೊಂಡು ೧೯೮೮ರಲ್ಲಿ ಇವರು ಬರೆದ 'ಮನೆಗೆ ತಕ್ಕ ಮಗಳು' ನಾಟಕ ೩ ಮುದ್ರಣ ಕಂಡು ರಾಜ್ಯದ ಎಲ್ಲಕಡೆ ಸಾಕಷ್ಟು ಪ್ರಯೋಗ ಕಂಡಿದೆ.

೧೯೯೨ರಲ್ಲಿ ಬಹದ್ದೂರ ಮಗ ಬರೆದರೆ ೨೦೦೬ರಲ್ಲಿ ಸತ್ಯ ಸೋಲಲಿಲ್ಲ ನಾಟಕ ಬರೆದಿರುವ ಶೇಖರರೆಡ್ಡಿ ಪಸ್ತುತ 'ನಮ್ಮೂರು ಹಿಂಗ್ಯಾಕಾತು' ನಾಟಕ ಬರೆದು ಪ್ರದರ್ಶಿಸುತ್ತಿದ್ದಾರೆ. ಸರ್ವೀಸ್ ಕಂಪನಿಗಳಲ್ಲಿಯೂ ಇವರ ನಾಟಕ ಪ್ರಯೋಗಗೊಂಡಿವೆಯಲ್ಲದೆ ಶಿರೂರ ಗ್ರಾಮದ ಮಾರುತೇಶ್ವರ ನಾಟ್ಯಸಂಘ, ಇವರ ಎಲ್ಲ ನಾಟಕಗಳನ್ನು ಪ್ರಯೋಗಿಸುತ್ತ ಬಂದಿದೆ. ಇದರಲ್ಲಿಯ ಪ್ರಮುಖ ನಟರು ವೀರೇಶ ವಾಲ್ಮೀಕಿ, ಸಿದ್ಧಣ್ಣ ಭೀಂನರಿ, ಬಸವರಾಜಮಾದಿನೂರ, ಬಾಳಪ್ಪಕಡಗತ್ತಿ, ವೀರನಗೌಡ, ಹುಸೇನಸಾಬ, ಚಿದಾನಂದಪ್ಪ ಮುಂತಾದವರು. ತಾಯಿಗೆ ತಕ್ಕ ಮಗ ಇಲ್ಲಿಯೆ ೧೫ ಪ್ರಯೋಗ ಕಂಡಿದೆ.

## ವರ್ಣರಂಜಿತ ಡಾ॥ ಕಾಶಿನಾಥ ಕುಕನೂರು

ವೃತ್ತಿಯಿಂದ ವೈದ್ಯರಾಗಿರುವ ಯಲಬುರ್ಗಿ ತಾಲೂಕಿನ ಕರಮುಡಿ ಗ್ರಾಮದ ಕಾಶಿನಾಥ ಕುಕನೂರುರವರು. ಬಾಲ್ಯದಲ್ಲಿ ಪ್ರೇಮಜ್ಯೋತಿ ನಾಟಕದಲ್ಲಿ ಶಾಂತಿಯ ಪಾತ್ರ ವಹಿಸುವದರಿಂದ ರಂಗಭೂಮಿಯ ಬದುಕನ್ನು ಅಪ್ಪಿಕೊಂಡು ೧೯೫೮ರಲ್ಲಿ ಕಾಶಿನಾಥರ ಸಹೋದರ ದಾನೇಶ ಕಟ್ಟಿದ ಭಾರತ ಸೇವಾ ನಾಟ್ಯ ಸಂಘ ಸೇರಿ. ಸೌಭಾಗ್ಯಲಕ್ಷ್ಮಿಯಲ್ಲಿ ಉಮೇಶನಾಗಿ, ಸ್ತ್ರೀ ರತ್ನದಲ್ಲಿ ರಮೇಶನಾಗಿ, ಹೇಮರೆಡ್ಡಿ ಮಲ್ಲಮ್ಮದ ವೇಮನ, ಲಂಕಾದಹನದ ರಾವಣ, ಸತ್ಯಹರಿಶ್ಚಂದ್ರ ವಿಶ್ವಮಿತ್ರನಾಗಿ ವರ್ಣರಂಜಿತ ಪಾತ್ರದಿಂದ ಗಮನ ಸೆಳೆದಿದ್ದಾರೆ.

ಹಲವಾರು ಪೌರಾಣಿಕ ಸಾಮಾಜಿಕ ನಾಟಕಗಳಲ್ಲಿ ಪಾತ್ರ ವಹಿಸಿದ ಇವರಿಗೆ ಸಿನಿಮಾದಲ್ಲಿ ನಟಿಸಲು ಅವಕಾಶ ಬಂದರೂ ಹೋಗದೆ ತಮ್ಮ ಗ್ರಾಮದಲ್ಲಿಯೆ ಜನಪ್ರಿಯ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ನಾಟಕ ನಿರ್ದೇಶಕ ಎಂ. ಖಾಜಾಮೋಯಿನುದ್ದಿನ್

ಯಲಬುರ್ಗಿ ತಾಲೂಕಿನಲ್ಲಿ ರಂಗ ಕಲಾವಿದರ ಸಂಖ್ಯೆ ಸಾಕಷ್ಟಿದೆ.. ಕುದರಿಮೋತಿ ಗ್ರಾಮದ ರೋಷನ್‌ಬೇಗ ಮಕಾನದಾರ ಮಗನಾದ ಎಂ. ಖಾಜಾಮೋಯಿನುದ್ದೀನ್ ತಮ್ಮ ೧೨ನೆಯ ವಯಸ್ಸಿನಲ್ಲಿಯೆ ರಂಗಪ್ರವೇಶಿಸಿ ಎಸ್.ಎಸ್.ಎಲ್.ಸಿ ವರೆಗೆ ಓದಿದರು.

೧೯೮೭-೮೮ರಲ್ಲಿ ಹವ್ಯಾಸಿ ರಂಗಭೂಮಿಯ ನಿರ್ದೇಶಕನಾಗಿ ಬಡವ ಬದುಕಲೇ ಬೇಕು, ಮಧುಮಾಲತಿ, ನರನಾಗರರು, ಗೌರಿಗೆದ್ದಳು, ಹೀಗೆ ಹತ್ತಾರು ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ. ರಂಗಭೂಮಿಯ ಹಾಡುಗಾರರಾಗಿ ಗೀತರಚನಕಾರರಾಗಿ ಬೀದಿ ನಾಟಕಗಳ ರಚನಾಕಾರರಾಗಿ, ತಂಡದ ನಾಯಕರಾಗಿ, ಸರಕಾರಿ ಇಲಾಖೆಗಳ ಅನೇಕ ಪ್ರಾಯೋಜಿತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಹಾನವಮಿ ಧಾರಾವಾಹಿಯಲ್ಲಿಯೂ ನಟಿಸಿ ದೂರದರ್ಶನ ಕಾರ್ಯಕ್ರಮ ನೀಡಿದ ಶ್ರೇಯಸ್ಸು ಖಾಜಾ ಅವರದು.

## ವೀರಣ್ಣ ನಿಂಗೋಜಿ

೧೯೯೦-೯೧ರಲ್ಲಿ ಕರಮುಡಿಯಲ್ಲಿ ಕರ್ನಾಟಕ ಯುಕ ಮಂಡಳಿ ಎನ್ನುವ ಹವ್ಯಾಸಿ ತಂಡ ಕಟ್ಟಿದ ವೀರಣ್ಣ ನಿಂಗೋಜಿ ಪ್ರೇಮಚಂದರ ಹೆಣದ ಬಟ್ಟೆ ನಾಟಕ ಕಲಿತು ಇದನ್ನು ನಿರ್ದೇಶಿಸಿ ಮತ್ತು ಘೀಸು ಪಾತ್ರವಹಿಸಿ ರಾಜ್ಯದ ಹಲವಾರು ಕಡೆ ಪ್ರದರ್ಶಿಸಿದ್ದಾರೆ. ಇದಕ್ಕೆ ನಿರ್ದೇಶನ ಮತ್ತು ಪ್ರಸಾದನಕ್ಕಾಗಿ ರಾಜ್ಯಮಟ್ಟದ ಪ್ರಥಮ ಬಹುಮಾನ ಬಂದಿದೆ. ಹಾಗೆಯೆ ಅವರು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಸಂಗೀತಗಾರ ಸದಾಶಿವ ಪಾಟೀಲ

ಸದಾಶಿವ ಪಾಟೀಲರು ಸಂಗೀತಕ್ಕೆ ನಾಡಿನಾದ್ಯಂತ ಹೆಸರಾದವರು. ಮೂಲತಃ ಕಲಬುರ್ಗಿ ಜಿಲ್ಲೆಯ ಹಿರೇಬೇನೂರಿನವರಾದರೂ ಸಂಗೀತ ಶಿಕ್ಷಕರಾಗಿ ಕೊಪ್ಪಳದಲ್ಲಿ ೨೪ ವರ್ಷಗಳಿಂದ ವಾಸಿಸಿದ್ದಾರೆ. ಪಂಚಾಕ್ಷರಿ ಗವಾಯಿಗಳ ನಾಟಕ ಕಂಪನಿಯಲ್ಲಿ ಕೆಲವು ಪಾತ್ರ ನಿರ್ವಹಿಸಿದ ಇವರ ಗವಾಯಿಗಳ ಪಾತ್ರ ಹಾಡಿನಿಂದ ಪ್ರಸಿದ್ಧಿ ಪಡೆದಿದೆ. ನಾಟಕಗಳಿಗೆ ಹಾಡುರಚಿಸಿ ಟೂನ್ ಹಾಕಿ ಹಳ್ಳಿಯ ನಾಟಕಗಳಿಗೆ ಪ್ರೋತ್ಸಾಹಿಸಿದ್ದಾರೆ.

## ಶೀಲಾ ಹಾಲ್ಕುರಿಕೆ

ರಂಗ ಶಿಕ್ಷಣ ಪಡೆದು ರಂಗಕರ್ಮಿ ಹಾಲ್ಕುರಿಕೆ ಶಿವಶಂಕರ ಕೈಹಿಡಿದ ಶೀಲಾ ಹಾಲ್ಕುರಿಕೆ ಇದೇ ವಿಸ್ತಾರ ಸಂಸ್ಥೆಯ ದಲಿತ ಮಕ್ಕಳಿಗೆ ರಂಗ ಶಿಕ್ಷಣ ನೀಡುತ್ತಿದ್ದಾರೆ. ಉತ್ತಮ ನಟಿಯೂ ಆಗಿರುವ ಶೀಲಾ ಜಿಲ್ಲೆಯ ಪ್ರಮುಖ ಕಲಾವಿದೆ. ಅನೇಕ ನಾಟಕಗಳನ್ನು ನಿರ್ದೇಶಿಸಿರುವ ಇವರು ಉತ್ತಮ ಗಾಯಕಿಯೂ ಆಗಿದ್ದಾರೆ. ಪ್ರಸ್ತುತ ಕೊಪ್ಪಳ ಸಮೀಪದ ಭಾಗ್ಯ ನಗರದಲ್ಲಿ ವಾಸವಾಗಿದ್ದಾರೆ.

# ಯಲಬುರ್ಗಿ ಮತ್ತು ಕುಷ್ಟಗಿ ತಾಲೂಕಿನ ಕಲಾವಿದರು

## ಮಲ್ಲನಗೌಡ ಪಾಟೀಲ

ಯಲಬುರ್ಗಿ ತಾಲೂಕಿನ ಮುರಡಿಯಲ್ಲಿ ದಿ.೧೫-೮-೧೯೮೮ರಂದು ಜನಿಸಿದ ಮಲ್ಲನಗೌಡ ಬಸನಗೌಡ ಮಾಲಿ ಪಾಟೀಲ ಶಿವಕುಮಾರ ರಂಗ ಪ್ರಯೋಗಶಾಲೆ ಸಾಣೆಹಳ್ಳಿಯಲ್ಲಿ ಡಿಪ್ಲೋಮಾ ಇನ್ ಥಿಯೇಟರ್ಸ್ ಆರ್ಟ್ಸ್ ಪದವಿಪಡೆದು, ಇಪ್ಟಾ ಮತ್ತು ಇತರೆ ಸಂಘಟನೆಗಳ ಬೀದಿ ನಾಟಕಗಳಿಂದ ಅಭಿನಯ ಪ್ರಾರಂಭಿಸಿ ಅಪೂರ್ಣ, ಶೂದ್ರತಪಸ್ವಿ, ನಿಜಗುಣ ಶಿವಯೋಗಿ ಮುಂತಾದ ಕಲಾತ್ಮಕ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಖ್ಯಾತರಂಗ ನಿರ್ದೇಶಕರಾದ ಚಿದಂಬರ ರಾವ್ ಜಂಬೆ, ಸಿ. ಬಸವಲಿಂಗಯ್ಯ, ಅಶೋಕಬಾದರದಿನ್ನಿ ಗಂಗಾಧರ ಸ್ವಾಮಿ. ನಟರಾಜ ಹೊನ್ನವಳ್ಳಿ, ಶಿವನಾಯಕದೊರೆ ಮುಂತಾದವರೊಂದಿಗೆ ರಂಗನಟನಾಗಿ, ತಂತ್ರಜ್ಞನಾಗಿ ಕಾರ್ಯನಿರ್ವಹಿಸಿದ ಹಿರಿಮೆ ಮಲ್ಲನ ಗೌಡರಿಗಿದೆ.

ಸಾಹಿತ್ಯಾಭಿರುಚಿಯಿಂದ ಬರವಣಿಗೆ ರೂಢಿಸಿಕೊಂಡಿರುವ ಇವರು ರಂಗರೂಪಕ, ಏಕಾಂಕ ನಾಟಕ ರಚಿಸಿ ರಂಗಕ್ಕಳವಡಿಸಿದ್ದಾರೆ. ಭಾರತ ಯಾತ್ರಾಕೇಂದ್ರ ಪ್ರದರ್ಶನ ಕಲಾವಿಭಾಗ ಹಾಗು ನಾಟಕ ಅಕಾಡೆಮಿಯ ರಾಜ್ಯಮಟ್ಟದ ಕಾಲೇಜು ನಾಟಕೋತ್ಸವದ ರಾಜ್ಯಮಟ್ಟದ ಸ್ಪರ್ಧೆ ೨೦೦೬-೦೭ ಮತ್ತು ೦೭-೦೮ನೇ ಸಾಲಿನ ಉತ್ತಮ ನಟನಾ ಪ್ರಶಸ್ತಿ ಪಡೆದವರಾಗಿ ಪ್ರಸ್ತುತ ಶಿವಸಂಚಾರದ ೨ನೇ ವರ್ಷದ ರಂಗ ರೆಪರ್ಟರಿಯಲ್ಲಿ ತಂತ್ರಜ್ಞನಾಗಿ ಕಾರ್ಯ ನಿರ್ವಹಿಸಿದ ಮಲ್ಲನಗೌಡ ಜಿಲ್ಲೆಯ ಹೆಮ್ಮೆಯ ಕಲಾವಿದ.

## ಡಾ। ಶಿವನಗೌಡ ಡಿ. ಪೋ. ಪಾಟೀಲ

ಕುಕನೂರಿನ ದೊಡ್ಡನ ಗೌಡ ಪೋಲಿಸ ಪಾಟೀಲರ ಮಗನಾದ ಡಾ। ಶಿವನಗೌಡ ಪೋಲಿಸ್‌ಪಾಟೀಲ ಬಿ.ಎ.ಎಂ.ಎಸ್‌ಡಬ್ಲೂ ಕಲಿತು ೨೦೦೫ರಲ್ಲಿ ಗವಿಸಿದ್ಧೇಶ್ವರ ಕಾಲೇಜಿನಲ್ಲಿ ಗಂಡುಗಲಿ ಕುಮಾರರಾಮ ನಾಟಕದಲ್ಲಿ ಅಭಿನಯಿಸಿದ್ದಾನೆ. ೨೦೦೬ರಲ್ಲಿ ರಾಜ್ಯಮಟ್ಟದ ಅಂತರ ಕಾಲೇಜು ರಂಗಸ್ಪರ್ಧೆಯಲ್ಲಿ ಉತ್ತಮ ಅಭಿನಯ ಪ್ರಮಾಣ ಪತ್ರ ಪಡೆದಿದ್ದಾನೆ.

## ಹನುಮಂತ ಕುಮಾರ ಮುಧೋಳ

ಕುದರಿಮೋತಿಯಲ್ಲಿರುವ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹನುಮಂತ ಕುಮಾರ ಮುಧೋಳ(೬೨) ೩ನೆಯ ತರಗತಿಯ ನಂತರ ಗವಾಯಿಗಳ ಆಶ್ರಮ ಸೇರಿ ಹಾರ್ಮೋನಿಯಂ, ಕ್ಲಾರ್‌ನೆಟ್, ಕೊಳಲು ನುಡಿಸುವದನ್ನು ಕಲಿತು ೭೩-೭೪ರಲ್ಲಿ ಅರಿಷಿಣಗೋಡೆ ಕಂಪನಿ, ಅ ಸುಂಡಿಲಕ್ಷ್ಮಣರಾವ್ ಕಂಪನಿ, ಕಟಗೇರಿ ಕಂಪನಿ ಮತ್ತು ಪಂಚಾಕ್ಷರ ಗವಾಯಿಗಳ ಕಂಪನಿಗಳಲ್ಲಿ ಸೇವೆ ಸಲ್ಲಿಸಿ ನಂತರ ಹಳ್ಳಿ ಹಳ್ಳಿಗಳಲ್ಲಿ ಹವ್ಯಾಸಿ ತಂಡಗಳಿಗೆ ವಾದ್ಯ ನುಡಿಸಲು ತಿರುಗಾಡಿದ್ದಾರೆ. ಆಶ್ರಮದ ಜಾತ್ರೆಯ ನಾಟಕಗಳಲ್ಲಿ ಸ್ತ್ರೀ ಪಾತ್ರ ನಿರ್ವಹಿಸಿದ್ದಾರೆ.

## ಶರಣಪ್ಪಕುದರಿ

ಮುಧೋಳ ಗ್ರಾಮದ ನಿವೃತ್ತ ಮುಖ್ಯೋಪಾಧ್ಯಾಯ ಶರಣಪ್ಪ ಕುದರಿ ಮದುವೆಯಾಗದ ಮುತ್ತೈದೆ, ಸುಖಸಂಸಾರದಲ್ಲಿ, ಸುಂಟರಗಾಳಿ, ಸಿಡಿದೆದ್ದ ರಣಹದ್ದು, ವಿಷದ ಒಡಲಿಗೆ ಮಸೆದ ಕೊಡಲಿ ನಾಟಕ ರಚಿಸಿದ್ದಾರೆ. ಇವು ಹುಬ್ಬಳ್ಳಿ ಗಜೇಂದ್ರ ಪ್ರಕಾಶನದಿಂದ ಪ್ರಕಟವಾಗಿ ಹಳ್ಳಿಹಳ್ಳಿಗಳಲ್ಲಿ ಪ್ರಯೋಗಗೊಂಡಿವೆ.

ದೇವದುರ್ಗದಲ್ಲಿ ಇವರ ನಾಟಕ ವಿಷದ ಒಡಲು ಆಡಿದಾಗ ಮುತ್ತಿನ ಹಾರ ಹಾಕಿ ಸನ್ಮಾನಿಸಿದ್ದಾರೆ.

## ರಂಗ ನಿರ್ದೇಶಕ ಕೆ. ಹುಸೇನಸಾಬ

ಬಡಕಪ್ಪ ಮಾಸ್ತರೆಂದೆ ಹೆಸರಾಗಿರುವ ೬೩ವರ್ಷದ ಹಿರೇಮನ್ನಾಪುರದ ಕೆ. ಹುಸೇನಸಾಬರದು ರಂಗಕಲೆಯೆ ವೃತ್ತಿ. ೧೯೭೦ರಿಂದ ೧೯೮೨ ರವರೆಗೆ ಸುಮಾರು ೨೦೦ಕ್ಕೂ ಹೆಚ್ಚು ದೊಡ್ಡಾಟಗಳಲ್ಲಿ ಅಭಿನಯಿಸಿ ನಂತರ ಪೌರಾಣಿಕ ನಾಟಕಗಳತ್ತ ತಿರುಗಿ ವೀರಭಿಮನ್ಯು, ಕುರುಕ್ಷೇತ್ರ, ರಕ್ತರಾತ್ರಿ, ಬಾಣಸಿಗ ಭೀಮ, ಚಿತ್ರಾಂಗದ, ವೀರ ಧನಂಜಯ ಹೀಗೆ ಹಲವಾರು ಪೌರಾಣಿಕ ನಾಟಕಗಳ ಜತೆಗೆ ಸಾಮಾಜಿಕ, ಐತಿಹಾಸಿಕವೂ ಸೇರಿದಂತೆ ೩೦೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿ ನಿರ್ದೇಶಕನಾಗಿ ಜಗಜ್ಯೋತಿ ಬಸವೇಶ್ವರ, ಬೀರಲಿಂಗೇಶ್ವರ ಮಹಾತ್ಮೆ, ಭಕ್ತ ಕನಕದಾಸ, ರೇವಣಸಿದ್ಧೇಶ್ವರ ಮಹಾತ್ಮೆ ಮುಂತಾದ ಸಾಕಷ್ಟು ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹುಸೇನಸಾಬ ನಿರ್ದೇಶನದ ರಕ್ತರಾತ್ರಿ ನಾಟಕಕ್ಕೆ ಸನ್ಮಾನಿಸಲಾಗಿದೆ. ಕಾಗಿನೆಲೆಯ ಸ್ವಾಮಿಗಳು ಮತ್ತು ಗುಲ್ಬರ್ಗಾ ವಾರ್ತಾ ಇಲಾಖೆ, ಪುಟ್ಟರಾಜ ಗವಾಯಿ ಮುಂತಾದವರಿಂದ ಸನ್ಮಾನಿತರಾದ ಇವರು ಉತ್ತಮರಂಗಗೀತೆಗಳ ಗಾಯಕರೂ ಆಗಿದ್ದಾರೆ.

## ಭೀಮಪ್ಪ ತಳವಾರ

ಕುಷ್ಟಗಿ ತಾಲೂಕಿನ ಮೂಲೆಕಟ್ಟಿನ ಚಿಕ್ಕ ಗ್ರಾಮವಾದ ಹನುಮನಾಳಿನಲ್ಲಿ ಅಂಚೆ ಸೇವಕನಾಗಿ ಕೆಲಸ ಮಾಡುತ್ತಿರುವ ಭೀಮಪ್ಪ ಹನುಮಂತಪ್ಪ ತಳವಾರ ದಿ.೧- ೬-೧೯೬೩ರಲ್ಲಿ ಹುಟ್ಟಿದವರು, ಬಾಲ್ಯದಲ್ಲಿಯೆ ಸಾಹಿತ್ಯ, ನಾಟಕದ ಅಭಿರುಚಿ ಅಂಟಿಸಿಕೊಂಡಿರುವ ಇವರು ಬಡ್ಡಿಬಲೆ, ಭೂತಾಯಿ ಮಕ್ಕಳು, ನಾರದನ ಮಹಿಮೆ, ಉತ್ತಮ ಕೃಷಿಸಹಾಯಕ ಎನ್ನುವ ಏಕಾಂಕ ನಾಟಕ ರಚಿಸಿ ಅಲ್ಲಿಯ ಮಕ್ಕಳಿಗೆ ಕಲಿಸಿ ಪ್ರಯೊಗಿಸುವ ಮೂಲಕ ಗ್ರಾಮೀಣ ಭಾಗದಲ್ಲಿ ರಂಗಭೂಮಿಯ ಆಸಕ್ತಿಯನ್ನು ಬೆಳಸಿದವರು ಸಾಹಿತ್ಯ ಪರಿಷತ್ತು, ಡಾ। ಅಂಬೇಡ್ಕರ್ ಫಿಲಾಸಫಿ ಮುಂತಾದ ಸಂಘಟನೆಗಳು ಇವರನ್ನು ಸನ್ಮಾನಿಸಿವೆ.

## ಎಲ್ಲ ಪಾತ್ರಕ್ಕೆ ಜೀವತುಂಬುವ ನಾಗೇಶ ಕಾಟವಾ

ಹನುಮಸಾಗರದ ಮತ್ತೊಂದು ಅಪ್ಪಟ ರಂಗಪ್ರತಿಭೆ ನಾಗೇಶ ಕಾಟವಾ ೧೯೫೫ರಲ್ಲಿ ಜನಿಸಿದ ಇವರು ಬಾಲ್ಯದಿಂದಲೇ ನಾಟಕಾಭಿರುಚಿಯನ್ನು ಬೆಳಸಿಕೊಂಡು ಅಭಿನಯ ಮತ್ತು ನಾಟಕ ನಿರ್ದೇಶನದಲ್ಲಿ ಹೆಸರು ಮಾಡಿದ್ದಾರೆ.

ಪಿ.ಬಿ. ಧುತ್ತರಗಿಯವರ ಸಂಪತ್ತಿಗೆ ಸವಾಲು ನಾಟಕದಲ್ಲಿ ದುರ್ಗಿಯ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಎನ್.ಪಿ. ಕುಲಕರ್ಣಿಯವರ 'ಬುದ್ಧಿವಂತರ ನ್ಯಾಯ' ನಾಟಕವನ್ನು ತಮ್ಮ ಹಾವ್ಯಾಸಿ ಕಲಾವೇದಿಕೆಯಿಂದ ಉಡುಪಿಯಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಪ್ರಯೋಗಿಸಿ ಗಮನಸೆಳೆದಿದ್ದಾರೆ. ಇಲಕಲ್ ಸೀರೆ ನಾಟಕದ ನಾಯಕ ನಾಗಪ್ಪನ ಪಾತ್ರವನ್ನು ಧುತ್ತರಗಿ ದಂಪತಿಗಳೊಂದಿಗೆ ಹಲವಾರು ಪ್ರಯೊಗದಲ್ಲಿ ಅಭಿನಯಿಸಿದ್ದು ನಾಗೇಶರ ಅಭಿಮಾನದ ಸಂಗತಿ. ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕ ಸೇರಿದಂತೆ ೩೦ಕ್ಕೂ ಹೆಚ್ಚು ನಾಟಕಗಳಲ್ಲಿ ಪಾಲ್ಗೊಂಡು ಹಲವು ಸಂಘ ಸಂಸ್ಥೆಗಳ ಸನ್ಮಾನಕ್ಕೆ ಪಾತ್ರರಾದದ್ದು ನಾಗೇಶ ಕಾಟವಾರ ಹೆಮ್ಮೆಯ ಸಾಧನೆ.

## ತಬಲಾ ವಾದಕ ಎಸ್.ಎಸ್. ಹಿರೇಮಠ

ಕುಷ್ಟಗಿ ನಿವಾಸಿ ಸಿದ್ಧಲಿಂಗಯ್ಯ ತಂದೆ ಶಿವಲಿಂಗಯ್ಯ ಹಿರೇಮಠರು ತಬಲಾವಾದನದಲ್ಲಿ ಪ್ರಸಿದ್ಧಿ ಪಡೆದವರು. ತಂದೆ ಶಿವಲಿಂಗಯ್ಯನವರ ಮಾರ್ಗದರ್ಶನಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿರುವಾಗಲೇ ಸಂಗೀತ ಅಭ್ಯಾಸದಲ್ಲಿ ತೊಡಗಿದರಲ್ಲದೆ ನಂತರ ಪಂಚಾಕ್ಷರಿ ಗವಾಯಿಗಳ ಆಶ್ರಮದಲ್ಲಿಯೂ ಅಭ್ಯಾಸಮಾಡಿ, ಗಾಯನ, ಬ್ಯಾಂಗೋ ಮೃದಂಗ, ಡೋಲಕ್ ಮುಂತಾದ ವಾದ್ಯ ನುಡಿಸುವದರಲ್ಲಿಯೂ ಪರಿಣಿತಿ ಸಾಧಿಸಿದರು.

ಮೂವತ್ತು ವರ್ಷಗಳವರೆಗೆ ವೃತ್ತಿ ನಾಟಕ ಕಂಪನಿಗಳಾದ ಅರಿಷಿಣ ಗೋಡಿ, ಹುಚ್ಚೇಶ್ವರ, ಚಿತ್ತರಗಿ ಮುಂತಾದ ಪ್ರಖ್ಯಾತ ಕಂಪನಿಗಳಲ್ಲಿ ತಬಲಾ ವಾದಕರಾಗಿ

ಗಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ವಾರ್ತಾ ಇಲಾಖೆಯು ಮತ್ತು ಕನ್ನಡ ಸಂಸ್ಕೃತಿ ಇಲಾಖೆಗಳಲ್ಲಿ ೧೯೮೨ ರಿಂದ ಹವ್ಯಾಸಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಎಸ್.ಎಸ್.ಹಿರೇಮಠರೆಂದೆ ಹೆಸರಾದ ಇವರ ಸೇವೆಯನ್ನು ಗುರುತಿಸಿ ೧೯೯೨-೯೩ನೆಯ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆಯಲ್ಲದೆ. ಅನೇಕ ಸಂಘ ಸಂಸ್ಥೆಗಳು ತಬಲಾ ವಿದ್ವಾನ್, ತಬಲಾ ಚತುರ, ತಬಲಾ ಪಟು, ಗಾಯನ ಚತುರ ಮುಂತಾದ ಬಿರುದು ನೀಡಿ ಸನ್ಮಾನಿಸಿವೆ.

## ಬಾನ್ಸುರಿ ವಾದನದ ಮರಿರಾಜ

ಮೇಣೆದಾಳ ಗ್ರಾಮದ ಮರಿರಾಜ ೧೯೪೮ರಲ್ಲಿ ಹುಟ್ಟಿದವರು. ಬಾಲ್ಯದಿಂದಲೇ ಸಂಗೀತದ ಹುಚ್ಚಿನಿಂದ ಬಾನ್ಸುರಿ, ಕೊಳಲು, ತಬಲಾ, ಹಾರ್ಮೋನಿಯಂ ವಾದ್ಯಗಳನ್ನೆಲ್ಲ ನುಡಿಸುವದರಲ್ಲಿ ಪರಿಣತರಾಗಿ ಆಕಾಶವಾಣಿಗೆ ಬಿ ಗ್ರೇಡ್ ಸದಸ್ಯರಾಗಿ ಸೇವೆ ಸಲ್ಲಿಸಿದರಲ್ಲದೆ ರಂಗಭೂಮಿಯ ಬಗ್ಗೆ ವಿಶೇಷ ಆಸಕ್ತಿ ಉಳ್ಳವರಾಗಿ ಹಲವಾರು ಕಂಪನಿಗಳಲ್ಲಿ ಸಂಗೀತ ಸಂಯೋಜಕರಾಗಿ ನಟರಾಗಿ, ನಿರ್ದೇಶಕರಾಗಿ ಹೆಸರು ಪಡೆದು ರಾಜ್ಯದಲ್ಲಷ್ಟೇಯಲ್ಲದೆ, ಆಂಧ್ರ ಪ್ರದೇಶ, ಮಧ್ಯಪ್ರದೇಶ, ದೆಹಲಿ ಮುಂತಾದೆಡೆ ಮತ್ತು ಉತ್ಸವಗಳಲ್ಲಿ ಕಾರ್ಯಕ್ರಮ ನೀಡಿದ ಕೀರ್ತಿ ಇವರದು.

ಮರಿರಾಜ ಮೇಣೆದಾಳವರನ್ನು ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ, ಸನ್ಮಾನ ನೀಡಿ ಗೌರವಿಸಿವೆ. ಕೊಪ್ಪಳದಲ್ಲಿ ದಿ.೧-೨-೨೦೦೦ ರಂದು ತುಲಾಭಾರ ಸ್ವೀಕರಿಸಿ ಮರಳಿದಾಗ ಕುಷ್ಟಗಿಯಲ್ಲಿ ನಿಧನರಾದರೂ ರಂಗಭೂಮಿಯಲ್ಲಿ ಇವರು ಚಿರಸ್ಮರಣೀಯರಾದರು.

## ಹಾರ್ಮೋನಿಯಂ ಮಾಸ್ತರ ನರಸಣ್ಣ ಸೋನಾರ

ಸೌಜನ್ಯಶೀಲರಾಗಿದ್ದ ಹಾರ್ಮೋನಿಯಂ ಮಾಸ್ತರ ನರಸಣ್ಣ ಸೋನಾರ ಕುಷ್ಟಗಿಯವರಾಗಿದ್ದು ವೃತ್ತಿಯಿಂದ ಅಕ್ಕಸಾಲಿಗರಾದರೂ ಪ್ರವೃತ್ತಿಯಿಂದ ಸಂಗೀತ ಅಭ್ಯಾಸ ಮಾಡಿ ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡುವ ಮೂಲಕ ಹಾರ್ಮೋನಿಯಂ ಮಾಸ್ತರ ಎಂದೇ ಪ್ರಸಿದ್ಧರಾದವರು. ಕಂಪನಿ ನಾಟಕ, ಹವ್ಯಾಸಿ ನಾಟಕಗಳಿಗೆಲ್ಲ ಹಾರ್ಮೋನಿಯಂ ಮಾಸ್ತರರಾಗಿ ಸೇವೆ ಸಲ್ಲಿಸಿ. ವಾರ್ತಾ ಇಲಾಖೆಯ ಕಾರ್ಯಕ್ರಮಗಳಲ್ಲಿ ಶ್ರಮಿಸಿದ ಇವರನ್ನು ಕರ್ನಾಟಕ ನಾಟಕ ಅಕಾಡೆಮಿ ಗುರುತಿಸಿ ಸುವರ್ಣ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತ್ತು.

ತಮ್ಮ ೬೮ನೆಯ ವಯಸ್ಸಿನಲ್ಲಿ ದಿ.೧೮-೬-೨೦೧೩ರಂದು ನರಸಣ್ಣ ಸೋನಾರ ನಿಧನರಾದರೂ ಕುಷ್ಟಗಿಯ ಕಲಾವಿದರ ಹೃದಯದಲ್ಲಿ ನೆನಪಾಗಿ ಉಳಿದಿದ್ದಾರೆ.

## ಧರಿಯಪ್ಪ ಮಾಸ್ತರ ಬಿಳೇಕಲ್

ಕುಷ್ಟಗಿ ತಾಲೂಕಿನ ಬಿಳೇಕಲ್ ಗ್ರಾಮದ ನಿವೃತ್ತ ಶಿಕ್ಷಕ ಧರಿಯಪ್ಪ ಮಾಸ್ತರ ಬಾಲ್ಯದಿಂದಲೇ ಸಾಹಿತ್ಯ, ನಾಟಕ, ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಆಸಕ್ತಿ ಬೆಳಸಿಕೊಂಡು ಸಮಾಜದಲ್ಲಿ ಜಾಗೃತಿ ಮೂಡಿಸುವ ನಾಟಕ ರಚನೆಯಲ್ಲಿ ತೊಡಗಿದರು. ಇವರು ಬರೆದ 'ಕೆಂಚವ್ವನ ಪಂಚಾಯ್ತಿ' ಎನ್ನುವ ನಾಟಕ ತುಂಬಾ ಪ್ರಸಿದ್ಧಿ ಪಡೆಯಿತು. ಕಲಾವಿದರನ್ನು ಸೇರಿಸಿಕೊಂಡು ಗ್ರಾಮೀಣ ಭಾಗದಲ್ಲಿ ನಾಟಕ ಕಲೆಯನ್ನು ಬೆಳೆಸುವಲ್ಲಿ ಶ್ರಮಿಸುವ ಕಾರಣಕ್ಕಾಗಿ ಧರಿಯಪ್ಪ ನಾಟಕದ ಮಾಸ್ತರ ಎಂದೇ ಹೆಸರಾಗಿದ್ದಾರೆ.

ಇದೇರೀತಿ ಡೊಣ್ಣೇಗುಡ್ಡದ ಸಿದ್ಧಪ್ಪ ಇಟಗಿ ಕೂಡಾ ಡಪ್ಪಿನಾಟ ದೊಡ್ಡಾಟಗಳ ಜೊತೆಗೆ ಗ್ರಾಮೀಣ ಭಾಗದಲ್ಲಿ ನಾಟಕಗಳನ್ನು ನಿರ್ದೇಶನ ಮಾಡುತ್ತ ಶ್ರಮಿಸುತ್ತಿರುವ ಇವರು ಕಷ್ಟದಲ್ಲಿ ಬದುಕುತ್ತಿದ್ದಾರೆ. ಇಂಥವರಿಗೆ ನೆರವಿನ ಅಗತ್ಯವಿದೆ.

## ಸಂಗೀತ ನಿರ್ದೇಶಕ ಚಳಗೇರಿ ಕಳಕಪ್ಪ

ರಕ್ತರಾತ್ರಿ, ಕುರುಕ್ಷೇತ್ರ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡುವ ಮೂಲಕ ಪ್ರಸಿದ್ಧಿ ಪಡೆದ ಚಳಗೇರಿ ಕಳಕಪ್ಪ ಗೊಂಗಡಶೆಟ್ಟಿ, ದಿ.ಶಿವಸಂಗಪ್ಪ ಮಾಸ್ತರವರಲ್ಲಿ ಸಂಗೀತ ಅಭ್ಯಾಸ ಮಾಡಿ. ಎಲ್ಲೆ ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮನಡೆದರೂ ಅಲ್ಲಿ ಕಳಕಪ್ಪ ಮಾಸ್ತರ ಇದ್ದೇ ಇರುತ್ತಾರೆನ್ನುವಷ್ಟು ಹೆಸರು ಪಡೆದವರು.

## ಹಿರಿಯ ನಾಟಕಕಾರ ಹಂಜಕ್ಕಿ

ಹನುಮಸಾಗರದ ಸೇತುಮಾಧವಾಚಾರ್ ಹಂಜಕ್ಕಿಯವರ ನಾಟಕ ಮತ್ತು ಸಂಗೀತಕ್ಕೆ ಮನಸೋಲದವರಿಲ್ಲ. ರಂಗ ಕಲೆಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದ ಇವರು 'ಮಹಮ್ಮದ ಗವಾನ' ಮತ್ತು 'ಕಾಲದ ಕರೆ' ಎನ್ನುವ ನಾಟಕಗಳಲ್ಲಿ ಕಡುಬಡವನ ಪಾತ್ರ ವಹಿಸಿ ಗಮನ ಸೆಳೆದು. ಗ್ರಾಮಕ್ಕೆ ಆಗಮಿಸಿದ ಕಂಪನಿ ನಾಟಕಗಳನ್ನು ನೋಡುತ್ತ ಮತ್ತು ಗ್ರಾಮದ ಎಚ್.ಟಿ.ಅರಸ, ಚುಟ್ಟುಸಾಖ ವಟೆಯಂಥವರ ಅಭಿನಯಕ್ಕೆ ಮನಸೋತು ನಾಟಕರಚನೆಯಲ್ಲಿ ತೊಡಗುತ್ತಾರೆ.

ಹಂಜಕ್ಕಿಯವರು ರಚಿಸಿದ ನಾಟಕಗಳೆಂದರೆ 'ನರಗುಂದದ ನೇಸರ', 'ರಕ್ತ ದೀಪ' ಇವುಗಳನ್ನು ಸುಬ್ಬಯ್ಯ ನಾಯ್ಡು ಥಿಯೇಟರ್‌ನಲ್ಲಿ ಅವರ ಸಮ್ಮುಖದಲ್ಲಿ ಅಭಿನಯಿಸಿ ಸೈ ಎನಿಸಿಕೊಂಡರಲ್ಲದೆ. ಶರತ್‌ರೋಹಿಣಿ, ಅತ್ತೆ ಆರುಕಾಲು ಮಾವ ಮೂರು ಕಾಲು ಎನ್ನುವ ಸಂಗೀತ ನಾಟಕ ರಚಿಸಿ ಜನ ಮನ್ನಣೆ ಪಡೆದರು.

ಇವರು ಬರೆದ ವರಹರಾಜ ಎನ್ನುವ ಏಕಾಂಕ ನಾಟಕ ವಿಭಗಮಟ್ಟದಲ್ಲಿ ಪ್ರಥಮಸ್ಥಾನ ಪಡೆದಿದೆ. ಒಟ್ಟು ಎಂಟು ಏಕಾಂಕ ನಾಟಕ, ಏಳೆಂಟು ಮೂರಂಕಿನ ನಾಟಕ ರಚಿಸಿದ್ದಾರೆ. ಮತ್ತು ಅನೇಕ ನಾಟಕಗಳಿಗೆ ನಿರ್ದೇಶನ ನೀಡಿದ್ದಾರೆ. ೧೯೬೬ರಲ್ಲಿ ರಾಯಚೂರಿನ ರೊಟರಿ ಕ್ಲಬ್ ಹಂಚಕ್ಕಿಯವರನ್ನು ಸನ್ಮಾನಿಸಿದೆ.

## ತಬಲಾ ಪ್ರವೀಣ ಗುಂಡು ಕುಮಾರ

ಹನುಮಸಾಗರ ಕಲಾವಿದರ ಬೀಡು ಎನ್ನುವದಕ್ಕೆ ಇಲ್ಲಿ ಸಾಕಷ್ಟು ಜನ ಕಲಾವಿದರಿರುವುದೇ ಕಾರಣವಾಗಿದೆ. ಇದೇ ಹನುಮಸಾಗರದ ಮತ್ತೊಬ್ಬ ತಬಲಾ ಕಲಾವಿದ. ಗುಂಡು ಕುಮಾರ ತಂದೆ ಸೋಮಣ್ಣನವರಿಂದ ತಬಲಾ ಕಲೆಯನ್ನು ರಕ್ತಗತವಾಗಿಸಿಕೊಂಡವರು. ಗುಡಗೇರಿ ಕಂಪನಿ, ಹುಚ್ಚೇಶ್ವರ ಕಂಪನಿ, ಚಿತ್ತರಗಿ ಮತ್ತು ದೇಸಾಯಿಯವರ ಕಂಪನಿಗಳಲ್ಲಿ ತಬಲಾವಾದಕರಾಗಿ ಸೇವೆ ಸಲ್ಲಿಸಿದ ಇವರಿಗೆ ಪುಟ್ಟರಾಜ ಗವಾಯಿಗಳು ಭಿಡಿ ಚತುರ ಬಿರುದು ನೀಡಿ ಗೌರವಿಸಿದ್ದಾರಲ್ಲದೆ. ಅನೇಕ ಸಂಘಸಂಸ್ಥೆಗಳು ಪ್ರಶಸ್ತಿ ಪುರಸ್ಕಾರ ನೀಡಿವೆ.

## ರಂಗ ಕಲಾವಿದ ಕೃಷ್ಣಾದಾಸ

ಬಿಜಕಲ್ಲಿನ ರಂಗಕಲಾವಿದ ಕೃಷ್ಣಾದಾಸ ಇಡೀ ತಮ್ಮ ಬದುಕನ್ನು ಕಲೆಯಲ್ಲಿಯೆ ಕಳೆದವರು. ಬಾಲ್ಯದಲ್ಲಿ ನಾಟಕದಲ್ಲಿ ಪಾತ್ರವಹಿಸುವ ಮೂಲಕ ರಂಗಕಲೆಯ ಅಭಿರುಚಿಯನ್ನು ಬೆಳೆಸಿಕೊಂಡ ಇವರು. ರಕ್ತರಾತ್ರಿ ನಾಟಕದ ಮೂಲಕ ಪ್ರಸಿದ್ಧಿಪಡೆದು ಸುತ್ತಲ ಹಳ್ಳಿಗಳಲ್ಲಿ ನಾಟಕ ಕಲೆಯನ್ನು ಬೆಳೆಸುವಲ್ಲಿ ಶ್ರಮಿಸಿ ಪ್ರಬುದ್ಧ ರಂಗಕಲಾವಿದರೆಂದು ಹೆಸರಾಗಿದ್ದಾರೆ.

## ಪಾತ್ರಕ್ಕೆ ಜೀವ ತುಂಬುವ ಮೀನಾಕ್ಷಿ ಜೋಶಿ

ಕುಷ್ಟಗಿಯ ಮೀನಾಕ್ಷಿ ಜೋಶಿ ಹವ್ಯಾಸಿ ಕಲಾವಿದೆಯಾಗಿ ಸಮುದಾಯದ ಜೋಗತಿ ನಾಟಕ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿ ಹೆಸರಾದವರು. ಹಾರ್ಮೋನಿಯಂ ಕಲಾವಿದ ಬಾಬುರಾವ್ ಅವರಿಂದ ಸಂಗೀತ ಕಲಿತು. ಮಲಮಗಳು, ಒಡಹುಟ್ಟಿದವರು, ಅಣ್ಣತಂಗಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ತಮ್ಮ ಕಲಾವಂತಿಕೆ ಮೆರೆದರಲ್ಲದೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ರಾಷ್ಟ್ರೀಯ ಕಾರ್ಯಕ್ರಮಗಳಾದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಅಂಗವಾಗಿ ರಚಿಸಲಾದ 'ಮೂಕಬಲಿ' ಎನ್ನುವ ಬೀದಿ ನಾಟಕದಲ್ಲಿ ಪಾತ್ರವಹಿಸಿ ಜಿಲ್ಲೆಯಾದ್ಯಂತ ಸಂಚರಿಸಿದ್ದಾರೆ. ಪ್ರಸ್ತುತ ಕುಷ್ಟಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರ.ದ. ನೌಕರಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಸಿನರೀಜ ಕಲಾವಿದ ಬಸವರಾಜ ಧುತ್ತರಗಿ

ಖ್ಯಾತ ನಾಟಕಕಾರ ಪಿ.ಬಿ.ಧುತ್ತರಗಿ ಮತ್ತು ಅಭಿಜಾತ ಕಲಾವಿದೆ ಸರೋಜಮ್ಮ ಧುತ್ತರಗಿಯವರ ಮಗನಾದ ಬಸವರಾಜ ಧುತ್ತರಗಿ. ಸ್ವತಃ ಪೇಂಟರ್‌ನಾಗಿ ತಾನೇ ನಾಟಕಕ್ಕೆ ಬೇಕಾಗುವ ಸೀನರಿಗಳನ್ನೆಲ್ಲ ಸಿದ್ಧಪಡಿಸುತ್ತಿದ್ದ. ಹೀಗಾಗಿ ಆತನಿಗೆ ತಂದೆ ಪುಂಡಲೀಕಪ್ಪನವರು ನಾಟಕದ ಸಾಮಾನುಗಳನ್ನೆಲ್ಲ ಮಾಡಿಕೊಟ್ಟಿದ್ದರು. ಜತೆಗೆ ಬಹುಮುಖಿ ಪ್ರತಿಭೆಯ ಬಸವರಾಜ ಕಾಂಗೋ, ಬ್ಯಾಂಗೋ, ಡೋಲಕ್, ತಬಲಾ

ಮುಂತಾದ ಅನೇಕ ವಾದ್ಯಗಳನ್ನು ನುಡಿಸುತ್ತಿದ್ದ. ನಾಟಕಗಳಲ್ಲಿಯೂ ಅಭಿನಯಿಸುತ್ತಿದ್ದ. ನಾಟಕ ಕಂಪನಿಗಳಿಗೆ ಹೊಸ ರೀತಿಯ ಪರದೆಗಳನ್ನು ತಯಾರಿಸಿ ನಾಟಕ ಸೆಟ್‌ಗಳನ್ನೆಲ್ಲ ನೀಡುತ್ತ ಸೇವೆ ಸಲ್ಲಿಸುತಿದ್ದ. ಆದರೆ ಕೇವಲ ತನ್ನ ೪೩ನೆಯ ವಯಸ್ಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದದ್ದು ಕಲಾಕ್ಷೇತ್ರದ ದುರಂತ.

## ಕಲಾಪೋಷಕ ಶರಣಪ್ಪ ಬಾಚಲಾಪುರ

ಪಿ.ಬಿ.ಧುತ್ತರಗಿ ಕುಟುಂಬಕ್ಕೆ ಆತ್ಮೀಯರಾಗಿ ತನ್ನ ಮಾಧ್ಯಮ ವೃತ್ತಿಯೊಂದಿಗೆ ನಾಟಕದ ಅಭಿರುಚಿ ಬೆಳಸಿಕೊಂಡ ಅದೇ ಹನುಮಸಾಗರದ ಮತ್ತೊಬ್ಬ ಕಲಾವಿದ ಶರಣಪ್ಪ ಬಾಚಲಾಪುರ.

ಧುತ್ತರಗಿಯವರ ಮಾರ್ಗದರ್ಶನದಲ್ಲಿ ಅನೇಕ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದ ಶರಣಪ್ಪ ಅವರ ಚಂದಾಲಿಂಗೇಶ್ವರ ನಾಟಕದಲ್ಲಿ ಕಾಲಭೈರವನ ಪಾತ್ರ ಮತ್ತು ಸಂಪತ್ತಿಗೆ ಸವಾಲ್‌ನಲ್ಲಿ ಮರಿಯಪ್ಪ, ಇಲಕಲ್ ಸೀರೆಯಲ್ಲಿ ಗಂಗಾಧರನ ಪಾತ್ರಗಳಲ್ಲಿ ವಿಶೇಷಗಮನ ಸೆಳೆದಿದ್ದಾರೆ.

ರಂಗಭೂಮಿಯಲ್ಲಿ ವಿನೂತನ ಪ್ರಯೋಗ ಮಾಡುವವರಲ್ಲಿ ಹೆಸರಾಗಿದ್ದ. ದಿ.ಧ್ರುವರಾಜ ದೇಶಪಾಂಡೆಯವರಿಂದ ಒಂದು ತಿಂಗಳು ರಂಗತರಬೇತಿ ಪಡೆದು ಎನ್.ಪಿ.ಕುಲಕರ್ಣಿಯವರ 'ಬುದ್ಧಿವಂತರ ನ್ಯಾಯ' ನಾಟಕದಲ್ಲಿ ಮೆಚ್ಚುಗೆ ಪಡೆದಿದ್ದಾರೆ. ರಂಗಭೂಮಿಯ ಕುರಿತಂತೆ ಹಲವಾರು ಉಪನ್ಯಾಸ ನೀಡಿ ಹಾಗು ಕಲಾವಿದರಿಗೆ ಪ್ರೋತ್ಸಾಹಿಸುತ್ತ ರಂಗ ಸೇವಕರಾಗಿದ್ದಾರೆ.

## ತಬಲಾ ಮಾಸ್ತರ ನಾರಾಯಣಪ್ಪ ಪತ್ತಾರ

ತಬಲಾ ಮಾಸ್ತರ ನಾರಾಯಣಪ್ಪ ಪತ್ತಾರೆಂದೆ ಪ್ರಸಿದ್ಧರಾದ ಕುಷ್ಟಗಿಯ ಇವರು ಬಾಲ್ಯದಿಂದಲೇ ಸಂಗೀತದ ಅಭ್ಯಾಸ ಬೆಳಸಿಕೊಂಡು ತಬಲಾ ಜತೆಗೆ ಹಾರ್ಮೋನಿಯಂ ಬಾರಿಸುವದನ್ನೂ ಕಲಿತು ಹಲವಾರು ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಪ್ರಸಿದ್ಧ ನಾಟಕ ಕಂಪನಿಗಳ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ವಯೋವೃದ್ಧರಾಗಿ ಕಷ್ಟ ಪರಿಸ್ಥಿತಿಯಲ್ಲಿ ಕುಷ್ಟಗಿಯಲ್ಲಿಯೆ ಜೀವನ ಕಳೆಯುತ್ತಿರುವ ಇವರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

## ಕಂಚಿನ ಕಂಠದ ಈರಪ್ಪ ತೋಟದ

ಕುಷ್ಟಗಿಯವರೇ ಆದ ಮತ್ತೊಬ್ಬ ಕಲಾಪ್ರತಿಭೆ ದಿ.ಈರಪ್ಪ ತೋಟದ ಮೂಲತಃ ದೊಡ್ಡಾಟ ಕಲಾವಿದರಾಗಿ ನಂತರ ನಾಟಕರಂಗಕ್ಕೆ ಬಂದು ಅನೇಕ ನಾಟಕಗಳ ನಿರ್ದೇಶನದ ಜೊತೆಗೆ ತಮ್ಮ ಕಂಚಿನ ಕಂಠದಿಂದ ರಂಗಗೀತೆ ಹಾಡುವ ಮೂಲಕ ಪ್ರಸಿದ್ಧರಾದವರು. ವಾರ್ತಾ ಮತ್ತು ಪ್ರಚಾರ ಇಲಾಖೆಯ ಅನೇಕ ಕಾರ್ಯಕ್ರಮಗಳಲ್ಲಿ

ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರು. ಇವರು ಸಹ ಇತ್ತೀಚೆಗೆ ನಿಧನರಾದದ್ದು ಕುಷ್ಟಗಿ ಕಲಾಕ್ಷೇತ್ರದ ದುರಂತ.

## ಕಲೆಗಾಗಿ ಬದುಕು ಕಳೆದ ವೀರಪ್ಪ ಕುಬ್ಬಣ್ಣ

ಕುಷ್ಟಗಿ ತಾಲೂಕಿನಲ್ಲಿ ಕಲಾವಿದರ ಸಂಖ್ಯೆ ಸಾಕಷ್ಟಿದೆ. ಹಾಗೆಯೆ ಈಗಾಗಲೇ ರಂಗಭೂಮಿಗೆ ಸಾಕಷ್ಟು ಸೇವೆ ಸಲ್ಲಿಸಿ ಕಣ್ಮರೆಯಾದವರೂ ಬಹಳಷ್ಟು ಜನರಿದ್ದಾರೆ. ಅಂಥವರನ್ನು ಮರೆತು ಕೈಬಿಟ್ಟರೆ ರಂಗಭೂಮಿಯ ಇತಿಹಾಸ ಅಪೂರ್ಣವಾದೀತು. ಹಾಗಾಗಿ ಕೆಲವು ಮಾತಿನಲ್ಲಾದರೂ ಆ ಕಲಾವಿದರನ್ನು ಸ್ಮರಿಸಬೇಕಾದದ್ದು ನ್ಯಾಯಸಮ್ಮತ.

ಆ ಸಾಲಿಗೆ ಸೇರಿದವರಲ್ಲಿ ಹನುಮಸಾಗರದ ಮತ್ತೊಂದು ರಂಗಪ್ರತಿಭೆ ವೀರಪ್ಪ ಕುಬ್ಬಣ್ಣ ಚಿಲುಮಿ. ಕಿರುವಯಸ್ಸಿನಲ್ಲಿಯೆ ನಾಟಕದ ಹುಚ್ಚು ಹಚ್ಚಿಕೊಂಡ ಇವರು ಅನೇಕ ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ಅಭಿನಯಿಸಿ ಕೊನೆಗೆ ತಾವೇ ಒಂದು ಕಂಪನಿ ಮಾಡಿ ಅದರಲ್ಲಿ ಧುತ್ತರಗಿಯವರ ಸಂಪತ್ತಿಗೆ ಸವಾಲ್ ನಾಟಕವನ್ನು ಆ ಕಾಲದಲ್ಲಿಯೆ ೧೮೦ಕ್ಕೂ ಹೆಚ್ಚು ಪ್ರಯೋಗ ಮಾಡಿ ಪ್ರಸಿದ್ಧಿ ಪಡೆದವರು. ಎಂಥ ಪಾತ್ರವನ್ನಾದರೂ ಅಭಿನಯಿಸಿ ಮೆಚ್ಚುಗೆ ಪಡೆಯುತ್ತಿದ್ದ ಚಿಲುಮಿ ನಾಲ್ವತ್ತು ವರ್ಷಕ್ಕೂ ಹೆಚ್ಚು ಕಾಲ ಕಲಾಸೇವೆ ಮಾಡಿ ಕಣ್ಮರೆಯಾದರು.

## ಕಲಾವಿದ ಪಿಡ್ಡಪ್ಪ ಲೈನದ

ಹಿರೇಮನ್ನಾಪುರದ ಪಿಡ್ಡಪ್ಪ ಲೈನದ ಸೇವಾನಂದ ಕಾವ್ಯನಾಮದಿಂದ ಪ್ರಸಿದ್ಧರಾಗಿ ಹಳೇಗನ್ನಡ ಸಾಹಿತ್ಯ ಅಭ್ಯಸಿಸಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಹಾರ್ಮೋನಿಯಂ ಪರಿಣತರಾದ ಇವರು ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಮತ್ತು ಪ್ರಮುಖ ಪಾತ್ರಗಳನ್ನುವಹಿಸಿ ಮೆಚ್ಚುಗೆ ಪಡೆದಿದ್ದಾರೆ. ಅನೇಕ ಸಂಘಸಂಸ್ಥೆಗಳ ಸನ್ಮಾನಕ್ಕೆ ಪಾತ್ರರಾಗಿದ್ದಾರೆ.

## ನಾಟಕಕಾರ ಮಿಟ್ಟಲಕೋಡ

ಬಾಳಪ್ಪ ವಿಟ್ಟಪ್ಪ ಮಿಟ್ಟಲಕೋಡ ಮೂಲತಃ ಮಿಟ್ಟಲಕೋಡ ಗ್ರಾಮದವರಾಗಿ ತಮ್ಮ ಶಿಕ್ಷಕ ವೃತ್ತಿಯ ಜೊತೆಗೆ ನಾಟಕಕಾರರಾಗಿ ಕಲಾಕಾರರಾಗಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಇವರು ಬರೆದ "ಎಂಥ ಗುಣವಂತಿ ನನ್ನ ಹೆಂಡ್ತಿ", 'ಹೊಸಬದುಕು' ನಾಟಕಗಳು ತುಂಬಾ ಪ್ರಸಿದ್ಧಿ ಪಡೆದಿವೆ.

## ಹನುಮಂತಪ್ಪ ಡೊಣ್ಣೆಗುಡ್ಡ

ಕುಷ್ಟಗಿ ತಾಲೂಕಿನ ಬೆನಕನಾಳ ಗ್ರಾಮದ ಹನುಮಂತಪ್ಪ ಮುದುಕಪ್ಪ ಡೊಣ್ಣೆಗುಡ್ಡವರು ಸಹಿತ ನಾಟಕ ರಚನೆಯಲ್ಲಿ ವಿಶೇಷ ಆಸಕ್ತಿ ವಹಿಸಿ ೧೯೮೩ರಲ್ಲಿ

ನಂಬಿಕೆಟ್ಟ ಹುಂಬ ದೇಸಾಯಿ ೧೯೮೬ರಲ್ಲಿ 'ಸೇಡಿಟ್ಟ ಸರ್ಪ' ಬರೆದರು. ಇವು ಸಾಕಷ್ಟು ಜನಮೆಚ್ಚುಗೆ ಪಡೆದಿವೆ. ಹಾಗೆಯೆ ೧೯೯೩ರಲ್ಲಿ ರಚಿಸಿದ 'ತಿಂಥಿಣಿ ಮೌನೇಶ್ವರ' ನಾಟಕ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನ ಕಂಡಿದೆ.

## ಕ್ಯಾಸಿಯೋ ಕಲಾವಿದ ಶಿವಶಂಕರ ಗಣವಾರಿ

ಕ್ಯಾಸಿಯೋ ಕಲಾವಿದನೆಂದೆ ಖ್ಯಾತರಾದ ಶಿವಶಂಕರ ಗಣವಾರಿ ಜಾಗೀರ ಗುಡದೂರ ಗ್ರಾಮದವರು. ೧೯೭೦ರಲ್ಲಿಯೆ ಗದಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಅಭ್ಯಾಸ ಮಾಡಿ ಖ್ಯಾಸೀಯೋ ನುಡಿಸುವದರಲ್ಲಿ ಪ್ರವೀಣರಾಗಿ ನಾಟಕ ನಿರ್ದೇಶನದ ಜೊತೆಗೆ ಅಭಿನಯವನ್ನೂ ಮಾಡುತ್ತ ಅದನ್ನೆ ವೃತ್ತಿಯಾಗಿಸಿಕೊಂಡವರು.

ಸಮಾಜಕ್ಕೆ ಶಿಕ್ಷೆ, ಗರತಿ ಹೆಣ್ಣಿಗೆ ಗರ್ವದ ಗಂಡ, ಕನಿಕರವಿಲ್ಲದ ಧನಿಕರು, ಕುಡುಕ ಕಟ್ಟಿದ ತಾಳಿ, ಹೆಡೆಬಿಚ್ಚಿದ ಸರ್ಪ ಮುಂತಾದ ನಾಟಕಗಳಿಗೆ ಶಿವಶಂಕರ ನಿರ್ದೇಶನ ಮಾಡಿ ಜನಮೆಚ್ಚುಗೆ ಪಡೆದಿದ್ದಾರೆ. ಹಾಸ್ಯ ಪಾತ್ರದಲ್ಲಿಯೂ ಹೆಸರು ಮಾಡಿದ್ದಾರೆ. ಕ್ಯಾಸಿಯೋ ಜತೆಗೆ ಹಾರ್ಮೋನಿಯಂ ಬಾರಿಸುವ ಇವರು ರಂಗಗೀತೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ.

## ಹಾರ್ಮೋನಿಯಂ ಮಾಸ್ತರ ಚಿನ್ನಪ್ಪ ನರೇಗಲ್ಲ

ಹನುಮಸಾಗರದ ಹಲವಾರು ಪ್ರತಿಭೆಗಳಲ್ಲಿ ಬಹುಮುಖ ಪ್ರತಿಭೆಯ ಚಿನ್ನಪ್ಪ ನರೇಗಲ್ಲ ಸಹ ಪ್ರಮುಖರಾಗಿ ಬಾಲ್ಯದಿಂದಲೇ ನಾಟಕದ ಹುಚ್ಚನ್ನು ಬೆಳೆಸಿಕೊಂಡು ಜತೆಗೆ ಸಂಗೀತದ ವಿವಿಧ ಪ್ರಕಾರಗಳಲ್ಲಿ ಪರಿಣತಿ ಸಾಧಿಸಿ ರಾಜ್ಯದ ಪ್ರಸಿದ್ಧ ಕಂಪನಿಗಳಲ್ಲಿ ಖಳನಟನಾಗಿ ಹಾಸ್ಯ ಮೊದಲಾದ ಎಲ್ಲ ರೀತಿಯ ಪಾತ್ರಗಳಲ್ಲಿ ಅಭಿನಯಿಸುತ್ತ ಹಾರ್ಮೋನಿಯಂ ಮಾಸ್ತರರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಹವ್ಯಾಸಿ ರಂಗಭೂಮಿಗೆ ಹಾರ್ಮೋನಿಯಂ ಮಾಸ್ತರನಾಗಿ ಮತ್ತು ನಿರ್ದೇಶಕನಾಗಿ ದುಡಿಯುತ್ತಿರುವ ಚಿನ್ನಪ್ಪನನ್ನು ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿವೆ.

## ತಬಲಾ ವಾದಕ ದೇವಪ್ಪ ಬಡಿಗೇರ

ಕುಷ್ಟಗಿಯ ವೃತ್ತಿಯಿಂದ ಬಡಿಗತನ ಮಾಡುವ ದೇವಪ್ಪ ಬಡಿಗೇರ ಪ್ರವೃತ್ತಿಯಿಂದ ಚರ್ಮವಾದ್ಯ ನುಡಿಸುವದರಲ್ಲಿ ಪರಿಣತಿ ಸಾಧಿಸಿ ಸುತ್ತಲಿನ ಹಳ್ಳಿಹಳ್ಳಿಗಳಲ್ಲಿ ನಡೆಯುವ ನಾಟಕಗಳಿಗೆಲ್ಲ ತಬಲಾ, ಡೋಲಕ್ ಬಾರಿಸುತ್ತ ಕಲಾಸೇವೆಯಲ್ಲಿ ತೊಡಗಿದ್ದಾರೆ.

## ಅಶೋಕ ಇಟಗಿ

ಅದೇರೀತಿ ಶೇಬಿನಕಟ್ಟೆಯ ಅಶೋಕ ಹನುಮಂತ ಇಟಗಿ ಸಹಿತ, ತಬಲಾ, ಕಾಂಗೋ, ಡ್ರಮ್ಸ್, ಪ್ಯಾಡ್ ವಾದ್ಯಗಳನ್ನು ನುಡಿಸುವದರಲ್ಲಿ ವಿಶೇಷ ಜನಪ್ರಿಯತೆ ಪಡೆದವರಾಗಿ ಹವ್ಯಾಸಿ ಮತ್ತು ವೃತ್ತಿ ನಾಟಕ ಕಂಪನಿಗಳೆಲ್ಲೆಲ್ಲ ಸೇವೆ ಸಲ್ಲಿಸುತ್ತಿದ್ದಾರೆ.

## ಈಶ್ವರಪ್ಪ ಹುಬ್ಬಳ್ಳಿ

ಅದೇ ಸಾಲಿನಲ್ಲಿ ಬರುವ ದೋಟಿಹಾಳ ಗ್ರಾಮದ ಈಶ್ವರಪ್ಪ ಹುಬ್ಬಳ್ಳಿ ಸಹಿತ ತಬಲಾ ಬಾರಿಸುವದನ್ನು ಕರಗತ ಮಾಡಿಕೊಂಡು ಹಳ್ಳಿಯ ಹವ್ಯಾಸಿ ನಾಟಕಗಳಿಗೆ ಸಾಥ್ ನೀಡುತ್ತಿದ್ದಾರೆ.

## ರಾಮಚಂದ್ರ ಬಡಿಗೇರ

ಹನುಮಸಾಗರದ ಮತ್ತೊಬ್ಬ ಕಲಾವಿದ ಶಿಕ್ಷಕ ರಾಮಚಂದ್ರ ಬಡಿಗೇರ ರಂಗಭೂಮಿಯ ಹವ್ಯಾಸದಿಂದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ೧೯೯೪ರಲ್ಲಿ ಉಡುಪಿಯಲ್ಲಿ ನಡೆದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಟನೆಗಾಗಿ ಪ್ರಶಸ್ತಿ ಪಡೆದಿದ್ದಾರೆ. ಶಿಕ್ಷಣರಂಗದಲ್ಲಿ ಕಲಾಜಾಥಾ ತಂಡದಲ್ಲಿ ಭಾಗವಹಿಸಿ ೬೦ ಹಳ್ಳಿಗಳಲ್ಲಿ ನಾಟಕ ಪ್ರದರ್ಶಿಸಿದ್ದಾರೆ ಮತ್ತು ರಂಗಗೀತೆ ಹಾಡುವದರಲ್ಲಿಯೂ ಹೆಸರುಗಳಿಸಿದ್ದಾರೆ.

## ಹಾಸ್ಯಕಲಾವಿದ ಈರಣ್ಣ ಹಿರೇಮನಿ

ಗುಡ್ಡದ ದೇವಲಾಪುರದ ಈರಣ್ಣ ಹಿರೇಮನಿ ಅಪರೂಪದ ಕಲಾವಿದ ಎಂ.ಎ.ಪದವೀಧರರಾಗಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ಪ್ರವೃತ್ತಿಯಿಂದ ರಂಗಕಲಾವಿದರಾಗಿ ಕಾಲೇಜು ಶಿಕ್ಷಣದಲ್ಲಿ ರಿಹರ್ಸಲ್ ಗಡಿಬಿಡಿ ಎನ್ನುವ ನಾಟಕದಲ್ಲಿ ಹಾಸ್ಯ ಪಾತ್ರವಹಿಸಿ ಗಮನ ಸೆಳೆದರು. ಕಿತ್ತೂರ ಚನ್ನಮ್ಮ ನಾಟಕದಲ್ಲಿ ಸೇವಕನ ಪಾತ್ರದ ಮೂಲಕ ರಂಗಪ್ರವೇಶಿಸಿದ ಇವರು ಧ್ರುವರಾಜ ದೇಶಪಾಂಡೆಯವರಿಂದ ತರಬೇತಿ ಪಡೆದು ಹಂಜಕ್ಕಿಯವರ ನರಗುಂದದ ನೇಸರ ನಾಟಕದಲ್ಲಿ ಬಾಮರಾಯನ ಬನಿಯಾನಾಗಿ ಮತ್ತು ಧುತ್ತರಗಿಯವರ ಇಲಕಲ್ ಸೀರೆ ನಾಟಕದಲ್ಲಿ ತಿರುಪತಿ ಎನ್ನುವ ಹಾಸ್ಯ ಪಾತ್ರಗಳಿಂದ ಪ್ರಸಿದ್ಧಿಪಡೆದಿದ್ದಾರೆ.

## ಈರಣ್ಣ ಬಡಿಗೇರ

ರಂಗ ಕಲಾ ಶೀಬಿರಗಳಲ್ಲಿ ಭಾಗವಹಿಸಿ ಮಕ್ಕಳಿಗೆಲ್ಲ ತರಬೇತಿ ನೀಡಿ ಶಾಲಾ ಕಾಲೇಜುಗಳಲ್ಲಿ ನಾಟಕ ಆಡಿಸುವ ಈರಣ್ಣ ಬಡಿಗೇರ ಡಿ.ಪಿ.ಇ.ಪಿ ಕಲಾಜಾಥಾದಲ್ಲಿ ಪಾಲ್ಗೊಂಡು ಶಿಕ್ಷಣ ಆರೋಗ್ಯ ಕುರಿತು ಬೀದಿ ನಾಟಕಗಳ ಪ್ರದರ್ಶನ ನೀಡಿದ್ದಾರೆ.

## ನಾಟಕಕಾರ ಮೋಹನ ಪತ್ತಾರ

ಯರಗೇರಾ ಗ್ರಾಮದ ಮೋಹನ ಪತ್ತಾರ ಒಳ್ಳೆಯ ನಟರಾಗಿ ನಂತರ ನಾಟಕ ರಚನಾಕಾರರಾಗಿಯೆ ಗುರುತಿಸಿಕೋಂಡವರು. ಚಿತ್ರಕಲಾ ಶಿಕ್ಷಕರಾದ ಇವರು ರಚಿಸಿದ ದೀಪಾ, ಅರ್ಥಾತ್ ತಾಯಿಗೆ ತಕ್ಕ ಮಗ ಈ ಭಾಗದ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನಗೊಂಡು ಪ್ರಸಿದ್ಧಿಪಡೆದಿದೆ. ಇವರು ರಚಿಸಿದ ಮತ್ತೊಂದು ನಾಟಕ 'ಚಲವಂತ ಗೌಡನ ಬಲ' ನಾಟಕ ದಿ.ಶಂಕರೇಗೌಡ ಸ್ಮಾರಕ ಪ್ರಶಸ್ತಿ ಪಡೆದಿದೆ. ಹಾಗೆಯೆ ಅನೇಕ ಏಕಾಂಕ ನಾಟಕ

ರಚಿಸಿ ಶಾಲಾ ಮಕ್ಕಳಿಗೆ ಕಲಿಸಿ ಆಡಿಸಿದ್ದಾರೆ. ಸಂಗೀತ ಸಾಹಿತ್ಯ ಹಾಗು ರಂಗಭೂಮಿ ಉಳಿವಿಗಾಗಿ ನಿರಂತರ ಶ್ರಮಿಸುವ ವ್ಯಕ್ತಿ ಮೋಹನ ಪತ್ತಾರ.

## ವೀರೇಶ ಬಡಿಗೇರ

ಹಲವು ಹವ್ಯಾಸಗಳ ವೀರೇಶ ಬಡಿಗೇರ ಕುಷ್ಟಗಿ ತಾಲೂಕಿನ ಮಾವಿನ ಇಟಗಿಯವರಾದರೂ ಚಿತ್ರಕಲಾವಿದರಾಗಿ ಹನುಮಸಾಗರದಲ್ಲಿ ನೆಲೆಸಿದ್ದಾರೆ. ಹವ್ಯಾಸಿ ಕಲಾವೇದಿಕೆಯ ಸದಸ್ಯರಾಗಿ ತಬಲಾ ಮತ್ತು ಹಾರ್ಮೋನಿಯಂ ವಾದಕರಾಗಿ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರಲ್ಲದೆ ತಾವೇ ಆರು ನಾಟಕಗಳನ್ನು ರಚಿಸಿ ಪ್ರಯೋಗಿಸಿ ಹೆಸರು ಪಡೆದಿದ್ದಾರೆ.

## ತಬಲಾ ಮಾಂತ್ರಿಕ ಮುರುಗಯ್ಯ

ಕುಷ್ಟಗಿಯವರಾದ ಮುರುಗಯ್ಯ ಹಿರೇಮಠ ತಬಲಾ ಮತ್ತು ಡೋಲಕ್ ನುಡಿಸುವದರಲ್ಲಿ ಪರಿಣತರಾಗಿ ಹಲವಾರು ವೃತ್ತಿರಂಗಭೂಮಿಯ ನಾಟಕಗಳಿಗೆ ಸೇವೆಸಲ್ಲಿಸಿ ನಂತರ ಹವ್ಯಾಸಿ ರಮಗಭೂಮಿಯ ನಾಟಕಗಳಿಗೆ ಹಳ್ಳಿ ಹಳ್ಳಿಗೆ ಹೋಗಿ ಸೇವೆ ಸಲ್ಲಿಸುತ್ತಿದ್ದಾರೆ, ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಬಾಲಕಾರ್ಮಿಕ ವಿರೋಧಿ ಆಂದೋಲನಮುಂತಾದ ಹಲವಾರು ಯೋಜನೆಯ ಕುರಿತು ಅನೇಕ ಕಡೆ ಬೀದಿ ನಾಟಕಗಳಲ್ಲಿ ಅಭಿನಯಿಸಿ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ.

## ಬಹುಮುಖ ಪ್ರತಿಭೆಯ ಆರ್.ಕೆ. ಸುಬೇದಾರ

ಬಾಲ್ಯದಲ್ಲಿಯೆ ರಂಗಭೂಮಿಯ ಅಭಿರುಚಿ ಬೆಳಸಿಕೊಂಡ ಹಿರೇಮನ್ನಾಪುರದ ಶಿಕ್ಷಕ ಆರ್.ಕೆ. ಸುಬೇದಾರ ಬಹುಮುಖ ಪ್ರತಿಭೆಯ ಕಲಾವಿದ. ಶಾಲಾ ದಿನಗಳಲ್ಲಿಯೆ ಗಂಡನ ಮಾನ ಮತ್ತು ಬಂಜೆ ತೊಟ್ಟಿಲು ನಾಟಕಗಳಲ್ಲಿ ಬಣ್ಣಹಚ್ಚಿಕೊಂಡ ಇವರು ನಂತರ ಅನೇಕ ಸಾಮಾಜಿಕ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಖ್ಯಾತ ಕಲಾವಿದರಾದ ಎರಂಗಳ್ಳಿ ಶಿವಣ್ಣ ಮನ್ಸೂರ ಸುಭದ್ರಮ್ಮ, ಶಿರಿಗೆರೆ ನಾಗನ ಗೌಡ, ಸರೋಜಮ್ಮ ಧುತ್ತರಗಿ ಮುಂತಾದವರೊಂದಿಗೆ ನಟಿಸಿದ ಹೆಮ್ಮೆ ಸುಬೇದಾರರಿಗಿದೆ. ಇಲಕಲ್ಲಿನಲ್ಲಿ ಪ್ರದರ್ಶಿಸಿದ 'ಶ್ರೀ ದೊಡ್ಡಬಸವೇಶ್ವರ' ನಾಟಕದಲ್ಲಿ ಸಿನಿಮಾ ನಟಡಿಂಗ್ರಿ ನಾಗರಾಜರೊಂದಿಗೆ ಅಭಿನಯಿಸಿದ್ದಾರೆ. ೧೯೯೬ರಲ್ಲಿ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯಿಂದ ಪ್ರತಿಷ್ಠಿತ ಡಾ|| ಅಂಬೇಡ್ಕರ್ ಫೆಲೋಶಿಪ್ ಪ್ರಶಸ್ತಿ ಇವರ ಮುಡಿಗೇರಿದೆ.

## ನಾಟಕ ಮಾಸ್ತರ ಶಿರಸಪ್ಪ ಬಡಿಗೇರ

ಸದಾ ರಂಗಚಟುವಟಿಕೆಯ ಬಗ್ಗೆಯೆ ಚಿಂತಿಸುವ ಬೆನಕನಾಳ ಗ್ರಾಮದ ಹಿರಿಯ ನಾಟಕಕಾರ ಶಿರಸಪ್ಪ ಬಡಿಗೇರ. ಹಾರ್ಮೋನಿಯಂ ಜೊತೆಗೆ ತಬಲಾ

ನುಡಿಸುವದರಲ್ಲಿಯೂ ಪರಿಣಿತರಾಗಿ ನಾಟಕದ ಮಾಸ್ತರರೆಂದೇ ಹೆಸರಾಗಿದ್ದಾರೆ. ರಕ್ತರಾತ್ರಿ, ಕುರುಕ್ಷೇತ್ರ, ಪ್ರೇಮ ಬಂಧನ, ದಸರಾ, ಹೇಮರೆಡ್ಡಿಮಲ್ಲಮ್ಮ, ಕರ್ನಾಟಕಕೇಸರಿ ಮುಂತಾದ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳನ್ನು ಯುವಕರಿಗೆ ಉತ್ತಮ ತರಬೇತಿಯ ಮೂಲಕ ಪ್ರದರ್ಶನಗೊಳ್ಳುವಂತೆ ಮಾಡಿ ರಂಗಭೂಮಿಯ ಉಳಿವಿಗೆ ನಿರಂತರ ಶ್ರಮಿಸುತ್ತಿದ್ದಾರೆ.

## ರಂಗಕಲೆಯ ಆರಾಧಕ ಅಪ್ಪಯ್ಯ ಸುಬೇದಾರ

ಹಿರೇಮನ್ನಾಪುರದ ಮತ್ತೊಬ್ಬ ಕಲಾರಾಧಕ ಅಪ್ಪಯ್ಯ ಸುಬೇದಾರ ಎಲ್ಲಿಯೇ ನಾಟಕ ನಡೆಯಲಿ ಅಲ್ಲಿ ಇವರು ಪ್ರತ್ಯಕ್ಷ. ಹಲವಾರು ನಾಟಕಗಳಲ್ಲಿ ಅಭಿನಯಿಸಿ ನಂತರ ವೃತ್ತಿ ನಾಟಕ ಕಂಪನಿ ಸೇರಿ ಅಲ್ಲಿಯ ಕಷ್ಟದ ಬದುಕಿನಿಂದ ಹೊರಬಂದು ಅಲ್ಲಲ್ಲಿ ಕಥಾನಾಯಕನ ಪಾತ್ರ ವಹಿಸುತ್ತ ಕಲಾರಾಧಕರಾಗಿ ರಂಗಭೂಮಿಯ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ.

## ಜಯಶ್ರೀ ಮತ್ತು ಉಮಾದೇವಿ

ಈ ಇಬ್ಬರು ಕಲಾವಿದೆಯರು ಕೆಲವುದಿನ ಹನುಮಸಾಗರದಲ್ಲಿದ್ದು ಪಿ.ಬಿ.ಧುತ್ರಗಿ ಹಾಗು ಎನ್.ಪಿ.ಕುಲಕರ್ಣಿಯವರ ನಾಟಕಗಳಲ್ಲಿ ಅಭಿನಯಿಸುವ ಮೂಲಕ ಹೆಸರು ಮಾಡಿ ವೃತ್ತಿ ನಾಟಕ ಕಂಪನಿಗಳಲ್ಲಿ ಮತ್ತು ಹವ್ಯಾಸಿ ಕಲಾ ಸಂಘಗಳ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಪ್ರಸ್ತುತ ಬೇರೆಡೆ ವಾಸವಾಗಿದ್ದಾರೆ.

## ವೀರಯ್ಯ ಸ್ವಾಮಿ

ಕುಷ್ಟಗಿ ತಾಲೂಕಿನ ಮಡಿಕ್ಕೇರಿಯವರಾದ ವೀರಯ್ಯ ಸ್ವಾಮಿ ಬಾಲ್ಯದಿಂದಲೇ ರಂಗಕಲೆಯನ್ನು ಮೈಗೂಡಿಸಿಕೊಂಡು ತಬಲಾ ಮತ್ತು ಹಾರ್ಮೋನಿಯಂ ಕಲಿತು ಹಳ್ಳಿ ಹಳ್ಳಿಗಳಲ್ಲಿ ನಾಟಕ ಕಲಿಸಿ ಆಡಿಸುವ ವೃತ್ತಿಯಲ್ಲಿದ್ದಾರೆ. ಗ್ರಾಮಾಂತರ ಪ್ರದೇಶದ ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿ ಹೆಸರಾಗಿದ್ದಾರೆ.

## ಬಾಲಪ್ಪ ಕಂಬಳಿ

ಕುಷ್ಟಗಿಯವರಾದ ಬಾಲಪ್ಪ ಕಂಬಳಿ ಬಾಲ್ಯದಲ್ಲಿಯೆ ನಾಟಕದ ಆಸಕ್ತಿ ಬೆಳಸಿಕೊಂಡು ೧೩ನೆಯ ವಯಸ್ಸಿನಲ್ಲಿ ಸತ್ಯ ಹರಿಶ್ಚಂದ್ರ ನಾಟಕದಲ್ಲಿ ಕನ್ನಿಕೆಯ ಪಾತ್ರ ವಹಿಸುವ ಮೂಲಕ ಗಮನ ಸೆಳೆದು ನಂತರ ಖಳನಾಯಕನ ಮತ್ತು ಹಾಸ್ಯ ಪಾತ್ರಗಳಲ್ಲಿ ಮಿಂಚಿ ಸಂಗೊಳ್ಳಿರಾಯಣ್ಣ ನಾಟಕದಲ್ಲಿ ರಾಯಣ್ಣನ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿ ಪ್ರಸಿದ್ಧಿ ಪಡೆದವರು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಹೀಗೆ ಹತ್ತಾರು ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಜನಪ್ರಿಯತೆ ಗಳಿಸಿದ್ದಾರೆ.

## ಹನುಮಂತಪ್ಪ ಪೂಜಾರ

ಮೊದಲಿಗೆ ದೊಡ್ಡಾಟದ ಮಾಸ್ತರನಾಗಿದ್ದ ಹೊಸಳ್ಳಿಯ ಹನುಮಂತಪ್ಪ ಪೂಜಾರ ನಂತರ ಕಂದಗಲ್ ಹನುಮಂತರಾಯರ ರಕ್ತರಾತ್ರಿ ನಾಟಕ ಕಲಿಸುವ ಮೂಲಕ ರಂಗ ಪ್ರವೇಶಿಸಿ ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ಈ ಭಾಗದಲ್ಲಿ ಹೆಚ್ಚು ನಿರ್ದೇಶಿಸಿ ಅನೇಕ ಕಡೆ ಪ್ರದರ್ಶಿಸಿ ಪುರಸ್ಕೃತರಾಗಿದ್ದಾರೆ.

## ರಂಗಗೀತೆಯ ಬಾಲಪ್ಪ ಮಾಸ್ತರ

ಹಾರ್ಮೋನಿಯಂ ಹಾಗು ತಬಲಾ ಬಾರಿಸುವದನ್ನು ಕಲಿತು ಬಾಲಪ್ಪ ಮಾಸ್ತರೆಂದೇ ಹೆಸರಾಗಿದ್ದ ಗುಮಗೇರಿಯ ಹಿರಿಯ ಕಲಾವಿದ ದಿ.ಬಾಲಪ್ಪ ಮಾಸ್ತರ. ತಮ್ಮ ಕಂಚಿನ ಕಂಠದಿಂದ ರಂಗಗೀತೆ ಹಾಡುವದರಲ್ಲಿ ಪ್ರಸಿದ್ಧಿ ಪಡೆದಿದ್ದರು. ಅವರಿಗೆ ನಾಟಕ ಅಕಾಡೆಮಿಯ ಮಾಸಾಶನವೂ ಬರುತ್ತಿತ್ತು. ಇತ್ತೀಚಿಗೆ ಪುರಾಣ ಕಾರ್ಯಕ್ರಮವೊಂದರಲ್ಲಿ ಹೃದಯಾಘಾತದಿಂದ ನಿಧನರಾದರು.

## ಅಂಧ ಕಲಾವಿದ ರಾಮಣ್ಣ ನಶಿಬಿ

ಬಿಳೇಕಲ್ ಗ್ರಾಮದ ಅಂಧಕಲಾವಿದ ರಾಮಣ್ಣ ನಶಿಬಿ ಹಾರ್ಮೋನಿಯಂ, ಕ್ಲಾರಿಯೋನೆಟ್, ಕೊಳಲು ನುಡಿಸುವುದರಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ಬ್ರೈಲ್‌ಲಿಪಿಯಲ್ಲಿ ಎಸ್.ಎಸ್.ಎಲ್.ಸಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಪಾಸಾಗಿ ಎಲ್ಲಿಯೇ ನಾಟಕ ನಡೆದರೂ ಈ ಭಾಗದಲ್ಲಿ ಇವರ ಸಂಗೀತ ಸೇವೆ ಇದ್ದೇ ಇರುತ್ತದೆ.

## ಮಹಾನ್ ಕಲಾವಿದ ಶಿವಪ್ಪ ಬಸರಿಗಿಡದ

ಹದಿನೆಂಟರ ಹರೆಯದಲ್ಲಿ ಮೂಡಲ ಪಾಯದ ದೊಡ್ಡಾಟ ಕನಕಾಂಗಿ ಕಲ್ಯಾಣದಲ್ಲಿ ಪಾತ್ರವಹಿಸುವ ಮೂಲಕ ರಂಗ ಪ್ರವೇಶಿಸಿದ ಕುಷ್ಟಗಿಯ ಶಿವಪ್ಪ ಬಸರಿಗಿಡದ ನಂತರ ರೆಹಮಾನವ್ವ ಕಂಪನಿ ಸೇರಿ ರೇಣುಕಾ ನಾಟಕದ ಪರಶುರಾಮ, ಸ್ತ್ರೀರತ್ನದ ರಾಜಶೇಖರ, ಆದರ್ಶ ಪ್ರೇಮದ ಕಾಳಿಂಗ ಮುಂತಾದ ಪ್ರಖ್ಯಾತ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಪ್ರಸಿದ್ಧಿ ಪಡೆದರು.

೧೯೬೨-೬೩ರಲ್ಲಿ ಶಿವಪ್ಪನವರು ತಮ್ಮ ಮಿತ್ರರನ್ನೆಲ್ಲ ಸೇರಿಸಿಕೊಂಡು ತಾವೇ ಸಂಗಮೇಶ್ವರ ನಾಟ್ಯಸಂಘ ಸ್ಥಾಪಿಸಿ ಕೈಸುಟ್ಟುಕೊಂಡರು. ಆಕರ್ಷಕ ಕುಣಿತ ಸುಶ್ರಾವ್ಯ ಹಾಡುಗಾರಿಕೆ ನಯವಾದ ಸಂಭಾಷಣೆ ಹಾಗು ಹಾವಭಾವಗಳಿಂದ ಇವರೊಬ್ಬ ಮಹಾನ್ ಕಲಾವಿದರೆಂದು ಗುರುತಿಸಲಾಗಿದೆ.

## ಸ್ತ್ರೀ ಪಾತ್ರದ ಮಲ್ಲಿಕಾಜಪ್ಪ ಮರಳಿ

ಹುಲಿಯಾಪುರದ ಹಿರಿಯ ಕಲಾವಿದ ಮಲ್ಲಕಾಜಪ್ಪ ಮರಳಿ ಸ್ತ್ರೀ ಪಾತ್ರಕ್ಕೆ ಹೇಳಿ ಮಾಡಿಸಿದ ಮೈಕಟ್ಟು ಹಾವಭಾವಹೊಂದಿದ್ದಾರೆ. ಕೀಚಕವಧೆ ರಾಮಾಯಣ,

ಬಭ್ರುವಾಹನ ಮುಂತಾದ ನಾಟಕಗಳಲ್ಲಿ ದ್ರೌಪದಿ, ಸೀತೆ, ಸೈರೇಂಧ್ರಿ, ಸುಭದ್ರಾ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಿದ್ದಾರೆ.

## ತಬಲಾ ಕಲಾವಿದ ಅಂಬಾಸಾ ಬಸುದೆ

ಹನುಮಸಾಗರದ ತಬಲಾ ಕಲಾವಿದ ಅಂಬಾಸಾ ಬಸುದೆ ಆಶಾಪೂರ ನಾಟಕ ಕಂಪನಿಯಲ್ಲಿ ಕೆಲವುದಿವಸ ತಬಲಾ ವಾದಕರಾಗಿ ನಂತರ ಅಮ್ಮೆಚೂರ್ ಕಂಪನಿಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಪೋಲಿಸ್ ಇಲಾಖೆ ಮತ್ತು ನಾಟಕ ಅಕಾಡೆಮಿ ಏರ್ಪಡಿಸಿದ ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದಿದ್ದಾರೆ.

## ಸಮುದಾಯದ ದೊಡ್ಡಪ್ಪ ಕೈಲವಾಡಗಿ

ಕಂದಕೂರಗ್ರಾಮದ ಪ್ರತಿಭಾವಂತ ಕಲಾವಿದ ದೊಡ್ಡಪ್ಪ ಕೈಲವಾಡಗಿ ಸಮುದಾಯ ನಾಟಕಗಳ ಮೂಲಕ ರಂಗ ಪ್ರವೇಶ ಮಾಡಿದವರು ೧೯೮೪-೮೫ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ರಂಗಾಯಣ ತರಬೇತಿ ಪಡೆದು. ಜೋಗತಿ, ಒಡನಾಡಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಗಮನಸೆಳೆದರು. ನಂತರ ಕಂದಕೂರ, ನೆರೆಬೆಂಚಿ, ತಳವಗೇರಾ ಮುಂತಾದೆಡೆ ಹವ್ಯಾಸಿ ಕಲಾವಿದರಿಗೆ ನಾಟಕ ನಿರ್ದೇಶನ ಮಾಡುವದರಲ್ಲಿ ನಿರತರಾಗಿ ರಂಗಕಲೆಗೆ ಸೇವೆ ಸಲ್ಲಿಸಿದ್ದಾರೆ.

## ಕಲಾವಿದ ಶ್ರೀನಿವಾಸ ಜಹಗೀರದಾರ

ಹನುಮಸಾಗರದಲ್ಲಿ ರಂಗಾಸಕ್ತರನ್ನು ಕೂಡಿಹಾಕುವ ಮೂಲಕ ಹವ್ಯಾಸಿ ಕಲಾವೇದಿಕೆ ರಚಿಸಿ ಅದರ ಅಧ್ಯಕ್ಷರಾಗಿ ರಂಗಭೂಮಿಯ ಉಳಿವಿಗಾಗಿ ಶ್ರಮಿಸುವ ಶ್ರೀನಿವಾಸ ಜಹಗೀರದಾರ ಬಹುಮುಖಿ ಪ್ರತಿಭೆಯ ಕಲಾವಿದ. ಪತ್ರಕರ್ತರಾದ ಜಹಗೀರದಾರ ಬಾಲ್ಯದಿಂದಲೇ ನಾಟಕದ ಅಭಿರುಚಿ ಬೆಳಸಿಕೊಂಡು ಅನೇಕ ನಾಟಕಗಳಲ್ಲಿ ಅಭಿನಯಿಸಿದರು.

ಉಡುಪಿಯಲ್ಲಿ ನಡೆದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಬುದ್ಧಿವಂತರ ನ್ಯಾಯ ನಾಟಕ ಪ್ರದರ್ಶಿಸಿ ಅದರಲ್ಲಿ ಪಾತ್ರವಹಿಸಿ ಪ್ರಶಂಸೆಗೆ ಪಾತ್ರರಾದರು. ತಿಂಗಳ ಕಾಲ ರಂಗತರಬೇತಿಯನ್ನು ಧೃವರಾಜದೇಶಪಾಂಡೆಯವರಿಂದ ಪಡೆದು ಯಾವುದೇ ಪಾತ್ರವನ್ನಾದರೂ ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯ ಪಡೆದು ೧೯೯೯ರಲ್ಲಿ ಆನೆಗುಂದಿ ಉತ್ಸವದಲ್ಲಿ ಅಸ್ಪೃಶ್ಯತೆಯ ನಾಟಕ ಪ್ರದರ್ಶಿಸಿ ಜನಮನಸೆಳೆದರು. ಅಪರಾಧ ತಡೆಗಟ್ಟುವ ಮಾಸಾಚರಣೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಮತ್ತು ವಾರ್ತಾ ಪ್ರಚಾರ ಇಲಾಖೆಯ ಕಾರ್ಯಕ್ರಮಗಳಿಗೆ ಬೀದಿ ನಾಟಕಗಳ ಮೂಲಕ ಅನೇಕ ಕಡೆ ತಿರುಗಾಡಿ ಜಾಗೃತಿ ಮೂಡಿಸಿದ್ದಾರೆ.

## ಸಂಗೀತ ಕಲಾವಿದ ನಟರಾಜ ಸೋನಾರ

ಕುಷ್ಟಗಿಯ ಕಲಾವಿದ ದಿ.ನರಸಣ್ಣ ಸೋನಾರವರ ಪುತ್ರನಾದ ಶಿಕ್ಷಕ ನಟರಾಜ ಸೋನಾರ ಸಂಗೀತ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ವಾರ್ತಾ ಇಲಾಖೆಯ ಜನಜಾಗೃತಿ ಕಾರ್ಯಕ್ರಮಗಳಿಗೆ ಬೀದಿ ನಾಟಕ ಪ್ರದರ್ಶಿಸಲು ಜಿಲ್ಲಾದ್ಯಂತ ಸಂಚರಿಸಿದ್ದಾರೆ. ಹಾಗು ಅನೇಕ ನಾಟಕಗಳಲ್ಲಿ ಅಭಿನಯಿಸಿ ಮೆಚ್ಚುಗೆ ಪಡೆದಿದ್ದಾರೆ. ದೋಟಿಹಾಳ ನೆಹರು ಯುವಕ ಮಂಡಳಿ ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

## ಹಾಸ್ಯನಟ ಲೋಕಯ್ಯ ಶಶಿಮಠ

ಹನುಮಸಾಗರದ ಮತ್ತೊಂದು ಅದ್ಭುತ ಪ್ರತಿಭೆ ಲೋಕಯ್ಯ ಶಂಕ್ರಯ್ಯ ಶಶಿಮಠ. ಕುಳ್ಳನಾದ ಈತ ರಂಗಭೂಮಿಗೆ ಬಂದರೆ ಸಾಕು ಪ್ರೇಕ್ಷಕರು ಗೊಳ್ಳೆಂದು ನಗುವದು ಖಚಿತ. ಹಾಸ್ಯ ಪಾತ್ರಕ್ಕೆ ಹೆಸರಾದ ಲೋಕಯ್ಯ ಧುತ್ತರಗಿಯವರ ಇಲಕಲ್ ಸೀರೆ, ಸುಖದ ಸುಪ್ಪತ್ತಿಗೆ ಮುಂತಾದ ನಾಟಕಗಳಲ್ಲಿ ಹಾಸ್ಯ ಪಾತ್ರಕ್ಕೆ ಪ್ರಸಿದ್ಧರಾಗಿದ್ದಾರೆ. ಎನ್.ಪಿ.ಕುಲಕರ್ಣಿಯವರ ಹೆಂಡ್ತಿ ಬೇಕೋ ಸುಖ ಬೇಕೋ ನಾಟಕವಲ್ಲದೆ, ವೃತ್ತಿ ನಾಟಕ ಕಂಪನಿಗಳಾದ ಶ್ರೀ ಗಾನಯೋಗಿ ಪಂಚಾಕ್ಷರಿ ನಾಟ್ಯಸಂಘ, ಎಚ್ಚರೇಶ್ವರ ನಾಟ್ಯಸಂಘ ಹೊಳೆ ಆಲೂರು, ಶ್ರೀ ಸಿದ್ಧಲಿಂಗೇಶ್ವರ ನಾಟ್ಯಸಂಘ ಸೂಳೆಬಾವಿ ಮುಂತಾದ ಕಂಪನಿಗಳಲ್ಲಿ ಅಭಿನಯಿಸಿ ಹಾಸ್ಯ ಚಕ್ರವರ್ತಿ ಎನ್ನುವ ಬಿರುದಿನ ಜೊತೆಗೆ ಹಲವಾರು ಪ್ರಶಸ್ತಿಪಡೆದಿದ್ದಾರೆ.

## ಸಂಗಮೇಶ ಮನ್ನೇರಾಳ

ವಿವಿಧ ವಾದ್ಯಗಳನ್ನು ನುಡಿಸುವದರಲ್ಲಿ ಹೆಸರಾದ ಮನ್ನೇರಾಳ ಗ್ರಾಮದ ಸಂಗಮೇಶ ಹಲವಾರು ಹೆಸರಾಂತ ನಾಟಕ ಕಂಪನಿಗಳಲ್ಲಿ ಮತ್ತು ಮುನ್ನೂರಕ್ಕೂ ಹೆಚ್ಚು ಅಮ್ಯೆಚೂರ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರೆ. ಹಾರ್ಮೋನಿಯಂ ಕ್ಯಾಸಿಯೋ ಪರಿಣತರಾದ ಇವರಿಗೆ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರ ನೀಡಿವೆ.

## ಮಹೆಬೂಬ ಅದ್ವಾನಿಕರ್

ಸಮುದಾಯದ ಮೂಲಕ ರಂಗಪ್ರವೇಶಿಸಿದ ಕುಷ್ಟಗಿಯ ಮಹೆಬೂಬ ಅದ್ವಾನಿಕರ್ ಸಾಮಾಜಿಕ ಕಳಕಳಿಯ ಕಲಾವಿದರನ್ನು ಒಗ್ಗೂಡಿಸಿ ಸಮನ್ವಯ ಪ್ರತಿಪಾದಿಸುವ ನಾಟಕಗಳ ಮೂಲಕ ಗಮನ ಸೆಳೆದವರು. ಉತ್ತಮವಾದ ರಂಗತರಬೇತಿ ಪಡೆದು ಸಾಕಷ್ಟು ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಶಾಲಾ ಕಾಲೇಜು ದಿನಗಳಿಂದಲೇ ರಂಗಾಸಕ್ತಿಯನ್ನು ಬೆಳಸಿಕೊಂಡ ಇವರೊಬ್ಬ ಶ್ರೇಷ್ಠ ಕಲಾವಿದರು ಮತ್ತು ಸಂಘಟಕ.

## ಹವ್ಯಾಸಿ ಕಲಾವಿದ ರವೀಂದ್ರ ಬಾಕಳೆ

ಕುಷ್ಟಗಿಯ ಅತ್ಯಂತ ಚಟುವಟಿಕೆಯ ವ್ಯಕ್ತಿಯಾದ ರವಿಂದ್ರ ಬಾಕಳೆ ಸಾಂಸ್ಕೃತಿಕ ಕಲಾಕೂಟದ ಸಂಗೀತ ಶಾಲೆಯಲ್ಲಿ ರಂಗಗೀತೆ ಹಾಡುವದನ್ನು ಕಲಿತು ರಂಗಭೂಮಿಗೆ ಹಿನ್ನೆಲೆ ಗಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೯೮–೯೯ರ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅಸ್ಪೃಶ್ಯತೆ ನಿವಾರಣೆಯ ಬೀದಿ ನಾಟಕಗಳಲ್ಲಿ ಪಾತ್ರವಹಿಸಿ ತಂಡದೊಂದಿಗೆ ಸಂಚರಿಸಿದ್ದಾರೆ. ಹಾಗೆಯೆ ವಾರ್ತಾ ಇಲಾಖೆಯ ಪ್ರಚಾರದ ಬೀದಿ ನಾಟಕಗಳಲ್ಲಿಯೂ ನೂರಾರು ಪ್ರದರ್ಶನ ನೀಡಿದ್ದಾರೆ, ನೊಂದ ಜೀವಿಗಳು, ಭೂಮಿಗೆ ಬಂದ ಯಮರಾಜ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಉತ್ತಮ ಕಲಾವಿದ ಪ್ರಶಸ್ತಿ ಪಡೆದಿದ್ದಾರೆ.

## ಅಡಿವೆಪ್ಪ ನೆರೆಬೆಂಚಿ

ಮತ್ತೊಬ್ಬ ಸಮುದಾಯದ ಕಲಾವಿದ ಕುಷ್ಟಗಿಯ ಅಡಿವೆಪ್ಪ ನೆರೆಬೆಂಚಿ ಶಾಲಾ ಕಾಲೇಜಿನ ದಿನಗಳಿಂದಲೇ ನಾಟಕಗಳಲ್ಲಿ ಅಭಿನಯಿಸುತ್ತ ನಂತರ ಸಮುದಾಯ ಕಲಾವಿದರಾಗಿ ಜೋಗತಿ ಮುಂತಾದ ನಾಟಕಗಳಲ್ಲಿಯೂ ಅಭಿನಯಿಸುತ್ತ ಗೀತರೂಪಕಗಳನ್ನು ಪ್ರದರ್ಶಿಸಿ ಕಲೆಯನ್ನು ಕಾಪಾಡುವಲ್ಲಿ ಶ್ರಮಿಸಿದ್ದಾರೆ.

## ರಾಮನ ಗೌಡ ಸಿನ್ನೂರ

ಹನುಮಸಾಗರದ ರಾಮನ ಗೌಡ ಸಿನ್ನೂರ ಶಾಲಾದಿನಗಳಲ್ಲಿ ಮೋಜಿನವೇಷ ಹಾಕುವ ಮೂಲಕ ರಂಗಪ್ರವೇಶಿಸಿ. ೧೯೮೬–೮೭ರಲ್ಲಿ ನಾಟಕ ಅಕಾಡೆಮಿಯಿಂದ ನಡೆದ ವಿಚಾರ ಸಂಕಿರಣದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿ ನಾಟಕ ನಿರ್ದೇಶನ ಮಾಡುವ ಮೂಲಕ ರಂಗತಜ್ಞರೆನ್ನಿಸಿಕೊಂಡಿದ್ದಾರೆ ಧುತ್ತರಗಿಯವರ ಇಲಕಲ್ ಸೀರೆ, ಹಗರಣ ನಾಟಕಗಳಲ್ಲದೆ. ಅತ್ತಿಗೆಯೆ ಹೆತ್ತಮ್ಮ, ಮದಕರಿನಾಯಕ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ತಮ್ಮ ಕಲಾಪ್ರತಿಭೆ ಮೆರೆದಿದ್ದಾರೆ.

## ದಿ. ಶಿವಯ್ಯ ಹಿರೇಮಠ

ಬಾಲ್ಯದಿಂದಲೇ ದೊಡ್ಡಾಟ ಕಲಾವಿದರಾಗಿ ನಂತರ ನಾಟಕರಂಗಕ್ಕೆ ಕಾಲಿಟ್ಟ ಕುಷ್ಟಗಿಯ ದಿ. ಶಿವಯ್ಯ ಸಂಗಯ್ಯ ಹಿರೇಮಠ ರಾಯಚೂರಿನ ರಂಗಭೂಮಿ ವೃತ್ತಿಕಲಾವಿದರ ಸಂಘದ ಕಲಾವಿದರಿಗೆ ಅನೇಕ ನಾಟಕಗಳನ್ನು ಕಲಿಸಿದ್ದಾರೆ. ಒಣಗೇರಿ, ನವಲಿ, ನಿಡಶೇಸಿ ಮೊದಲಾದ ಗ್ರಾಮಗಳಲ್ಲಿ ವೀರ ಅಭಿಮನ್ಯು, ಲವ-ಕುಶ ಮುಂತಾದ ಪೌರಾಣಿಕ ನಾಟಕಗಳನ್ನು ಕಲಿಸಿ ಆಡಿಸಿದ್ದಾರೆ.

## ನಾರಾಯಣಸಾ ತುಳಸಿಕಟ್ಟಿ

ಹನುಮಸಾಗರದ ನಾರಾಯಣಸಾ ಸಿದ್ದೂಸಾ ತುಳಸಿಕಟ್ಟಿ ತಮ್ಮ ನೇಕಾರಿಕೆ ವೃತ್ತಿಯೊಂದಿಗೆ ರಂಗಕಲೆಯನ್ನು ಪ್ರವೃತ್ತಿಯಾಗಿಸಿಕೊಂಡವರು. ಶ್ರೀ ರೇವಣ ಸಿದ್ಧೇಶ್ವರ ನಾಟ್ಯಸಂಘದಲ್ಲಿ ಪ್ರೇಮಬಂಧನ, ಸಂಸಾರ, ತವರೂರು, ಅಣ್ಣ–ತಂಗಿ, ಚಿನ್ನದಗೊಂಬೆ, ಸ್ತ್ರೀರತ್ನ ಹೀಗೆ ನೂರಾರು ನಾಟಕಗಳಲ್ಲಿ ಅಭಿನಯಿಸಿ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ.

## ಆದಪ್ಪ ರಾಟಿ

ಬಾಲ್ಯದಲ್ಲಿಯೆ ಸಾಂಸ್ಕೃತಿಕ ಹವ್ಯಾಸ ರೂಢಿಸಿಕೊಂಡ ಕಬ್ಬರಗಿ ಗ್ರಾಮದ ಆದಪ್ಪ ಶಿವಪರಾಟಿ. ಸಂಗೀತ ಅಭ್ಯಾಸಮಾಡಿ ೩೦ಕ್ಕೂ ಹೆಚ್ಚು ನಾಟಕಗಳಿಗೆ ಹಾರ್ಮೋನಿಯಂ ನುಡಿಸಿದ್ದಾರೆ. ಗ್ರಾಮೀಣ ಭಾಗದ ಅಮೇಚ್ಯೂರ ನಾಟಕ ಕಲಾವಿದರಿಗೆ ಕಳ್ಳಕಟ್ಟಿದ ತಾಳಿ, ಪ್ರೇಮ ಪಂಜರ, ಗರುಡ ರಾಜ್ಯದಲ್ಲಿ ಘಟಸರ್ಪ, ಪ್ರಾಣದ ಪ್ರತೀಕಾರ ಇವರು ನಿರ್ದೇಶಿಸಿದ ಪ್ರಸಿದ್ಧ ನಾಟಕಗಳು. ಗಡಿಭಾಗದಲ್ಲಿಯೂ ಇವರು ಸೇವೆ ಸಲ್ಲಿಸಿದ್ದಾರೆ.

## ಹಾಸ್ಯನಟ ಜಗನ್ನಾಥ ಹೂಗಾರ

ರಾಮನಗೌಡ ನಾಟಕ ಕಂಪನಿ ವೀರೇಶ್ವರ ನಾಟ್ಯ ಸಂಘ ಗದಗ, ಶರಣ ಬಸವೇಶ್ವರ ನಾಟ್ಯಸಂಘ ಬೀಳಗಿ, ಓಂಕಾರೇಶ್ವರ ನಾಟ್ಯಸಂಘ ಚಿತ್ರದುರ್ಗ ಹೀಗೆ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಹಾಸ್ಯಪಾತ್ರ ಮಾಡುವ ಮೂಲಕ ಹೆಸರಾದ ಕುಷ್ಟಗಿಯ ಜಗನ್ನಾಥ ಹೂಗಾರ ನಾಟಕ ನಿರ್ದೇಶನದಲ್ಲಿಯೂ ಪರಿಶ್ರಮಿಸಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ನಾಟಕ ನಿರ್ದೇಶಕ ವಿರೂಪಾಕ್ಷಪ್ಪ ಧುತ್ತರಗಿ

ಪಿ.ಬಿ.ಧುತ್ತರಗಿಯವರ ಸಾಕುಮಗನಾದ ವಿರೂಪಾಕ್ಷಪ್ಪ ಧುತ್ತರಗಿ ತಮ್ಮ ಮೂರನೆಯ ವಯಸ್ಸಿನಲ್ಲಿಯೆ ತಂದೆ ತಾಯಿಯರನ್ನು ಕಳೆದುಕೊಂಡಿದ್ದರಿಂದ ಧುತ್ತರಗಿಯವರ ಆಶ್ರಯದಲ್ಲಿ ಬೆಳೆಯುತ್ತ ೮ನೇಯ ವಯಸ್ಸಿನಲ್ಲಿಯೆ ಹರಗಿರಜೆ ನಾಟಕದಲ್ಲಿ ಷಣ್ಮುಗನ ಪಾತ್ರದ ಮೂಲಕ ರಂಗಪ್ರವೇಶಿಸಿದರು. ಸಾಕು ತಂದೆತಾಯಿಗಳಾದ ಪಿ.ಬಿ.ಧುತ್ತರಗಿ ಮತ್ತು ಸರೋಜಮ್ಮ ಧುತ್ತರಗಿಯವರೊಂದಿಗೆ ಕಂಪನಿಯಿಂದ ಕಂಪನಿಗೆ ತಿರುಗುತ್ತಲೇ ಎಸ್.ಎಸ್.ಎಲ್.ಸಿ ಪಾಸು ಮಾಡಿದರು ಮತ್ತು ಗದಗಿನ ವಿಜಯ ಕಲಾಮಂದಿರದಲ್ಲಿ ಸಂಗೀತದಲ್ಲಿ ಸೀನಿಯರ್ ಪಾಸಾದರು.

ಹಾರ್ಮೋನಿಯಂ, ಕೀಬೋರ್ಡ್, ತಬಲಾ ನುಡಿಸುವದರಲ್ಲಿ ವಿಶೇಷ ಪರಿಣತಿ ಸಾಧಿಸಿರುವ ವಿರೂಪಾಕ್ಷಪ್ಪ ಹಿನ್ನಲೆ ಹಾಡುವದರಲ್ಲಿಯೂ ಹೆಸರಾಗಿದ್ದಾರೆ. ಧುತ್ತರಗಿಯವರ ಎಲ್ಲ ನಾಟಕಗಳನ್ನೂ ಇವರು ಕಂಠಗತಮಾಡಿಕೊಂಡು ಪುಸ್ತಕನೋಡದೆ ನಿರ್ದೇಶನ ಮಾಡಬಲ್ಲವರಾಗಿದ್ದಾರೆ. ಜತೆಗೆ ಕಂದಗಲ್‌ರ ರಕ್ತರಾತ್ರಿ,

ಕುರುಕ್ಷೇತ್ರ ನಾಟಕಗಳಲ್ಲದೆ ಮಾಂಡ್ರೆಯವರ ನಾಟಕ, ಎಚ್.ಟಿ.ಮಹಾಂತೇಶ ಶಾಸ್ತ್ರೀ ಹೀಗೆ ಎಲ್ಲ ಪ್ರಸಿದ್ಧ ನಾಟಕಕಾರರ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. ಮತ್ತು ನಿರ್ದೇಶಿಸಿದ್ದಾರೆ.

೫೪ ವರ್ಷದ ವಿರೂಪಾಕ್ಷಪ್ಪ ಹಲವು ಕಂಪನಿಗಳಲ್ಲಿ ಸೇವೆಸಲ್ಲಿಸಿ ಈಗಲೂ ದಣಿವರಿಯದೆ ದುಡಿಯುತ್ತಿದ್ದಾರೆ. ದಕ್ಷ ನಿರ್ದೇಶಕ, ನವರಸ ನಾಯಕ, ಮುಂತಾದ ಅನೇಕ ಪ್ರಶಸ್ತಿಗಳು, ಸನ್ಮಾನಗಳು ಇವರಿಗೆ ಲಭಿಸಿವೆಯಾದರೂ ಉನ್ನತ ಮಟ್ಟದ ರಾಜ್ಯಪ್ರಶಸ್ತಿಗಳು ಇವರಿಗೆ ಲಭಿಸಬೇಕಾಗಿದೆ.

## ಶರಣಯ್ಯ ಗಡಾದ

ಯಲಬುರ್ಗಿ ತಾಲೂಕಿನ ಮಂಡಲಗಿರಿಯ ಶರಣಯ್ಯ ಗಡಾದರವರು ಬರೆದ ಗರತಿ ಹೆಂಡತಿ, ಗರ್ವದ ಗಂಡ, ಧನಿಕರ ದೌರ್ಜನ್ಯ, ಸಮಾಜಕ್ಕೆ ಶಿಕ್ಷೆ ಸತ್ಯಕ್ಕ ಸೋತಿತು ಸರಕಾರ ಮುಂತಾದ ನಾಟಕಗಳು ತುಂಬಾ ಪ್ರಸಿದ್ಧವಾಗಿ ಹಳ್ಳಿಹಳ್ಳಿಗಳಲ್ಲಿ ಪ್ರದರ್ಶನಗೊಂಡಿವೆ. ಉತ್ತಮ ನಟರೂ ಆಗಿರುವ ಇವರು ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಆಶಾಭಿ ಕಲ್ಲೂರ

ಅಭಿನಯಶಾರದೆಯೆಂದು ಬಿರುದುಗಳಿಸಿದ ಕಲ್ಲೂರಿನ ಖಾನಸಾಹೇಬ ತಬಲಾಜಿಯವರ ಮಗಳಾದ ಆಶಾಭಿ. ತಂದೆಯ ಮಾರ್ಗದರ್ಶನದಲ್ಲಿ ರಂಗಕಲೆಯನ್ನು ಮೈಗೂಡಿಸಿಕೊಂಡು ಶ್ರೀ ಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಹುಚ್ಚೇಶ್ವರ ನಾಟ್ಯಸಂಘ ಮುಂತಾದ ಪ್ರಸಿದ್ಧ ನಾಟಕ ಕಂಪನಿಗಳಲ್ಲಿ ಎಲ್ಲ ರಿತಿಯ ಪಾತ್ರಗಳನ್ನು ಜೀವತುಂಬಿ ಅಭಿನಯಿಸುವ ಮೂಲಕ ಪ್ರಸಿದ್ಧಿ ಪಡೆದಿದ್ದಾರೆ.

## ಭಾಗ್ಯವಂತಪ್ಪ ಪತ್ತಾರ

ತಳಕಲ್ಲಗ್ರಾಮದ ಭಾಗ್ಯವಂತಪ್ಪ ಹನ್ನೆರಡನೆಯ ವಯಸ್ಸಿನಲ್ಲಿಯೆ ಬಣ್ಣದ ಬದುಕಿಗೆ ಕಾಲಿಟ್ಟವರು. ಸ್ತ್ರೀ ಪಾತ್ರದ ಮೂಲಕ ಪ್ರಸಿದ್ಧಿ ಪಡೆದು ತಮ್ಮೂರಿನ ವೆಂಕಟರೆಡ್ಡಿಯವರ ಕಂಪನಿಯಲ್ಲಿ ನಟನಾ ಕೌಶಲ್ಯತೆ ಸಾಧಿಸಿ ಮೃಡಗಿರಿಯ ರಂಜನಿ ನಾಟಕ ಕಂಪನಿ, ದೊಡ್ಡವಾಡ ಕಂಪನಿ. ಗವಾಯಿಗಳ ಕಂಪನಿ, ನ್ಯಾಮತಿ ಮತ್ತು ಹುಚ್ಚೇಶ್ವರ ಕಂಪನಿಗಳಲ್ಲೆಲ್ಲ ತಮ್ಮ ವೃತ್ತಿ ಜೀವನ ಕಳೆದವರು.

ಖ್ಯಾತ ನಟರಾದ ದಿ.ದುರ್ಗಾದಾಸ, ರೆಹಮಾನವ್ವ ಮುಂತಾದವರೊಂದಿಗೆ ಅಭಿನಯಿಸಿದ ಅಭಿಮಾನ ಭಾಗ್ಯವಂತಪ್ಪನವರದು. ಭಾನಾಪುರದ ಕಾಳಪ್ಪ ಪತ್ತಾರರೊಡನೆ ತಬಲಾ ಕಲೆಯನ್ನು ಕಲಿತು ಅಮ್ಯೆಚುರ ಕಂಪನಿಗಳಲ್ಲಿ ಸಾಥ್ ನೀಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. ಪ್ರಶಸ್ತಿ ಪುರಸ್ಕಾರ ನೀಡಿವೆ.

## ತೋಟನಗೌಡ ಕಿತ್ತೂರ

ಗರುಡ ಸದಾಶಿವರಾಯ, ಯಲಿವಾಳಸಿದ್ಧಯ್ಯ, ದುರ್ಗಾದಾಸ ಮುಂತಾದ ಮಹಾನ್ ಕಲಾವಿದರೊಂದಿಗೆ ನಟಿಸಿದ ಯಲಬುರ್ಗಿಯ ತೋಟನ ಗೌಡ ಕಿತ್ತೂರ. ಹಲವಾರು ಹೆಸರಾಂತ ಕಂಪನಿಗಳಲ್ಲಿ ಅಭಿನಯಿಸಿ ವೃತ್ತಿಜೀವನ ಕಳೆದಿದ್ದಾರೆ.

## ಬುಡಕುಂಟಿ ಜಗನ್ನಾಥರಾವ್ ಪದಕಿ

ಸ್ವಾತಂತ್ರ್ಯ ಹೋರಾಟದೊಂದಿಗೆ ರಂಗ ಕಲೆಯ ಆರಾಧನೆಯನ್ನು ಮಾಡಿದ ಬುಡಕುಂಟಿಯ ಜಗನ್ನಾಥರಾವ್ ಪದಕಿ. ರಕ್ತರಾತ್ರಿಯ ಶಕುನಿ ಪಾತ್ರದಿಂದ ಪ್ರಸಿದ್ಧರಾದವರು. ಸ್ವತಃ ರಾಘವೇಂದ್ರ ಕೃಪಾ ಪೋಷಿತ ನಾಟಕ ಕಂಪನಿ ಕಟ್ಟಿ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರಲ್ಲದೆ ಗುಬ್ಬಿ, ಗುಡಗೇರಿ, ಸೂಡಿ, ಕಡಪಟ್ಟಿ ನಾಟಕ ಕಂಪನಿಗಳಲ್ಲಿ ನಟಿಸಿದ ಕೀರ್ತಿ ಇವರದು. ಗವಿಮಠದ ಶಿವಶಾಂತವೀರ ಸ್ವಾಮಿಗಳು ಇವರಿಗೆ ನಟಭೂಷಣ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

## ದಿ. ವೀರಣ್ಣ ಮಂಗಳೂರು

ಯಲಬುರ್ಗಿ ತಾಲೂಕಿನ ಮಂಗಳೂರಿನವರೇ ಆಗಿದ್ದ ವೃತ್ತಿ ನಾಟಕ ಕಂಪನಿಗಳಲ್ಲಿ ಮಂಗಳೂರು ವೀರಣ್ಣನವರ ಹೆಸರನ್ನು ಕೇಳದವರಿಲ್ಲ. ಆರಂಭದಲ್ಲಿ ತಳಕಲ್ ವೆಂಕರೆಡ್ಡಿ ಕಂಪನಿ ಮೂಲಕ ರಂಗ ಪ್ರವೇಶಿಸಿ ಗುಡಗೇರಿ, ಗುಬ್ಬಿವೀರಣ್ಣ ಕಂಪನಿಗಳಲ್ಲಿ ಹೆಸರು ಮಾಡಿದರು. ಗುಬ್ಬಿ ಕಂಪನಿಯಲ್ಲಿದ್ದಾಗ 'ದ್ರೌಪದಿ ವಸ್ತ್ರಾಪಹರಣ' ಶತದಿನೋತ್ಸವ ಆಚರಣೆಗೆ ಆಗಮಿಸಿದ ಹೊನ್ನಪ್ಪ ಭಾಗವತರು ಇವರ ಅಭಿನಯಕ್ಕೆ ಮಾರುಹೋದರು. ಇದರಿಂದ ಅನೇಕ ಚಲನಚಿತ್ರಗಳಲ್ಲಿ ನಟಿಸಿದ ವೀರಣ್ಣ ಅಲ್ಲಿಯ ವಾತಾವರಣಕ್ಕೆ ಒಗ್ಗಿಕೊಳ್ಳದೆ ಗ್ರಾಮಕ್ಕೆ ಆಗಮಿಸಿದಾಗ ಇವರ ಚಲನಚಿತ್ರದ ಅಭಿನಯ ಕಂಡು ಅನೇಕ ಸಂಘಸಂಸ್ಥೆಗಳು ಅಪಾರ ಗೌರವದಿಂದ ಸನ್ಮಾನಿಸಿ ಅಭಿಮಾನ ವ್ಯಕ್ತಪಡಿಸಿದರು. ಇಂಥವರೆಲ್ಲ ನಮ್ಮ ಕಣ್ಣ ಮುಂದಿಲ್ಲದಿದ್ದರೂ ನೆನಪು ಮಾತ್ರ ಅಚ್ಚಳಿಯದಂತೆ ಉಳಿಸಿದ್ದಾರೆ. ಇವರು ಗುಡಿಗೇರಿ ಬಸವರಾಜ ಕಂಪನಿಯಲ್ಲಿದ್ದಾಗ ಕಲ್ಪನಾರ ದುರಂತವನ್ನು ಕಣ್ಣಾರೆ ಕಂಡವರಾಗಿ ಈ ಲೇಖಕನ ಮುಂದೆ ಕರುಳು ಕರಗುವಂತೆ ಹೇಳಿದ್ದು ಅಚ್ಚಳಿಯದಂತೆ ಕಣ್ಣ ಮುಂದೆ ನಿಂತಿದೆ.

## ಮಲ್ಲಪ್ಪ ಬನ್ನಿಕೊಪ್ಪ

ಬನ್ನಿಕೊಪ್ಪ ಗ್ರಾಮದ ಮಲ್ಲಪ್ಪ ಬಾಳಪ್ಪ ಯಲಬುರ್ಗಿ ಕುಮಾರ ವಿಜಯ ನಾಟ್ಯಸಂಘ ಚಿತ್ರಗಿ, ಜಗದ್ಗುರು ರೇಣುಕಾಚಾರ್ಯ ನಾಟ್ಯಸಂಘ ಮತ್ತು ಹುಚ್ಚೇಶ್ವರ ನಾ.ಸಂ ಕಂಪನಿ ಮುಂತಾದವುಗಳಲ್ಲಿ ಪಾತ್ರಮಾಡುತ್ತ ಎನ್.ಎಸ್.ಜೋಶಿಯವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ರಾಜ್ಯ ನಾಟಕ ಅಕಾಡೆಮಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ.

## ಮಲ್ಲಪ್ಪ ಹಳ್ಳಿ

ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿರುವ ಯರೇಹಂಚಿನಾಳಿನ ಮಲ್ಲಪ್ಪ ಹಳ್ಳಿ ಏಕ ಪಾತ್ರಾಭಿನಯದಲ್ಲಿ ಹೆಸರು ಮಾಡಿದ್ದಾರೆ. ಏಳು ಜನಪ್ರಿಯ ನಾಟಕಗಳನ್ನು ರಚಿಸಿರುವರಲ್ಲದೆ ಉತ್ತರ ಪ್ರದೇಶದ ಪಿತೋರಘರ ಮತ್ತು ಬೆಂಗಳೂರಿನ ಉತ್ತರ ಕರ್ನಾಟಕ ಉತ್ಸವದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಮೆಚ್ಚುಗೆ ಪಡೆದಿದ್ದಾರೆ.

## ಟಿ.ಎಸ್. ಹೂಗಾರ

೫೬ ವರ್ಷದ ಟಿ.ಎಸ್. ಹೂಗಾರ ಕುಕನೂರಿನ ಸಮೀಪದ ಬಳಗೇರಿ ಗ್ರಾಮದವರು. ತಮ್ಮ ೧೮ನೆಯ ವಯಸ್ಸಿನಲ್ಲಿಯೆ ಗರತಿಯಶಾಪ ನಾಟಕದಲ್ಲಿ ಖಳನಾಯಕನ ಪಾತ್ರವಹಿಸಿ ರಂಗದ ಗುಂಗು ಹಿಡಿಸಿಕೊಂಡವರಾಗಿ ೪ನೆಯ ತರಗತಿಗೆ ಶಾಲೆಬಿಟ್ಟರೂ ನಾಟಕ ಓದುವ ಮತ್ತು ಬರೆಯುವ ಹುಚ್ಚಿನಿಂದ 'ಶೀಲ ಸುಟ್ಟಿತು, ಸೇಡು ತೀರಿತು', ಊರ ಹೊಕ್ಕ ಹುಲಿ, ಮಗನಿಂದ ತಾಯಿಗೆ ಮಾಂಗಲ್ಯ, ನಾಟಕ ಬರೆದು ಪ್ರಸಿದ್ಧರಾಗಿದ್ದಾರೆ. ಇವು ಮುದ್ರಣಗೊಂಡು ಬಾಗಲಕೋಟೆ, ಕೊಪ್ಪಳ ,ವಿಜಾಪುರ, ಧಾರವಾಡ ಮುಂತಾದ ಜಿಲ್ಲೆಗಳಲ್ಲಿ ಸಾಕಷ್ಟು ಪ್ರಯೋಗ ಕಂಡಿವೆ ಮತ್ತು ಮಹಾರಾಷ್ಟ್ರ ಗಡಿಭಾಗದಲ್ಲಿಯೂ ಜನಪ್ರಿಯವಾಗಿವೆ.

ದೇಸಾಯರ ದರ್ಬಾರ, ತಂಗಿ ತೀರಿಸಿದ ಋಣ ನಾಟಕಗಳು ಪ್ರಯೋಗಗೊಂಡು ಮುದ್ರಣ ಹಂತದಲ್ಲಿವೆ. ಹೂಗಾರರ ಸಾಧನೆಗಾಗಿ ೭೦ಕ್ಕೂ ಹೆಚ್ಚು ಸನ್ಮಾನಗಳಾಗಿವೆ

## ತಿಪ್ಪಣ್ಣ ನಾಯಕ

ಅದೇರೀತಿ ಮತ್ತೊಬ್ಬ ನಾಟಕಕಾರ ಕರ್ಕಿಹಳ್ಳಿಯ ತಿಪ್ಪಣ್ಣ ಆರ್ ನಾಯಕ (ಹೊಸಮನಿ) ೩೨ ವಯಸ್ಸಿನ ಯುವಕರಾದ ಇವರು ಬರೆದ ಈ ಮಗು ಯಾರದು? ಅರ್ಥಾತ್ ಅಪರಾಧಿ ನಾನಲ್ಲ ನಾಟಕ ತುಂಬಾ ಪ್ರಸಿದ್ಧಿ ಪಡೆದಿದೆ. ಚಕ್ರವ್ಯೂಹದ ಗಂಡುಗಲಿ ಪ್ರಯೋಗದ ಹಂತದಲ್ಲಿದೆ. ಸುತ್ತಲಿನ ಹವ್ಯಾಸಿ ಕಲಾವಿದರು ಇವರ ನಾಟಕಗಳನ್ನು ಸಾಕಷ್ಟು ಪ್ರಯೋಗಿಸಿದ್ದಾರೆ.

## ಮಹೇಶ ಮನ್ನಾಪುರ

ಹಿರೇಮ್ಯಾಗೇರಿಯ ಸ.ಪ್ರಾ.ಶಾ. ಮುಖ್ಯೋಪಾಧ್ಯಾಯರಾಗಿರುವ ಮಹೇಶ ಮನ್ನಾಪುರ ಚಿಕ್ಕವರಿದ್ದಾಗಲೇ ರಂಗಾಭಿರುಚಿ ಬೆಳೆಸಿಕೊಂಡು ಏಕಾಂಕ ನಾಟಕಗಳಲ್ಲಿ ಅಭಿನಯಿಸುತ್ತ ನಂತರ ರಾಯಚೂರಿನ ಸಮುದಾಯದಲ್ಲಿ ಬೀದಿ ನಾಟಕಗಳಲ್ಲಿ ನಟಿಸಿದ್ದಾರೆ. ಹಾಗೆಯೆ ಸಾಕ್ಷರ ಮತ್ತು ಪರಿಸರ ಕುರಿತ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಕೆಲವು ಸಿನಿಮಾಗಳಿಗೆ ಸಂಭಾಷಣೆ ಬರೆದು ಮತ್ತು ಪಾತ್ರವಹಿಸಿ ಸನ್ಮಾನಿತರಾಗಿದ್ದಾರೆ.

## ಅಭಿನಯ ಚತುರ ಶರಣಪ್ಪ ವಡಗೇರಿ

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕುಷ್ಟಗಿಯ ಶರಣಪ್ಪ ವಡಗೇರಿ ಜಿಲ್ಲೆಯಲ್ಲಿಯೆ ಅಪರೂಪದ ಕಲವಿದ. ೫ನೆಯ ತರಗತಿಯಲ್ಲಿರುವಾಗಲೇ ಸತ್ಯವಾನ ಸಾವಿತ್ರಿ ನಾಟಕದಲ್ಲಿ ಸಾವಿತ್ರಿ ಪಾತ್ರವಹಿಸುವ ಮೂಲಕ ರಂಗರುಚಿಯನ್ನು ಅನುಭವಿಸಿ ಮುಂದೆ ಪುಣ್ಯಭೂಮಿ ನಾಟಕದಲ್ಲಿ ಹಾಸ್ಯಪಾತ್ರಮಾಡಿ ಹೆಸರು ಪಡೆದರು.

ಜಾನಪದ ಹಾಡುಗಾರರಾದ ಶರಣಪ್ಪ ಕೂಲಿಯತಂಗಿ, ತಾಳಿಯ ತಕರಾರು, ಬಡವನ ಕಣ್ಣೀರು ಮುಂತಾದ ಬೀದಿ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಸಮುದಾಯದ ರಂಗತರಬೇತಿಯನ್ನು ತಿಂಗಳವರೆಗೆ ಪಡೆದು ರಾಷ್ಟ್ರೀಯ ಯೋಜನೆಯ ಬೀದಿ ನಾಟಕಗಳನ್ನು ೧೫ವರ್ಷಗಳಿಂದ ಪ್ರದರ್ಶಿಸುತ್ತ ಬಂದಿದ್ದಾರೆ. ಬಿ.ಬಸಲಿಂಗಯ್ಯನವರಿಂದ ತರಬೇತಿ ಪಡೆದ ಹೆಮ್ಮೆ ವಡಗೇರಿಯವರದ್ದು. ಬೆಂಗಳೂರಿನ ಯವನಿಕಾದಲ್ಲಿ ಒಂದುವರೆತಿಂಗಳು ರಂಗ ತಂತ್ರ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ರಾಷ್ಟ್ರೀಯ ನಾಟಕಶಾಲೆ ನವದೆಹಲಿಯಲ್ಲಿ ಧರೆಗಿಳಿದ ಗಾಂಧಿ ನಾಟಕದಲ್ಲಿ ಗಾಂಧೀಜಿ ಪಾತ್ರವಹಿಸಿ ಮೆಚ್ಚುಗೆ ಪಡೆದಿದ್ದಾರೆ. ಶಾಲಾದಿನಗಳಲ್ಲಿಯೆ ಉತ್ತಮ ನಟ ಪ್ರಶಸ್ತಿ ಪಡೆದ ಕೀರ್ತಿ ವಡಗೇರಿ ಬೆನ್ನಿಗಿದೆ.

## ಐ.ಡಿ.ಬಾಬು, ರುದ್ರಪ್ಪ ಮತ್ತು ಗುರುನಾಥ ಪತ್ತಾರ

ಕುಷ್ಟಗಿಯ ಮತ್ತೊಬ್ಬ ಕಲಾವಿದ ಐ.ಡಿ.ಬಾಬು ೬೦೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸಂಗಿತಗಾರರಾಗಿ, ಹಿನ್ನಲೆ ಗಾಯಕರಾಗಿ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದ ಖ್ಯಾತಿ ಇವರಿಗಿದೆ.

ಹಾಗೆಯೇ ಬೆನಕನಾಳಿನ ೭೦ ವರ್ಷದ ರುದ್ರಪ್ಪ ಮಾಸ್ತರ ಹಾರ್ಮೋನಿಯಂ ಸಂಗೀತಗಾರರಾಗಿ ೪೦ ವರ್ಷಗಳಿಂದ ನಾಟಕ ನಿರ್ದೇಶನ ಮಾಡುತ್ತ ಬಂದಿದ್ದಾರೆ. ಅದೇರೀತಿ ಹನುಮನಾಳಿನ ಗುರುನಾಥ ಪತ್ತಾರ ಗ್ರಾಮೀಣ ಪ್ರದೇಶದಲ್ಲಿ ಮೊಟ್ಟಮೊದಲಿಗೆ ತಿರುಗುವ ರಂಗಮಂದಿರ ಮಾಡಿ ರಮಗಭೂಮಿಯಲ್ಲಿ ದಾಖಲೆ ನಿರ್ಮಿಸಿದ್ದಾರೆ.

# ಗಂಗಾವತಿ ತಾಲೂಕಿನ ಕಲಾವಿದರು

## ಬಹುಮುಖ ಪ್ರತಿಭೆಯ ಸಿ.ಮಹಾಲಕ್ಷ್ಮಿ

ಗಂಗಾವತಿ ತಾಲೂಕಿನ ಕೇಸರಟ್ಟಿ ಗ್ರಾಮದ ಸಿ. ಮಹಾಲಕ್ಷ್ಮಿ ಎಂ.ಎ. ಪದವೀಧರೆಯಾಗಿದ್ದು ರಕ್ತರಾತ್ರಿ ನಾಟಕದಲ್ಲಿ ಬಾಲ ನಟಿಯಾಗಿ ರಂಗ ಪ್ರವೇಶಿಸಿ ೨೦ ವರ್ಷಗಳಿಂದ ಕಲಾಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಜಿಲ್ಲೆಯ ಬಹುಮುಖ ಪ್ರತಿಭೆಯ ಕಲಾವಿದೆಯಾಗಿದ್ದಾರೆ. ಗೋಳು ಮತ್ತು ಮಾರಿ ಎನ್ನುವ ನಾಟಕಗಳನ್ನು ರಚಿಸಿರುವ ಇವರು. ಬೆಳಕಿನೆಡೆಗೆ, ಇಟಗಿಭೀಮಾಂಬಿಕೆ, ಕಲ್ಯಾಣ ಕ್ರಾಂತಿ, ಅಕ್ಕಮಹಾದೇವಿ, ಬಸವ ಮಹಾಮಾನವ, ಮರವಿನ ಮಹಾಮರುಷ ಮುಂತಾದ ಪ್ರಸಿದ್ಧ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಹಾಗು ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ತಮ್ಮದೇ ಹೆಸರಿನ ಮಹಾಲಕ್ಷ್ಮೀ ಕಲಾ ಸಂಘ ರಚಿಸಿ ಅದರ ಅಧ್ಯಕ್ಷರಾಗಿ ೨೦ ವರ್ಷಗಳಿಂದ ಹಲವಾರು ಕಡೆ ತಮ್ಮ ತಂಡದೊಂದಿಗೆ ಹೋಗಿ ನಾಟಕ ಪ್ರದರ್ಶನಮಾಡಿದ್ದಾರೆ. ಇವರ ತಂಡದಲ್ಲಿ ಬರೀ ಮಹಿಳೆಯರೇ ಇರುವುದು ಜಿಲ್ಲೆಯಲ್ಲಿ ಇದೊಂದೇ ಆಗಿದೆ. ಅದರಲ್ಲಿ ಪ್ರಮುಖರೆಂದರೆ ಕು.ಪ್ರವೀಣಾ,ಪುಷ್ಪಾ ಗಂಡ ಮಂಜುನಾಥ ಮತ್ತು ಬಸಮ್ಮ, ಈರಮ್ಮ, ನೀಲಾ, ಸುವರ್ಣ, ಜ್ಯೋತಿ, ಕುಮಾರಿಯರಾದ ಭವಾನಿ, ಸ್ನೇಹಾ, ಸ್ವಾತಿ, ಪ್ರತಿಮಾ, ಬಾಳಮ್ಮ, ಅಶ್ವಿನಿ ಮುಂತಾದವರು.

ಮಹಾಲಕ್ಷ್ಮೀ ರಚಿಸಿ ನಿರ್ದೇಶಿಸಿದ ಗೋಳು ನಾಟಕಕ್ಕೆ ತಾಲೂಕು, ಜಿಲ್ಲಾ ಮತ್ತು ವಿಭಾಗಮಟ್ಟದಲ್ಲಿ ಉತ್ತಮಕಥೆ, ನಿರ್ದೇಶನ, ನಟಿ ಪ್ರಶಸ್ತಿ ದೊರೆತಿದೆ. ೨೦೧೦-೧೧ರಲ್ಲಿ ಕೊಪ್ಪಳ ಜಿಲ್ಲಾ ನಾಟಕೋತ್ಸವದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ರಂಗವಿಭೂಷಣ, ೨೦೧೧-೧೨ರಲ್ಲಿ ಕಲಾಶ್ರೀ, ಕರ್ನಾಟಕ ಭೂಷಣ, ಕಿತ್ತೂರ ರಾಣಿ ಚನ್ನಮ್ಮ ಹೀಗೆ ಹತ್ತಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಮಹಾಲಕ್ಷ್ಮೀ ಜಿಲ್ಲೆಯ ಅಪರೂಪದ ಪ್ರತಿಭೆ.

## ನಾಟಕಕಾರ, ನಟ ಮಲ್ಲೇಶ ಕೋಟೆ

ಕನಕಗಿರಿಯ ಮಲ್ಲೇಶಕೋಟೆ ೭ನೆಯ ತರಗತಿ ಓದುವಾಗಲೇ ರಂಗಾಸಕ್ತಿಯನ್ನು ಬೆಳಸಿಕೊಂಡವರು. ಬಿ.ಕಾಂ. ಬಿಎಡ್ ಪಾಸಾಗಿರುವ ಇವರು ೧೯೮೩ರಲ್ಲಿ

ಸರ್ಪಸ್ನೇಹ ನಾಟಕದಲ್ಲಿ ಖಳನಾಯಕ ಕೃಷ್ಣನ ಪಾತ್ರವಹಿಸಿ ಹೆಸರು ಮಾಡಿದರು. ನಂತರ ಕರ್ತವ್ಯದ ಕಾಣಿಕೆ, ಭಾರತೀಯ ಬ್ರಿಟೀಷರು, ಸಾಧ್ವಿ ಸಾವಿತ್ರಿ, ರಾಣಿ ಚೆನ್ನಮ್ಮ, ಗೌಡ್ರ ಗದ್ಲ ಮುಂತಾದ ನಾಟಕಗಳಲ್ಲಿ ಹಾಸ್ಯ ಪಾತ್ರದಿಂದ ಹಿಡಿದು ಎಲ್ಲ ಪಾತ್ರಗಳನ್ನು ಅಭಿನಯಿಸಿದ್ದಾರೆ.

ಎಸ್.ಎಸ್.ಎಲ್.ಸಿ ಓದುವಾಗಲೇ ನಾಟಕ ಬರೆಯುವ ಗೀಳು ಅಂಟಿಸಿಕೊಂಡ ಮಲ್ಲೇಶ ಶ್ರೀ ಕನಕಾಚಲಪತಿ ವೈಭವ, ಶಿವಶರಣ ಮಡಿವಾಳ ಮಾಚಯ್ಯ, ಭಕ್ತಕನಕದಾಸ, ಮೋಳಿಗಮಾರಯ್ಯ, ಮಾತುಕೊಟ್ಟ ಮಗ, ಉಡಚಪ್ಪನಾಯಕ, ಭೂಲೋಕದಲ್ಲಿ ದೇವೇಂದ್ರ ಹೀಗೆ ಐತಿಹಾಸಿಕ, ಪೌರಾಣಿಕ ಸಾಮಾಜಿಕ ಮತ್ತು ಭಕ್ತಿಪ್ರಧಾನವಾದ ಹಲವಾರು ನಾಟಕಗಳನ್ನು ರಚಿಸಿದ್ದಾರೆ.

'ಕನಕಾಚಲಕನ್ನಡ ಕಲಾಸಿರಿ' ಎನ್ನುವ ತಮ್ಮದೇ ಆದ ಕಲಾತಂಡವನ್ನು ರಚಿಸಿಕೊಂಡು ರಾಜ್ಯದ ಬೇರೆ ಬೇರೆ ಕಡೆ ಹೋಗಿ ನಾಟಕ ಪ್ರದರ್ಶಿಸುವ ಮಲ್ಲೇಶ್ ತಂಡದಲ್ಲಿ ದುರ್ಗಾದಾಸ ಯಾದವ, ಡಾ. ಅರವಟಗಿಮಠ, ಹನುಮೇಶ ಮಹಿಪತಿ, ಹನುಮಂತಪ್ಪ ವಕೀಲ, ಲಿಂಗಪ್ಪ ಸುದ್ದು ವಕೀಲ, ಪಂಪಣ್ಣ ಕಿನ್ನಾಳ, ಸೋಮಶೇಖರಯ್ಯ ಸ್ವಾಮಿ, ಶಿವಕುಮಾರ, ಗಂಗಾವತಿ, ಚಂದ್ರಶೇಖರ ಲಿಂಗದಳ್ಳಿ, ಪಂಪನಗೌಡ, ವೆಂಕಟೇಶ ಕುಲ್ಕರ್ಣಿ, ರೇಖಾ.ಟಿ, ರಾಧಾ ಉಮೇಶ, ಮಹಾಬಳೇಶ, ಅಯ್ಯಪ್ಪ, ರಾಜಶೇಖರ ಹೀಗೆ ೨೧ ಜನ ಕಲಾವಿದರಿದ್ದಾರೆ.

ನಟ ಸುಧೀರ, ಡಿಂಗ್ರಿ ನಾಗರಾಜ, ಸಾಧುಕೋಕಿಲಾ, ಕರಿಬಸವಯ್ಯ, ಸತ್ಯಜಿತ, ಬ್ಯಾಂಕ್ ಜನಾರ್ಧನ, ವೆಂಕಿ ಮುಂತಾದ ಸಿನಿಮಾ ನಟರ ಜತೆ ನಟಿಸಿದ ಖ್ಯಾತಿ ಮಲ್ಲೇಶ್‌ಗಿದೆ. ಇವರ ಸಾಧನೆಗಾಗಿ ರಂಗಚೇತನ, ರಂಗಕರ್ಮಿ, ಕಲಾಭೂಷಣ, ಮಹಾಂತಶ್ರೀ ಮುಂತಾದ ಪ್ರಶಸ್ತಿಗಳನ್ನು ಸಂಘ ಸಂಸ್ಥೆಗಳು ನೀಡಿವೆ.

## ರಂಗಗೀತೆ ಗಾಯಕ ಗವೀಶ

ನಾಟಕಗಳಿಗೆ ಗಂಡು ಮತ್ತು ಹೆಣ್ಣು ಸ್ವರದಲ್ಲಿ ಹಿನ್ನಲೆ ಹಾಡುವ ಮೂಲಕ ಪ್ರಸಿದ್ಧರಾದ ಬಸಾಪಟ್ಟಣದ ಗವಿಸಿದ್ಧಪ್ಪ ಲಿಂಗಪ್ಪ ಮಡಿವಾಳರ ಕಾಂಗೋ ಡ್ರಮ್‌ಸೆಟ್ ಬಾರಿಸುವದರಲ್ಲಿಯೂ ಪರಿಣತಿ ಸಾಧಿಸಿದ್ದಾರೆ. ಯುವಜನಮೇಳ ಗ್ರಾಮೀಣ ನಾಟಕೋತ್ಸವ, ಆನೆಗುಂದಿ ಉತ್ಸವ ಮತ್ತುಹವ್ಯಾಸಿ ತಂಡಗಳ ನಾಟಕಗಳಲ್ಲಿ ತಮ್ಮ ವಿಶಿಷ್ಟ ರಂಗಗೀತೆ ಹಾಡಿನ ಮೂಲಕ ಗಮನ ಸೆಳೆದಿರುವ ಗವೀಶ ಆಂಧ್ರ, ಮಹಾರಾಷ್ಟ್ರ ಮುಂತಾದೆಡೆ ಕಳೆದ ಹನ್ನೊಂದು ವರ್ಷಗಳಿಂದ ರಂಗಸೇವೆ ಸಲ್ಲಿಸುತ್ತ ಬಂದಿದ್ದಾರೆ.

## ಮಾರುತಿ ಐಲಿ

ಗಂಗಾವತಿಯ ನೇಕಾರ ಸಮುದಾಯದ ೫೫ವರ್ಷದ ಮಾರುತಿ ಐಲಿ ೧೨ವರ್ಷದವರಿದ್ದಾಗ ಗಿರಿಜಾ ಕಲ್ಯಾಣ ದೊಡ್ಡಾಟದಲ್ಲಿ ಸ್ತ್ರೀ ಪಾತ್ರ ವಹಿಸುವ ಮೂಲಕ ಬಣ್ಣದ ಗೀಳು ಅಂಟಿಸಿಕೊಂಡು ನಂತರ ಕುರುಕ್ಷೇತ್ರ, ಕನಕಾಚಲಪತಿ ವೈಭವ, ಧನಿಕರ

ದೌರ್ಜನ್ಯ, ಆಶಾಲತಾ ಹೀಗೆ ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಖ್ಯಾತರಾಗಿದ್ದಾರೆ. ಇವರಿಗೆ ರಂಗತೋರಣ ನಾಟಕೋತ್ಸವದಲ್ಲಿ ಸನ್ಮಾನ ಮತ್ತು ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ದೊರೆತಿವೆ. ಈಗಲೂ ಪ್ರತಿವರ್ಷ ಒಂದೆರಡು ನಾಟಕ ಆಡುವದನ್ನು ರೂಢಿಸಿಕೊಂಡಿದ್ದಾರೆ.

## ಬಸವರಾಜ ಐಲಿ

ಮತ್ತೊಬ್ಬ ಅದೇ ನೇಕಾರ ಕುಟುಂಬಕ್ಕೆ ಸೇರಿದ ಬಸವರಾಜ ಐಲಿ ಶ್ರೀ ನೀಲಕಂಠೇಶ್ವರ ಸಾಂಸ್ಕೃತಿಕ ಕಲಾವೇದಿಕೆ ರಚಿಸಿ ಅದರ ಪ್ರಧಾನಕಾರ್ಯದರ್ಶಿಯಾಗಿ ರಕ್ತರಾತ್ರಿ ನಾಟಕದಲ್ಲಿ ಭೀಮನ ಪಾತ್ರವಹಿಸುವ ಮೂಲಕ ಗಮನ ಸೆಳೆದು ಧನಿಕರ ದೌರ್ಜನ್ಯ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರಲ್ಲದೆ. ಇವರ ತಂಡ ಪ್ರತೀ ವರ್ಷ ಹೊಸಹೊಸ ನಾಟಕ ಪ್ರಯೋಗಿಸುವದರಲ್ಲಿ ನಿರತವಾಗಿರುತ್ತದೆ. ಕೊಪ್ಪಳ ಜಿಲ್ಲಾ ನಾಟಕೋತ್ಸವದಲ್ಲಿ ಸನ್ಮಾನ, ಬಸವೇಶ್ವರ ಸದ್ಭಾವನ ಮತ್ತು ಮೈಸೂರಲ್ಲಿ ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರ ಮುಡಿಗೇರಿವೆ

## ಡ್ರಾಮಾ ಸೀನ್ಸ್ ಮಾಲಿಕ ಎಸ್. ರಮೇಶ

ಗಂಗಾವತಿಯ ನೀಲಕಂಠೇಶ್ವರ ಸಾಂಸ್ಕೃತಿಕ ಕಲಾವೇದಿಕೆಯ ಅಧ್ಯಕ್ಷರಾಗಿರುವ ಎಸ್.ರಮೇಶ ಬಹುಮುಖ ಪ್ರತಿಭೆಯ ಕಲಾವಿದ. ನಾಟಕಗಳಲ್ಲಿ ಅಭಿನಯಿಸುವದಲ್ಲದೆ, ನೃತ್ಯಕಲಾವಿದನಾಗಿಯೂ ಹೆಸರು ಮಾಡಿದ್ದಾರೆ. ತಮ್ಮದೇ ಆದ 'ನೇತ್ರಾ ಮಲ್ಟಿಪರ್‌ಪೋಸ್ ಡ್ರಾಮಾಸೀನ್ಸ್' ಮಾಲಿಕರಾಗಿ ನಿರಂತರ ರಂಗಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಳೆದ ೩೨ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಇವರಿಗೆ ರಂಗತೋರಣ, ಬನಶ್ರೀ ಮುಂತಾದ ಪ್ರಶಸ್ತಿ ಸನ್ಮಾನಗಳು ದೊರೆತಿವೆ.

## ಮಹಾಬಳೇಶ್ವರ ಆಕಳಕುಂಪಿ

ಪುರಾಣಪಟುವಾದ ಗಂಗಾವತಿಯ ಮಹಾಬಳೇಶ್ವರ ತಂ.ಲಕ್ಷ್ಮಣ ಗೌಡ ಆಕಳಕುಂಪಿ. ಮಲ್ಲೇಶ ರಚಿಸಿದ ಭಕ್ತಕನಕದಾಸ ನಾಟಕದಲ್ಲಿ ತಾತಾಚಾರ್ಯರ ಪಾತ್ರವಹಿಸಿ ಉತ್ತಮ ಅಭಿನಯ ನೀಡಿದರಲ್ಲದೆ ಹಲವಾರು ನಾಟಕಗಳಲ್ಲಿ ಪಾತ್ರವಹಿಸಿರುವ ಇವರಿಗೆ ಸಾಕಷ್ಟು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

## ಶಿರವಾರ ವಿರುಪಾಕ್ಷಪ್ಪ

ರಂಗಭೂಮಿಯ ಹಿರಿಯ ಕಲಾವಿದ ದಿ.ನಾಗಪ್ಪ ಶಿರವಾರ ಇವರ ಪುತ್ರ ವಿರೂಪಾಕ್ಷಪ್ಪ ಶಿರವಾರ ದಿ.೧-೬-೧೯೭೪ರಲ್ಲಿ ಜನಿಸಿದ್ದಾರೆ. ಹೈಸ್ಕೂಲಿನಲ್ಲಿ ನಾಟಕ ಆಡುವ ಮೂಲಕ ರಂಗಾಸಕ್ತಿ ಬೆಳಸಿಕೊಂಡು ೩೦ ವರ್ಷಗಳಿಂದ ರಂಗಭೂಮಿಯಲ್ಲಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ.

ರಕ್ತರಾತ್ರಿ, ಕುರುಕ್ಷೇತ್ರ ನಾಟಕಗಳಲ್ಲಿ ಶಕುನಿ ಮತ್ತು ದುಶ್ಯಾಸನ ಪಾತ್ರಗಳಲ್ಲಿ ಗಮನಸೆಳೆದಿದ್ದಾರೆ. ಧನಿಕರ ದೌರ್ಜನ್ಯ, ಸೇಡಿನ ಕಿಡಿ, ತವರಿನ ತಾಳಿ, ಆಶಾಲತಾ ಹೀಗೆ ಹತ್ತಾರು ನಾಟಕಗಳಲ್ಲಿ ಉತ್ತಮ ಅಭಿನಯ ನೀಡಿದ ವಿರೂಪಾಕ್ಷಪ್ಪನವರಿಗೂ ಬನಶ್ರೀ ಸುವರ್ಣಕರ್ನಾಟಕ ಮುಂತಾದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಪುಟಸಂಖ್ಯೆಯ ವಿಸ್ತಾರದ ಭಯಕ್ಕಾಗಿ ಉಳಿದಂತೆ ಗಂಗಾವತಿಯ ವಾಣಿಶ್ರೀ ಎಸ್. ಪಾಡೀಲ, ರಮೇಶ ಗಬ್ಬೂರ ಮತ್ತು ಎಸ್.ಬಿ. ಗೊಂಡ ಬಾಳ ಸಂಪಾದಿಸಿರುವ 'ಕಲಾಸೌರಭ' ಗಂಗಾವತಿ ತಾಲೂಕಿನ ಕಲಾವಿದರ ಪರಿಚಯ ಪುಸ್ತಕದಿಂದ ರಂಗಭೂಮಿಯಲ್ಲಿ ಹವ್ಯಾಸಿ ಕಲಾವಿದರಾಗಿ ಸೇವೆ ಸಲ್ಲಿಸಿದ ಕೆಲವು ಮುಖ್ಯ ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕ್ರಮವಾಗಿ ಮಾಡಲಾಗಿದೆ.

**೧. ಷಣ್ಮುಖಪ್ಪ ಮಾಸ್ತರ–** ಆಚಾರನರಸಾಪುರದ ಷಣ್ಮುಖಪ್ಪ ಮಾಸ್ತರ ಏಳನೆಯ ತರಗತಿ ಪಾಸಾಗಿ ಕೃಷಿಕಾಯಕ ಮಾಡುತ್ತ ಖ್ಯಾತ ಸಂಗೀತ ನಿರ್ದೇಶಕರಾದ ಕಂಪ್ಲಿಯ ವಾದಿರಾಜ ಅವರಲ್ಲಿ ಹಾರ್ಮೋನಿಯಂ ಕಲಿತು. ಜಿಲ್ಲೆಯಲ್ಲಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಹೋಗಿ ಪೌರಾಣಿಕ ಐತಿಹಾಸಿಕ, ಸ್ಹಾಮಾಜಿಕ ಹೀಗೆ ನೂರಾರು ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿ ಜೀವತುಂಬಿದ್ದಾರೆ. ಇದೀಗ ಅವರಿಗೆ ೭೫ವರ್ಷ ವಯಸ್ಸಾಗಿದೆ.

**೨. ಸುನಿತಾ ಪಿ.–** ರಾಷ್ಟ್ರಪತಿ ಅಬ್ದುಲ್ ಕಲಾಂರಿಂದ ೨೦೦೨ರಲ್ಲಿ ರಾಷ್ಟ್ರಪ್ರಶಸ್ತಿ ಸ್ವೀಕರಿಸಿದ ಸುನೀತಾ ಪಿ. ಹೇರೂರ ಗ್ರಾಮದ ಪಿ.ರಾಮಕೃಷ್ಣರ ಪತ್ನಿ ಜನಿಸಿದ್ದು ದಿ.೧೦-೩-೧೯೬೨ ಹಿಂದುಸ್ತಾನಿ ಸಂಗೀತದಲ್ಲಿ ಸೀನಿಯರ್‌ನಲ್ಲಿ ರ್‍ಯಾಂಕ್‌ನಲ್ಲಿ ಪಾಸಾಗಿರುವ ಇವರು. ಬಸವ ಮಹಾಮಾನವ ನಾಟಕ ಮತ್ತು ಶಿವಶರಣೆ ಅಕ್ಕಮಹಾದೇವಿ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಗಮನ ಸೆಳೆದಿದ್ದಾರೆ ಹಾಗೂ ಅನೇಕ ನಾಟಕಗಳಿಗೆ ಹಿನ್ನಲೆ ಹಾಡಿದ್ದಾರೆ.

**೩. ಶರಣಪ್ಪ–** ಸಿದ್ಧಾಪುರದ ದೈಹಿಕ ಶಿಕ್ಷಕ ಶರಣಪ್ಪ ಎಸ್.ವಿ.ಪಾಟೇಲರ ಬಾಳನೌಕೆ, ಸಂಶಯದಸುಳಿ, ಡಾಚಿರಂಜೀವ, ಗುಡದೂರು ಗುರುದೇವ ನಾಟಕಗಳಲ್ಲದೆ ರಕ್ತರಾತ್ರಿ ಮುಂತಾದ ಪೌರಾಣಿಕ ನಾಟಕಗಳಲ್ಲಿ ಪ್ರಮುಖ ಪಾತ್ರವಹಿಸಿ ಅತ್ಯುತ್ತಮ ಅಭಿನಯ ನೀಡಿದ್ದಾರೆ.

**೪. ಶಿವಪ್ಪ ಹುಳ್ಳಿ–** ನಾಟಕಗಳಿಗೆ ಹಿನ್ನಲೆ ಗಾಯಕರಾಗಿ ಸಂಗೀತವನ್ನೆ ತಮ್ಮ ವೃತ್ತಿಯಾಗಿಸಿಕೊಂಡಿರುವ ವಡ್ರಟ್ಟಿ ಗ್ರಾಮದ ಶಿವಪ್ಪಹುಳ್ಳಿ ಹವ್ಯಾಸಿ ಕಲಾತಂಡಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

**೫. ಶಂಕರ ಬಿನ್ನಾಳ–** ಮಧ್ಯಪ್ರದೇಶದ ಕೈರಾಘಡ ವಿ.ವಿ.ಯಿಂದ ಎಂ.ಮ್ಯೂಜಿಕ್ ಪದವಿ ಪಡೆದಿರುವ ಶಂಕರ ಬಿನ್ನಾಳ. ಕನಕಗಿರಿಯಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದಿ.೧-೧೨-೧೯೬೮ರಲ್ಲಿ ಜನಿಸಿದ ಇವರು ಪುಟ್ಟರಾಜಗವಾಯಿಗಳ ಶಿಷ್ಯರಾಗಿ ತಬಲಾ ನುಡಿಸುವದನ್ನು ಕಲಿತು. ಅನೇಕ ಪೌರಣಿಕ, ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿ ಖ್ಯಾತರಾಗಿದ್ದಾರೆ. ತಬಲಾ

ಚತುರ, ತಬಲಾ ಮಾಂತ್ರಿಕರ ಪ್ರಶಸ್ತಿ ಪಡೆದಿರುವ ಇವರಿಗೆ ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ.

೬. **ಸಣ್ಣಪ್ಪ ವಿಶ್ವಕರ್ಮ**– ಹಿರೇ ಜಂತಗಲ್ ಗ್ರಾಮದ ೪೫ ವರ್ಷದ ಸಣ್ಣಪ್ಪ ವಿಶ್ವಕರ್ಮ ತಬಲಾವಾದನದಲ್ಲಿ ಪರಿಣತಿ ಸಾಧಿಸಿದರಲ್ಲದೆ ಹವ್ಯಾಸಿ ನಾಟಕ ಕಂಪನಿಗಳಿಗೆ ತಬಲ ನುಡಿಸಿ ಮೆಚ್ಚುಗೆ ಪಡೆದ ಇವರಿಗೆ ಅನೇಕ ಮಠ ಮಾನ್ಯಗಳು ಸನ್ಮಾನಿಸಿವೆ.

೭. **ವೀಣಾ ಮುದುಗಲ್**– ಟಿ.ಎ.ಪಿ.ಎಂ.ಸಿ ಯಲ್ಲಿ ಟೈಪಿಸ್ಟ್ ಆಗಿರುವ ೫೭ ವರ್ಷದ ವೀಣಾ ವಿದ್ಯಾರ್ಥಿದೆಸೆಯಿಂದಲೇ ಸಂಗೀತಾಸಕ್ತಿ ಬೆಳಸಿಕೊಂಡವರು. ಇವರು ರಮೇಶ ಧರ್ಮಟ್ಟಿ ರಚಿಸಿ ನಿರ್ದೇಶಿಸಿದ ಅತ್ತೆಯ ಗಂಟು ಮತ್ತು ಬಸವ ಮಹಾಮಾನವ ನಾಟಕಗಳಲ್ಲಲ್ಲದೆ ಎಸ್.ವಿ. ಪಾಟೀಲರ ಮತ್ಸರ ಮುಂತಾದ ಹಲವಾರು ನಾಟಕಗಳಲ್ಲಿ ನಟಿಸಿದ್ದಾರೆ.

೮. **ವಿರೂಪಾಕ್ಷಪ್ಪ ಇಟಗಿ**– ತಮ್ಮ ೧೪ನೆಯ ವಯಸ್ಸಿನಲ್ಲಿಯೆ ಶ್ರೀ ಪಂಚಾಕ್ಷರಿಗವಾಯಿಗಳ ನಾಟ್ಯಸಂಘ ಸೇರಿದ ವಿರೂಪಾಕ್ಷಪ್ಪ ಇಟಗಿ ಗುಂಡಮ್ಮ ಕ್ಯಾಂಪಿನಲ್ಲಿ ೧೯೪೫ರಲ್ಲಿ ಜನ್ಮ ತಳೆದವರು. ೧೨ ವರ್ಷ ಅನೇಕ ನಾಟಕಗಳಲ್ಲಿ ಅಭಿನಯಿಸಿ ನಂತರ ಸಂಗೀತ ಕಲಿತು ಗಾನಾನಂದ, ಗಾನಪಟು ಮತ್ತು ಗಾನರತ್ನ ಮುಂತಾದ ಪ್ರಶಸ್ತಿ ಪಡೆದು. ಹಂಪಿ ಕ.ವಿ.ವಿ ಉಲ್ಲಿ ಸಂಗೀತ ಸಹಾಯಕರೆಂದು ಸೇವೆ ಸಲ್ಲಿಸಿದ್ದಾರೆ.

೯. **ವೀರೇಶ ಕಲ್ಮಠ**– ಹೊಸಳ್ಳಿಯ ೬೩ ವರ್ಷದ ವೀರೇಶ ಕಲ್ಮಠ ತಬಲಾ ವಾದನವನ್ನೆ ವೃತ್ತಿಯಾಗಿಸಿಕೊಂಡು ೨೦೦೦ಕ್ಕೂ ಹೆಚ್ಚು ನಾಟಕಗಳಿಗೆ ತಬಲಾ ನುಡಿಸಿದ ಹೆಮ್ಮೆ ಇವರದು. ಹಲವಾರು ಸಂಘಸಂಸ್ಥೆಗಳಿಂದ ಸನ್ಮಾನ ಪಡೆದಿದ್ದಾರೆ.

೧೦. **ಮುರುಘೇಂದ್ರ ಗವಾಯಿ**– ಗವಿಮಠದಲ್ಲಿ ವೀರೇಶ ಹಿಟ್ನಾಳ, ದೇವೆಂದ್ರ ಕುಮಾರ ಪತ್ತಾರ ಅವರಿಂದ ಸಂಗೀತದಲ್ಲಿ ವಿದ್ವತ್ ಮಾಡಿ ನವಲಿ ಸ.ಪ್ರೌ.ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿರುವ ಇವರು ಸಾಕಷ್ಟು ಹವ್ಯಾಸಿ ನಾಟಕಗಳಿಗೆ ಸಂಗಿತ ನಿರ್ದೇಶನ ಮಾಡುತ್ತ ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

೧೧. **ಮಹಾಬಲೇಶ್ವರ ಹಾಸಿನಾಳ್**– ವಕೀಲ ವೃತ್ತಿಯಲ್ಲಿದ್ದರೂ ಬಾಲ್ಯದಿಂದಲೇ ರಂಗಭೂಮಿ ಮತ್ತು ಸಂಗೀತದಲ್ಲಿ ಅಪಾರ ಆಸಕ್ತಿಯನ್ನು ಬೆಳಸಿಕೊಂಡು ಬಂದಿದ್ದ ವಿರೂಪಾಪುರದ ಮಹಾಬಲೇಶ್ವರ ಸತಿಸತ್ವ ಪರೀಕ್ಷೆಯಲ್ಲಿ ಸ್ತ್ರೀ ಪಾತ್ರದಲ್ಲಿ ಗಮನ ಸೆಳೆದರೆ ರಕ್ತರಾತ್ರಿಯಲ್ಲಿ ಶ್ರೀ ಕೃಷ್ಣನಾಗಿ ಉತ್ತಮ ಅಭಿನಯ ನೀಡಿದ್ದಾರೆ. ಹಾಗೆಯೆ ಪೃಥ್ವಿಪುತ್ರ ಮುಂತಾದ ನಾಟಕಗಳಲ್ಲಿ ಪಾತ್ರದ ಜತೆಗೆ ಹಿನ್ನೆಲೆ ಹಾಡಿದ್ದಾರೆ. ಮೈಸೂರು ದಸರಾ, ಹಾರೋಗೆರೆ ಪೌರಾಣಿಕ ನಾಟಕೋತ್ಸವ, ಶಿವಮೊಗ್ಗದ ಸಹ್ಯಾದ್ರಿ ಉತ್ಸವಗಳಲ್ಲಿ ನಾಟಕ ಪ್ರದರ್ಶನ ನೀಡಿ ಮೆಚ್ಚುಗೆ ಪಡೆದಿದ್ದಾರೆ.

**೧೨. ಮಹಾಬಲೇಶ್ವರಪ್ಪ ನಾಗಲೀಕರ್**– ಬರಗೂರಿನ ೬೪ ವಯಸ್ಸಿನ ಇವರು ಏಕಲವ್ಯನಂತೆ ಸ್ವಂತ ತಬಲಾ ವಾದನ ಕಲಿತು ಸ್ಥಳೀಯ ಹವ್ಯಾಸಿ ನಾಟಕ ತಂಡಗಳಲ್ಲಿ ತಬಲಾ ವಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**೧೩. ಜಿ. ನಾಗೇಶ್ವರ ರಾವ್**– ಮೂಲತಃ ಆಂಧ್ರಪ್ರದೇಶದವರಾದ ಇವರು ಕಳೆದ ೪೦ ವರ್ಷಗಳಿಂದ ಇಲ್ಲಿಯ ವಡ್ಡರಹಟ್ಟಿಯಲ್ಲಿ ವಾಸವಾಗಿದ್ದಾರೆ. ವೀರೇಶ್ವರ ಪುಣ್ಯಾಶ್ರಮ ಗದಗಿನಲ್ಲಿ ಹಾರ್ಮೋನಿಯಂ ಕಲಿತು ಹಲವಾರು ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರಲ್ಲದೆ. ನಟರಾಗಿ ಶಿವಲಿಂಗೇಶ್ವರ ಮಹಾತ್ಮೆ, ಗುಡದೂರು ಗುರುದೇವ. ಮಹಾಮಹಿಮಗವಿಸಿದ್ಧೇಶ್ವರ ಆಯ್ದಕ್ಕಿ ಲಕ್ಕಮ್ಮ ಮುಂತಾದ ನಾಟಕಗಳಲ್ಲಿ ಅಮೋಘ ಅಭಿನಯ ನೀಡಿದ್ದಾರೆ.

**೧೪. ಜಿ. ಹುಸೇನ ಸಾಬ ಮಾಸ್ತರ**– ಗುಂಡೂರ ಗ್ರಾಮದ ೭೩ ವಯಸ್ಸಿನ ಕೆ. ಹುಸೇನ ಸಾಬ ೧೯೫೩ರಲ್ಲಿ ಗಿರಿಜಾ ದೊಡ್ಡಾಟದಲ್ಲಿ ಬಾಲಕೃಷ್ಣನಾಗಿ ಬಣ್ಣದ ಬದುಕಿಗೆ ಕಾಲಿಟ್ಟರು. ಖ್ಯಾತ ರಂಗನಟ, ನಿರ್ದೇಶಕ ಭೋಗಪ್ಪ ಮಾಸ್ತರವರಲ್ಲಿ ಶಿಷ್ಯತ್ವ ಸ್ವೀಕರಿಸಿ ಹಾರ್ಮೋನಿಯಂ ಕಲಿಯುತ್ತ ರಕ್ಷಾಬಂಧನ, ಮುದುಕನ ಮದುವೆ, ಅಣ್ಣತಂಗಿ ಮುಂತಾದ ನಾಟಕಗಳಲ್ಲಿಹಾಸ್ಯಪಾತ್ರಮಾಡಿ ಹಲವಾರು ನಾಟಕಗಳಿಗೆ ಸಂಗೀತ ನೀಡಿದರಲ್ಲದೆ ಹಣೆಬರಹಕ್ಕೆ ಹೊಣೆಯಾರು?, ಗಂಡ ಬಿಟ್ಟ ಗರತಿ, ಅತ್ತಿಗೆಯೇ ಪ್ರೇಮದ ಜ್ಯೋತಿ ಮುಂತಾದ ಅನೇಕ ಪ್ರಸಿದ್ಧ ನಾಟಕಗಳನ್ನು ರಚಿಸಿ ಪ್ರಯೋಗಿಸಿ ಪ್ರಕಟಿಸಿದ್ದಾರೆ. ಇವು ಹಳ್ಳಿ ಹಳ್ಳಿಗಳಲ್ಲಿ ಪ್ರಯೋಗಗೊಂಡಿವೆ. ನಾಟಕ ಅಕಾಡಿಮಿಯಿಂದ ವಿಜಯಪುರದಲ್ಲಿ ನಡೆದ ರಂಗಸಂಭ್ರಮದಲ್ಲಿ ಇವರನ್ನು ಸನ್ಮಾನಿಸಲಾಗಿದೆ. ಕಲಾವಿದರ ಮಾಸಾಶನ ಪಡೆಯುತ್ತಿದ್ದಾರೆ.

**೧೫. ಜಿ. ಶಿವಲಿಂಗಪ್ಪ**– ಶಿವಶರಣರ ಪಾತ್ರಗಳಿಗೆ ಜೀವ ತುಂಬುವ ಇವರು ಜನಿಸಿದ್ದು ದಿ.೧–೬–೧೯೫೬, ಹಿರೇಜಂತಕಲ್‌ನಲ್ಲಿ ಎಂ.ಎ ಪದವೀಧರರಾಗಿ ರಾಷ್ಟ್ರೀಯ ಬಸವದಳದ ಕಾರ್ಯದರ್ಶಿಯಾದ ಇವರು ಬಸವ ಮಹಾಮಾನವ ನಾಟಕದಲ್ಲಿ ಅಲ್ಲಮ ಪ್ರಭುವಿನ ಪಾತ್ರವನ್ನು ಮಾಡಿ ಮೆಚ್ಚುಗೆ ಪಡೆದು ಶರಣೆ ಆಯ್ದಕ್ಕಿ ಲಕ್ಕಮ್ಮ, ನುಲಿಯಚಂದಯ್ಯ, ಮಹಾಮಹಿಮ ಶ್ರೀ ಗವಿಸಿದ್ಧೇಶ ಮುಂತಾದ ಭಕ್ತಿಪ್ರಧಾನ ನಾಟಕಗಳಲ್ಲಿ ಪ್ರಧಾನ ಪಾತ್ರ ಮಾಡಿ ಮೈದುಂಬಿ ಅಭಿನಯಿಸಿದ್ದಾರೆ.

**೧೬. ಸಿದ್ಧಪ್ಪ ಎಚ್**– ರಂಗಮಂದಿರದಲ್ಲಿ ನೇಪಥ್ಯ ಕೆಲಸಗಾರನಾಗಿ ನಿಪುಣತೆ ಸಾಧಿಸಿರುವ ಸಿದ್ಧಪ್ಪ ಹಡಪದ ತಮ್ಮ ಕುಲಕಸುಬಿನೊಂದಿಗೆ ರಂಗಾಸಕ್ತಿಯನ್ನು ಬೆಳಸಿಕೊಂಡು ಅಣ್ಣತಂಗಿ, ಗುಡದೂರುಗುರುದೇವ, ಶಿಕ್ಷೆ ಯಾರಿಗೆ? ಮೊದಲಾದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

**೧೭. ಶರಣಪ್ಪ ಸೂಡಿ**– ಹೊಟೆಲ್ ವ್ಯಾಪಾರಿಯಾದ ವಿರೂಪಾಪುರದ ೬೪ ವರ್ಷದ ಶರಣಪ್ಪ ಬಲೆ ಬೀಸಿದ ಹೆಣ್ಣು ನಾಟಕದಿಂದ ಬಣ್ಣದ ಹುಚ್ಚು ಅಂಟಿಸಿಕೊಂಡು ರೈತನ ಹೆಂಡತಿ, ರತ್ನ ಮಾಂಗಲ್ಯ, ಗುಣವಂತನನಗಂಡ, ಹೀಗೆ ಹಲವಾರು

ನಾಟಕಗಳಲ್ಲಿ ಮುಖ್ಯ ಪಾತ್ರವಹಿಸುತ್ತ ಸನ್ಮಾನಕೆ ಪಾತ್ರರಾಗಿದ್ದಾರೆ. ಪ್ರತೀ ವರ್ಷ ಹಬ್ಬ ಹರಿದಿನಗಳಲ್ಲಿ ಇವರ ನಾಟಕಗಳು ಇದ್ದೇ ಇರುತ್ತವೆ.

೧೮. ವೀರಭದ್ರನಗೌಡ ಸಿದ್ಧಾಪುರ– ಸಿದ್ಧಾಪುರದಲ್ಲಿ ಯಾವುದೇ ನಾಟಕವಾದರೂ ಟಿಕೇಟ ತೆಗೆದುಕೊಂಡು ಮೊದಲು ಪ್ರವೇಶಿಸುವ ೮೦ ವರ್ಷದ ವೀರಭದ್ರಗೌಡರು ನಿಜಾಮರ ಕಾಲದಲ್ಲಿ ಪ್ರಸಿದ್ಧ ರಂಗನಟರಾಗಿ, ದಕ್ಷಬ್ರಹ್ಮನ ಪಾತ್ರಕ್ಕೆ ಆನೆಗೊಂದಿ ಮಹಾರಾಜರಿಂದ ಬಂಗಾರದ ಕಡಗ ಪಡೆದ ಪರನ ಗೌಡ ಪವಾಡಗೌಡರ ಮಗನಾಗಿದ್ದು, ೩ನೆಯ ತರಗತಿ ಓದಿದ್ದರೂ ಕ್ಲಿಷ್ಟ ಸಂಭಾಷಣೆಯನ್ನು ಸ್ಪಷ್ಟವಾಗಿ ಉಚ್ಚರಿಸುವ ಕಲಾವಿದರಾಗಿ ಬಾಲ್ಯದಲ್ಲಿಯೆ ಶಿವರಾತ್ರಿ, ದಾರಿದೀಪ, ಮಹಾರಥಿ ಕರ್ಣ, ರಕ್ತರಾತ್ರಿ ಮುಂತಾದ ನಾಟಕಗಳಲ್ಲಿ ಪ್ರಮುಖವಾದ ಸ್ತ್ರೀ ಮತ್ತು ಪುರುಷ ಪಾತ್ರವಹಿಸುವದರಲ್ಲಿ ಪ್ರಸಿದ್ಧಿ ಪಡೆದವರು.

ನೇಪಥ್ಯದಲ್ಲಿ ಮ್ಯಾನೇಜರ್ ಆಗಿಯೂ ನೂರಾರು ನಾಟಕಗಳನ್ನು ಪ್ರೋತ್ಸಾಹಿಸಿರುವ ಗೌಡರು ನಷ್ಟದಲ್ಲಿದ್ದ ನಾಟಕ ಕಂಪನಿಗಳಿಗೆ ನೆರವಾಗಿದ್ದನ್ನು ಎಲ್ಲರೂ ಪ್ರಶಂಶಿಸುತ್ತಾರೆ. ಈ ಇಳಿವಯಸ್ಸಿನಲ್ಲಿಯೂ ಇವರ ರಂಗಾಸಕ್ತಿ ಕುಂದಿಲ್ಲ.

೧೯. ರೇವಣಸಿದ್ಧಯ್ಯ ಸ್ವಾಮಿ– ಅರಳಿಹಳ್ಳಿಯಲ್ಲಿ ದಿ.೨೨-೭-೧೯೬೨ರಲ್ಲಿ ಜನಿಸಿದ ರೇವಣ ಸಿದ್ಧಯ್ಯ ಬಿ.ಎ. ಓದಿ ಕೆ.ಎಸ್.ಆರ್.ಟಿ.ಸಿ ಕಂಡಕ್ಟರ್ ಆಗಿದ್ದರೂ ಬಣ್ಣದ ಬದುಕಿನೊಂದಿಗೆ ಅನನ್ಯ ಬಾಂಧವ್ಯ ಬೆಳಸಿಕೊಂಡಿರುವ ಇವರು. ಕೆಲಸಕ್ಕೆ ರಾಜೀನಾಮೆ ನೀಡಿ ರಾಜ ರಾಜೇಶ್ವರಿ ಕಲಾ ಸಂಘವನ್ನು ಕಟ್ಟಿ ಗ್ರಾಮೀಣ ಭಾಗದಲ್ಲಿ ರಂಗ ಭೂಮಿಯನ್ನು ಜೀವಂತವಾಗಿಟ್ಟಿದ್ದಾರಲ್ಲದೆ ಅನೇಕ ಕಲಾವಿದರಿಗೆ ಕವಿಗಳಿಗೆ ಸಹಾಯ ಹಸ್ತ ನೀಡಿದ್ದಾರೆ.

ನಾಟಕಕ್ಕಾಗಿ ಸೀನ್ರಿಜ್ ಮತ್ತು ರಂಗ ಪರಿಕರಗಳನ್ನೆಲ್ಲ ಸಿದ್ಧಪಡಿಸಿ ಕಳೆದ ೨೦ ವರ್ಷಗಳಿಂದ ನಾಟಕಗಳಿಗೆ ಜೀವಂತುಂಬಿದ್ದಾರೆ. ಇವರು ಜಿಲ್ಲೆಯಲ್ಲಿಯೆ ಜನಪ್ರಿಯ ವ್ಯಕ್ತಿಯಾಗಿದ್ದಾರೆ.

೨೦. ರಾಜಾ ಹನ್ಮಂತಪ್ಪ ನಾಯಕ– ವಕೀಲರಾದ ಮಲ್ಲಾಪುರದವರಾಗಿರುವ ಇವರು ಕಾಲೇಜಿನಲ್ಲಿ ಏಕಾಂಕ ನಾಟಕಗಳಲ್ಲಿ ಅಭಿನಯಿಸುತ್ತ ನಂತರ ಅಣ್ಣತಂಗಿ, ತಾಯಿಗೆತಕ್ಕಮಗ ಮುಂತಾದ ನಾಟಕಗಳಲ್ಲಿ ಪಾತ್ರವಹಿಸಿದರಲ್ಲದೆ ನೃತ್ಯದ ಬಗ್ಗೆ ಒಲವುಳ್ಳವರಾಗಿ ಮತ್ತು ಅನೇಕ ನಾಟಕಗಳಿಗೆ ಹಿನ್ನಲೆ ಹಾಡುಗಾರರಾಗಿ ಸೇವೆಸಲ್ಲಿಸಿದ್ದಾರೆ. ಎಸ್.ವಿ. ಪಾಟೀಲರ ಶ್ರೀ ಕನಕಗಿರಿ ವೈಭವ ಮಲ್ಕೇಶರ ಭಕ್ತಕನಕದಾಸ, ಕನಕಾಚಲಪತಿ ವೈಭವ, ಶಿವಶರಣ ಮಡಿವಾಳ ಮಾಚಯ್ಯ ಮುಂತಾದ ಅನೇಕ ಪ್ರಸ್ತುತ ನಾಟಕಗಳಲ್ಲಿ ಅಭಿನಯಿಸಿ ಮೆಚ್ಚುಗೆ ಪಡೆದಿದ್ದಾರೆ.

೨೧. ರಾಮಲಿಂಗಪ್ಪ ಹಳೇಮನಿ– ಸಿದ್ಧಾಪುರದ ಕೃಷಿಕರಾದ ಇವರು ಬಾಲ್ಯದಲ್ಲಿಯೆ ಬಣ್ಣ ಹಚ್ಚಿಕೊಂಡು ಶಹಬ್ಬಾಸ್‌ಗಿರಿ ಪಡೆದವರು. ರಕ್ತರಾತ್ರಿಯ ಶಕುನಿ ಪಾತ್ರವನ್ನು ಸ್ಪಷ್ಟವಾದ ಉಚ್ಚರಣೆ, ಆಂಗಿಕ ಅಭಿನಯ ಮತ್ತು ಕಂಚಿನ ಕಂಠದಿಂದ ಅಭಿನಯಿಸುತ್ತ

ತಾಲೂಕಿನಾದ್ಯಂತ ಗುರುತಿಸಿಕೊಂಡವರು. ರತ್ನ ಮಾಂಗಲ್ಯ, ಆದರ್ಶ ಪ್ರೇಮ ಹೀಗೆ ಹಲವಾರು ನಾಟಕಗಳಲ್ಲಿ ನಾಯಕ ಹಾಗು ಖಳನಾಯಕನ ಪಾತ್ರವಹಿಸಿದ್ದಾರೆ.

**೨೨. ಮೌಲಾಸಾಬ ಗುಂಡೂರು–** ಗುಂಡೂರಿನ ೬೭ ವರ್ಷದ ಮೌಲಾಸಾಹೇಬ ತಮ್ಮ ದೊಡ್ಡಪ್ಪವನಾದ ಇವ್ರಾಹಿಂಸಾಹೇಬರಿಂದ ಸ್ಫೂರ್ತಿಗೊಂಡು ಬಾಲನಟರಾಗಿ ರಂಗಪ್ರವೇಶಿಸಿ ಅಣ್ಣತಂಗಿ, ಮುದುಕನಮದುವೆ, ಮದುಮಗಳು ಮುಂತಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಹರ್ಮೋನಿಯಂ ಕಲಿತು ನಾಟಕ ನಿರ್ದೇಶಿಸತೊಡಗಿದರು.

**೨೩. ರಮೇಶ್ ಡಿ. ಥರ್ಮಟ್ಟಿ–** ಪ್ರಾಚಾರ್ಯರಾದ ಇವರು ವಿದ್ಯಾರ್ಥಿದೆಸೆಯಲ್ಲಿಯೆ ಬರವಣಿಗೆಯ ಗೀಳನ್ನು ಅಂಟಿಸಿಕೊಂಡು ಗಂಗಾವತಿಯಲ್ಲಿ ಸ್ಥಾಪಿಸಿದ ಬಣ್ಣದ ಬಳಗದ ಉಪಾಧ್ಯಾಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀ ರಾಘವೇಂದ್ರ ಜ್ಯೋಶಿಯವರು ರಚಿಸಿ ನಿರ್ದೇಶಿಸಿದ ಚಿರಂಜೀವಿ ಮತ್ತು ಸಂಬಂಧಮಾಲೆ ನಾಟಕಗಳಲ್ಲಿ ಅಭಿನಯಿಸಿ ಜನಮನ ಗೆದ್ದಿದ್ದಾರಲ್ಲದೆ ತಾವೇ ರಚಿಸಿ ನಿರ್ದೇಶಿಸಿದ ಮುಖಾರವಿಂದ ದರ್ಶನ ಮತ್ತು ಅತ್ತೆಯಗಂಟು ನಾಟಕಗಳನ್ನು ಪ್ರಕಟಿಸಿದ್ದಾರೆ.

**೨೪. ಎಂ.ಎಂ.ಮರಿಯಪ್ಪ ಮಾಸ್ತರ–** ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಹವ್ಯಾಸಿ ಕಲಾವಿದರಿಗೆ ಕಲಿಸಿ ಆಡಿಸುವ ಮೂಲಕ ಕರಿಯಪ್ಪ ಮಾಸ್ತರೆಂದೇ ಕರೆಯಿಸಿಕೊಳ್ಳುವ ಇವರು ಷಣ್ಮುಖಪ್ಪ ಮಾಸ್ತರರಿಂದ ಹಾರ್ಮೋನಿಯಂ ಕಲಿತು ಪೌರಾಣಿಕ ಸಾಮಾಜಿಕ ನಾಟಕಗಳಿಗೆಲ್ಲ ಸಂಗಿತ ನಿರ್ದೇಶನ ನೀಡಿದ್ದಾರೆ. ಮಲ್ಲಾಪುರದಲ್ಲಿ ವಾಸವಾಗಿದ್ದಾರೆ.

**೨೫. ಕೆ.ಬಾಲಪ್ಪ ವಣಗೇರಿ–** ಮೂಲತಃ ಯಲಬುರ್ಗಿ ತಾಲೂಕಿನವರಾದ ಇವರು ಗಂಗಾವತಿ ಉಪತಹಶೀಲ್ದಾರರಾಗಿದ್ದಾರೆ. ಎಂ.ಎ.ಪದವೀಧರರಾಗಿ ವಿದ್ಯಾರ್ಥಿದೆಸೆಯಿಂದಲೇ ರಂಗಾಸಕ್ತಿಯನ್ನು ಬೆಳಸಿಕೊಂಡು ತಾಯಿಗೆತಕ್ಕಮಗ, ಯಾರು ದೊಡ್ಡವರು ಮುಂತಾದ ನಾಟಕಗಳಲ್ಲಿ ಅಭಿನಯಿಸುತ್ತ ನಿರಂತರ ಆಸಕ್ತಿಯನ್ನು ಪೋಷಿಸಿಕೊಂಡು ಬಂದವರಾಗಿ ಗುಂಡೂರವರ ಶರಣೆ ಆಯ್ದಕ್ಕಿಲಕ್ಕಮ್ಮ, ನುಲಿಯಚಂದಯ್ಯ, ಗುಡದೂರು ಗುರುದೇವ ನಾಟಕಗಳಲ್ಲಿ ಮುಖ್ಯಪಾತ್ರ ವಹಿಸಿದ್ದು ದೂ.ದ.ಆಕಾಶವಾಣಿಗಳಲ್ಲಿಯೂ ಇವು ಪ್ರಸಾರಗೊಂಡಿವೆ. ಇವರ ಜನ್ಮ ದಿನಾಂಕ ೧–೧–೧೯೫೫

**೨೬. ಬೀರಪ್ಪ ಮಾಸ್ತರ–** ೧೯೬೨ರಲ್ಲಿಯೆ ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಬಸವಣ್ಣನ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿ ರಂಗಭೂಮಿಯಲ್ಲಿ ಗುರ್ತಿಸಿಕೊಂಡ ಇವರು ಕುಲಥಲ, ಸತ್ಯಹರಿಶ್ಚಂದ್ರ, ವೀರ ಅಭಿಮನ್ಯು, ರಕ್ತರಾತ್ರಿ, ನರವೀರ ಪಾರ್ಥ, ಮಹಾರಥಿ ಕರ್ಣ ಹೀಗೆ ಇಲ್ಲಿಯವರೆಗೆ ಅನೇಕ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ತಬಲಾ ಮತ್ತು ಹಾರ್ಮೋನಿಯಂ ಸಂಗೀತ ಕಲಿತು ನಾಟಕದ ಮಾಸ್ತರರೆಂದೇ ಹೆಸರಾಗಿರುವ ಬೀರಪ್ಪನವರನ್ನು ಅ.ವಿ.ರಾಜ್ಯಸಮಿತಿ ಮಹಾತ್ಮಾ ಜ್ಯೋತಿಬಾಫುಲೆ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಅದೇರೀತಿ ಅನೇಕ ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ ಹಿರೇಸಿಂದೋಗಿಯವರಾದರೂ ಇವರು ವಾಸವಾಗಿದ್ದು ಗಂಗಾವತಿ ತಾಲೂಕಿನ ಹುಳ್ಕಿಹಾಳನಲ್ಲಿ.

೨೭. ಎಸ್. ಬಸವರಾಜ– ಹೇರೂರ ಕಲಾವಿದರಾದ ಇವರು ಜನಿಸಿದ್ದು ದಿ.೧– ೬–೧೯೬೯. ಪಿಯೂಸಿ ಪಾಸಾಗಿ ವ್ಯವಸಾಯ ಮಾಡುತ್ತಲೇ ರಂಗಭೂಮಿಯ ನಂಟನ್ನು ಅಂಟಿಸಿಕೊಂಡು ರೈತನಗಲಿಲ್ಲ ಸರಕಾರ ಉಳಿಯಲಿಲ್ಲ ನಾಟಕದಲ್ಲಿ ಪಾತ್ರವಹಿಸಿ ನಂತರ ತಾವೇ ಶಾಂತಿಯೇ ಸಂಸಾರದ ಸಂಪತ್ತು ಮತ್ತು ನುಲಿಯ ಚಂದಯ್ಯ ನಾಟಕ ರಚಿಸಿ ಪ್ರದರ್ಶಿಸಿದ್ದಾರೆ. ಕೌರವರು ಇನ್ನೂ ಸತ್ತಿಲ್ಲ, ಅಕ್ಕನ ದಿಗ್ವಿಜಯ, ನಾಟಕಗಳನ್ನು ರಚಿಸಿ ಪ್ರದರ್ಶಿಸಿದರಾದರೂ ಇವಿನ್ನೂ ಪ್ರಕಟವಾಗಿಲ್ಲ. ಮೊದಲಿನ ನಾಟಕಗಳು ಪ್ರಕಟವಾಗಿ ಅಲ್ಲಲ್ಲಿ ಪ್ರದರ್ಶನಗೊಳ್ಳುತ್ತಿವೆ. ಸಾಕ್ಷರತಾ ಕಾರ್ಯಕ್ರಮಗಳಲ್ಲಿಯೂ ಇವರು ಪಾಲ್ಗೊಳ್ಳುತ್ತ ನಾಟಕ ಪ್ರರ್ಶಿಸಿದ್ದಾರೆ.

೨೮. ಎಂ. ಬಸವರಾಜ– ಮೂಲತಃ ಆಂಧ್ರಪ್ರದೇಶದವರಾದ ೭೫ವಯಸ್ಸಿನ ಇವರು ೫೫ ವರ್ಷಗಳ ಹಿಂದೆ ಬಟ್ಟೆವ್ಯಾಪಾರಕ್ಕಾಗಿ ಬಂದು ಇಲ್ಲಿಯ ಗುಂಡೂರಿನ ವಾಸಿಯಾಗಿದ್ದಾರೆ. ಚಿಕ್ಕವಯಸ್ಸಿನಲ್ಲಿಯೆ ಬಾಲನಾಗಮ್ಮ ನಾಟಕದಲ್ಲಿ ಬಣ್ಣಹಚ್ಚಿಕೊಂಡು ಉತ್ತಮ ಕಲಾವಿದರಾಗಿ ಬೆಳೆದ ಇವರು ಸಂಗೀತ ಕಲಿತು ತಮ್ಮಕಂಚಿನ ಕಂಠದಿಂದ ಕಂದಪದ್ಯ, ಸೀಸಪದ್ಯಗಳನ್ನು ಲೀಲಾಜಾಲವಾಗಿ ಹಾಡಬಲ್ಲರು. ಹಾಗಾಗಿ ನಲವಡಿ ಶ್ರೀಕಂಠಶಾಸ್ತ್ರಿಗಳ 'ಭಕ್ತಸುಧನ್ವ' ನಾಟಕದಲ್ಲಿ ಶ್ರೀಕೃಷ್ಣನ ಪಾತ್ರವಹಿಸಿದ ಬಸವರಾಜ ತಮ್ಮ ಅಧ್ಭುತ ಅಭಿನಯದಿಂದ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತರು. ನಂತರ ಪದ್ಮಾಕ್ಷಯ್ಯನವರ ಅಭಯಪ್ರದಾನ ನಾಟಕದಲ್ಲಿ ನಾರದರಾಗಿ ಗಮನ ಸೆಳೆದರು. ಈ ನಾಟಕ ಹೆಚ್ಚು ಪ್ರಯೋಗವಾಗಿ ಇವರು ನಾರದರೆಂದೇ ಹೆಸರಾದರು. ನಂತರ ಅನೇಕ ನಾಟಕಗಳಲ್ಲಿ ಅಭಿನಯಿಸಿ ಜನಪ್ರಿಯತೆ ಪಡೆದಿದ್ದಾರೆ.

೨೯. ಬಸವರಾಜ ಯತ್ನಟ್ಟಿ– ಕೆ.ಇ.ಬಿ ನೌಕರರಾದ ಇವರು ಬಸವ ಪಟ್ಟಣ ವಾಸಿಯಾಗಿದ್ದು ರಂಗಭೂಮಿಯನ್ನು ಪ್ರವೃತ್ತಿಯಾಗಿಸಿಕೊಂಡು ಬಿ.ವಿ. ಈಶರ ಪ್ರಾಣಹೋದರೂ ಮಾನಬೇಕು, ಕಲಿತಕಳ್ಳ ಮತ್ತು ಅಣ್ಣತಂಗಿ ಮುಂತಾದ ಅನೇಕ ನಾಟಕಗಳಲ್ಲಿ ಅಭಿನಯಿಸಿ ಪಿ.ಬಿ.ಧುತ್ತರಗಿಯವರ ಶಿವಯೋಗಿ ಚನ್ನಬಸವೇಶ್ವರ ನಾಟಕದಲ್ಲಿ ಪ್ರಮುಖ ಪಾತ್ರವಹಿಸಿ ಗಮನ ಸೆಳೆದರು. ನಂತರ ಇವರೇ ಕಲಿತರೂ ಬೆಲೆಯಿಲ್ಲ ಮತ್ತು ಛೇರ್ಮನ್ ಕಾರಸ್ತಾನ ನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ.

೩೦. ಕೆ. ಬಸವರಾಜ್– ಮುಜಾವರನಗರದ ೬೦ ವರ್ಷದ ಇವರು ಶ್ರೀಗವಿಸಿದ್ಧೇಶ್ವರ ಮಹಾಮಹಿಮ ನಾಟಕದಲ್ಲಿ ಪ್ರಧಾನ ಪಾತ್ರಮಾಡಿ ಗಮನಸೆಳೆದಿರುವರಲ್ಲದೆ ಗುಂಡೂರರ ಬಸವಮಹಾಮಾನವ ನುಲಿಯ ಚಂದಯ್ಯ ಆಯ್ದಕ್ಕಿ ಲಕ್ಕಮ್ಮ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

೩೧. ಬಸನಗೌಡ ವಕೀಲರು ಎಚ್.– ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ೫ನೆಯ ತರಗತಿ ಓದುವಾಗಲೇ ಭಾಗ್ಯದೇವತೆ ನಾಟಕದಲ್ಲಿ ಪ್ರಧಾನ ಪಾತ್ರವಹಿಸಿದ ಬಸನಗೌಡರು ಡಿಗ್ರಿ ಓದುವಾಗ ರಕ್ತರಾತ್ರಿ, ರತ್ನ ಮಾಂಗಲ್ಯ, ನಾಟಕಗಳಲ್ಲಿ ಪಾತ್ರವಹಿಸಿ ರಾಜ್ಯಾದ್ಯಂತ ಹೆಸರು ಪಡೆದರು. ಜೂನಿಯರ್ ಎಲಿವಾಳ್ ಸಿದ್ಧಯ್ಯ ಎಂದೆ ಹೆಸರಾದ

ಇವರು ಅಭಿಜಾತ ಕಲಾವಿದರೆನಿಸಿದ್ದಾರೆ. ತಮ್ಮ ವಕೀಲಿವೃತ್ತಿಯಲ್ಲಿದ್ದು ೬೦ವರ್ಷ ವಯಸ್ಸಿನವರಾದರೂ ರಂಗಾಸಕ್ತಿ ಬಿಟ್ಟವರಲ್ಲ.

**೩೨. ಎಂ. ಪರಶುರಾಮಪ್ರಿಯ–** ಗಂಗಾವತಿಯ ೫೮ ವಯಸ್ಸಿನ ಬಹುಮುಖ ಪ್ರತಿಭೆಯ ಪರಶುರಾಮಪ್ರಿಯ ಪ್ರಸಾಧನ ಕಲೆಯಲ್ಲಿಯೂ ಪರಿಣತಿ ಸಾಧಿಸಿದ್ದಾರೆ. ೧೯೯೪–೯೫ನೆಯ ಸಾಲಿನಲ್ಲಿ ನೀನಾಸಂ ರಂಗ ಶಿಕ್ಷಣಕೇಂದ್ರದಲ್ಲಿ ತರಬೇತಿ ಪಡೆದು ಕವಿ, ಕಲಾವಿದ, ನಿರ್ದೇಶಕ ಮತ್ತು ಸಂಘಟಕನಾಗಿ ಗುರುತಿಸಿಕೊಂಡಿರುವ ಇವರು ಕಾಕನಕೋಟೆ, ಬಸವ ಮಹಾಮಾನವ, ಜೀತ, ಅಕ್ಕಮಹಾದೇವಿ, ಪಂಜರದ ಗಿಳಿ ಹೀಗೆ ಅನೇಕ ನಾಟಕ ನಿರ್ದೇಶಿಸಿದ್ದಾರೆ. ಕೈಗಾರಿಕಾ ಇಲಾಖೆಯ ಪ್ರಚಾರಕ್ಕಾಗಿ ನಿರುದ್ಯೋಗಿ ರೋಗಿ ಬೀದಿ ನಾಟಕ ನಿರ್ದೇಶಿಸಿ ಸಾಕಷ್ಟು ಕಡೆ ಪ್ರದರ್ಶಿಸಿದ್ದಾರೆ. ಸಮುದಾಯದ ನೇತಾರರಾಗಿಯೂ ಕೆಲಸ ಮಾಡಿದ್ದಾರೆ. ಇವರಿಗೆ ಪ್ರಸ್ತುತ ವರ್ಷದ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

**೩೩. ಕೆ. ಪಂಪಣ್ಣ–** ಗಂಗಾವತಿಯ ೬೦ ವಯಸ್ಸಿನ ಇವರು ಬಸವ ಮಹಾಮನೆ ನಾಟಕದಲ್ಲಿ ಪ್ರಮುಖ ಪಾತ್ರವಹಿಸಿ ರಂಗಪ್ರವೇಶಿಸಿ ನಂತರ ಗುಂಡೂರರ ಗುಡದೂರು ಗುರುದೇವ, ಮಹಾಮಹಿಮ ಗವಿಸಿದ್ಧೇಶ, ನುಲಿಯ ಚಂದಯ್ಯ ಹಾಗು ಮಲ್ಕೇಶರ ಶಿವಶರಣ ಮೋಳಿಗಮಾರಯ್ಯ, ಮಡಿವಾಳ ಮಾಚಿದೇವ ಮುಂತಾದ ಹತ್ತಾರು ನಾಟಕಗಳಲ್ಲಿ ಅಭಿನಯಿಸುತ್ತ ಬಂದು ಉತ್ತಮ ಕಲಾವಿದರೆನ್ನುವ ಕೀರ್ತಿ ಪಡೆದಿದ್ದಾರೆ.

**೩೪. ದೊಡ್ಡ ಹನುಮಂತಪ್ಪ ಪಂಪಣ್ಣ ಹೂಗಾರ–** ಇವರು ಗುಂಡೂರಿನ ೭೫ ವರ್ಷದ ಕಲಾವಿದರಾಗಿದ್ದು ಬಾಲ್ಯದಲ್ಲಿಯೆ ದೊಡ್ಡಾಟದ ಮೂಲಕ ಬಣ್ಣಬಳಿದುಕೊಂಡು ನಂತರ ನೂರಾರು ನಾಟಕಗಳಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳ ಮೂಲಕ ಹೆಸರು ಪಡೆದಿದ್ದಾರೆ. ವಿಶೇಷವಾಗಿ ರಾಕ್ಷಸನ ಪಾತ್ರಕ್ಕೆ ಜಿಲ್ಲೆಯಾದ್ಯಂತ ಪ್ರಸಿದ್ಧಿ ಪಡೆದ ಹೂಗಾರ ಪಾತ್ರಗಳನ್ನು ಪರಕಾಯ ಪ್ರವೇಶಿಸಿದಂತೆ ಜೀವಂತಗೊಳಿಸಬಲ್ಲರು. ಪೌರಾಣಿಕ, ಸಾಮಾಜಿಕ ಮತ್ತು ಭಕ್ತಿ ಪ್ರಧಾನ ನಾಟಕಗಳಲ್ಲೆಲ್ಲ ಅಭಿನಯಿಸಿದ ಇವರಿಗೆ ೧೯೯೯ರಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ದೊರಕಿದೆ ಮತ್ತು ಮಾಸಾಶನವೂ ದೊರೆಯುತ್ತಿದೆ. ಸಂಘಸಂಸ್ಥೆಗಳು ಸನ್ಮಾನಿಸಿವೆ.

**೩೫. ತಿಪ್ಪೇಸ್ವಾಮಿ ಮಡಿವಾಳರ–** ೩೦ರ ಹರೆಯದ ನವಲಿ ಗ್ರಾಮದ ನಿವಾಸಿಯಾದ ಇವರು ಎಂ. ಶರಣಪ್ಪ ಮಾಸ್ತರರಿಂದ ಪ್ರೇರಣೆ ಪಡೆದುಬೀದಿ ನಾಟಕಗಳಲ್ಲಿ ಪಾತ್ರ ವಹಿಸುತ್ತ ಸಾಕ್ಷರತಾ ಕಲಾ ಜಾಥಾ, ಉದ್ಯೋಗ ಖಾತ್ರಿ, ನೈರ್ಮಲ್ಯ, ಆರೋಗ್ಯ, ಕುಟುಂಬ ಕಲ್ಯಾಣ ಮುಂತಾದ ಸರಕಾರಿ ಯೋಜನೆಗಳ ಪ್ರಚಾರಕ್ಕಾಗಿ ತಾವೇ ಬೀದಿ ನಾಟಕಗಳನ್ನು ರಚಿಸಿ ಜಿಲ್ಲೆಯಾದ್ಯಂತ ಪ್ರದರ್ಶಿಸಿ ಪ್ರಸಿದ್ಧಿ ಪಡೆದಿದ್ದಾರೆ. ರಾಜ್ಯ ಯುವ ಪ್ರಶಸ್ತಿ ಲಭಿಸಿದೆ.

**೩೬. ಚನ್ನಬಸಪ್ಪ ಕುಂಬಾರ–** ತಮ್ಮ ಕುಲಕಸುಬಿನೊಂದಿಗೆ ರಂಗಾಭಿರುಚಿಯನ್ನು ಬೆಳಸಿಕೊಂಡ ಕುಂಬಾರ, ಸಂಗ್ಯಾಬಾಳ್ಯಾ, ನಾಟಕದ ಮೂಲಕ ರಂಗಪ್ರವೇಶಿಸಿ,

ಸುಂದೋಪಸುಂದರು, ರೈತನ ಹೆಂಡತಿ, ಗುಣವಂತನನಗಂಡ, ಕಾಳಿಂಗ ಸರ್ಪ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸುತ್ತ ಮತ್ತು ಆಡಿಸುತ್ತ ಗ್ರಾಮೀಣ ಭಾಗದಲ್ಲಿ ರಂಗಕಲೆಯನ್ನು ಜೀವಂತವಾಗಿಟ್ಟ ಇವರಿಗೀಗ ೭೮ವರ್ಷ ವಯಸ್ಸು, ವಿರೂಪಾಪುರದ ನಿವಾಸಿ.

**೩೭. ಗವಿಯಪ್ಪ ಪಿ.ಕೆ. (ಅರುಣಕುಮಾರ)** –ಎಂ.ಕಾಂ. ಪದವೀಧರರಾಗಿ ಗಂಗಾವತಿಯ ಗುಂಜಳ್ಳಿ ಹಿರೇನಾಗಪ್ಪ ಕಾಮರ್ಸಕಾಲೇಜಿನ ಉದ್ಯೋಗಿಯಾಗಿದ್ದು. ವಿದ್ಯಾರ್ಥಿಯಾಗಿದ್ದಾಗಲೇ ಶೇಕ್ಸಪಿಯರ್ ಕವಿಯ ಕಿಂಗ್‌ಮೆಡೋಸ್ ನಾಟಕದಲ್ಲಿ ಪಾತ್ರವಹಿಸಿ ಮೆಚ್ಚುಗೆ ಪಡೆದು, ರಿಕಾರ್ಡ ಡ್ಯಾನ್ಸನಲ್ಲಿ ಭಾಗವಹಿಸುತ್ತ ಎಚ್ಚಮ್ಮನಾಯಕ, ದೀಪಾ, ಕಂದಗಲ್‌ರ ಚಿತ್ರಾಂಗದ, ವೀರಣ್ಣರಾಜೂರರ ಹೊಟ್ಟೆಯ ಮಗಳು ಮುಂತಾದ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರಲ್ಲದೆ ಇತ್ತೀಚಿನ ಗುಂಡೂರರ ಅನೇಕ ನಾಟಕಗಳಲ್ಲಿಯೂ ಅಭಿನಯಿಸಿ ತಮ್ಮೊಳಗಿನ ನಟನನ್ನು ಜೀವಂತವಾಗಿಸಿಕೊಂಡಿದ್ದಾರೆ.

**೩೮. ಕರಿಯಪ್ಪ ಬುಡ್ಡೋಡಿ–** ತಮ್ಮ ೭೫ನೆಯ ವಯಸ್ಸಿನಲ್ಲಿಯೂ ನಾಟಕವೆಂದರೆ ಜಿಗಿಯುವ ಅನಕ್ಷರಸ್ತ ಕಲಾವಿದ ಕರಿಯಪ್ಪ ಹೋಟೆಲ್ ಉದ್ಯಮಿಯಾಗಿದ್ದು ಕರೆಂಟಿನ ಸೌಲಭ್ಯವಿಲ್ಲದಾಗಲೇ ಗ್ಯಾಸ್‌ಲೈಟ್ ಬೆಳಕಿನಲ್ಲಿ ಮೈಕಿಲ್ಲದೆ ಗರುಡಸದಾಶಿವರಾಯರ ಭಾಗ್ಯೋದಯ, ಅದ್ಭುತ ರಾಮಾಯಣ ನಂತರ ಕಂದಗಲ್ಲರ ಬಡತನ ಭೂತ ವಿಜಯ ನಗರ ಸ್ಥಾಪನೆಯಂಥ ನೂರಾರು ನಾಟಕಗಳಲ್ಲಿ ಅಭಿನಯಿಸಿ ಹೆಸರು ಪಡೆದಿದ್ದಾರಲ್ಲದೆ ರೋಮಿಯೋ ಜೂಲಿಯಟ್‌ನಂಥ ನಾಟಕಗಳಲ್ಲಿಯೂ ನಟಿಸಿ ಅಪಾರ ಹೆಸರುಗಳಿಸಿದ್ದು ಇವರ ವಿಶೇಷವಾಗಿದೆ.

**೩೯. ಕೆ.ಎಫ್.ಮುದ್ದಾಬಳ್ಳಿ–** ದಿ. ೨೦-೧೧-೧೯೭೭ ರಂದು ಗಂಗಾವತಿಯಲ್ಲಿ ಜನಿಸಿದ ಮುದ್ದಾಬಳ್ಳಿ ಬಹುಮುಖ ಪ್ರತಿಭೆಯ ಕಲಾವಿದ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಸೈಕಲ್ ಮೋಟರ್, ಕಾರು, ತೆರೆದ ಜೀಪನ್ನು ಕಿಲೋಮೀಟರಗಟ್ಟಲೆ ಓಡಿಸುವ ಇವರು ಹಾರ್ಮೋನಿಯಂ ಕಲಿತು ನಾಟಕಕ್ಕೆ ಸಂಗೀತ ಮತ್ತು ಹಿನ್ನೆಲೆ ಗಾಯನ ನೀಡಿದ್ದಾರೆ. ಬಸವಮಹಾಮನೆ, ನುಲಿಯ ಚಂದಯ್ಯ ಮುಂತಾದ ಅನೇಕ ನಾಟಕಗಳಲ್ಲಿಯೂ ನಟಿಸಿ ರಾಷ್ಟ್ರಮಟ್ಟದ ಬಸವಜ್ಯೋತಿ, ಸಾಹಸರತ್ನ,ಸದ್ಭಾವನಾ ಮೊದಲಾದ ಅನೇಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**೪೦. ಅನುರಾಧಾ ಮೈಸೂರು–** ರಂಗಭೂಮಿಯ ಕುಟುಂಬದಲ್ಲಿ ಹುಟ್ಟಿದ ಇವರ ತಾಯಿ ಕೃಷ್ಣವೇಣಮ್ಮ ರಂಗಭೂಮಿ ಕಲಾವಿದೆಯಾಗಿದ್ದರಿಂದ ಚಿಕ್ಕಂದಿನಲ್ಲಿಯೆ ರಂಗಪ್ರವೇಶಿಸಿ ಖಳನಾಯಕಿ ಮತ್ತು ನಾಯಕಿಯ ಪಾತ್ರವಹಿಸುತ್ತ ರಾಜ್ಯಾದ್ಯಂತ ಸಂಚರಿಸಿ ಗಂಗಾವತಿಗೆ ಬಂದು ನೆಲೆಸಿದ್ದಾರೆ. ಮೂರು ಸಾವಿರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮಹಿಳಾ ತಂಡ ಕಟ್ಟಿ ಪುರುಷ ಪಾತ್ರವಹಿಸಿ ಮೆಚ್ಚುಗೆ ಪಡೆದಿದ್ದಾರೆ. ಅಲ್ಲದೆ ನಿರ್ದೇಶಕಿಯಾಗಿ ಮತ್ತು ಸಂಚಾಲಕಿಯಾಗಿಯೂ ಕಾರ್ಯನಿರ್ವಹಿಸಿದ ಹಿರಿಮೆ ಅನುರಾಧಾ ಅವರದು.

ಇದಕ್ಕಿಂತಲು ವಿಶೇಷವೆಂದರೆ ಮಹಿಳೆಯರು ನಾಟಕ ರಚಿಸಿರುವುದೇ ಅಪರೂಪ. ಅಂಥದರಲ್ಲಿ ಬರವಣಿಗೆಯನ್ನು ರೂಢಿಸಿಕೊಂಡ ಅನುರಾಧಾ ಜೀವನ ಸಂಗ್ರಾಮ, ಜೋಡಿ ಹುಲಿಗಳ ದರ್ಬಾರು ನಾಟಕಗಳನ್ನು ರಚಿಸಿ ತಾವೇ ನಿರ್ದೇಶಿಸಿ ಪ್ರಯೋಗಗೊಂಡು ಯಶಸ್ವಿಯಾದ ಆ ನಾಟಕಗಳನ್ನು ಪ್ರಕಟಿಸಿದ ಅಪರೂಪದ ಪ್ರತಿಭಾನ್ವಿತೆ, ಜನಿಸಿದ್ದು ೨೨-೬-೧೯೭೭ರಂದು.

**೪೧. ಅಂಬಣ್ಣ ಕೆ-** ಗಂಗಾವತಿಯ ೪೩ ವಯಸ್ಸಿನ ಮತ್ತೊಬ್ಬ ಕಲಾವಿದ ಅಂಬಣ್ಣ ಬಾಲ್ಯದಿಂದಲೇ ರಂಗಭೂಮಿಗೆ ಕಾಲಿರಿಸಿ ಬಡವ ಬದುಕಲೇಬೇಕು, ಸುಳ್ಳಿನ ಸಾಮ್ರಾಟ, ಸತ್ಯದ ಚೀರಾಟ, ಶಿವರಾತ್ರಿ, ಇಟಗಿ ಭೀಮಾಂಬಿಕೆ ಮುಂತಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರಲ್ಲದೆ ಇತ್ತೀಚೆಗೆ ಬಸವಮಹಾಮಾನವ ಗುಡದೂರು ಗುರುದೇವ ಹೀಗೆ ಹೊಸ ನಾಟಕಗಳಲ್ಲಿ ಅಭಿನಯಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

**೪೨. ಜಿ .ಹನುಮಂತಪ್ಪ ವಿಶ್ವಕರ್ಮಿ-** ಡಣಾಪುರ ನಿವಾಸಿಯಾದ ಇವರು ಏಳನೆಯ ತರಗತಿಯವರೆಗೆ ಮಾತ್ರಕಲಿತು ಚಿಕ್ಕಂದಿನಲ್ಲಿಯೆ ರಂಗ ಭೂಮಿಯ ಆಸಕ್ತಿಯನ್ನು ಬೆಳಸಿಕೊಂಡು ನಾಟಕಗಳ್ಲಲಿ ಪಾತ್ರವಹಿಸುತ್ತ ಬಯಸಿಬಂದಬಾಲೆ, ಹುಡುಗ ಹೊಲಮಾಡ್ಲಿಲ್ಲ, ಹುಡುಗಿ ಮನೆಮಾಡ್ಲಿಲ್ಲ, ಶ್ರೀಮಂತರ ದಬ್ಬಾಳಿಕೆ, ತಾಳಿ ಮೇಲೋ ಶೀಲ ಮೇಲೋ ಎನ್ನುವ ನಾಟಕ ರಚಿಸಿ ಪ್ರಯೋಗಿಸಿ ಪ್ರಕಟಿಸಿದ್ದಾರೆ. ಇನ್ನೂ ಪ್ರಕಟವಾಗದ ನಾಟಕಗಳೂ ಇವೆ. ಇವರಿಗೀಗ ೬೬ ವಯಸ್ಸು.

**೪೩. ಲಿಂಗಾರೆಡ್ಡಿ ಆಲೂರು-** ಸಾಹಿತಿ, ಪತ್ರಕರ್ತ ಲಿಂಗಾರೆಡ್ಡಿ ಖ್ಯಾತ ರಂಗ ನಿರ್ದೇಶಕರಾದ ವೀರಭದ್ರಪ್ಪ ಆಲೂರ ಅವರಿಂದ ಬಳವಳಿಯಾಗಿ ಬಂದ ರಂಗಕಲೆಯಿಂದ ಗುರುತಿಸಿಕೊಂಡವರು. ಬಿ.ವಿ.ಈಶರ ಕಲಿತ ಕಳ್ಳ, ಗೌಡ್ರಗದ್ಲ, ಶ್ರೀಕಂಠಶಾಸ್ತ್ರೀಗಳ ಹೇಮರೆಡ್ಡಿಮಲ್ಲಮ್ಮ ಮತ್ತು ಗುಂಡೂರವರ ಗುಡದೂರ ಗುರುದೇವ ನಾಟಕಗಳಲ್ಲಿ ಅಭಿನಯಿಸಿ ಜನಮನ್ನಣೆ ಪಡೆದಿದ್ದಾರೆ. ಕಂಚಿನಕಂಠ, ಸ್ಪಷ್ಟವಾದ ಉಚ್ಛಾರಣೆ ಇವರ ವಿಶೇಷವಾಗಿದೆ. ದಿ.೧-೬-೧೯೬೬ ಜನಿಸಿದ ಲಿಂಗಾರೆಡ್ಡಿ ಮಲ್ಲಾಪೂರಿನ ಆಲೂರ ವಾಸಿಯಾಗಿ ಅನೇಕ ಏಕಾಂಕ ನಾಟಕಗಳ ಜೊತೆಗೆ ನೀನೇ ಸಾಕಿದ ಗಿಳಿ ಎನ್ನುವ ಮೂರಂಕಿನ ನಾಟಕವನ್ನೂ ರಚಿಸಿ ತಾವೇ ನಿರ್ದೇಶಿಸಿ ಪ್ರದರ್ಶಿಸಿದ್ದಾರೆ.

**೪೪. ಸುರೇಶ ಕಂಬಳಿ-** ಗಬ್ಬೂರಿನ ರಾಮಣ್ಣ ಮತ್ತು ಶಾವಂತ್ರಮ್ಮ ದಂಪತಿಗಳ ಹೊಟ್ಟೆಯಲ್ಲಿ ದಿ.೩-೬-೧೯೭೪ರಂದು ಜನಿಸಿದ ಇವರು ಪ್ರಸ್ತುತ ಕನ್ನೇರಮಡು ಸ.ಹಿ.ಪ್ರಾ, ಶಾಲೆಯ ಸಹಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ರಂಗಭೂಮಿಯ ಪ್ರವೃತ್ತಿಯಿಂದ ಕನಿಕರವಿಲ್ಲದ ಧನಿಕರು, ಗರತಿ ಹೆಣ್ಣಿಗೆ ಗರ್ವದ ಗಂಡ, ವಂಶಜ್ಯೋತಿ ಮುಂತಾದ ನಾಟಕಗಳಲ್ಲಿ ಪಾತ್ರವಹಿಸಿ ತಾವೇ ತುತ್ತುಕೊಟ್ಟ ಅತ್ತಿಗೆ, ವಂಶಜ್ಯೋತಿ, ರಕ್ಷಾಬಂಧನ ನಾಟಕಗಳನ್ನು ರಚಿಸಿ ನಿರ್ದೇಶಿಸಿ ಪ್ರದರ್ಶನಗೊಳಿಸಿ ಪ್ರಕಟಿಸಿದವುಗಳನ್ನು ಸಾಕಷ್ಟು ಹವ್ಯಾಸಿ ಕಲಾವಿದರು ಪ್ರಯೋಗಿಸಿದ್ದಾರೆ. ಇವರ ಸಾಧನೆಗೆ ಬಸವಜ್ಯೋತಿ,

ಆರೂಢ ಶ್ರೀ ಕಾಯಕಯೋಗಿ ಮುಂತಾದ ಅನೇಕ ಪ್ರಶಸ್ತಿಗಳನ್ನು ಸಂಘ ಸಂಸ್ಥೆಗಳು ನೀಡಿ ಸನ್ಮಾನಿಸಿವೆ.

ಹಾಗೆ ನೋಡಿದರೆ ಜಿಲ್ಲೆಯ ಪ್ರತೀ ಹಳ್ಳಿಯಲ್ಲಿಯೂ ಹವ್ಯಾಸಿ ನಾಟಕ ಕಲಾತಂಡಗಳಿವೆ. ಪ್ರತೀ ವರ್ಷ ಅವರು ವ್ರತದಂತೆ ನಾಟಕ ಪ್ರಯೋಗ ಮಾಡುತ್ತಾರೆ. ಅದರಲ್ಲಿ ಉತ್ತಮ ಕಲಾವಿದರೂ ಇರುತ್ತಾರೆ. ಆದರೆ ಅವರಿಗೆ ಬೇರೆ ವೃತ್ತಿಯನ್ನು ಅವಲಂಬಿಸಿ ಪ್ರವೃತ್ತಿಗಾಗಿ ಕಲಾವಿದರಾಗಿರುವ ಕಾರಣ ಹೊರಗೆಬಂದು ಪ್ರಚಾರ ಪಡೆದಿರುವುದಿಲ್ಲ ಅಂಥವರನ್ನೆಲ್ಲ ಪರಿಚಯಿಸಬೇಕೆಂದರೆ ಜಿಲ್ಲೆಗೊಂದು ಬೃಹತ್ ಗ್ರಂಥವನ್ನೆ ಹೊರತರಬೇಕಾಗುತ್ತದೆ. ಆದದ್ದರಿಂದ ಇಲ್ಲಿ ಗಮನಾರ್ಹ ಕಲಾವಿದರ ಪರಿಚಯವನ್ನು ಮಾತ್ರ ನೀಡಲಾಗಿದೆ. ಆ ಹವ್ಯಾಸಿ ಕಲಾವಿದರಲ್ಲಿ ಮತ್ತೆರಡು ಕಲಾವಿದರು ಇಲ್ಲಿದ್ದಾರೆ.

# ಕೊಪ್ಪಳ ತಾಲೂಕಿನ ಉಳಿದ ಕಲಾವಿದರು

**ವೀರೇಶ ಕುಮಾರ ಬೆಟಗೇರಿ–** ಕೊಪ್ಪಳದ ಶಿವರುದ್ರಪ್ಪಬೆಟಗೇರಿ ಮತ್ತು ಸಂಗಮ್ಮನವರ ಹೊಟ್ಟೆಯಲ್ಲಿ ದಿ೨೫–೮–೧೯೮೦ರಂದು ಜನಿಸಿದ ವೀರೇಶ ಬೆಟಗೇರಿ ಎಂ.ಬಿ.ಎ. ಮಾಡಿಕೊಂಡು ಹಂಪಿ ಕ.ವಿ.ವಿ ಯಿಂದ ಡಿಪ್ಲೋಮಾ ಇನ್ ಥೇಯಟರ್ಸ್ ಪದವಿ ಪಡೆದಿದ್ದಾರೆ. ಬಾಲ್ಯದಿಂದಲೇ ನಾಟಕಾಭಿರುಚಿ ಬೆಳಸಿಕೊಂಡ ಇವರು ಏಕಪಾತ್ರಾಭಿನಯದಲ್ಲಿ ಮಿಂಚಿ ೫೦ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ೧೦ ನಾಟಕಗಳನ್ನು ನಿರ್ದೇಶಿಸಿದ್ದಾರೆ, ೮ ನಾಟಕಗಳನ್ನು ರಚಿಸಿದ್ದಾರೆ. ಅದರಲ್ಲಿ ಕೆಲವು ಪ್ರಯೋಗಗೊಂಡಿವೆ. ಕಲಾತ್ಮಕ ನಾಟಕಗಳಲ್ಲಿ ಪರಿಣಾಮಕಾರಿಯಾಗಿ ಪಾತ್ರವಹಿಸುವ ವೀರೇಶ ಕಂಪನಿ ನಾಟಕಗಳಲ್ಲಿಯೂ ಹಾಗೆಯೆ ಅಭಿನಯಿಸಿ ಮೆಚ್ಚುಗೆ ಪಡೆದಿದ್ದಾರೆ. ಹಿನ್ನೆಲೆ ಗಾಯಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಒಟ್ಟಾರೆ ರಂಗಕಲೆಯನ್ನು ಮೈಮನಗಳಲ್ಲೆಲ್ಲ ತುಂಬಿಕೊಂಡಿರುವ ವಿರೇಶ ಒಬ್ಬ ಅಪರೂಪದ ಕಲಾವಿದ ಮುಂಬೈ ನಾಟಕೋತ್ಸವದಲ್ಲಿ ಪಾಲ್ಗೊಂಡು ಪ್ರಶಂಸೆಗೆ ಪಾತ್ರರಾಗಿದ್ದಾರೆ.

**ಗವಿಸಿದ್ಧಪ್ಪ ಹುಡೇಜಾಲಿ–** ಹವ್ಯಾಸಿ ಕಲಾವಿದ ಕೊಪ್ಪಳದ ಹುಡೇಜಾಲಿ ಹಾಸ್ಯಪಾತ್ರಕ್ಕೆ ಹೆಸರಾದರವು ೫ನೆಯ ತರಗತಿಯಲ್ಲಿಯೆ ಏಕಪಾತ್ರಾಭಿನಯದಿಂದ ಪ್ರಾರಂಭಿಸಿ ಇಲ್ಲಿಯವರೆಗೆ ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅದರಲ್ಲಿ ಪ್ರಮುಖವೆಂದರೆ ಗವಿಸಿದ್ದೇಶ್ವರ ಮಹಾತ್ಮೆ, ಮೆಟ್ಟಿಲುಗಳೆಂಟು ಅಟ್ಟಣಗೆ ಹದಿನೆಂಟು, ಕೆಟ್ಟಮೇಲೆ ಬುದ್ಧಿ ಬಂತು ಮುಂತಾದವುಗಳು, ಪೌರಾಣಿಕ ವಿರಾಟಪರ್ವ, ಕುರುಕ್ಷೇತ್ರ, ರಕ್ತರಾತ್ರಿ ಹೀಗೆ, ಹಲವಾರು ತಾಲೂಕಾ ರಂಗ ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿರುವ ಹಾಲಯ್ಯ ಇದ್ದಲ್ಲಿ ಹಾಸ್ಯ ಇರುತ್ತದೆ ಎನ್ನುವಷ್ಟು ಪ್ರಸಿದ್ಧಿ ಪಡೆದಿದ್ದಾರೆ. ಅವರಿಗೀಗ ೫೭ ವಯಸ್ಸು.

**ಶಿವಮೂರ್ತಿ ಮೇಟಿ–** ಕೊಪ್ಪಳ ಸಮೀಪದ ಓಜಿನಳ್ಳಿಯ ಮಲ್ಲಪ್ಪ ಮೇಟಿ ಮತ್ತು ನಿಂಗಮ್ಮರ ಮಗ ಶಿವಮೂರ್ತಿ ಮೇಟಿ ಹುಟ್ಟಿದ್ದು ದಿ.೧–೬–೧೯೬೭ ಏಳನೆಯ ತರಗತಿ ಓದಿ ವ್ಯವಸಾಯಕ್ಕೆ ತೊಡಗಿಕೊಂಡರೂ ತಂದೆ ರಂಗಕಲಾವಿದರಾಗಿದ್ದರಿಂದ ಬಾಲ್ಯದಲ್ಲಿಯೆ ರಂಗಭೂಮಿಯ ನಂಟನ್ನು ಬೆಳಸಿಕೊಂಡರು. ಮೊದಲಿಗೆ ಹಾಸ್ಯ ಪಾತ್ರವಹಿಸುತ್ತಿದ್ದ ಮೇಟಿ ನಂತರ ತಮ್ಮೂರಿನ ಪ್ರಸಿದ್ಧ ಸಿದ್ಧಪ್ಪ ಮಾಸ್ತರ ಗರಡಿಯಲ್ಲಿ ತಯಾರಾಗಿ ನವಕರ್ನಾಟಕ ಯುವಕ ಮಂಡಳಿ ಕಟ್ಟಿ ಹಲವಾರು ನಾಟಕಗಳನ್ನು ಪ್ರಯೋಗಿಸಿ ಅದರಲ್ಲಿ ಪ್ರಮುಖ ಪಾತ್ರ ವಹಿಸಿದರು.

ಚಿಕ್ಕಹಳ್ಳಿಯಾದ ಓಜಿನಹಳ್ಳಿ ರಂಗಕಲೆಗೆ ಹೆಸರಾದದ್ದು ಇಲ್ಲಿಏಳೆಂಟು ನಾಟಕ ತಂಡಗಳು ಪೈಪೋಟಿಯಿಂದ ನಾಟಕ ಪ್ರಯೋಗಿಸುವದರಿಂದ ಸುತ್ತಲ ಗ್ರಾಮಗಳ ಗಮನ ಸೆಳೆದಿತ್ತು ಸಾಕ್ಷರತೆ ಬಾಲಕರ್ಮಿ, ಏಡ್ಸ್ ವಿರೋಧಿ ಮುಂತಾದವುಗಳ ಕುರಿತು ಬೀದಿ ನಾಟಕ ಜಿಲ್ಲೆಯಲ್ಲಷ್ಟೇಯಲ್ಲದೆ ಪಕ್ಕದ ಜಿಲ್ಲೆಗಳಲ್ಲಿಯೂ ತಿರುಗಾಡಿ ಪ್ರಸಿದ್ಧರಾಗಿದ್ದಾರೆ. ಮೂಢನಂಬಿಕೆಗಳು ಏಕಾಂಕ ನಾಟಕ ಮತ್ತು ಆದರ್ಶ ಮಾನವ ನಾಟಕಗಳನ್ನು ತಾವೇ ರಚಿಸಿ ಪ್ರಯೋಗಿಸಿದ್ದಾರೆ. ಇವರೊಂದಿಗೆ ಲಲಿತಾ ಪೂಜಾರ ಮಲ್ಲಪ್ಪ ಹೂಗಾರ, ಖಾದರ ಸಾಬ ನದಾಫ, ಶರಣಪ್ಪಮೇಟಿ, ರೇವಣ್ಣ ಅಬ್ಬಿಗೇರಿ, ಶಂಕರ ಮಾರಿನಾಳ ಕಲಾವಿದರು ನಿರಂತರ ಕೈಜೋಡಿಸಿರುತ್ತಾರೆ.

**ಸ್ತ್ರೀಪಾತ್ರದ ಮಹೇಶ ಗದಗಿನಮಠ–** ಕೊಪ್ಪಳದ ೩೪ ವರ್ಷದ ಮಹೇಶ ತಂದಿ ವೀರಯ್ಯ ಗದಗಿನ ಮಠ ಸ್ತ್ರೀ ಪಾತ್ರ ಧರಿಸಿ ರಂಗದ ಮೇಲೆ ಬಂದರೆ ಯಾರೂ ಆತನನ್ನು ಗಂಡೆಂದು ಒಪ್ಪುವುದಿಲ್ಲ. ತಾನೇ ಕ್ಷಣಾರ್ಧದಲ್ಲಿ ಯಾವ ಪಾತ್ರ ಬೇಕೋ ಆ ಪಾತ್ರಕ್ಕೆ ಸಿದ್ಧನಾಗಿ ಬಿಡಬಲ್ಲ. ಒಂದೇ ನಾಟಕದಲ್ಲಿ ಎರಡು ಮೂರು ಸ್ತ್ರೀ ಪಾತ್ರ ನಿಭಾಯಿಸಬಲ್ಲ ಉದಾಹರಣೆಗೆ ಬಂಜೆ ತೊಟ್ಟಿಲಿನಲ್ಲಿ ಸಾವಿತ್ರಿ, ಮಾಲತಿ, ನಾಗರತ್ನ ಆಗಿ ಅಭಿನಯಿಸಿದರೆ. ಮಲಮಗಳಲ್ಲಿ ಅಚ್ಚಮ್ಮ ಮಂದಾಕಿನಿ. ಬಸ್ ಕಂಡಕ್ಟರಿನಲ್ಲಿ ಕುಂಟಿ, ಶಾಂತಾ ಮತ್ತು ವಿಲನ್ ಉಮಾ ಪಾತ್ರ ವಹಿಸಿದ್ದುಂಟು.

ಶಾಲಾ ದಿನಗಳಿಂದಲೇ ಸ್ತ್ರೀ ಪಾತ್ರಕ್ಕೆ ಹೆಸರು ಮಾಡಿದ ಮಹೇಶ ಎಸ್.ಎಸ್. ಎಲ್.ಸಿ ಪಾಸಾಗಿ ೧೯೯೮ರಲ್ಲಿ ಗವಾಯಿಗಳ ಕಂಪನಿ ಸೇರಿದ ನಂತರ ಎನ್.ಜಿ.ಓ ದಲ್ಲಿ ಕೆಲಸ ಮಾಡುತ್ತ ಕರೆಬಂದಾಗ ಹೋಗಿ ಈಗಲೂ ಪಾತ್ರ ವಹಿಸುತ್ತಾನೆ. ೨೦೦೮ರಲ್ಲಿ ಆದವಾನಿಯಲ್ಲಿ ಗವಾಯಿ ಕಂಪನಿಯಿಂದ ಎಚ್.ಎನ್ ಹೂಗಾರರ ವಿರಚಿಸಿದ ಆದವಾನಿ ಲಕ್ಷ್ಮಮ್ಮ ನಾಟಕ ಪ್ರಯೋಗಿಸಿದಾಗ ಅದರಲ್ಲಿ ಕಮಲಮತ್ತು ಚಾಕರಿ ಪಾಪಣ್ಣ ಸ್ತ್ರೀ ಮತ್ತು ಪುರುಷ ಎರಡೂ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿದ್ದರಿಂದ ಅಲ್ಲಿಯ ದೇವಸ್ಥಾನದವರು ಪ್ರಶಂಸಾಪತ್ರ ನೀಡಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಬಾದಾಮಿಯಲ್ಲಿ ನಾಟಕೋತ್ಸವ ಮಾಡಿದಾಗ ೨೦೦೯ರಲ್ಲಿ ಅಭಿನಂದನಾ ಪತ್ರ ನೀಡಿದೆ. ದಾವಣಗೇರಿಯಲ್ಲಿ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನ ನಡೆದಾಗ ೨೦೦೭ರಲ್ಲಿ ಅಭಿನಂದಿಸಿದೆ. ಹೀಗೆ ಹತ್ತಾರು ಪ್ರಶಸ್ತಿ ಪತ್ರ ದೊರೆತಿರುವ ಮಹೇಶ ಅಮೇಚೂರ ಕಂಪನಿಗಳಿಗೆ ಹೋಗಿ ಮಹಿಳೆಯರಷ್ಟೇ ಸಂಭಾವನೆ ಪಡೆಯುವ ಬೇಡಿಕೆಯ ನಟರಾಗಿದ್ದಾರೆ.

**ದೊಡ್ಡನಿಂಗಪ್ಪ ತಾಯಿ ಮರಿಯವ್ವ ಸಂಕಣ್ಣನವರು–** ೧೯೭೭ರಿಂದ ರಂಗಭೂಮಿಯಲ್ಲಿ ನಟನೆ, ನಿರ್ದೇಶನ ಮತ್ತು ಸಂಗೀತ ನಿರ್ದೇಶನ ಮಾಡುತ್ತ ಬಂದಿದ್ದಾರೆ. ರಂಗಗೀತೆ ಹಾಡುವುದಲ್ಲದೆ ಹಾರ್ಮೋನಿಯಂ ತಬಲಾ ಬಾರಿಸುವ ಇವರಿಗೆ ಅನೇಕ ಪ್ರಶಸ್ತಿ ಸನ್ಮಾನ ಲಭಿಸಿವೆ.

**ರಂಗಗೀತೆ ಗಾಯಕಿ ನಾಗರತ್ನಾ ಪೂಜಾರ–** ಪ್ರಸಿದ್ಧ ಹುಲಗಿ ಗ್ರಾಮದ ಯುವತಿ ನಾಗರತ್ನಾ ಪೂಜಾರರ ತಾಯಿ ರೇಣುಕಮ್ಮ ಪೂಜಾರ ಉತ್ತಮ

ರಂಗಕಲಾವಿದೆಯಾಗಿದ್ದರಿಂದ ೮ವರ್ಷದವಳಿರುವಾಗಲೇ ತನ್ನ ಸುಮಧುರ ಕಂಠದಿಂದ ರಂಗಗೀತೆ ಹಾಡತೊಡಗಿದ ನಾಗರತ್ನಾ ಬಿ.ಎ. ಬಿಎಡ್ ಪದವೀಧರಳಾಗಿ ಬೀದಿ ನಾಟಕಗಳ ಮೂಲಕ ರಂಗ ಪ್ರವೇಶಿಸಿ ಲಕ್ಷ್ಮಣರೇಖೆ ಮತ್ತು ಬಂಜೆ ತೊಟ್ಟಿಲು ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಬೆಳಕಿಗೆ ಬಂದರು. ರಕ್ತರಾತ್ರಿ, ಎಚ್ಚಮ್ಮನಾಯಕ, ಕನಸಿನ ಅಂಗಳದಲ್ಲಿ ಹೀಗೆ ವೃತ್ತಿ ಮತ್ತು ಕಲಾತ್ಮಕ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದ ಇವರಿಗೆ ಮೈಸೂರ ದಸರಾ ಪ್ರಶಸ್ತಿ ಮೊದಲ್ಗೊಂಡು ಅನೇಕ ಪ್ರಶಸ್ತಿಗಳು ದೊರೆತಿವೆ.

## ರಂಗಸಂಗೀತಗಾರ ತೋಟಪ್ಪ ಕಾಮನೂರು

ಕೊಪ್ಪಳ ಸಮೀಪದ ಹ್ಯಾಟಿ ಗ್ರಾಮದ ೪೫ವಯಸ್ಸಿನ ತೋಟಪ್ಪ ಕಾಮನೂರ ಹಾರ್ಮೋನಿಯಂ, ಕ್ಯಾಸಿಯೋ ಹಾಗು ರಿದಂಪ್ಯಾಡ್ ವಾದ್ಯ ನುಡಿಸುವದರಲ್ಲಿ ಹೆಸರುಮಾಡಿ ಎಲ್ಲಿಯೇ ನಾಟಕ ನಡೆದರೂ ಇವರ ಹಾಜರಿ ಇದ್ದೇ ಇರುತ್ತದೆ. ಜತೆಗೆ ಹಿನ್ನೆಲೆಯಲ್ಲಿ ರಂಗಗೀತೆ ಹಾಡುವದರಲ್ಲಿಯೂ ಪ್ರಸಿದ್ಧರಾಗಿದ್ದಾರೆ. ಮೊದಲಿಗೆ ಮೂಡಲಪಾಯದ ದೊಡ್ಡಾಟದಿಂದ ರಂಗಪ್ರವೇಶಿಸಿ ೨೦೦ ಕ್ಕೂ ಹೆಚ್ಚು ನಾಟಕಗಳಲ್ಲಿ ಎಲ್ಲ ಬಗೆಯ ಪಾತ್ರ ವಹಿಸಿದ್ದಾರೆ.

## ನಾಟಕಕಾರ ಅಶ್ವತ್ಥ ದೇಸಾಯಿ

ಹುಲಗಿಯ ೭೦ ವಯಸ್ಸಿನ ಅಪರೂಪದ ನಾಟಕಕಾರ ಅಶ್ವತ್ಥ ದೇಸಾಯಿ ಪ್ರಸಿದ್ಧ ಕೃತಿಗಳನ್ನು ತಾವೇ ನಾಟಕರೂಪಕ್ಕೆ ಅಳವಡಿಸಿ ಪ್ರದರ್ಶಿಸುವವರು. ನಿಸರ್ಗ ಪ್ರಿಯರ ಮೂಲ ಕೃತಿಯಿಂದ ರಾಜಾ ಯಶೋಧರ ಮತ್ತು ಅದಕ್ಕೂ ಮೊದಲಿಗೆ ಸುಶ್ಮಿತಾರ ಪ್ರಶಸ್ತಿ ನಾಟಕಗಳನ್ನು ರಚಿಸಿ ರಂಗ ಪ್ರಯೊಗ ಮಾಡಿ ರಂಗಕಲೆಗೆ ಹೊಸಕಳೆ ತಂದರು. ೮೦ರ ದಶಕದಲ್ಲಿ ಮಂಗಳಾ ನನ್ನ ಅತ್ತಿಗೆ ನಾಟಕದ ಮೂಲಕ ರಂಗಪ್ರವೇಶಿಸಿ ಹಲವಾರು ನಾಟಕ ರಚಿಸಿ ನಿರ್ದೇಶಿಸಿ ನಟಿಸಿ ರಾಜ್ಯ ಮಟ್ಟದ ನಾಟಕ ಸ್ಪರ್ಧೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ೨೦೦೯ರಲ್ಲಿ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ಲಭಿಸಿದೆ.

## ಕೊಟ್ರಯ್ಯಸ್ವಾಮಿ ಹುಲಗಿ

ಜಿಲ್ಲೆಯಲ್ಲಿ ಹಾಸ್ಯಪಾತ್ರಕ್ಕೆ ಹೆಸರಾದ ಕೊಟ್ರಯ ಸ್ವಾಮಿ ತಂದೆ ಚನ್ನಯ್ಯಸ್ವಾಮಿ ಹಿರೇಮಠ ಇವರು ತುಂಗಭದ್ರದಾ ಆಣೆಕಟ್ಟಿನ ಹಿನ್ನೀರಿನಲ್ಲಿ ಮುಳಗಡೆಗೊಂಡ ಕೋರಗಲ್ಲ ಗ್ರಾಮದಲ್ಲಿ ದಿನಾಂಕ ೦೫-೦೯-೧೯೫೬ರಲ್ಲಿ ಜನಿಸಿದರು ನಂತರ ಹುಲಗಿಯಲ್ಲಿ ಬಂದು ವಾಸವಾಗಿ ೧೯೭೮ರಲ್ಲಿ ಬಂಜೆತೊಟ್ಟಿಲು ನಾಟಕದ ಶೆಟ್ಟಿಯ ಪಾತ್ರದ ಮೂಲಕ ಪ್ರಸಿದ್ಧಿಪಡೆದು ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಅಪ್ಪರಾಜ ಮುಧೋಳ ಕಂಪನಿ ಮತ್ತು ಕೆ.ಬಿ.ಆರ್. ಡ್ರಾಮಾ ಕಂಪನಿಗಳಲ್ಲಿಯೂ ನಟಿಸಿದ ಕೊಟ್ರಯ್ಯ ತಾವೇ ಭುವನೇಶ್ವರಿ ಕನ್ನಡ ಕಲಾಸಂಘ ಹುಲಗಿ ಎನ್ನುವ ಕಂಪನಿಕಟ್ಟಿ ರೊಚ್ಚಿಗೆದ್ದ ರಾಮನಾಟಕವನ್ನು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ

ಮುಂತಾದೆಡೆ ೩೭೦ ಪ್ರಯೋಗ ಮಾಡಿದ ಹಿರಿಮೆ ಹಿರೇಮಠರದು. ಇದರಲ್ಲಿಯ ಗುಕ್ಕನ ಹಾಸ್ಯ ಪಾತ್ರವೇ ಇವರ ಪ್ರಧಾನ ಪಾತ್ರ ಹೆಚ್.ಎಂ. ನಾಯಕ ಮುಂತಾದ ನಾಟಕ ನಿರ್ದೇಶನ ಮಾಡಿದ್ದಲ್ಲದೆ ದಂಗೆಯ ಮುಂಚಿನ ದಿನಗಳು ನಾಟಕಕ್ಕಾಗಿ ಪ್ರಶಸ್ತಿ ಪಡೆದಿದ್ದಾರೆ. ಮೇಕಪ್ ಮಾಡುವದು, ಹಾಡುವುದು, ಹಾಡಿಗೆ ಟ್ಯೂನ್ ಹಾಕುವದರಲ್ಲಿ ಕೊಟ್ರಯ್ಯ ನುರಿತವರಾಗಿದ್ದಾರೆ ಒಂದು ಧಾರಾವಾಹಿಯಲ್ಲಿಯೂ ಅಭಿನಯಿಸಿದ್ದಾರೆ.

೨೦೦೬ರಲ್ಲಿ ಕೊಟ್ರಯ್ಯನವರು ಕೊಪ್ಪಳ ತಾಲೂಕ ಕಲಾವಿದರ ಸಂಘ ರಚಿಸಿ ಅನೇಕ ಕಲಾವಿದರನ್ನು ಪ್ರೋತ್ಸಾಹಿಸಿದ್ದಾರಲ್ಲದೆ. ಸಾಕಷ್ಟು ಕಲಾವಿದರಿಗೆ ನೆರವು ಕಲ್ಪಿಸಿದ್ದಾರೆ. ಇದರ ಉಪಾಧ್ಯಕ್ಷರಾದ ಚಾಂದ್‌ಪಾಶಾ ಅವರೂ ಸಹಿತ ಉತ್ತಮ ಕಲಾವಿದರಾಗಿದ್ದು ತಮ್ಮ ಬಹದ್ದೂರ ಬಂಡಿಯಲ್ಲಿ ೩೦ ವರ್ಷಗಳಿಂದ ಪ್ರತಿ ವರ್ಷ ಒಂದೆರಡು ಹೊಸ ಹೊಸ ನಾಟಕಗಳನ್ನು ಪ್ರಯೋಗಿಸುತ್ತ ಬಂದಿದ್ದಾರೆ

## ರುದ್ರಪ್ಪ ಭೃಂಗಿ

ಹುಲಗಿಯ ಅಭಿನಯ ತಂಡದ ಕಾರ್ಯ ದರ್ಶಿಯಾಗಿರುವ ೪೫ ವಯಸ್ಸಿನ ರುದ್ರಪ್ಪ ಭೃಂಗಿ ೧೯೮೪ರಲ್ಲಿ ಶೀಲ ಸುಟ್ಟರೂ ಸೂಳೆಯಲ್ಲ ನಾಟಕದ ಮೂಲಕ ರಂಗ ಪ್ರವೇಶಿಸಿ ಆಶಾಲತಾ, ಕಿವುಡ ಮಾಡಿದ ಕಿತಾಪತಿ, ಎಷ್ಟ ನಗ್ತಿ ನಗು ಮುಂತಾದ ವೃತ್ತಿ ಮತ್ತು ಕಲಾತ್ಮಕ ಹಲವಾರು ನಾಟಕಗಳಲ್ಲಿ ಹಾಸ್ಯ, ವಿಲನ್ ಮತ್ತು ನಾಯಕನ ಪಾತ್ರವಹಿಸಿ ಮೆಚ್ಚುಗೆ ಪಡೆದಿದ್ದಾರೆ. ೧೯೮೬ರಲ್ಲಿ ಬೋಣಿಮಲ್ಲೈನಲ್ಲಿ ನಡೆದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ 'ಉತ್ತರ ಅಗದಿ ಸರಳದ' ಎನ್ನುವ ಪ್ರಯೋಗಾತ್ಮಕ ನಾಟಕದಲ್ಲಿ ಪ್ರಭುವಿನ ಪಾತ್ರವಹಿಸಿ ಉತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ ಹಾಗೆಯೆ ದಾಳ ಮತ್ತು ದಂಗೆಯ ಮುಂಚಿನ ದಿನಗಳು ನಾಟಕದಲ್ಲಿ ಪೋಷಕ ನಟರಾಗಿ ಶ್ರೇಷ್ಠ ಪೋಷಕ ನಟ ಪ್ರಶಸ್ತಿ ಪಡೆದಿದ್ದಾರೆ.

## ನಾರಾಯಣರಾವ್ ಜೋಶಿ

ರಕ್ತರಾತ್ರಿ ನಾಟಕದ ಕೃಷ್ಣನ ಪಾತ್ರಕ್ಕೆ ಪ್ರಸಿದ್ಧರಾಗಿರುವ ಹುಲಗಿಯ ಕಲಾವಿದ ನಾರಾಯಣರಾವ್ ಜೋಶಿ ರಾಗಬದ್ಧವಾಗಿ ರಂಗಗೀತೆ ಹಾಡುವ ಅಪರೂಪದ ಕಲಾವಿದರು ಅಕ್ಷಯಾಂಬರ ಮತ್ತು ಸಾಮಾಜಿಕ ಆಶಾಲತಾ ಮುಂತಾದ ಹಲವಾರು ನಾಟಕಗಳಲ್ಲಿ ಅಭಿನಯಿಸುತ್ತ ಬಂದಿದ್ದಾರೆ.

## ಪ್ರಾಸಾಧನ ಕಲಾವಿದ ಚನ್ನಪ್ಪ ಹೂಗಾರ

ಚುಕ್ಕನಕಲ್ಲಿನ ಚನ್ನಪ್ಪ ಹೂಗಾರ ಬಯಲಾಟ, ನಾಟಕಗಳಲ್ಲಿ ಅಭಿನಯಿಸುತ್ತ ಪ್ರಾಸಾಧನ ಕಲೆಯನ್ನು ಕರಗತ ಮಾಡಿಕೊಂಡು ಅಮೆಚ್ಯೂರ ಕಂಪನಿ ನಾಟಕ ನಡೆದಲ್ಲಿ ಹಾಜರಿದ್ದು ಯಾವ ಪಾತ್ರಕ್ಕೆ ಯಾವ ರೀತಿಯ ಮೇಕಪ್ ಮಾಡಬೇಕು ಅದನ್ನೆಲ್ಲ ಮಾಡುತ್ತಾನೆ ಜತೆಗೆ ನಾಟಕದ ಸೀನರಿಗಳನ್ನು ಸಿದ್ಧಪಡಿಸುವದು ಇವರ ವೃತ್ತಿಯಾಗಿದೆ.

## ಡ್ರಾಮಾಸೀನರಿ ಮತ್ತು ಕಲಾವಿದರು

ಜಿಲ್ಲೆಯಲ್ಲಿ ಮೂರು ಡ್ರಾಮಾ ಸೀನರಿ ಸರಬರಾಜು ಮಾಡುವವರನ್ನು ಗುರುತಿಸಲಾಗಿದೆ ಈಗಾಗಲೇ ಹನುಮಸಾಗರದ ಬಸವರಾಜ ಧುತ್ತರಗಿ ಪ್ರಸ್ತಾಪ ಮಾಟಲಾಗಿದೆಯಾದರೂ ಆತ ತೀರಿಕೊಂಡಿದ್ದರಿಂದ ಅದು ನಿಂತಂತೆಯೆ ಇನ್ನು ಗಂಗಾವತಿಯ ರೇವಣಸಿದ್ಧಯ್ಯ ಬೃಹನ್ಮಠರು ಕಳೆದ ೨೫ ವರ್ಷಗಳಿಂದ ನೇತ್ರಮಲ್ಪಿ ಪರ್ಲ್ಪೋಸ್ ಡ್ರಾಮಾ ಸೀನರಿಜ್ ಎನ್ನುವದನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯ ಬಹುತೇಕ ಕಡೆ ಹಲಗೇರಿಯ ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್ ಎನ್ನುವದನ್ನು ಲಕ್ಷ್ಮಣ ಫಿಟ್ಟರ್ ಎನ್ನುವವರು ೨೦ ವರ್ಷಗಳಿಂದ ಸರಬರಾಜ ಮಾಡುತ್ತ ಬಂದಿದ್ದಾರೆ. ಮೊದಲು ಈ ಸೀನ್ಸ್‌ಗಳಿಗೆ ಇಲಕಲ್ ಪೇಂಟರ್ ಚಿತ್ರ ಬಿಡಿಸಿಕೊಟ್ಟರೆ ನಂತರ ಶಶಿಧರ ಎನ್ನುವವರು ಬಣ್ಣ ಕೊಟ್ಟಿದ್ದಾರೆ. ಕಾಲಕಾಲಕ್ಕೆ ನವೀಕರಿಸುವದರಿಂದ ಇವು ಉತ್ತಮವಾಗಿವೆ ಇದರಲ್ಲಿ ಕೆಲಸ ಮಾಡುವ ಲಕ್ಷ್ಮಣ ಪಾತ್ರಗಳಿಗೆ ಮೇಕಪ್ ಮಾಡುವದರಲ್ಲಿಯೂ ನಿಪುಣನಾಗಿದ್ದಾನೆ.

ಬಾಣಾಪುರದ ಕಾಳಪ್ಪ ಪತ್ತಾರ ಅದ್ಭುತ ಕಲಾವಿದರಾಗಿ ಆಗಿನ ಕಾಲದಲ್ಲಿ ಗಾಂಧೀಜಿಯವರ ಚಿತ್ರ ಬಿಡಿಸಿ ಅವರಿಗೇ ಅರ್ಪಿಸಿ ಶಹಬ್ಬಾಸ್‌ಗಿರಿ ಪಡೆದಿದ್ದರು. ಅವರು ನಾಟಕ ಸೀನರಿಗಳಿಗೆ ತುಂಬಾ ಸುಂದರವಾದ ಚಿತ್ರಗಳನ್ನು ಬಿಡಿಸುತ್ತಿದ್ದರಲ್ಲದೆ ಉತ್ತಮ ತಬಲಾ ಕಲಾವಿದರಾಗಿದ್ದರು. ಇವರ ಹಿರಿಯ ಮಗ ಶಂಕರ ಪತ್ತಾವರವರೂ ಶ್ರೇಷ್ಠ ಮಟ್ಟದ ಚಿತ್ರ ಕಲಾವಿದರು. ಈಗ ಆ ಕೆಲಸಬಾರದ್ದರಿಂದ ಬಿಟ್ಟಿದ್ದಾರೆ.

ಯಲಬುರ್ಗಿ ತಾಲೂಕಿನ ಬೇವೂರ ಗ್ರಾಮದ ಚರಾರಿ ಕುಟುಂಬದ ಮೂರುಜನ ಕಳೆದ ೩೦ ವರ್ಷಗಳಿಂದ ಡ್ರಾಮಾಸೀನರಿ ನಡೆಸಿಕೊಂಡು ಬಂದಿದ್ದಾರೆ. ಹನುಮಂತಪ್ಪ, ಗವಿಸಿದ್ದಪ್ಪ ಇವರು ತಾವೇ ಸೀನರಿಗಳನ್ನು ಸಿದ್ಧಪಡಿಸಿ ಸುತ್ತಲಿನ ಎಲ್ಲ ಹಳ್ಳಿಗಳಿಗೆ ಸರಬರಾಜು ಮಾಡುತ್ತ ಯಾವಾಗಲೂ ನವೀಕರಿಸುವಲ್ಲಿ ಪ್ರಸಿದ್ಧಿ ಪಡೆದಿದ್ದಾರೆ.

# ಜಿಲ್ಲೆಯ ರಂಗಮಂದಿರಗಳು

ಜಿಲ್ಲಾಕೇಂದ್ರದಲ್ಲಿ ಉತ್ತಮವಾದ ರಂಗಮಂದಿರವಿಲ್ಲ ಆದರೆ ನಗರದ ಹೃದಯ ಭಾಗದಲ್ಲಿರುವ ಸಾಹಿತ್ಯ ಭವನವನ್ನೇ ರಂಗಮಂದಿರವಾಗಿ ಉಪಯೋಗಿಸಲಾಗುತ್ತಿದೆ. ಆದರೆ ಇದು ತೀರಾ ಕಳಪೆ ಮಟ್ಟದ್ದಾಗಿ ಅನಿವಾರ್ಯಕ್ಕೆ ಉಪಯೋಗಿಸುವಂತಾಗಿದೆ. ಇದರ ನವೀಕರಣಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಯತ್ನಿಸಿದರಾದರೂ ಫಲ ನೀಡಿಲ್ಲ. ಈಗ ಜಿಲ್ಲಾಡಳಿತವೇ ಇದರ ನವೀಕರಣಕ್ಕೆ ಮುಂದಾಗಿದೆ. ಇನ್ನು ೨೦೧೧-೨೦೧೨ನೆಯ ಸಾಲಿನಲ್ಲಿ ಜಿಲ್ಲಾ ರಂಗಮಂದಿರಕ್ಕಾಗಿ ೩೧೬.೩೫ ಲಕ್ಷ ಅಂದಾಜು ಮೊತ್ತದ ರೂಪರೇಷೆ ಸಿದ್ಧಪಡಿಸಿದ್ದಕ್ಕೆ ಸರ್ಕಾರ ರೂ ೧೭೧.೬೩ಲಕ್ಷ ಬಿಡುಗಡೆ ಮಾಡಿದ್ದರಿಂದ ನಗರದ ಹೊರಗಡೆ ಅದರ ಕಟ್ಟಡ ಅರ್ಧಮರ್ಧವಾಗಿ ನಿಂತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಹಿತಿಯ ಪ್ರಕಾರ ಜಿಲ್ಲೆಯಲ್ಲಿ ಸಂಸ್ಕೃತಿ ಭವನ ಮತ್ತು ರಂಗಮಂದಿರ ನಿರ್ಮಾಣಕ್ಕಾಗಿ ೨೫ಕ್ಕೂ ಹೆಚ್ಚು ಕಟ್ಟಡಗಳಿಗೆ ಹಣ ಮಂಜೂರಿಯಾದರೂ ಬಹಳಷ್ಟು ಅದರಲ್ಲಿ ಅರ್ಧಮರ್ಧ ಸ್ಥಿತಿಯಲ್ಲಿಯೆ ಉಳಿದಿವೆ. ಹುಲಿಗಿಯಲ್ಲಿ ಪೂರ್ಣಗೊಂಡಿದೆ. ಯಲಬುರ್ಗಿ ತಾಲೂಕಿನ ಮಂಡಲಗಿರಿಯಲ್ಲಿ ಮೊದಲಿನಿಂದಲೂ ಒಂದು ಉತ್ತಮವಾದ ರಂಗಮಂದಿರವಿದೆ.

ಕೊಪ್ಪಳ ಪಕ್ಕದ ಭಾಗ್ಯನಗರದಲ್ಲಿ ಶ್ರೀ ಶಾರದಾ ಸಂಗೀತ ನಾಟಕ ಮಂಡಳಿ ಇವರಿಗೆ ಶ್ರೀನಿವಾಸ ಗುಪ್ತಾ ಎನ್ನುವವರು ಒಂದು ಉತ್ತಮವಾದ ಬಯಲು ರಂಗಮಮದಿರ ಕಟ್ಟಿಸಿದ್ದಾರೆ. ಇಲ್ಲಿ ಪ್ರತೀ ವರ್ಷ ಒಂದೆರಡು ನಾಟಕಗಳನ್ನು ಅಶೋಕ ಗೋರಂಟ್ಲಿ, ಬಾಲು ಬಾವಿಕಟ್ಟಿ, ಫೀರಸಾಬ ಭೈರಾಪುರ, ಶಂಕರರಾಯದುರ್ಗಾ, ಭಿಮಸೇನ ನಿರಂಜನ್, ಶಂಕರ ಗೋರಂಟ್ಲಿ, ಇವರೆಲ್ಲ ಹತ್ತಾರು ವರ್ಷಗಳಿಂದ ಅಭಿನಯಿಸುತ್ತಾ ಬಂದಿದ್ದಾರೆ.

# ಗ್ರಂಥ ಋಣ

| | ಗ್ರಂಥದ ಹೆಸರು | ಸಂಪಾದಕರು / ಲೇಖಕರು |
|---|---|---|
| ೧. | ಕುಷ್ಟಗಿ ತಾಲೂಕಾ ಕಲಾವಿದರ ಪರಿಚಯ | ಶ್ರೀನಿವಾಸ ಜಹಗೀರದಾರ, ರವೀಂದ್ರ ಬಾಕಳೆ, ನಟರಾಜ ಸೋನಾರ, ನಾಗೇಶ ಕಾಟವಾ |
| ೨. | ಗಂಗಾವತಿ ತಾಲುಕಾ ಕಲಾಸೌರಭ | ವಾಣಿಶ್ರೀ ಎಸ್. ಪಾಟೀಲ, ರಮೇಶ ಗಬ್ಬೂರ, ಎಸ್.ಬಿ. ಗೊಂಡಬಾಳ |
| ೩. | ಕೊಪ್ಪಳ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಪರಂಪರೆ | ಎಚ್.ಎಸ್. ಪಾಟೀಲ |
| ೪. | ತಿರುಳ್ಗನ್ನಡ, ಸ್ಮರಣ ಸಂಚಿಕೆ, ಅ.ಭಾ. ೬೯ನೇಯ ಕ.ಸಾ. ಸಮ್ಮೇಳನ | ಅಲ್ಲಮಪ್ರಭು ಬೆಟ್ಟದೂರು |
| ೫. | ಕೊಪಣಸಿರಿ–ಸ್ಮರಣ ಸಂಚಿಕೆ ೭೮ನೆಯ ಅ.ಭಾ.ಕ.ಸಾ .ಸಮ್ಮೇಳನ | ಶೇಖರಗೌಡ ಪಾಟೀಲ |
| ೬. | ರಂಗನಕ್ಷತ್ರಗಳು | ಡಾ। ಮಲ್ಲಿಕಾರ್ಜುನ ಕುಂಬಾರ |
| ೭. | ರಂಗಸೆಲೆ | ಗುಡಿಹಳ್ಳಿ ನಾಗರಾಜ |
| ೮. | ಧೀಮಂತ ರಂಗಕಲಾವಿದೆ ರೆಹಮಾನವ್ವ ಕಲ್ಮನಿ | ಗವೀಶ ಹಿರೇಮಠ |
| ೯. | ಜಿ.ಎನ್. ಅಂಜಲಿ | ವಾಣಿಶ್ರೀ ಎಸ್. ಪಾಟೀಲ |
| ೧೦. | ರಂಗನಾಟಕ | ಗುಡಿಹಳ್ಳಿ ನಾಗರಾಜ |
| ೧೧. | ಪಿ.ಬಿ. ಧುತ್ತರಗಿ | ಡಾ। ವೀರಣ್ಣರಾಜೂರ |
| ೧೨. | ಮಾರುತೇಶ ಮಾಂಡ್ರೆ | ಡಾ। ಗವಿಸಿದ್ಧಪ್ಪ ಎಚ್. ಪಾಟೀಲ |
| ೧೩. | ಎಚ್.ಟಿ.ಅರಸ | ಆರ್.ಜಿ. ಹಳ್ಳಿ ನಾಗರಾಜ |
| ೧೪. | ಗರುಡ ಶ್ರೀಪಾದರಾಯರು | ಶ್ಯಾಮಸುಂದರ ಬಿದರಕುಂದಿ |
| ೧೫. | ಸಿದ್ಧಶ್ರೀ | ಡಾ। ಬಿ.ವ್ಹಿ. ಶಿರೂರ |
| ೧೬. | ನಮ್ಮ ಭಾಗ್ಯೋದಯ ನಾಟಕ | ಗರುಡ ಸದಾಶಿವರಾಯ |
| ೧೭. | ಕಲಾರಾಧಕ | ವಿಠ್ಠಪ್ಪ ಗೋರಂಟ್ಲಿ, ಮಂಜುನಾಥ ಗೊಂಡಬಾಳ, ಜ್ಯೋತಿ ಗೊಂಡಬಾಳ |

# ಕೊಪ್ಪಳ ಜಿಲ್ಲೆಯ ಕಲಾವಿದರು ಮತ್ತು ತಂತ್ರಜ್ಞರು



ಶ್ರೀ ನಾರಾಯಣಸಾ
ಭೀಮಾಸಾ ದೇವಳೇ



ಎಸ್.ವಿ. ಪಾಟೀಲ
ಗುಂಡೂರು




ಸೂರ್ಯಕಾಂತ
ಗುಣಕಿಮಠ




ಸ್ತ್ರೀಪಾತ್ರದ ಶಿವಲಿಂಗಶಾಸ್ತ್ರಿ



ಬಸವರಾಜ ಬಿನ್ನಾಳ



ಮಲ್ಲಿಕಾರ್ಜುನ ಜಾನೆಕಲ್ಲು



ಕೆ. ವಾಸುದೇವ



ಬಾಬಣ್ಣ ಕಲ್ಮನಿ ಕುಕನೂರು



ಜಿ.ಎಸ್. ಅಂಜಲಿದೇವಿ




ಜಿ. ವಂದನಾ, ಗಂಗಾವತಿ





ದಿ॥ ಶಿಗ್ನಾಳು ಬಾಲಿರಾಜು




ವೀರಣ್ಣ ಹುರಕಡ್ಲಿ



ರಾಮಚಂದ್ರಪ್ಪ ಉಪ್ಪಾರ


ಆನಂದ ಉಪ್ಪಾರ


ಪರುಶರಾಮ ದಲಬಂಜನ್


ಪರಶುರಾಮ ಬಣ್ಣದ



ಮಾರುತೇಶ ವಿಭೂತಿ



ಚಂದ್ರಕಾಂತ ಮಹಾಂತಾ



ಶೇಖರ ಮಹಾಂತಾ


ನಿಂಗಪ್ಪ ಈಶಪ್ಪ ಮಹಾಂತ


ರಮೇಶ ಮಹಾಂತಾ


ಲಿಂಗರಾಜ ಪಲ್ಲೇದ


ಅಂಬಣ್ಣ ಮಾಸ್ತರ


ಮಲ್ಲಿಕಾರ್ಜುನ ಗೌಡ



ವಿಜಯಲಕ್ಷ್ಮೀ ಕೊಟಗಿ




ದಯಾನಂದ ಸಾಗರ




ಯಮನಪ್ಪ
ಭೀಮಪ್ಪ ಜೂಡಿ



ಅರುಣಾ ನರೇಂದ್ರ



ಮಲ್ಲಪ್ಪ ಕುರಿ




ಗವಿಸಿದ್ದಪ್ಪ ಕೋನಸಾಗರ



ಲಲಿತಾ ಪೂಜಾರ




ಭರಮಪ್ಪ ಜುಟ್ಲದ



ಶ್ರೀಧರ ದೇವಪೂರ




ಟಿ.ಹೆಚ್. ತಳಕಲ್




ವೀರಯ್ಯ ಹಿರೇಮಠ




ಶಾಂತಮ್ಮ ಪೂಜಾರಿ




ಪುಟ್ಟಪ್ಪ ಪೂಜಾರ



ಶೇಖರರೆಡ್ಡಿ



ಕಾಶಿನಾಥ ಕುಕನೂರು




ಖಾಜಾಮೈನುದ್ದಿನ್




ಮಲ್ಲನಗೌಡ ಮಾಲಿಪಾಟೀಲ




ಹನುಮಂತಕುಮಾರ ಮುಧೋಳ




ಶರಣಪ್ಪ ಕುದರಿ



ಪಿ.ಎಸ್. ನಾಜರ್




ಕೆ.ಹುಸೇನ ಸಾಬ



ನಾಗೇಶ ಕಾಟವಾ



ಎಸ್.ಎಸ್. ಹಿರೇಮಠ




ಶ್ರೀನಿವಾಸ ಜಹಗೀರದಾರ




ಬಸವರಾಜ ಹೆಸರೂರ



ರವೀಂದ್ರ ಭಾಕಳೆ



ಟಿ.ಎಸ್. ಹೂಗಾರ


ಸಿ. ಮಹಾಲಕ್ಷ್ಮೀ


ಮಲ್ಲೇಶ ಕೋಟೆ



ಮಾರುತಿ ಐಲಿ


ಬಸವರಾಜ ಐಲಿ



ಎಸ್. ರಮೇಶ್



ಮಹಾಬಲೇಶ್ವರ



ಎಂ. ಪರಶುರಾಮ ಪ್ರಿಯ



ಕೆ. ಕೆಂಪಣ್ಣ


ಅನುರಾಧ


ಸುರೇಶ ಕಂಬಳಿ


ವೀರೇಶ್ ಕುಮಾರ್


ಗವಿಸಿದ್ದಪ್ಪ
ಹುಡೇಜಾಲಿ


ಶಿವಮೂರ್ತಿ ಮೇಟಿ


ಮಹೇಶ್




ಶ್ರೀ ಶಾರದಾ ಸಂಗೀತ ನಾಟಕ ಮಿತ್ರ ಮಂಡಳಿ, ಭಾಗ್ಯನಗರ ಇವರ "ರಕ್ತರಾತ್ರಿ" ನಾಟಕ



ಗಿಣಗೇರಾ & ಕೊಪ್ಪಳದಲ್ಲಿ ನಡೆದ "ಗಂಡುಗಲಿ ಕುಮಾರ ರಾಮ"



ಬೂದಗುಂಪ ಗ್ರಾಮದ "ರಕ್ತರಾತ್ರಿ" ನಾಟಕ



ಕಲ್ಲತಾವಗೇರಾ ಗ್ರಾಮದಲ್ಲಿ "ಧನಿಕರ ದೌರ್ಜನ್ಯ" ನಾಟಕ



ಕೊಪ್ಪಳದಲ್ಲಿ ನಡೆದ "ಟಿಪ್ಪು ಸುಲ್ತಾನ" ನಾಟಕ



"ಟಿಪ್ಪು ಸುಲ್ತಾನ" ನಾಟಕದ ಮತ್ತೊಂದು ಚಿತ್ರ



ಪ್ರಗತಿ ಕಲಾ ಬಳಗ ಕೊಪ್ಪಳ ಇವರಿಂದ 2012ರಲ್ಲಿ ಅಭಿನಯಿಸಿದ,
ಪಿ. ಲಂಕೇಶರ ಸಂಕ್ರಾತಿ ನಾಟಕದಲ್ಲಿ ವಿಠ್ಠಪ್ಪ ಗೋರಂಟ್ಲಿ ವಿ.ಬಿ. ರಡ್ಡೇರ, ಕೆ.ವಾಸು



ಆಂಧ್ರದ ಆದವಾನಿಯಲ್ಲಿ ಗವಾಯಿಕಂಪನಿ ಆಡಿದ "ಆದವಾನಿ ಲಕ್ಷ್ಮಮ್ಮ" ನಾಟಕ



ತಾಲ್ಲೂಕಾ ಕಲಾವಿದರ ಸಂಘ ಕೊಪ್ಪಳ ಪ್ರಯೋಗಿಸಿದ ನಾಟಕವೊಂದರ ದೃಶ್ಯ



"ಶೀಲಸುಟ್ಟಿತು ಸೇಡುತೀರಿತು" ಸ್ವರಚಿತ ನಾಟಕದಲ್ಲಿ ಟಿ.ಎಸ್. ಹೂಗಾರ ನಾಗೇಂದ್ರಗೌಡ ಖಳನಾಯಕನ ಪಾತ್ರದಲ್ಲಿ, ಸಹನಟಿ ಲತಾ ಗದಗ ಪಾರ್ವತಿ ಪಾತ್ರದಲ್ಲಿ



ವಿಠ್ಠಪ್ಪ ಗೋರಂಟ್ಲಿ
ಪ್ರೇಮಚಂದ ಕಥೆಯಾಧಾರಿತ
ಬೋಲೋ ರಾಮನ ಜೀವ
ನಾಟಕದಲ್ಲಿ ವಿಠ್ಠಪ್ಪ ಗೋರಂಟ್ಲಿ
ನಾರದನ ಪಾತ್ರದಲ್ಲಿ
ಕಾಣಿಸಿಕೊಂಡಿದ್ದು. ಶಾಂತರಸರ
ಮಗಳು ಭಾರತಿ ಮೋಹನ
ಕೋಟೆಯವರು ಬೋಲೋ ರಾಮನ
ಹೆಂಡತಿಯ ಪಾತ್ರ ಅಭಿಯಿಸಿದ್ದರು



ಚಂದ್ರಶೇಖರ ಕಂಬಾರರ
'ಚಾಳೀಶ' ನಾಟಕದಲ್ಲಿ
ವಿಠ್ಠಪ್ಪ ಗೋರಂಟ್ಲಿ
ಸೂರ್ಯಕಾಂತ ಗುಣಕಿಮಠ



"ಗಂಡುಗಲಿ ಕುಮಾರರಾಮ" ಐತಿಹಾಸಿಕ ನಾಟಕದ ದೃಶ್ಯ



"ಲಿಂಗನಾಯಕನಹಳ್ಳಿ ಶ್ರೀ ಚನ್ನವೀರ ಶಿವಯೋಗಿ" ನಾಟಕದಲ್ಲಿ ನಾಟಕ ಕರ್ತೃ ಶಿವಲಿಂಗನ ಹಾಸ್ಯ ಪಾತ್ರದಲ್ಲಿ ಎಸ್.ವಿ.ಪಾಟೀಲ ಗುಂಡೂರ ಗಂಗಾವತಿಯಲ್ಲಿ ಪ್ರಯೋಗಿಸಿದಾಗ



“ಮೋಳಿಗಮಾರಯ್ಯ” ನಾಟಕದ ಹಡಪದಪ್ಪಣ್ಣ ಪಾತ್ರದಲ್ಲಿ ಮಹಾಬಲೇಶ್ವರ



ಸಮುದಾಯ ಕೊಪ್ಪಳ ಇವರಿಂದ ಅಭಿನಯಿಸಿದ “ಬೋಲೋರಾಮನ ಜೀವ” ನಾಟಕದಲ್ಲಿ
ವಿಠ್ಠಪ್ಪ ಗೋರಂಟ್ಲಿ ನಾರದನ ಪಾತ್ರದಲ್ಲಿ



ಜಿಲ್ಲಾ ನಾಟಕೋತ್ಸವದಲ್ಲಿ ಪಿ.ಬಿ. ಧುತ್ತರಗಿ ಕೃತಿ "ಇಲಕಲ್ಲ ಸೀರೆ", ನಾಟಕದಲ್ಲಿ ರಾಜ್ಯಪ್ರಶಸ್ತಿ ಪುರಸ್ಕೃತಿ ಸರೋಜಮ್ಮ ಧುತ್ತರಗಿ ಹಾಗೂ ನಾಟಕ ಅಕಾಡೆಮಿಯ ಸದಸ್ಯೆ ನಾಗರತ್ನ ಇವರ ಜೊತೆಗೆ ಅಭಿನಯಿಸಿದ್ದು ನಾಗೇಶ. ಪಿ. ಕಾಟವಾ



'ಟಿಪ್ಪುಸುಲ್ತಾನ' ಐತಿಹಾಸಿಕ ನಾಟಕದ ದೃಶ್ಯ ಶಿಕ್ಷಕ ಕಲಾ ಬಳಗ, ಕೊಪ್ಪಳ